Government Oriental Library Series

EDITED BY PANDITS UNDER THE SUPERVISION OF
THE CURATOR, GOVERNMENT ORIENTAL
LIBRARY, MYSORE.

Kannada Section No. VI

ಕುಮಾರವ್ಯಾಸಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

೩ನೆಯ ಸಂಪುಟ

ಸಭಾಪರ್ವ

THE

KARNATAKA MAHABHARATA

BY

KUMARAVYASA MAHAKAVI

Volume III

SABHAPARVA

EDITED BY

V. SYAMACHARYA

Pandit, Govt. Oriental L...

PUBLISHED UNDER THE AUTHORITY OF THE
GOVERNMENT OF HIS HIGHNESS THE
MAHARAJA OF MYSORE

MYSORE
PRINTED AT THE GOVERNMENT BRANCH PRESS
1915

Price Re. 1-12-0.

81·1
t.4M
v.III

UNIVERSAL
LIBRARY
OU_200582
UNIVERSAL
LIBRARY

M. S. RAO & CO.,
BOOK-SELLERS BANGALORE CITY

Government Oriental Library Series

EDITED BY PANDITS UNDER THE SUPERVISION OF
THE CURATOR, GOVERNMENT ORIENTAL
LIBRARY, MYSORE.

Kannada Section No. VI

ಕುಮಾರವ್ಯಾಸಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

೩ನೆಯ ಸಂಪುಟ

ಸಭಾಪರ್ವ

THE

KARNATAKA MAHABHARATA

BY

KUMARAVYASA MAHAKAVI

Volume III

SABHAPARVA

EDITED BY

V. SYAMACHARYA

Pandit, Govt. Oriental Library, Mysore

PUBLISHED UNDER THE AUTHORITY OF THE
GOVERNMENT OF HIS HIGHNESS THE
MAHARAJA OF MYSORE

MYSORE:
PRINTED AT THE GOVERNMENT BRANCH PRESS
1915

ಅ ವ ತ ರ ಣಿ ಕೆ

ಈ ಪುಸ್ತಕವು ಕರ್ಣಾಟಕಮಹಾಭಾರತದ ಮೂರನೆಯ ಸಂಚಿಕೆಯಾಗಿ ಇರುವುದು. ಈ ಗ್ರಂಥಕಾರನಾದ ಕುಮಾರವ್ಯಾಸನ ವಿಷಯದಲ್ಲಿಯೂ ಆತನ್ನ ಭಾಷಾವಿಷ್ಟಯದಲ್ಲಿಯೂ ಆವಶ್ಯಕವಾಗಿ ತಿಳಿಸಬೇಕಾದ ವಿಷಯುಗಳೆಲ್ಲಾ (ಕನ್ನಡ ಸೆಕ್‌ಷನ್ ನಂಬರು 3—4ನೆಯವುಗಳಾದ) ಉಪೋದ್ಘಾತಸಂಚಿಕೆ ಮತ್ತು ಸಂಭವಪರ್ವ ಇವುಗಳ ಅವತರಣಿಕೆಯಲ್ಲಿ ಹೇಳಲ್ಪಟ್ಟಿವೆ. ಆದುದರಿಂದ ಈ ಪುಸ್ತಕದಲ್ಲಿ ಅಡಗಿರುವ ಗ್ರಂಥಕ್ಕೆ ಸಂಬಂಧಿಸಿದ ವಿಶೇಷಾಂಶಗಳನ್ನು ಮಾತ್ರ ಹೇಳುವುದು ಈಗ ಆವಶ್ಯಕವಾಗಿದೆ.

ಈ ಪುಸ್ತಕದಲ್ಲಿ ಸಭಾಕ್ರಿಯಾಪರ್ವ 1 ಸಭಾಖ್ಯಾನಪರ್ವ 2 ರಾಜಸೂಯಾರಂಭಪರ್ವ 3 ಜರಾಸಂಧವಧಪರ್ವ 4 ದಿಗ್ವಿಜಯಪರ್ವ 5 ರಾಜಸೂಯಿಕಪರ್ವ 6 ಅರ್ಘಾಹರಣಪರ್ವ 7 ಶಿಶುಪಾಲವಧಪರ್ವ 8 ದ್ಯೂತಪರ್ವ 9 ಅನುದ್ಯೂತಪರ್ವ 10 ಎಂದು ಹತ್ತು ಪರ್ವಗಳು ಅಡಗಿವೆ.

ದಿಗ್ವಿಜಯಪರ್ವದಲ್ಲಿ ರಾಜಸೂಯಯಾಗದ ಕ್ರಮಗಳನ್ನು ವರ್ಣಿಸುವಾಗ, ಯಾಗದಲ್ಲಿ ಕೆಲವು ಕಾರ್ಯಗಳನ್ನು ನಿರ್ವಹಿಸುವುದಕ್ಕೋಸ್ಕರಪುರುಷಮೃಗವೆಂಬ ಪ್ರಾಣಿಯನ್ನು ಕರೆತರುವುದಕ್ಕಾಗಿ ಭೀಮಸೇನನನ್ನು ಕಳುಹಿಸಿದ ಹಾಗೂ, ಭೀಮಸೇನನು ಅದನ್ನು ಕರೆತಂದು ಕಾರ್ಯನಿರ್ವಾಹವನ್ನು ಮಾಡಿದ ಹಾಗೂ ವರ್ಣಿಸಲ್ಪಟ್ಟಿದೆ. ಈ ಕಥೆಯು ಸಂಸ್ಕೃತಮಹಾಭಾರತದಲ್ಲಿ ಕಾಣುವುದಿಲ್ಲ. ಆದರೆ ಈ ಕಥೆಯು ಜೈಮಿನಿಭಾರತದಲ್ಲಿ ಇರುವುದಾಗಿ ಕೂರೇಶವಿಜಯದ ಮೂರನೆಯ ಶ್ಲೋಕದಲ್ಲಿರುವ "ಹನುಮತಃ ಪುಚ್ಛರೋಮೋಶ್ವರತ್ವಾತ್" ಎಂಬ ಪದಗಳ ವ್ಯಾಖ್ಯಾವಸರದಲ್ಲಿ ನಿರೂಪಿಸಲ್ಪಟ್ಟಿದೆ. ಆದರೆ ಆ

ಗ್ರಂಥದಲ್ಲಿ ಮಾತ್ರ ಪುರುಷಮೃಗವೆಂದು ದೀರ್ಘರಹಿತವಾಗಿ ಪ್ರಯೋಗಿಸಲ್ಪಟ್ಟಿರುವುದು. ಷಡಕ್ಷರಿದೇವಕೃತ ರಾಜಶೇಖರಗ್ರಂಥದ ಪ್ರಥಮಾಶ್ವಾಸದ 135 ನೆಯ ಗದ್ಯದಲ್ಲಿ "ಪರಿವ ಪುರುಷಾಮೃಗಗಳಿಂ" ಎಂದು ಪರ್ವತವರ್ಣನಪ್ರಸ್ತಾವದಲ್ಲಿ, ಮಹಾಭಾರತದಲ್ಲಿಯೂ ಇತರ ಕನ್ನಡ ಗ್ರಂಥಗಳಲ್ಲಿಯೂ "ಪುರುಷಾಮೃಗ" ವೆಂತ ದೀರ್ಘಸಹಿತವಾಗಿಯೂ ಪ್ರಯುಕ್ತವಾಗಿದೆ. ಪುರುಷಮೃಗವೆಂದರೂ ಪುರುಷಾಮೃಗವೆಂದರೂ ಅರ್ಥಭೇದವಿರುವುದಿಲ್ಲ. ಪುರುಷಮೃಗವೆಂದರೆ ಪುರುಷಾಕಾರವೂ ಮೃಗಾಕಾರವೂ ಉಳ್ಳದ್ದೆಂತ ಅರ್ಥ. ಪುರುಷಾಮೃಗವೆಂಬುದರಲ್ಲಿ ಪುರುಷಪದವೂ ಆಮೃಗಪದವೂ ಸೇರಿ ಇದೆ. ಆಮೃಗ ಎಂಬುದಕ್ಕೆ ಸ್ವಲ್ಪ ಮೃಗಾಕಾರವುಳ್ಳದ್ದೆಂತ ಅರ್ಥ. ಆದುದರಿಂದ ವಿರೋಧವಿರುವುದಿಲ್ಲ.

ಈ ಪುಸ್ತಕದಲ್ಲಿ ಪ್ರಚುರಿಸಿರುವ ಪಾಠಗಳು ಪ್ರಾಯಿಕವಾಗಿ ಇದುವರೆಗೂ ಮುದ್ರಿತವಾಗಿರುವ ಪುಸ್ತಕಗಳಿಗೆ ಅನುಸಾರವಾಗಿಯೇ ಇರುತ್ತವೆ.

ಈ ಸಂಚಿಕೆಯ ಶೋಧನಕ್ಕಾಗಿ ಉಪಯೋಗಿಸಿರುವ ಪುಸ್ತಕಗಳು ಕನ್ನಡ ಸೀರ್ಷ ನಂಬರು V ನೆಯದಾದ ಎರಡನೆಯ ಸಂಪುಟಕ್ಕೆ ಉಪಯೋಗಿಸಿದುವುಗಳಾಗಿಯೇ ಇರುತ್ತವೆ.

ನಮ್ಮಿಂದ ಸಾಧ್ಯವಾದವರೆಗೂ ಬಹುಪುಸ್ತಕಗಳ ಸಹಾಯದಿಂದ ಶೋಧನಕಾರ್ಯವು ನಡೆಸಲ್ಪಟ್ಟಿದೆ. ಪ್ರಾಮಾದಿಕದೋಷಗಳೇನಾದರೂ ಇದ್ದರೆ ಸಜ್ಜನರು ಗುಣೈಕದೃಷ್ಟಿಗಳಾಗಿ ಅವುಗಳನ್ನು ಲಕ್ಷ್ಯಕ್ಕೆ ತಾರದೆ, ಸಂತೋಷಪಡುವರೆಂದು ನಂಬಲ್ಪಟ್ಟಿದೆ.

ವಿಷಯ ಸೂಚಿಕೆ.

ವಿಷಯ	ಪುಟ
೧ ನೆಯ ಸಂಧಿ—	
ಖಾಂಡವವನದಹನಾನಂತರ ಪುರಪ್ರವೇಶ	1
ಶ್ರೀಕೃಷ್ಣನು ದ್ವಾರಕೆಗೆ ಹೊರಡುವಿಕೆ	3
ಭೀಮಸೇನನಿಗೆ ಮಯನಿಂದ ಗದಾಪ್ರಾಪ್ತಿ	5
ಸುಮುಹೂರ್ತದಲ್ಲಿ ಮಹಾಸಭೆಯ ಪ್ರವೇಶ	6
ನಾರದರ ಆಗಮನ	7
ನಾರದರ ಗುಣವರ್ಣನೆ	8
ನಾರದರ ಆಗಮನವನ್ನು ಅಭಿನಂದಿಸುವಿಕೆ	8
ರಾಜನನ್ನು ಕುರಿತು ನಾರದರ ಕುಶಲಪ್ರಶ್ನೆ ಮತ್ತು ಧರ್ಮೋಪದೇಶ	,,
ನಾರದರಿಂದ ಮಾಡಲ್ಪಟ್ಟ ಧರ್ಮೋಪದೇಶದಿಂದ ತುಷ್ಟನಾಗಿ ನಾರದರನ್ನು ಸ್ತುತಿಸುವಿಕೆ	30
೨ ನೆಯ ಸಂಧಿ—	
ಧರ್ಮರಾಯನು ಭೀಮಾದಿಗಳನ್ನು ಕರೆಸಿ ಆಲೋಚನೆ ಮಾಡಿದುದು....	34
ಆಗ ಅವರುಗಳೊಪ್ಪಿ ಕೃಷ್ಣನನ್ನು ಕರೆಕಳುಹಿಸುವಿಕೆ	35
ಶ್ರೀಕೃಷ್ಣನ ಆಗಮನ	,,
ಕೃಷ್ಣಧರ್ಮರ ಸಂವಾದ	36
ಧರ್ಮರಾಯನ ಮಾತನ್ನು ಕೇಳಿ ರಾಜಸೂಯದ ದೌರ್ಘಟ್ಯವನ್ನು ಹೇಳುವಿಕೆ	37
ಕೃಷ್ಣವಾಕ್ಯದಿಂದ ಯಾಗದಲ್ಲಿ ಧರ್ಮರಾಯನ ಉಪೇಕ್ಷೆ	40
ಯಾಗ ಮಾಡುವುದರಲ್ಲಿ ಭೀಮನು ಧೈರ್ಯವನ್ನು ಕೊಡುವಿಕೆ	,,
ಯಾಗಕ್ಕಾಗಿ ಪ್ರಯತ್ನಿಸುವುದು ಯುಕ್ತವೆಂದು ಭೀಮಾರ್ಜುನರ ವಾಕ್ಯ	41
ಅದರಂತೆ ಶ್ರೀಕೃಷ್ಣನು ಸಮ್ಮತಿಸಿದುದು	42
ಅಲ್ಲದೆ ಭೀಮಾರ್ಜುನರನ್ನು ಕಳುಹಿಸು ನಾನು ಅನುಕೂಲನಾಗಿರುವೆನೆಂದು ಕೃಷ್ಣನ ವಾಕ್ಯ	,,

ವಿಷಯ	ಪುಟ
ಆಗ ಸಂತುಷ್ಟನಾಗಿ ಧರ್ಮರಾಯನು ಶ್ರೀಕೃಷ್ಣನನ್ನು ಸ್ತುತಿಸುವಿಕೆ....	42
ಮಾಗಧನನ್ನು ಜಯಿಸುವುದು ಮುಖ್ಯವೆಂದು ಕೃಷ್ಣವಾಕ್ಯ	43
ಮಾಗಧನ ಕಥೆಯಲ್ಲಿ ಬೃಹದ್ರಥನೆಂಬ ರಾಜನು ಪುತ್ರರಿಲ್ಲದ ದುಃಖದಿಂದ ವನಕ್ಕೆ ಹೋಗುವಿಕೆ....	,,
ಮಾರ್ಗದಲ್ಲಿ ಚಂಡಕೌಶಿಕದರ್ಶನ	44
ರಾಜನು ಅವರ ಮುಂದೆ ತನ್ನ ಸಂಕಟವನ್ನು ಹೇಳಲು ಅನುಗ್ರಹಿಸುವಿಕೆ	,,
ರಾಯನ ತೊಡೆಯ ಮೇಲೆ ಬಿದ್ದ ಹಣ್ಣನ್ನು ಸತಿಗೆ ಕೊಡೆಂದು ಋಷಿಗಳ ಅಪ್ಪಣೆ	,,
ಮನೆಗೆ ಹೋಗಿ ಹಣ್ಣನ್ನು ಭಾಗಮಾಡಿ ತನ್ನ ಸತಿಗೆ ಕೊಟ್ಟುದುದು	45
ಬಳಿಕ ಗರ್ಭಿಣಿಯಾಗಿ ಪ್ರಸವಕಾಲದಲ್ಲಿ ಹುಟ್ಟಿದ ಎರಡುಸೀಳುಗಳನ್ನು ಬಿಸುಡುವಿಕೆ	,,
ಜರೆಯೆಂಬುವಳು ಸೀಳುಗಳನ್ನು ಜೋಡಿಸಲು ಜರಾಸಂಧನ ಜನನ	46
ಆಕೆಯು ಆ ಮಗುವನ್ನು ರಾಜನಿಗೆ ಕೊಡಲು ಅದನ್ನು ಸಂರಕ್ಷಿಸುವಿಕೆ	47
ಅಂಥವನ ವಿಜಯಯಾತ್ರೆಗೆ ತಮ್ಮಂದಿರನ್ನು ಕಳುಹೆಂದು ಕೃಷ್ಣನ ಅಪ್ಪಣೆ	,,
ಮಾಗಧನ ಪತ್ತನಕ್ಕೆ ತೆರಳುವಿಕೆ	48
ಕೃಷ್ಣಭೀಮಾರ್ಜುನರು ವಿಪ್ರವೇಷವನ್ನು ಧರಿಸುವಿಕೆ	49
ಮಗಧದೇಶದ ವರ್ಣನೆ	,,
ಅಲ್ಲಿರುವ ಬೆಟ್ಟದ ಮೇಲೆ ಭೇರಿಯನ್ನು ಒಡೆಯುವಿಕೆ	50
ಭೇರಿಯ ವೃತ್ತಾಂತ	,,
ಅದರಲ್ಲಿ ಮಾಷಾಸುರನ ಸಂಹಾರ	51
ವೃಷಭಾಸುರಸಂಹಾರ ಮತ್ತು ಅವನ ಚರ್ಮದಿಂದ ಭೇರಿಯ ರಚನ	,,
ಮಾಗಧನ ತಪಸ್ಸು	52
ಮಾಗಧನಿಗೆ ಭೇರಿಯ ಪ್ರಾಪ್ತಿ ಮತ್ತು ಈಶ್ವರನ ವರಗಳು	,,
ಅಕಾಲದಲ್ಲಿ ನಡೆದ ಭೇರೀನಾದಕ್ಕಾಗಿ ಮಾಗಧನು ಶಾಂತಿಯನ್ನು ಮಾಡುವಿಕೆ	,,
ಮಾಗಧನ ಮನೆಗೆ ಕೃಷ್ಣಾದಿಗಳ ಆಗಮನ	53
ಬಂದವರಿಗೆ ಮಾಗಧನ ಆದರ	,,
ಇವರನ್ನು ನೋಡಿ ನಾನಾವಿಧವಾಗಿ ತರ್ಕಿಸುವಿಕೆ.... ...	54

ವಿಷಯ	ಪುಟ
ಕೃಷ್ಣಾದಿಗಳನ್ನು ಕುರಿತು ಮಾಗಧನ ಪ್ರಶ್ನೆ	55
ಕೃಷ್ಣಾದಿಗಳಿಗೂ ಮಾಗಧನಿಗೂ ನಡೆದ ಸಂವಾದ	,,
ತಮ್ಮ ವೃತ್ತಾಂತವನ್ನು ಕೃಷ್ಣನು ಹೇಳುವಿಕೆ	57
ಕೃಷ್ಣಮಾಗಧರ ಪರಸ್ಪರಾಪಹಾಸ	,,
ಭೀಮಾದಿಗಳನ್ನು ಕುರಿತು ಮಾಗಧನ ವಚನ	59
ಯುದ್ಧಕ್ಕೆ ಬಾ ಯೆಂದು ಭೀಮನ ವಾಕ್ಯ	,,
ಭೀಮಾರ್ಜುನರನ್ನು ಹೆದರಿಸುವಿಕೆ	,,
ಕೃಷ್ಣಜರಾಸಂಧರ ಸಂವಾದ	60
ಯುದ್ಧೋದ್ಯೋಗ	61
ಯುದ್ಧಾರಂಭ	62
ಯುದ್ಧ ನಡೆದ ಕ್ರಮ	,,
ಆಗ ಜರಾಸಂಧನಿಗೆ ಯುದ್ಧದಲ್ಲಿ ಅಧೈರ್ಯ ಹುಟ್ಟುವಿಕೆ	67
ಭೀಮನನ್ನು ಕುರಿತು ಕೃಷ್ಣನ ಉಪದೇಶ	,,
ಭೀಮಸೇನನು ಜರಾಸಂಧನನ್ನು ಸೀಳುವಿಕೆ	68
ಜರಾಸಂಧನು ದೇಹದ ಸೀಳೆರಡು ಸೇರಲು ಯುದ್ಧಕ್ಕೆ ಸಿದ್ಧನಾಗುವಿಕೆ	,,
ಕೃಷ್ಣನ ಅಪ್ಪಣೆಪ್ರಕಾರ ಜರಾಸಂಧನನ್ನು ಸೀಳುವಿಕೆ	71
ಆಗ ಸರ್ವರೂ ಭಯದಿಂದೋಡುತ್ತಿರಲು ಅಂಜದಿರಿ ಯೆಂದು ಶ್ರೀ ಕೃಷ್ಣನು ಹೇಳುವಿಕೆ	72
ಬಂಧನದಲ್ಲಿದ್ದ ರಾಜರನ್ನು ಬಿಡಿಸುವಿಕೆ	73
ಆ ನೃಪರು ಅಪ್ಪಣೆಯನ್ನು ನಿರೀಕ್ಷಿಸುವಿಕೆ	,,
ನೀವು ರಾಜಸೂಯಸಮಯದಲ್ಲಿ ಬನ್ನಿರೆಂದು ಶ್ರೀಕೃಷ್ಣನ ಅಪ್ಪಣೆ	,,
ಸಪರಿವಾರನಾಗಿ ಸಹದೇವನು ಭೀಮಾರ್ಜುನರನ್ನು ವಂದಿಸುವಿಕೆ	,,
ಜರಾಸಂಧನ ಸಂಸ್ಕಾರ	74
ಸಹದೇವನಿಗೆ ರಾಜ್ಯವನ್ನು ಕೊಡುವಿಕೆ	,,
೩ನೆಯ ಸಂಧಿ—	
ಅರ್ಜುನನ ದಿಗ್ವಿಜಯ	75
ಕೃಷ್ಣನು ಯುಧಿಷ್ಠಿರನಿಗೆ ಮಾಗಧಪುರಪ್ರವೇಶಾದಿಗಳನ್ನು ಹೇಳುವಿಕೆ	,,
ಯಾಗಾರಂಭಕ್ಕೋಸ್ಕರ ಕೃಷ್ಣನ ಅಪ್ಪಣೆ	76

ವಿಷಯ				ಪುಟ
ಶ್ರೀಕೃಷ್ಣನ ದ್ವಾರಕಾಗಮನ	...	....	....	76
ಯುಧಿಷ್ಠಿರನು ವೇದವ್ಯಾಸರೊಡನೆ ಮಾಡಿದ ಯೋಚನೆ			...	,,
ಧರ್ಮರಾಯನ ಚಿಂತೆ	...	....	....	77
ಅರ್ಜುನನು ಧೈರ್ಯವನ್ನು ಹುಟ್ಟಿಸುವಿಕೆ		....	....	,,
ವಿಜಯಯಾತ್ರೆಗೋಸುಗ ಭೀಮಾದಿಗಳನ್ನು ವ್ಯಾಸರು ಕಳುಹಿಸಿದುದು				78
ಅರ್ಜುನನ ವಿಜಯಯಾತ್ರೆ	....	....	...	79
ಸಾಲ್ವದೇಶದ ವಿಜಯ	....	...	....	,,
ಕಟದೇವನ ಪರಾಜಯ	....	....	....	,,
ಪ್ರತಿವಿಂಧ್ಯಾದಿಗಳನ್ನು ಗೆಲ್ಲುವಿಕೆ		....	....	80
ಅರ್ಜುನಭಗದತ್ತರ ಯುದ್ಧ	....	....	....	,,
ಭಗದತ್ತನು ಅರ್ಜುನನೆಂದು ತಿಳಿದು ಸಮ್ಮಾನಿಸುವಿಕೆ			..	81
ಭಗದತ್ತನಿಂದ ಅರ್ಜುನನಿಗೆ ಆದ ಮರ್ಯಾದೆ		....	....	,,
ಪರ್ವತವಾಸಿಗಳನ್ನು ಜಯಿಸುವಿಕೆ		....	....	,,
ವನಚರರನ್ನು ಮತ್ತು ದೈತ್ಯರನ್ನು ಜಯಿಸುವಿಕೆ			....	82
ಕಾಶ್ಮೀರಾದಿಗಳನ್ನು ಜಯಿಸುವಿಕೆ		....	...	,,
ಸಿಂಹನಗರಿಯ ಗಮನ	....	....	....	,,
ಕಿರಾತಾದಿಗಳನ್ನು ಜಯಿಸುವಿಕೆ		...	....	83
ಹಿಮಾಲಯದಲ್ಲಿದ್ದ ಜನರನ್ನು ಜಯಿಸುವಿಕೆ		....	....	,,
ಹೇಮಕೂಟದ ಗಂಧರ್ವಾದಿಗಳನ್ನು ಜಯಿಸುವಿಕೆ			....	84
ನಿಷಧಾಚಲವಾಸಿಗಳಾದ ದೈತ್ಯರನ್ನು ಜಯಿಸುವಿಕೆ			....	85
ಗಂಧಮಾದನದ ಯಕ್ಷವಿದ್ಯಾಧರರನ್ನು ಗೆಲ್ಲುವಿಕೆ		....	....	86
ಜಂಬೂವೃಕ್ಷದರ್ಶನ	....	...	....	,,
ಜಾಂಬೂನದನದಿಯ ತೀರದಲ್ಲಿರುವಿಕೆ		....	....	87
ಇಳಾವೃತವರ್ಷಪ್ರವೇಶ	....	....	....	,,
ಅಲ್ಲಿ ಮಹಾಧನಸಂಗ್ರಹ	....	....	...	88
ಮಂದರಾದ್ರಿಯ ದರ್ಶನ	....	....	....	,,
ಅಲ್ಲಿದ್ದ ರಾಜರನ್ನು ಜಯಿಸುವಿಕೆ		....	....	,,
೪ ನೆಯ ಸಂಧಿ—				
ಭೀಮಸೇನನ ದಿಗ್ವಿಜಯ	....	...	....	94

ವಿಷಯ	ಪುಟ
೫ನೆಯ ಸಂಧಿ—	
ಸಹದೇವನ ದಿಗ್ವಿಜಯ	97
ಅನೇಕರಾಜರ ಜಯ ಮತ್ತು ಧನಸಂಗ್ರಹ	98
ಕಾವೇರಿಯ ಬಳಿ ಇರುವ ಮಾಹಿಷ್ಮತೀನಗರಪ್ರವೇಶ	100
ಅಲ್ಲಿ ಸಹದೇವನ ಸೈನ್ಯದಹನ	,,
ಸುಟ್ಟುದಕ್ಕೆ ಕಾರಣವನ್ನು ವೈಶಂಪಾಯನರು ಹೇಳಿದುದು	101
ಆಗ ಸಹದೇವನು ಅಗ್ನಿಯನ್ನು ಸ್ತುತಿಸುವಿಕೆ	102
ಅಗ್ನಿಯು ಸಹದೇವನಿಗೆ ವರವನ್ನು ಕೊಡುವಿಕೆ	,,
ಬಳಿಕ ಅನೇಕರಾಜರನ್ನು ಗೆಲ್ಲುವಿಕೆ	103
ಘಟೋತ್ಕಚನಿಗೆ ಸಹದೇವನ ಪತ್ರಪ್ರೇಷಣ	,,
ಸಹದೇವನ ಅಪ್ಪಣೆಯಂತೆ ಘಟೋತ್ಕಚನ ಲಂಕಾಪ್ರಯಾಣ ಮತ್ತು ಅಲ್ಲಿನವರ ಜಯ	,,
ವಿಭೀಷಣಘಟೋತ್ಕಚರ ಸಂವಾದ	105
ಅಲ್ಲಿ ಘಟೋತ್ಕಚನು ಭೀಮನ ತನಯನೆಂದು ಹೇಳುವಿಕೆ ...	106
ವಿಭೀಷಣನು ಪೂರ್ವವೃತ್ತವನ್ನು ನೆನೆದು ಘಟೋತ್ಕಚನನ್ನಾದರಿಸುವಿಕೆ	108
ಆಗ ರಾಕ್ಷಸಭಟರು ಘಟೋತ್ಕಚನನ್ನು ಹಿಯ್ಯಾಳಿಸಿ ಗರ್ಜಿಸುವಿಕೆ	109
ಆಭಟರನ್ನು ವಿಭೀಷಣನು ಸಮಾಧಾನಪಡಿಸುವಿಕೆ	,,
ನಾನಾವಿಧಪದಾರ್ಥಗಳನ್ನು ತರಿಸಿ ಕೊಡುವಿಕೆ	110
ಆಗ ಭಟರನ್ನು ನೋಡಿ ಸಹದೇವನ ಭಟರು ಹೆದರುವಿಕೆ	112
೬ನೆಯ ಸಂಧಿ—	
ಯವನನೇಪಾಳಾದಿದೇಶಗಳ ಅರಸರನ್ನು ಗೆಲ್ಲುವಿಕೆ	113
ನಕುಲನಿಗೆ ಶಲ್ಯನಿಂದ ಆದ ಮರ್ಯಾದೆ	114
ಮ್ಲೇಚ್ಛರಾಜರನ್ನು ಗೆದ್ದುದು	115
ಧರ್ಮರಾಯನ ರಾಜ್ಯಭಾರ	,,
ಶ್ರೀಕೃಷ್ಣನನ್ನು ಕರೆಕಳುಹಿಸೆಂದು ವ್ಯಾಸರ ಉಪದೇಶ	117
ಅರ್ಜುನನು ಶ್ರೀಕೃಷ್ಣನ ಬಳಿಗೆ ಬಂದು ಕರೆಯುವಿಕೆ	,,
ಶ್ರೀಕೃಷ್ಣನ ಬರುವಿಕೆ	118

ವಿಷಯ	ಪುಟ
ಕೃಷ್ಣ ಮತ್ತು ಧರ್ಮರಾಯನ ಸಂಭಾಷಣೆ	,,
ಯಾಗಶಾಲಾನಿರ್ಮಾಣ	119
೭ ನೆಯ ಸಂಧಿ—	
ಧರ್ಮರಾಯನ ಚಿಂತೆ	120
ಧೌಮ್ಯರ ಅಪ್ಪಣೆಯಂತೆ ಶ್ರೀಕೃಷ್ಣನ ಬಳಿ ಬರುವಿಕೆ	,,
ಧರ್ಮರಾಯನನ್ನು ಕುರಿತು ಕೃಷ್ಣನ ಪ್ರಶ್ನೆ	121
ರಾಜಸೂಯದಲ್ಲಿ ಎಂಜಲಿನ ಶುದ್ಧಿಗೆ ಪುರುಷಾಮೃಗವನ್ನು ತರಿಸೆಂದು ಕೃಷ್ಣನ ಅಪ್ಪಣೆ	,,
ಅದನ್ನು ಕರೆತರುವುದಕ್ಕಾಗಿ ಭೀಮನನ್ನು ಕರೆಸುವಿಕೆ	122
ಅಣ್ಣನ ಅಪ್ಪಣೆಯಂತೆ ಭೀಮಸೇನನ ಪ್ರಯಾಣ	,,
ಮಾರ್ಗಮಧ್ಯದಲ್ಲಿ ಹನುಮಂತನ ದರ್ಶನ ಮತ್ತು ಸಂಭಾಷಣೆ	123
ಆಮೃಗದ ಶಕ್ತಿಯನ್ನು ಹೇಳಿ ತರುವ ಉಪಾಯವನ್ನು ಹೇಳುವಿಕೆ	124
ಪುರುಷಾಮೃಗದರ್ಶನ	125
ಭೀಮಪುರುಷಾಮೃಗರ ಸಂಭಾಷಣೆ	126
ಆಮೃಗವು ತೊಂದರೆಮಾಡಲು ಹನುಮಂತನು ಕೊಟ್ಟಿದ್ದ ರೋಮವನ್ನು ಹಾಕುವಿಕೆ	127
ಆರೋಮವು ಈಶ್ವರಮೂರ್ತಿಯಾದದ್ದು	,,
ಆಗ ಆಮೃಗವು ಈಶ್ವರನನ್ನು ಪೂಜಿಸುವಿಕೆ	128
ಮತ್ತೆ ತೊಂದರೆಮಾಡಲು ರೋಮವನ್ನು ಹಾಕುವಿಕೆ	,,
ತಿರುಗಿ ಈಶ್ವರಾಕಾರವನ್ನು ಧರಿಸಲು ಅದನ್ನಾರಾಧಿಸುವಿಕೆ	,,
ಭೀಮಸೇನನ ಚಿಂತೆ	129
ಭೀಮಸೇನನು ಬೀಳಲು ಅರ್ಜುನನು ಎತ್ತುವಿಕೆ	130
ಅರ್ಜುನಪುರುಷಾಮೃಗರ ಸಂವಾದ	,,
ಕೃಷ್ಣನ ಪ್ರಶ್ನೆ	131
ಧರ್ಮರಾಯನ ಉತ್ತರ	,,
೮ ನೆಯ ಸಂಧಿ—	
ನಾನಾದೇಶಗಳಿಂದ ರಾಜಾದಿಗಳು ಬರುವಿಕೆ	134

ವಿಷಯು			ಪುಟ
ಧರ್ಮರಾಯನು ಭೀಷ್ಮರನ್ನು ಕುರಿತು ಪ್ರಾರ್ಥಿಸುವಿಕೆ		....	137
ರಾಜಸೂಯದಲ್ಲಿ ನೆರೆದ ಜನಗಳು ಕಾರ್ಯನಿರ್ವಹಿಸಿದ ಕ್ರಮ		....	,,
ಯಾಗಸಾಧನವು ಸಿದ್ಧವಾಗುವಿಕೆ	...	....	139
ಅಧ್ವರ್ಯೂದ್ಗಾತೃಹೋತೃಗಳ ವ್ಯವಸ್ಥೆ	....	....	140
ಧರ್ಮರಾಯನು ಕೃಷ್ಣನನ್ನು ಪ್ರಾರ್ಥಿಸುವಿಕೆ	....	....	,,
ಯಾಗದೀಕ್ಷಿತನಾಗೆಂದು ಕೃಷ್ಣನ ಅಪ್ಪಣೆ	....	....	,,
ಆಗ ಪಂಡಿತರ ವಿಚಾರ ...	....	...	142
ಯಾಗದಲ್ಲಿ ವಿಪ್ರರು ತೃಪ್ತರಾಗುವಿಕೆ	....	....	143

೯ ನೆಯ ಸಂಧಿ—

ಧರ್ಮರಾಯನು ಅಗ್ರಪೂಜಾರ್ಹರಾರೆಂದು ಭೀಷ್ಮರನ್ನು ಕೇಳುವಿಕೆ		....	146
ಭೀಷ್ಮರು ಕೃಷ್ಣನು ಅಗ್ರಪೂಜಾರ್ಹನೆಂದು ಹೇಳುವಿಕೆ		....	147
ಈಮಾತನ್ನು ವ್ಯಾಸಾದಿಗಳು ಒಪ್ಪುವಿಕೆ	....	....	,,
ಆಗ ಸಹದೇವನು ಕೃಷ್ಣನನ್ನು ಪೂಜೆಯಿಂದ ಆದರಿಸುವಿಕೆ		...	148
ಕೃಷ್ಣಪೂಜೆಯನ್ನು ಸಭಿಕರೆಲ್ಲರೂ ಸಂತೋಷದಿಂದ ಅಭಿನಂದಿಸುವಿಕೆ			,,
ಆಗ ಶಿಶುಪಾಲನ ಆಕ್ಷೇಪಣೆ	....	....	149
ಸಹದೇವನನ್ನು ಕುರಿತು ಶಿಶುಪಾಲನ ಬಿರುನುಡಿಗಳು		....	150
ಭೀಷ್ಮರನ್ನು ಕುರಿತು ಶಿಶುಪಾಲನ ಬಿರುನುಡಿಗಳು		....	151
ನಾನಾಕಾರಣಗಳಿಂದ ಕೃಷ್ಣನು ಪೂಜಾಯೋಗ್ಯನಲ್ಲವೆಂದು ಹೇಳುವಿಕೆ			152
ಕೃಷ್ಣನನ್ನು ಸಂಬೋಧಿಸಿ ಶಿಶುಪಾಲನಾಡಿದ ದುರುಕ್ತಿಗಳು		....	153
ಶಿಶುಪಾಲನ ದುರುಕ್ತಿಗಳನ್ನು ಕೇಳಿ ಕೃತವರ್ಮಾದಿಗಳು ರೇಗುವಿಕೆ		....	156
ಕೃಷ್ಣದೂಷಕರನ್ನು ಸಹದೇವನು ತಿರಸ್ಕರಿಸುವಿಕೆ		....	157
ಭೀಷ್ಮರು ಶಿಶುಪಾಲನನ್ನು ದೂಷಿಸಿ ಕೃಷ್ಣನನ್ನು ಸ್ತುತಿಸುವಿಕೆ		....	158

೧೦ ನೆಯ ಸಂಧಿ—

ಭೀಷ್ಮರು ಕೃಷ್ಣಮಾಹಾತ್ಮ್ಯವನ್ನು ಹೇಳಲಾರಂಭಿಸುವಿಕೆ		....	161
ಭೀಷ್ಮರು ಹೇಳಿದ ಕೃಷ್ಣಮಾಹಾತ್ಮ್ಯವನ್ನು ಸಹದೇವನು ಕೇಳಿ ಅಭಿನಂದಿಸುವಿಕೆ	....	....	177
ಸಹದೇವನು ಕೃಷ್ಣನೇ ಗುರುದೈವವೆಂದು ಖಂಡಿತವಾಗಿ ಹೇಳುವಿಕೆ		...	,,

ವಿಷಯ ಪುಟ

೧೧ ನೆಯ ಸಂಧಿ—

ಸಹದೇವನ ವಚನವನ್ನು ಕೇಳಿದ ರಾಜರ ಅಭಿಪ್ರಾಯವಿಶೇಷ 178

ಕುಪಿತರಾದ ಅರಸರನ್ನು ಕುರಿತು ಶಿಶುಪಾಲನ ವಚನ 179

ಧರ್ಮರಾಯನು ಭೀಷ್ಮರಿಂದೊಡಗೂಡಿ ಆಲೋಚಿಸುವಿಕೆ 180

ಧರ್ಮರಾಯನಿಗೆ ಭೀಷ್ಮರ ಅಭಯದಾನ ... . ,,

ಭೀಷ್ಮರನ್ನು ಕುರಿತು ಶಿಶುಪಾಲನ ನಿಂದೆ 182

ಶಿಶುಪಾಲನು ಮಾಡಿದ ಕೃಷ್ಣನಿಂದೆ 181

ಭೀಮನ ಕೋಪ 184

ಶಿಶುಪಾಲನ ನಿಂದೆಯಿಂದ ಯಾದವರ ಯುದ್ಧಸನ್ನಾಹ 185

ಭೀಷ್ಮರಿಂದ ಯಾದವರ ಉಪಶಮನ .... ,,

ಶಿಶುಪಾಲನ ಕ್ರೋಧೋಕ್ತಿ 186

ಶಿಶುಪಾಲನ ಸಂಹಾರಕ್ಕಾಗಿ ಭೀಮನ ಪ್ರಯತ್ನ .... ,,

ಭೀಷ್ಮರು ಶಿಶುಪಾಲನ ಪೂರ್ವವೃತ್ತಾಂತವನ್ನು ಹೇಳಿ ಭೀಮನನ್ನು ತಡೆದುದು 187

ಭೀಷ್ಮರು ಹೇಳಿದ ಚರಿತ್ರೆಯಿಂದ ಕುಪಿತನಾಗಿ ಶಿಶುಪಾಲನು ಭೀಷ್ಮರನ್ನು ನಿಂದಿಸುವಿಕೆ 188

ಭೀಷ್ಮರ ಮೇಲೆ ಸರ್ವರಾಜರ ಕೋಪ 192

ಕೃಷ್ಣೋತ್ಕರ್ಷವನ್ನು ನಿರ್ಭಯವಾಗಿ ಭೀಷ್ಮರು ಸ್ಥಾಪಿಸುವಿಕೆ .... ,,

ಶಿಶುಪಾಲನ ದುರುಕ್ತಿಗಳು 193

ಆಗ ಯಾದವರ ಯುದ್ಧಸನ್ನಾಹ 194

ಕೃಷ್ಣನು ಅಭಯವನ್ನು ಹೇಳುತ್ತಾ ಯುದ್ಧಕ್ಕೆ ಬಂದುದು 195

ನಾರದಾದಿಗಳನ್ನು ಕುರಿತು ಕೃಷ್ಣವಾಕ್ಯ ... . ,,

ಶಿಶುಪಾಲನನ್ನು ಕುರಿತು ಕೃಷ್ಣನ ವಾಕ್ಯ .... ,,

ದುರ್ಯೋಧನಾದಿಗಳ ಉಪೇಕ್ಷೆ.... 196

ರಾಜರ ಮೇಲೆ ಶಿಶುಪಾಲನ ಕೋಪ .... ,,

ಕೃಷ್ಣಶಿಶುಪಾಲರ ಯುದ್ಧ 197

ಆಗ ನಾನಾವಿಧ ಉತ್ಪಾತಗಳು.... .... ,,

ಆಗ ಧರ್ಮರಾಯನು ಉತ್ಪಾತಶಾಂತಿಯನ್ನು ಹೇಳುವಿಕೆ 198

ಶಿಶುಪಾಲನಸಂಹಾರ 199

ವಿಷಯ	ಪುಟ
ಆಗ ಜನಗಳ ಮಾತುಗಳು	200
ಕೃಷ್ಣನು ಶಿಶುಪಾಲಪುತ್ರರನ್ನು ಅನುಗ್ರಹಿಸಿದುದು....	201
೧೨ ನೆಯ ಸಂಧಿ—	
ಯಾಗ ನಡೆದ ಕ್ರಮ	201
ಅವಭೃಥಾದಿಗಳು	202
ಅಲ್ಲಿ ನಡೆದ ಬ್ರಾಹ್ಮಣ ಭೋಜನಕ್ರಮ	,,
ಧರ್ಮರಾಯನು ಋಷಿಗಳನ್ನು ಅಭಿನಂದಿಸುವಿಕೆ	203
ಋಷಿಗಳು ಬಹುಮಾನಿತರಾಗಿ ತಮ್ಮತಮ್ಮಾಶ್ರಮಕ್ಕೆ ತೆರಳಿದುದು	,,
ರಾಜವರ್ಗವು ಬಹುಮಾನಿತವಾಗಿ ಪ್ರಯಾಣ ಮಾಡಿದುದು	204
ಪಾಂಡವರನ್ನು ಕುರಿತು ಯಾಗಸಿದ್ಧಿಯಾಯಿತೆ ಎಂದು ಶ್ರೀಕೃಷ್ಣನ ಪ್ರಶ್ನೆ	,,
ಧರ್ಮರಾಯನು ಶ್ರೀಕೃಷ್ಣನ ಪಾದದ ಮೇಲೆ ಬಿದ್ದು ಸ್ತುತಿಸುವಿಕೆ	205
ಶ್ರೀಕೃಷ್ಣನು ಸಂತೋಷಬಂದ ಧರ್ಮರಾಯನನ್ನು ನೋಡಿ ಆಲಂಗಿಸುವಿಕೆ	206
ದ್ರೌಪದಿಗೆ ಶ್ರೀಕೃಷ್ಣನ ಉಪದೇಶ	,,
ದ್ವಾರಕೆಗೆ ಶ್ರೀಕೃಷ್ಣನ ಪ್ರಯಾಣ	207
ಕೃಷ್ಣವಿರಹದಿಂದ ಧರ್ಮರಾಯನ ದುಃಖ	208
ಧರ್ಮರಾಯನಿಗೆ ವ್ಯಾಸರ ಉಪದೇಶ	209
೧೩ ನೆಯ ಸಂಧಿ ---	
ದುರ್ಯೋಧನನು ಅಸೂಯೆಯಿಂದ ದುಃಖದಿಂದಿರುವಿಕೆ	212
ಆಗ ಸರ್ವವಿಷಯದಲ್ಲಿಯೂ ದುರ್ಯೋಧನನ ಜಿಹಾಸೆ	213
ಆಗ ಜನಗಳ ಸ್ವಚ್ಛಂದಾಚರಣೆ	,,
ದುರ್ಯೋಧನನ ವಿಷಯದಲ್ಲಿ ಜನರ ನಾನಾವಿಧಊಹೆ	214
ದೇಶ ಅರಾಜಕವಾಯಿತೆಂದು ಭೀಷ್ಮಾದಿಗಳಿರಲು ಶಕುನಿಯ ಆಗಮನ	,,
ಶಕುನಿಯು ಈ ಅವಸ್ಥೆಗೆ ಕಾರಣವೇನೆಂದು ದುರ್ಯೋಧನನನ್ನು ಕೇಳುವಿಕೆ	215
ಶಕುನಿದುರ್ಯೋಧನರ ಸಂವಾದ	,,
ನಿನ್ನ ನಡತೆ ಯುಕ್ತವಲ್ಲೆಂದು ಶಕುನಿಯು ಹೇಳಲಾಗಿ ದುರ್ಯೋಧನನ ಪತನ	216
ಆಗ ಅವನನ್ನು ಎತ್ತಿ ಸಮಾಧಾನ ಪಡಿಸುವಿಕೆ	217

ವಿಷಯ	ಪುಟ
ಅವರನ್ನು ಜೂಜಿನಲ್ಲಿ ಗೆದ್ದು ಸರ್ವಸಂಪತ್ತನ್ನು ನಿನಗೆ ಕೊಡಿಸುವೆನೆಂದು ಶಕುನಿಯ ಪ್ರತಿಜ್ಞೆ	,,
ಇದನ್ನು ಧೃತರಾಷ್ಟ್ರನಿಗೆ ಹೇಳೆಂದು ಶಕುನಿಯ ಹೇಳಿಕೆ	218
ನೀನೇ ಹೇಳೆಂದು ದುರ್ಯೋಧನನ ಉತ್ತರ	,,
ಶಕುನಿಯು ಬಂದು ದುರ್ಯೋಧನನ ವಿಷಯವನ್ನು ಹೇಳುವಿಕೆ	,,
ಶಕುನಿಯ ಹೇಳಿಕೆಯಂತೆ ದುರ್ಯೋಧನನನ್ನು ಕರೆಸುವಿಕೆ	219
ದುಃಖಕ್ಕೆ ಕಾರಣವೇನೆಂದು ತಂದೆಯ ಪ್ರಶ್ನೆ	,,
ಪಾಂಡವರ ವೈಭವವೇ ಕಾರಣವೆಂದು ಹೇಳಿ ವೈಭವವನ್ನು ಹೇಳಿದುದು	220
ಪಾಂಡವರ ಮನೆಯಲ್ಲಿ ತನಗಾದ ಅವಮಾನವನ್ನು ದುರ್ಯೋಧನನು ಹೇಳುವಿಕೆ	223
ಇದರಿಂದ ಅವರಲ್ಲಿ ನನಗೆ ಕ್ರೋಧವೆಂದು ಹೇಳುವಿಕೆ	224
ದುರ್ಯೋಧನನ ದುರ್ಬುದ್ಧಿಗಾಗಿ ತಂದೆಯ ಚಿಂತೆ	225
ಇದು ಅಯುಕ್ತವೆಂದು ಮಗನಿಗೆ ತಂದೆಯ ಉಪದೇಶ	226
ಧೃತರಾಷ್ಟ್ರನನ್ನು ಕುರಿತು ದುರ್ಯೋಧನನ ನಿಷ್ಠುರವಾಕ್ಯಗಳು ...	,,
ಧೃತರಾಷ್ಟ್ರನು ಅದನ್ನು ಕೇಳಿ ಸುಮ್ಮನೆ ಇರುವಿಕೆ	227
ಆಗ ದುರ್ಯೋಧನನು ಕೋಪದಿಂದ ಹೊರಟುಹೋಗುವಿಕೆ	228
ಧೃತರಾಷ್ಟ್ರನು ಮಗನನ್ನು ಕರೆಸುವಿಕೆ	,,
ಅಸಾಧ್ಯರಾದ ಪಾಂಡವರನ್ನು ಯಾವರೀತಿಯಿಂದ ಜಯಿಸುವುದೆಂದು ಧೃತರಾಷ್ಟ್ರನ ಪ್ರಶ್ನೆ	,,
ದ್ಯೂತದಲ್ಲಿ ಜಯಿಸಬಹುದೆಂದು ಶಕುನಿಯ ಉತ್ತರ	229
ಅದನ್ನು ಒಪ್ಪಿ ವಿದುರನಿಗೆ ಹೇಳಿ ಮಾಡುವೆನೆಂದು ತಂದೆಯ ಹೇಳುವಿಕೆ	,,
ಈ ಕಾರ್ಯಕ್ಕೆ ವಿದುರನು ಬೇಡವೆಂದು ಮಗನು ಹೇಳಿದುದು	230
ವಿದುರನನ್ನು ಬಿಟ್ಟರೆ ನಿನ್ನಭಿಮತಸಿದ್ಧಿಸುವುದಿಲ್ಲವೆಂದು ತಂದೆಯ ಹೇಳಿಕೆ	,,
ಹೇಗಾದರೂ ಕರೆಸಿ ಕೊಟ್ಟರೆ ಸಾಕೆಂದು ಮಗನ ಹೇಳಿಕೆ	231
ಆಗ ಗಾಂಧಾರಿ ಧೃತರಾಷ್ಟ್ರರ ಯೋಚನೆ	,,
ಕೌರವರನ್ನಾದರೂ ಹಿಡಿ ಪಾಂಡವರನ್ನಾದರೂ ಹಿಡಿ ಯೆಂದು ಗಾಂಧಾರಿಯ ಹೇಳಿಕೆ	232
ಆಗ ಸಭಾನಿರ್ಮಾಣೋದ್ಯೋಗ	,,

ವಿಷಯ		ಪುಟ
ವಿದುರನಿಗೆ ದ್ಯೂತಸಂಗತಿಯನ್ನು ಹೇಳುವಿಕೆ ...	....	233
ವಿದುರನು ಅದನ್ನು ಕೇಳಿ ಯುಕ್ತವಲ್ಲವೆಂದು ಹೇಳುವಿಕೆ	....	234
ವಿದುರನಿಗೆ ಧೃತರಾಷ್ಟ್ರನ ಸಮಾಧಾನೋಕ್ತಿ...	....	,,
ದ್ಯೂತವು ಕುಲನಾಶಕವೆಂದು ವಿದುರನ ವಚನ	...	235
ಆಗ ಪಾಂಡವರನ್ನು ಕರೆತರಲು ವಿದುರನನ್ನು ಕಳುಹಿಸುವಿಕೆ	....	,,
ವಿದುರನು ಪಾಂಡವರ ಬಳಿ ಬರುವಿಕೆ	....	,,
ಆಗ ವಿದುರನನ್ನು ಮಾನಿಸಿ ಸರ್ವರ ಕ್ಷೇಮವನ್ನು ಕೇಳಿದುದು	....	236
ಪಾಂಡವರನ್ನು ಕುರಿತು ನೀವು ಬರಲು ಧೃತರಾಷ್ಟ್ರನ ಅಪ್ಪಣೆಯಾಗಿದೆ ಯೆಂದು ಹೇಳುವಿಕೆ	....	,,
ಆಗ ಬರುವೆವೆಂದು ಧರ್ಮಸುತನ ಉತ್ತರ	....	237
ದ್ಯೂತದ ವಿಷಯವನ್ನು ಹೇಳಿ ಆಲೋಚನೆಯಿಂದ ಕಾರ್ಯದಲ್ಲಿ ಪ್ರವರ್ತಿಸು ಎಂದು ವಿದುರನ ವಾಕ್ಯ	....	,,
ಆರ್ಯನಾದ ಧೃತರಾಷ್ಟ್ರನ ಮಾತನ್ನು ನಂಬಿ ಬರುವೆವೆಂದು ಧರ್ಮರಾಯನ ಉತ್ತರ	....	239
೧೪ ನೆಯ ಸಂಧಿ —		
ಪಾಂಡವರು ಹಸ್ತಿನಾವತಿಗೆ ಬಂದುದು	....	241
ಆಗ ಅಪಶಕುನಗಳು	....	,,
ಈಗ ಪ್ರಯಾಣ ನಿಲ್ಲಿಸೆಂದು ವಿಪ್ರರ ನುಡಿಗಳು	....	242
ಧರ್ಮರಾಯನು ಅದನ್ನುಪೇಕ್ಷಿಸುವಿಕೆ	....	,,
ಹಸ್ತಿನಾವತಿಯ ಪ್ರವೇಶ	....	,,
ಪಾಂಡವರಲ್ಲಿ ಧೃತರಾಷ್ಟ್ರನ ಆದರ	....	243
ಆಗ ದುರ್ಯೋಧನಾದಿಗಳ ಸಂತೋಷ	....	245
ದುಸ್ಸ್ವಪ್ನ ದರ್ಶನ	....	,,
ಆಗ ಧೌಮ್ಯರ ಅಭಯೋಕ್ತಿ	....	246
ಕೃಷ್ಣ ಸಹಾಯನಾಗಿರಲು ಚಿಂತೆ ಬೇಡೆಂದು ಧೌಮ್ಯರ ವಾಕ್ಯ	....	,,
ಧೃತರಾಷ್ಟ್ರನ ಅಪ್ಪಣೆಯಂತೆ ಧರ್ಮಾದಿಗಳು ಬರುವಿಕೆ	....	,,
ಆಗ ಧೃತರಾಷ್ಟ್ರನ ಆದರ	....	247
ಶಕುನಿಮೊದಲಾದವರು ದ್ಯೂತಪ್ರಯತ್ನ ಮಾಡಿದುದು	....	,,
ಆಗ ದುರ್ಯೋಧನನು ಪಾಂಡವರ ಸಭೆಯನ್ನು ಸ್ತುತಿಸಿದುದು	....	,,

ವಿಷಯ	ಪುಟ
ಕೌರವಸಭೆಯ ವರ್ಣನೆ	248
ಧರ್ಮರಾಯನು ಸಭೆಯನ್ನು ಪ್ರವೇಶಿಸಿದುದು	249
ಆಗ ಆಸಭೆಯಲ್ಲಿದ್ದವರ ವರ್ಣನೆ	250
ದ್ಯೂತಕ್ಕೆ ಧರ್ಮರಾಯನನ್ನು ಕರೆಯುವಿಕೆ	,,
ಕುಟಿಲರೊಡನೆ ಜೂಜು ಕೂಡದೆಂದು ಧರ್ಮರಾಯನ ಉತ್ತರ ...	,,
ಬಂಧುಗಳಲ್ಲಿ ಭೇದಚಿಂತೆ ಏಕೆಂದು ದುರ್ಯೋಧನನ ಭಾಷಣ	251
ದ್ಯೂತವು ಯೋಗ್ಯವಲ್ಲೆಂದು ಧರ್ಮರಾಯನ ವಾಕ್ಯ	,,
ಇದು ರಾಜರಿಗಾಗಿ ಹುಟ್ಟಿದ್ದು ಇದನ್ನೊಲ್ಲದವನು ಮೃಗವೆಂದು ದುರ್ಯೋಧನನ ನುಡಿ	,,
ಶಕುನಿಯು ದ್ಯೂತಕ್ಕೋಸ್ಕರ ಧರ್ಮರಾಯನನ್ನು ಕರೆಯುವಿಕೆ	252
ಆಗ ಧರ್ಮರಾಯನು ದ್ಯೂತದಲ್ಲಿ ಮನಮಾಡುವಿಕೆ ...	,,
ಆಗ ನಾನಾವಿಧ ಅಪಶಕುನಗಳು	,,
ದ್ಯೂತಾರಂಭ	253
ಶಕುನಿಯ ಸಂತೋಷ	254
ಶಕುನಿಯು ಜೂಜಿನಲ್ಲಿ ಧರ್ಮರಾಯನು ಒಡ್ಡಿದ ಪಣವನ್ನೊಂದೊಂದಾಗಿ ಗೆಲ್ಲುವಿಕೆ	,,
ಧರ್ಮರಾಯನನ್ನು ಕುರಿತು ಶಕುನಿಯ ಬಿರುನುಡಿಗಳು ...	265
ಆಗ ಧರ್ಮರಾಯನ ಚಿಂತೆ	266
ಬಳಿಕ ನಕುಲಾದಿಗಳನ್ನು ಪಣವಾಗಿಡುವಿಕೆ	,,
ದ್ರೌಪದಿಯನ್ನು ಪಣವಾಗಿಡುವಿಕೆ	269
ಬಳಿಕ ಧರ್ಮರಾಯನ ಚಿಂತೆ	270
ದುರ್ಯೋಧನಾದಿಗಳ ಸಂತೋಷ	,,
ಶಕುನಿಯು ತನ್ನನ್ನು ಹೊಗಳಿಕೊಂಡುದು....	271
ವಿದುರನ ಸುವಾಕ್ಯಗಳು	273
ದ್ರೌಪದಿಯ ಕರೆತರಲು ದುರ್ಯೋಧನನು ಪ್ರಾತಿಕಾಮಿಕನನ್ನು ಕಳುಹಿಸುವಿಕೆ	274
ಅವನು ದ್ರೌಪದಿಯ ಬಳಿ ಬಂದು ವಿಜ್ಞಾಪಿಸಿದುದು	276
ಸೋತ ಕ್ರಮವನ್ನು ವಿಚಾರಿಸಿದುದು	,,
ಆಗ ದ್ರೌಪದಿಯು ಬರಲು ಒಪ್ಪದೇ ಹೋಗುವಿಕೆ	277

ವಿಷಯ	ಪುಟ
ಅವನು ಸಭೆಗೆ ಬಂದು ಆವರ್ತಮಾನವನ್ನು ಹೇಳುವಿಕೆ	278
ದುಶ್ಶಾಸನನನ್ನು ಕಳುಹಿಸುವಿಕೆ	,,
ದ್ರೌಪದಿಯನ್ನು ಕುರಿತು ದುಶ್ಶಾಸನನ ಕ್ರೂರವಚನಗಳು	279
ದ್ರೌಪದಿಯನ್ನು ಸಭೆಗೆ ಕರೆತಂದುದು	281
ಆಗ ದ್ರೌಪದಿಯ ಅವಸ್ಥೆಯನ್ನು ನೋಡಿ ಸಭೆಗೆ ಶೋಕ	,,
ಪಾಂಡವರ ಸೋಲನ್ನು ಅವರ ಮಕ್ಕಳು ಕೇಳಿದುದು	283
ಆಗ ಅವರು ಯುದ್ಧಕ್ಕಾಗಿ ಸಿದ್ಧರಾಗುವಿಕೆ	,,
ಆಗ ಧರ್ಮರಾಯನ ಸಮಾಧಾನ	,,
ದುರ್ಯೋಧನನ ಕ್ರೂರವಚನ	,,
ದ್ರೌಪದಿಯ ಯುಕ್ತವನ್ನು ಹೇಳುವಿಕೆ	284
ದ್ರೌಪದಿಯನ್ನು ಕುರಿತು ಕರ್ಣನ ಕ್ರೂರವಚನ	,,
ಶಕುನಿಯ ಬಿರುನುಡಿ	285
ಭೀಷ್ಮರ ವಾಕ್ಯ	,,
ಆಗ ದುರ್ಯೋಧನನು ಭೀಷ್ಮಾದಿಗಳನ್ನು ಜರಿದುದು	286
ಭೀಮನ ಕೋಪ	,,
ಅರ್ಜುನನ ಸಮಾಧಾನ	,,
ಭೀಮನ ವಾಕ್ಯ	287
ದ್ರೌಪದಿಯು ಭೀಷ್ಮಾದಿಗಳನ್ನು ಕುರಿತು ಹೇಳುವಿಕೆ	,,
ವಿಕರ್ಣನ ನೀತಿವಚನಗಳು	288
ಕರ್ಣನ ಅಧಿಕ್ಷೇಪವಾಕ್ಯ	289
ಅದಕ್ಕೆ ದುರ್ಯೋಧನನ ಅನುಮತಿ	,,
ದುರ್ಯೋಧನನು ದುಶ್ಶಾಸನನನ್ನು ನಿಯಮಿಸುವಿಕೆ	290
ಧರ್ಮಾದಿಗಳು ತಮ್ಮ ಹಾರಾದಿಗಳನ್ನು ತೆಗೆಯುವಾಗ ದುಶ್ಶಾಸನನು ದ್ರೌಪದಿಯ ಸೆರಗನ್ನು ಹಿಡಿದುದು	,,
ಆಗ ಭೀಷ್ಮಾದಿಗಳ ಕೋಪ	,,
ಆಗ ದ್ರೌಪದಿಯು ಪತಿಗಳ ನೋಡಿದುದು	,,
ಆಗ ಸಭೆಯಲ್ಲಿದ್ದವರನ್ನು ಬಿಡಿಸಿರೆಂದು ದ್ರೌಪದಿಯು ಕೇಳಿದುದು ...	291
ಆಗ ಶ್ರೀಕೃಷ್ಣನನ್ನು ಮರೆಹೊಕ್ಕುದು	292
ಕೃಷ್ಣಸ್ತುತಿ	,,

ವಿಷಯ	ಪುಟ
ಶ್ರೀಕೃಷ್ಣನು ದ್ರೌಪದಿಯ ಅವಸ್ಥೆಯನ್ನು ತಿಳಿದು ಚಿಂತೆಯಿಂದಿರುವಿಕೆ	298
ಆಗ ಸತ್ಯಭಾಮೆಯೊಡನೆ ಆಟದಲ್ಲಿ ಅಕ್ಷಯವೆಂದು ಹಾಸಂಗಿಯನ್ನು ಹಾಕಿದುದು	,,
ಶ್ರೀಕೃಷ್ಣನನ್ನು ಕುರಿತು ಸತ್ಯಭಾಮೆಯ ಪ್ರಶ್ನೆ	299
ಆಗ ಶ್ರೀಕೃಷ್ಣನು ದ್ರೌಪದಿಯ ಅವಸ್ಥೆಯನ್ನು ತಿಳಿಸಿದುದು	,,
ಪಾಂಡವರಿಗೆ ಆದ ತೊಂದರೆಯನ್ನು ಶ್ರೀಕೃಷ್ಣನು ಹೇಳಿದುದು	300

೧೬ ನೆಯ ಸಂಧಿ—

ದುಶ್ಶಾಸನನು ದ್ರೌಪದಿಯ ಸೀರೆಯನ್ನು ಸೆಳೆಯುತ್ತಿರಲು ಅದು ಅಕ್ಷಯವಾದುದು	302
ಆಗ ವಿದುರನು ದುರ್ಯೋಧನನಿಗೆ ಬುದ್ಧಿಯನ್ನು ಹೇಳಿದುದು	303
ಆಗ ವಿದುರವಾಕ್ಯದಲ್ಲಿ ದುರ್ಯೋಧನನ ಉಪೇಕ್ಷೆ	,,
ದುರ್ಯೋಧನನ ವಚನ	305
ಪಾಂಚಾಲಿಯ ವಿಷಯದಲ್ಲಿ ಕರ್ಣನ ಬಿರುನುಡಿಗಳು	,,
ಆಗ ಪಾಂಚಾಲಿಯು ಕರ್ಣನನ್ನು ಧಿಕ್ಕರಿಸಿದುದು ...	,,
ದುರ್ಯೋಧನನ ಸೊಕ್ಕಿನ ನುಡಿ	306
ಆಗ ಭೀಮನ ಕೋಪ	,,
ಭೀಮನನ್ನು ಕುರಿತು ಧರ್ಮರಾಯನ ಸಮಾಧಾನ	,,
ಅದಕ್ಕೆ ಅರ್ಜುನನ ಅನುಮತಿ	,,
ದುರ್ಯೋಧನನ ಸ್ವಚ್ಛಂದಭಾಷಣ	307
ಆಗ ಕರ್ಣನ ಮಾತುಗಳು	,,
ಆಗ ಕರ್ಣನನ್ನು ಸಮಾಧಾನಪಡಿಸಿ ದುಶ್ಶಾಸನನಿಗೆ ದುರ್ಯೋಧನನ ಅಪ್ಪಣೆ	308
ಆಗ ದ್ರೌಪದಿಯು ಭೀಷ್ಮಾದಿಗಳನ್ನು ಕೇಳಿಕೊಳ್ಳುವಿಕೆ	,,
ಆಗ ವಿದುರನ ಮಾತುಗಳು	310
ಕೋಪದಿಂದ ಭೀಮನು ಎದ್ದುದು	,,
ಆಗ ದುಶ್ಶಾಸನನು ದೂರಹೋದುದು	311
ಭೀಮನು ಕೋಪದಿಂದ ಬಿರುನುಡಿಗಳನಾಡಿ ಪಾಂಚಾಲಿಯನ್ನು ಸಮಾಧಾನ ಪಡಿಸಿದುದು	,,
ಆಗ ಭೀಮನನ್ನು ಕುರಿತು ಅರ್ಜುನನ ಸಮಾಧಾನೋಕ್ತಿಗಳು	312

ವಿಷಯ	ಪುಟ
ಭೀಮವಚನ	313
ಆಗ ಬಹುವಿಧವಾಗಿ ಪಾಂಡವರು ಪ್ರತಿಜ್ಞೆಯನ್ನು ಮಾಡಿದುದು	,,
ಜನಗಳ ಅನುತಾಪ	315
ಸುರರ ಅಭಿಪ್ರಾಯ	,,
ಆಗ ನಾನಾವಿಧ ಉತ್ಪಾತಗಳು	,,
ಧೃತರಾಷ್ಟ್ರನನ್ನು ಕುರಿತು ಭೀಷ್ಮವಾಕ್ಯ	316
ವಿದುರನ ಮಾತು	317
ದ್ರೌಪದಿಯನ್ನು ಕುರಿತು ಧೃತರಾಷ್ಟ್ರನ ಸಮಾಧಾನ	,,
ದ್ರೌಪದಿಯ ಉತ್ತರ	,,
ಧೃತರಾಷ್ಟ್ರನು ಬಹುವಿಧದಿಂದ ದ್ರೌಪದಿಯನ್ನು ಸಮಾಧಾನಪಡಿಸಿದುದು	318
ವರಗಳ ಬೇಡೆಂದು ಧೃತರಾಷ್ಟ್ರನ ಅಪ್ಪಣೆ	,,
ವರಗಳನ್ನು ಪಡೆದುದು	319
ದ್ರೌಪದಿಯನ್ನು ಕುರಿತು ಕರ್ಣನ ಮಾತು	320
ಕರ್ಣನ ಮೇಲೆ ಭೀಮನ ಕೋಪ	,,
ಧರ್ಮರಾಯನ ಸಮಾಧಾನ...	,,
ಆಗ ಬಹುವಿಧವಾಗಿ ಪಾಂಡವರನ್ನು ಧೃತರಾಷ್ಟ್ರನು ಸಮಾಧಾನ ಪಡಿಸಿದುದು	321
ಸತ್ಯಕ್ಕೆ ತಪ್ಪಿ ನಡೆಯುವುದಿಲ್ಲವೆಂದು ಧರ್ಮರಾಯನ ಉತ್ತರ	322
ಪಾಂಡವರಿಗಾಗಿ ಧೃತರಾಷ್ಟ್ರನ ಉಪಚಾರ....	323
ದ್ರೌಪದಿಯನ್ನು ಕುರಿತು ಗಾಂಧಾರಿಯ ಸಮಾಧಾನ	,,
ಧೃತರಾಷ್ಟ್ರನ ಮಾತನ್ನು ನಂಬಿದುದು	,,
೧೩ ನೆಯ ಸಂಧಿ—	
ಪಾಂಡವರು ಈ ವರ್ತಮಾನವನ್ನು ಮಕ್ಕಳಿಗೆ ತಿಳಿಸಿದುದು	324
ದುಶ್ಶಾಸನನು ದುರ್ಯೋಧನನ ಮುಂದೆ ಪಾಂಡವರು ತಮ್ಮ ಊರಿಗೆ ಹೊರಟದ್ದನ್ನು ತಿಳಿಸಿದುದು	325
ಆಗ ಕರ್ಣನ ವಾಕ್ಯ	,,
ನಿಮ್ಮ ತಂದೆತಾಯಿಗಳನ್ನು ಮೊದಲು ಸರಿಮಾಡೆಂದು ಶಕುನಿಯ ಉಪದೇಶ	326
ತಂದೆಯನ್ನು ಕುರಿತು ದುರ್ಯೋಧನನ ನಿಷ್ಠುರಭಾಷಣಗಳು	327
ದುರ್ಯೋಧನನ ದೂಷಣ	,,

ವಿಷಯ	ಪುಟ
ಪಾಂಡವರ ಗುಣಕಥನ	328
ದುರ್ಯೋಧನನು ಕೋಪದಿಂದ ಹೊರಡುವಿಕೆ	,,
ತಂದೆಯು ಮಗನನ್ನು ಪುನಃ ಕರೆಕಳುಹಿಸುವಿಕೆ	,,
ದುರ್ಯೋಧನನನ್ನು ಕುರಿತು ಸಮಾಧಾನ	329
ಪಾಂಡವರ ವಿಷಯದಲ್ಲಿ ದುರ್ಯೋಧನನ ಅಭಿಪ್ರಾಯ	,,
ಅದಕ್ಕೆ ಧೃತರಾಷ್ಟ್ರನ ಅಂಗೀಕಾರ	330
ಪಾಂಡವರನ್ನು ಕರೆಸಿ ಕೊಡೆಂದು ಮಗನು ಕೇಳಿದುದು	,,
ಅವರನ್ನು ಪ್ರಾತಿಕಾಮಿಕನಿಂದ ಕರೆಸುವುದು	331
ಅದಕ್ಕೆ ಭೀಷ್ಮಾದಿಗಳ ಅನುತಾಪ	,,
ದೂತ ಬಂದ ಸಂಗತಿಯನ್ನು ಹೇಳಿದುದು	332
ಭೀಮನ ಆಕ್ಷೇಪವಾಕ್ಯ	333
ಸಮಾಧಾನದ ನುಡಿಗಳು	,,
ಆಗ ಜನಗಳ ಅಭಿಪ್ರಾಯ	334
ಪಾಂಡವರು ಹಸ್ತಿನಾಪುರಕ್ಕೆ ಬಂದುದು	335
ಪುರಪ್ರವೇಶ	336
ಧೃತರಾಷ್ಟ್ರನ ಕ್ಷೇಮಾಲಿಂಗನಾದಿಗಳು	,,
ಮೃದುವಾಕ್ಯಗಳಿಂದ ಧರ್ಮರಾಯನಿಗೆ ದ್ಯೂತದಲ್ಲಿ ಬುದ್ಧಿಯನ್ನು ಹುಟ್ಟಿಸುವಿಕೆ	337
ಧರ್ಮರಾಯನು ದ್ಯೂತವನ್ನೊಪ್ಪಿದುದು	,,
ಪಣನಿರ್ಣಯ	,,
ಜೂಜಿನಲ್ಲಿ ಧರ್ಮರಾಯನು ಸೋತದ್ದು	340
ದ್ರೌಪದಿಯು ಧರ್ಮರಾಜಮೊದಲಾದವರು ಮಾತನಾಡುವಿಕೆ	341
ಭೀಮೋಕ್ತಿ	342
ವನವಾಸಕ್ಕೋಸ್ಕರ ಪಾಂಡವರ ಪ್ರಯಾಣ	343
ಪಾಂಡವರ ವಿಷಯದಲ್ಲಿ ಜನಗಳಿಗೆ ಇರುವ ಅಭಿಪ್ರಾಯ	344
ಅಭಿಮನ್ಯುಮೊದಲಾದವರಿಗೆ ಪಾಂಡವರ ದರ್ಶನ	345
ಸಮಸ್ತೈಶ್ವರ್ಯವನ್ನು ಕೌರವರಿಗೆ ಒಪ್ಪಿಸಿದುದು	,,
ಧೃತರಾಷ್ಟ್ರನು ಪಾಂಡವರ ಸ್ಥಿತಿಯನ್ನು ವಿದುರನಿಂದ ಕೇಳಿದುದು	347

ಶ್ರೀ

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

ಸಭಾಪರ್ವ.

ತೃತೀಯ ಸಂಪುಟ

ಒಂದನೆಯ ಸಂಧಿ

ಸೂಚನೆ

ಸಭೆಯೊಳೋಲಗದೊಳು ವಿರಿಂಚಿ
ಪ್ರಭವನನುಮತದಿಂದ ಧರಣೀ
ವಿಭು ಮಹಾಕ್ರತುರಾಜಸೂಯವನೊಲಿದು ಕೈಕೊಂಡ ||

ಖಾಂಡವವನದಹನಾನಂತರ ಪುರಪ್ರವೇಶ.

ಕೇಳು ಜನಮೇಜಯ ಧರಿತ್ರೀ
ಪಾಲ ಖಾಂಡವವನದ ವಹ್ನಿ
ಜ್ವಾಲೆ ತೆಗೆದುದು ಕೂಡೆ ಹೊಗೆದುದು ಹೊನಲ ಹೊಸಮಳೆಯ |
ಮೇಲುಕಾಳಗದುಬ್ಬಿನಲಿ ಸಿರಿ
ಲೋಲ ಸಹಿತರ್ಜುನನು ವಿಕ್ರಮ
ದೇಟಿಗೆಯ ಪರಿತೋಷದಲಿ ಮರಳಿದನು [1] ಪಟ್ಟಣಕೆ || ೧

1 ತಿರುಗಿದನು, ಚ.

ದೂತರೈದಿದರಿವರ ಸೂಚಿಯ
ಕೈತವಕಿಗರು ಕೃತಕವಾರ್ತಾ
ಭೀತಪುರಜನಮುಖದ ದುಗುಡದ ದಡ್ಡಿಗಳನುಗಿದು ।
ಬೀತುದಿಂದ್ರನ ಬಲುಹು ವಿಗಡನ
ವೀತಿಹೋತ್ರನ ವೀಗ ತಿದ್ದಿವಿ
ಧೂತರಿಪುಬಲ ಬಂದನಿದೆ ಯೆಂದರು ಮಹೀಪತಿಗೆ ॥ ೨

ಪೂತುದರಸನ ಪರುಷಲತೆ ಪುರು
ಹೂತವಿಜಯದ ವಿಜಯವಾರ್ತಾ
ಶ್ರೋತ್ರಸುಖಸಂಪ್ರೀತಿ ನಯನಜಲಾಭಿಷೇಕದಲಿ ।
ಮಾತು ಹಿಂಚಿತು ಮುಂಚಿದುದು ನಯ
ನಾತಿಥಿವ್ರಜ ಮುಸುಕಿತಸುರಾ [1]
ರಾತಿಪಾರ್ಥರ ಧರ್ಮಸುತಭೀಮಾದಿ [2] ಬಾಂಧವರ ॥ ೩

ತಳಿತಗುಡಿಗಳ ಸಾಲಕಳಸದ
ನಿಳಯಸಿಳಯದ ಬೀದಿಬೀದಿಯ
ತಳಿರ ತೋರಣದೋರಣದ ನವಮಕರತೋರಣದ ।
ತಳಿಗೆದಂಬುಲದಾರತಿಯ ಮಾಂ
ಗಲಿಕರಭಸದ ಲಲಿತಲಾಜಾ
ವಳಿಗಳೊಸಗೆಯಲಿವರು ಹೊಕ್ಕರು ರಾಜಮಂದಿರವ ॥ ೪

ಹಿರಿಯರಂಘ್ರಿದ್ವಯಕೆ ಮಣಿದರು
ಕಿರಿಯರುಚಿತಕ್ಷೇಮಕುಶಲದಿ
ಪರಿರಚಿತಪರಿರಂಭಮಧುರವಚೋವಿಲಾಸದಲಿ ।

1 ಮುಸುಕಿತಸುರಪಿ, ಖ. ಡ. ಚ.

2 ಘಾತಿಪಾರ್ಥರನನಿಲಸುತನಕುಲಾದಿ, ಖ. ಡ. ಚ.

ಅರಸನಿವರನು ಮನ್ನಿಸಿದನಾ
ದರಿಸಿತನ್ಯೋನ್ಯಾನುರಾಗ
ಸ್ಫುರಿತತೇಜೋಭಾವವಿಭ್ರಮಭೂಪತಿವ್ರಾತ ॥ ೫

ಶ್ರೀಕೃಷ್ಣನು ದ್ವಾರಕೆಗೆ ಹೊರಡುವಿಕೆ.

ಅರಸ ಕೇಳ್ಕೈ ಬಳಿಕ ಹರಿ ನಿಜ
ಪುರಕೆ ಬಿಜಯಂಗೈವವಾರ್ತೆಯ
ನೊರೆದನವನೀಪತಿಗೆ ಭೀಮಧನಂಜಯಾದ್ಯರಿಗೆ ।
ಅರಸಿಯರಿಗಭಿಮನ್ಯುಧರ್ಮಜ
ನರವೃಕೋದರಸೂನುಮೊದಲಾ
ಗಿರೆ ಸಮಸ್ತಜನಂಗಳನು ಮನ್ನಿಸಿದನುಚಿತದಲಿ ॥ ೬

ವರಮುಹೂರ್ತದೊಳಮೃತಯೋಗೋ
ತ್ಕರಶುಭಗ್ರಹದೃಷ್ಟಿಯಲಿ ಹಿಮ
ಕರಸುಖಾ [1] ವಸ್ಥೆಯಲಿ ಕೇಂದ್ರಸ್ಥಾನಗುರುವಿನಲಿ ।
ಧರಣಿಸುರರಾಶೀರ್ವಚನವಿ
ಸ್ತರಣದಧಿದೂರ್ವಾಕ್ಷತೆಗಳು
ಬ್ಬರದ ವಾದ್ಯಘಡಾವಣೆಯಲಸುರಾರಿ ಹೊರವಂಟ ॥ ೭

ಕರಯುಗದ ಚಮ್ಮಟಿಕೆ ವಾಘೆಯ
ಲರಸ ರಥವೇರಿದನು ಮುಕ್ತಾ
ಭರದ ಭಾರಿಯ ಸತ್ತಿಗೆಯ ಪಲ್ಲವಿಸಿದನು ಭೀಮ ।
ಹರಿಯುಭಯಪಾರ್ಶ್ವದಲಿ ಸಿತಚಾ
ಮರವ ಚಿಮ್ಮಿದನರ್ಜುನನು ಬಂ
ಧುರದ ಹಡಪದ ಹೆಗಲಲಿದ್ದರರ್ಜುನಾನುಜರು ॥ ೮

ಪೌರಜನಪುರಜನನೃಪಾಲಕ
ಮೌರಸಚಿವಪಸಾಯ್ತಭಟಪರಿ
ವಾರಧೌಮ್ಯಪ್ರಮುಖಸೂರಿಸಮಾಜಮೊಗ್ಗಿನಲಿ ।

---

[1] ಶುಭಾ, ಚ ಛ

ತೇರಬತ್ತಿವಿಡಿದೈದಿದರು ಮುರ
ವೈರಿವಿರಹವಿದೂನವದನಾಂ
ಭೋರುಹರ ಸಂತೈಸಿ ನುಡಿದನು ನಗುತ ಮುರವೈರಿ [1] ॥ ೯
ಅರಿನೃಪರು ಕುಹಕಿಗಳು ನೀವೇ
ಸರಸಹೃದಯರು ಧರ್ಮದೂರರು
ಪರರು ನೀವೇ ಧರ್ಮನಿಷ್ಠರು ಹಾನಿಯುಂಟವಕೆ ।
ಅರಸನಾರೋಗಣೆ ವಿಹಾರದೊ
ಳಿರುಳು ಹಗಲು ಮೃಗವ್ಯಸನದೆ
ಚರಿಸೊಳಿಹುದೆಂದಸುರರಿಪು ಬೀಳ್ಕೊಟ್ಟನಿನಿಬರನು ॥ ೧೦
ನಾಲಿಗೆಗಳಸುರಾರಿಗುಣನಾ
ಮಾಳಿಗಳ ಪೊಗಳಿದುವು [2] ಕಂಗಳು
ನೀಲಮೇಘಶ್ಯಾಮನಲಿ ಬೆಚ್ಚವು ವಿಹಾರದಲಿ ।
ಬಾಲಕೇಳೀಕಥನಸುಧೆಯೊಳ
ಗಾಲಿ ಮುಳುಗಲು ಕಿವಿಗಳನಿಬರು
ಸಾಲಭಂಜಿಕೆಯಂದವಾದರು ಕೃಷ್ಣವಿರಹದಲಿ [3] ॥ ೧೧
ಕಳುಹಿ ಕಂಗಳು ಮರಳಿದುವು ಮನ
ಕಳುಹದಾದ್ವಾರಾವತಿಗೆ ಮಂ
ಗಳಮಹೋತ್ಸವದೊಸಗೆನುಡಿಯಲಿ ಹೊಕ್ಕನಸುರಾರಿ ।
ಬಳಿಕಿವರು ನಿಜರಾಜಭವನ
ಸ್ಥಳಕೆ ಬಂದರು ಸೌಮನಸ್ಯದ
ಲಿಳೆಯ ಪಾಲಿಸುತಿರ್ದರವನೀಪಾಲ ಕೇಳೆಂದ ॥ ೧೨

ಕೃಷ್ಣನ ಅಪ್ಪಣೆಯಂತೆ ಮಯನು ಸಭೆಯನ್ನು ನಿರ್ಮಾಣ ಮಾಡುವಿಕೆ.

ಮುರಹರನ ನೇಮದಲಿ ಮಯ ವಿ
ಸ್ತರಿಸಿದನು ಹದಿನಾಲ್ಕು ತಿಂಗಳು

---

1 ಬೀಳ್ಕೊಟ್ಟನು ಕೃಪಾಜಲಧಿ, ಖ ಡ. ಚ

2 ಮಾಳಿಯಲಿ ತುಱುಗಿದುವು, ಖ. ಡ. ಚ.

3 ಹೃದಯದಲಿ, ಖ.

ವರಸಭಾಮಂಟಪವನನಿಬರಿಗವ ವಿಚಿತ್ರದಲಿ [1] ।
ಕಿರಣಲಹರಿಯ ವಿವಿಧರತ್ನೋ
ತ್ಕರದ ರಚನಾಶಿಲ್ಪವಿದು ದೇ
ವರಿಗಸಾಧ್ಯವು ಶಿವಶಿವಾಯೆನೆ ಮೆಱೆದುದಾಸ್ಥಾನ ॥ ೧೩

ಹತ್ತುಸಾವಿರಕೈಪ್ರಮಾಣದ
ಸುತ್ತುವಳಯದ ಮಣಿಯ ಶಿಲೆಗಳ
ತತ್ತವಣೆಗಳ ತೆಕ್ಕೆವೆಳಗಿನ ಲಹರಿಗಳಲಳಿಯ [2] ।
ಸುತ್ತುವಳಯದ ಪದ್ಮರಾಗದ
ಭಿತ್ತಿಗಳ ವೈಡೂರ್ಯಶಿಲೆಗಳ
ಮತ್ತವಾರಣವರವಿಧಾನದಲೆಸೆದುದಾಸ್ಥಾನ ॥ ೧೪

ಕರೆಸಿದನು ಮಯನೆಂಟುಸಾವಿರ
ಸರಿಗರಕ್ಕಸಕಿಂಕರರ ನಿಜ
ಶಿರದೊಳಾಂತರು ತಂದರಿಂದ್ರಪ್ರಸ್ಥಪುರವರಕೆ ।

ಭೀಮಸೇನನಿಗೆ ಮಯನಿಂದ ಗದಾಪ್ರಾಪ್ತಿ.

ಅರಸ ಕಾಣಿಸಿಕೊಂಡವನನಾ
ದರಿಸಿದನು * ಭೀಮಂಗೆ ಭಾರಿಯ
ವರಗದಾದಂಡವನು ಕಾಣಿಕೆ ಯಿತ್ತು * ಪೊಡವಟ್ಟ ॥ ೧೫

† ಇದು ಸಗರಮಾಂಧಾತರಾಯನ
ಗದೆಯು ಲವಣಾಸುರನ ಸೀಟಿಯೆ
ಕದನದಲಿ ಶತ್ರುಘ್ನ ಕೊಂಡನು ಮೇನಕಾಚಲದಿ ।

---

[1] ಕೃತಜ್ಞನಲೇ, ಖ. ಚ.　　[2] ವೊಳಗಿನ ಬಟೆಯಲಹರಿಗಳ, ಡ

* ಭೀಮಾರ್ಜುನರಿಗಾ । ದರಗದಾಶಂಖವನು ಕಾಣಿಕೆ ಕೊಟ್ಟು *

† ಇದು ಪುರಾತನಸಗರವಂಶಾ
ಭ್ಯುದಯಯುದುರ್ಜಯಯೌವನಾಶ್ವನ
ಗದೆ ಕೃತಾಂತನ ಕರದ ದಂಡವನಂಡಲೆವ ಖಳದ ।

ಇದನಿರಿಸಿ ಕೊಂಡಿಂದ್ರನಿತ್ತನು
ಮುದದಿ ಗದೆಯನು ದೇವದತ್ತಾ
† ಖ್ಯದ ಮಹಾಶಂಖವನು ಪಾರ್ಥನ ಮೇಲಿನೊಲವಿನಲಿ ॥ ೧೬

ಒಸಗೆ ಮೆಱೆದುದು ಮಯನ ಮಿಗೆ ಮ
ನ್ನಿಸಿದನವನಿಪನಂಗಚಿತ್ತದೊ
ಳಸುರಕಿಂಕರರನಿಬರನು ಸನ್ಮಾನದಾನದಲಿ ।
ಒಸೆದು ಕಳುಹಿದನಾತನನು ದೆಸೆ
ದೆಸೆಯ ಯಾಚಕನಿಕರ ನೂಕಿತು
ಮುಸುಕಿತ್ತೈ ಧರ್ಮಜನ ಕೀರ್ತಿಯು ರೂಢಿ ಮೂಜಗವ ॥ ೧೭

ಸುಮುಹೂರ್ತದಲ್ಲಿ ಮಹಾಸಭಾಪ್ರವೇಶ

ದಿವಸದಿವಸದೊಳುಂಡುದವನೀ
ದ್ವಿಜಸಂತತಿ ಹತ್ತುಸಾವಿರ
ವವರನೇನೆಂದೆಣಿಸುವೆನು ಯಾಚಕರ ಮಹೋದಧಿಯ ।
ವಿವಿಧರತ್ನಾಭರಣಕಾಂಚನ
ನವದುಕೂಲದ ದಿಂಡಿನಲಿ ಬುಧ
ನಿವಹ ತಣಿದುದನಂತಕೃಪಣಾನಾಥಜನಸಹಿತ ॥ ೧೮

ಆಮಹೋತ್ಸವವೇಳುದಿನವಭಿ
ರಾಮರಂಜಿತವಾಯ್ತು ಶುಭದಿನ
ರಾಮಣೀಯಕಲಗ್ನದಲಿ ಹೊಕ್ಕನು ಮಹಾಸಭೆಯ ।
ಭೂಮಿಪಾಲರನಂತಸುಕವಿ
ಸ್ತೋಮವನುಜರಮರ್ತ್ಯರೆನಿಪಸ
ನಾಮರಿರ್ದರುರಾಯನೆಡಬಲದಂಕವೀಧಿಯಲಿ ॥ ೧೯

---

† ಮುದದಲೊಪ್ಪುವುದೆನುತ ಮಯನತಿ
ಮುದದಿ ಬಟಿಕಾದೇವದತ್ತಾ
ಖ್ಯದ ಮಹಾಶಂಖವನು ಪಾರ್ಥಗೆ ಕೊಟ್ಟು ಕೈಮುಗಿದ, ॥ ಚ.

1 ಭೂಸುರ, ಖ, ಮಾರ್ಗಣ, ಚ,

ಹೊಳಹೊಳದುದಾಸ್ಥಾನ ಕಾಂತಾ
ವಳಿಯ ಕಂಗಳ ಬೆಳಗಿನಲಿ ತನಿ
ಮುಳುಗಿತೋಲಗ ಲಲಿತರಸಲಾವಣ್ಯಲಹರಿಯಲಿ |
ವಿಲಸದಖಿಳಾಭರಣರತ್ನಾ
ವಳಿಯ ರಶ್ಮಿಯಲಡಿಗಡಿಗೆ ಪ್ರ
ಜ್ವಲಿಸಿತಾಸಭೆ ದೀಪ್ತಿಮಯವಿವಿಧಾನುಭಾವದಲಿ || ೨೦

ಮೇಳದಲಿ ಗಂಧರ್ವರಿಪ್ಪ
ತ್ತೇಳು ತುಂಬುರುಸಹಿತ ಶುದ್ಧದ
ಸೂಳಗದ ಸಂಕೀರ್ಣದೇಸಿಯ ವಿವಿಧರಚನೆಯಲಿ |
ಬಾಲೆಯರ ಸುರಗಣಿಕೆಯರ ಮುಖ
ಚಾಳೆಯರ ಸಂಗೀತತಾಳದ
ತೂಳುವರೆ ತುಂಬಿದುದು ಕುಸುಮಾಯುಧನ ಕಳಕಳವ || ೨೧

ನಾರದರ ಆಗಮನ.

ಆಮಹಾಸಭೆಯಲಿ ಯುಧಿಷ್ಠಿರ
ಭೂಮಿಪತಿ ದೂರದಲಿ ಕಂಡನು
ತಾಮರಸದಳನಯನಸಂನಿಭಭಾವಭಾವಿತನ |
ಹಾಮಹಾದೇವೆತ್ತಣದ್ಭುತ
ಧಾಮವಿದು ದಿನಮಣಿಯ ತೇಜ
ಸ್ತೋಮವೆರಡಱ ಸಾರ್ದುದೆನುತೀಕ್ಷಿಸಿದ ನಾಲ್ದೆಸೆಯ[1] || ೨೨

ಲಲಿತತೇಜಃಪುಂಜ ಮಿಗೆ ಥಳ
ಥಳಿಸಿತತಿದೂರದಲಿ ಬೆಳಗಿನ
ಗೊಳಳಿ ಸುೞಿದಂತಾದುದಾಗಲೆ ತೋಱಿತಾಕಾರ |
ತಳಿತುದವಯವಶುದ್ಧವರ್ಣ
ಸ್ಥಳವು ನಿಮಿಷಕೆ ಮುನಿವರಾಕೃತಿ
ಹೊಳೆದುದಾಕ್ಷಣವೀತನಾರದನೆಂದುದಖಿಳಜನ || ೨೩

1 ರಾದೆಸೆಯ, ಚ. ಠ.

ನಾರದರ ಗುಣವರ್ಣನೆ.

ದಣಿಯುದಾತನ ಬೆರಳು ನಾರಾ
ಯಣರವದ ವೀಣೆಯುಲಿ ಹೃದಯಾಂ
ಗಣದ ಬೀದಿಗೆ ಬಿಡಯುವಾಗದು ಕೃಷ್ಣಪದ ಕೇಳಿ |
ಪ್ರಣವರೂಪದ ಭಾವಶುದ್ಧಿಯು
ಕಣಿ ಮುರಾರಿಯು ತನ್ಮಯದ ಸ
ದ್ಗುಣಮುನಿಶ್ವರನಿಳಿದನಿಂದ್ರಪ್ರಸ್ಥಪುರವರಕೆ || ೧೪

ಬಂದನರಮನೆಗಾಮುನಿಯುನಭಿ
ವಂದಿಸಿದುದಾಸ್ಥಾನವಿದಿರಲಿ
ನಿಂದು ಬಿಜಯಂಗೈಸಿ ತಂದರು ಸಿಂಹವಿಷ್ಟರಕೆ |
ಸಂದಮಧುಪರ್ಕಾದಿಸತ್ಕೃತಿ
ಯಿಂದ ಪೂಜಿಸಿ ವಿನಯದಲಿ ನಗು
ತೆಂದನವನೀಪಾಲನುಚಿತೋಕ್ತಿಯಲಿ ನಾರದನ || ೧೫

ನಾರದರ ಆಗಮನವನ್ನು ಅಭಿನಂದಿಸುವಿಕೆ.

ಕುಶಲವೇ ನಿಮ್ಮಂಘ್ರಿಗಳಿಗಿಂ
ದೊಸಗೆಯಾದುದು ನಿಮ್ಮ ದರ್ಶನ
ವಸಮಸಂಸೃತಿವಹ್ನಿದಗ್ಧರಿಗಮೃತವರ್ಷವಲೆ |
ಪಶುಪತಿಯು ಪರಮೇಷ್ಠಿಯು ಮುರ
ದ್ವಿಷನ ಸಾಮರ್ಥ್ಯದ ಸಗಾಢದ
ಎಸಕ ನಿಮಗುಂಟೆಂದು ಕೊಂಡಾಡಿದನು ನಾರದನ || ೧೬

ರಾಜನನ್ನು ಕುರಿತು ನಾರದರ ಕುಶಲ ಪ್ರಶ್ನೆ ಮತ್ತು ಧರ್ಮೋಪದೇಶ.

ಕುಶಲವೆಮಗಿಂದೈದೆ ನೀನೀ
ವಸುಮತೀವಧುಗೊಳ್ಳಿದನೆ ಶೋ
ಭಿಸುವುದೇ ಭವದಾಜ್ಞೆಯಲಿ ವರ್ಣಾಶ್ರಮಾಚಾರ |

ದೆಸೆದೆಸೆಗಳಮಳಾಗ್ನಿ ಹೋತ್ರ
ಪ್ರಸರಧೂಮಧ್ವಜಗಳೇ ನಿಂ
ದಿಸರಲೇ ದುರ್ಜನರು ಸುಜನರನೆಂದನಾಮುನಿಪ ॥ ೧೭

ಅರ್ಥದಿಂ ಧರ್ಮವನು ಧರ್ಮದಿ
ನರ್ಥವನು ಧರ್ಮಾರ್ಥವೆರಡನು
ವ್ಯರ್ಥಕಾಮದಲಟ್ಟಿಯೆಲೇ ರಾಜ್ಯಾಭಿಲಾಷೆಯಲಿ ।
ಅರ್ಥಸಾಧನ ಧರ್ಮಸಾಧನ
ವರ್ಥಧರ್ಮದೊಳುಭಯಲೋಕಕ
ನರ್ಥಸಾಧನ ಕಾಮವೆಂದನು ಮುನಿ ನೃಪಾಲಂಗೆ ॥ ೧೮

ಮಾನ್ಯರನು ಧಿಕ್ಕರಿಸಿ ಯೆಲೆ ಯುವ
ಮಾನ್ಯರನು ಮನ್ನಿಸಿ ಯೆಲೇ ಸ
ನ್ಮಾನ್ಯರನು ಸತ್ಕರಿಸುವಾ ಪಟ್ಟಿವಾವಿಕಾರಿಗಳ ।
ಅನ್ಯರನು ನಿನ್ನವರ ಮಾಡಿಯು
ನನ್ಯರನು ಬಾಹಿರರ ಮಾಡಿ ವ
ದಾನ್ಯರನು ನಿಗ್ರಹಿಸಿ ಯೆಲೆ ಭೂಪಾಲ ಕೇಳೆಂದ ॥ ೧೯

ಖಳರ ಖಂಡಿಸುವಾ ಮದವ್ಯಾ
ಕುಲರ ದಂಡಿಸುವಾ ದರಿದ್ರರ
ನೊಲಿದು ರಕ್ಷಿಸುವಾ ಸುಮಾಯಾವಿಗಳ ಶಿಕ್ಷಿಸುವ ।
ಕುಲಯುತರ ಕೊಂಡಾಡುವಾ ರಿಪು
ಬಲದ ತಲೆಚಂಡಾಡುವಾ ದು
ರ್ಬಲರನತಿಬಾಧಿಸಿ ಯೆಲೇ ಭೂಪಾಲ ಕೇಳೆಂದ ॥ ೨೦

ಜಾತಿಸಂಕರವಿಲ್ಲಲೇ ಜನ
ಜಾತದಲಿ ಹೀನೋತ್ತಮರು ನಿ
ರ್ಣೀತರೇ ನಿಜಮಾರ್ಗದಲಿ ಕುಲವಿಹಿತಕರ್ಮ [1] ದಲಿ ।

1 ಧರ್ಮ, ಚ. ಠ.

ಖ್ಯಾತರೇ ಸತ್ಪುರುಷರಧಿಕ
ದ್ಯೂತಕೇಳಿಗಳಿಲ್ಲವೇ ಮೃಗ
ಯಾತಿರೇಕವ್ಯಸನ ಕಿಱಿದೇ ರಾಯ ನಿನಗೆಂದ || ೩೧

ಪರರು ಮಾಡಿದ ಸದ್ಗುಣಂಗಳ
ಮಱೆಸುವೇ ಪರರವಗುಣಂಗಳ
ಮಱೆವು ಕಳವಾಮಾನ್ಯರಿಗೆ ನೀ ಮಾಡಿದವಗುಣವ |
ಮಱೆಯದಿರು ನೀ ಮಾಡಿದುಚಿತವ
ಮಱೆದು ಕಳವಾಚಾರವಿದು [1] ಸ
ತ್ಪುರುಷರಭಿಮತ ನಿನ್ನ ಮತವೇನೆಂದನಾಮುನಿಪ || ೩೨

ಆಱುಗುಣದೊಳುಪಾಯನಾಲ್ಕಱೊ
ಳೇಳಱಹುದೆ ಮನ ರಾಜಧರ್ಮದ
ಮೂಱುವರ್ಗದೊಳೆಚ್ಚರುಂಟೇ ನಯವಿಧಾನದಲಿ |
ಮೂಱುಶಕ್ತಿಗಳೊಳಗೆ ಮನ ಬೇ
ಱೂರಿಹುದೆ ಸಪ್ತಾಂಗದಲಿ ವೈ
ದೋಱಿಹೈ ಭೂಪಾಲ ಚಿತ್ತೈಸೆಂದನಾಮುನಿಪ [2] || ೩೩

ಗಣನೆಯಿಲ್ಲಲೆ ನಿನಗೆ ಸಪ್ತ
ವ್ಯಸನದಲಿ ನಿನ್ನನುಜತನುಜರ
ಮುಸುಕದಧರ್ಮದಲಿರದಲೇ ವೈದಿಕವಿಧಾನದಲಿ |
ಸಸಿನವೇ ನಿನ್ನಱಿತಖಿಳರಿಗೆ
ಹಿಸುಣರಿಗೆ ವಂಚಕರು [3] ಗಜ್ಜರಿ
ಗುಸುರಿ ಯೆಲೆ ನಿನ್ನಂತರಂಗವನೆಂದನಾಮುನಿಪ || ೩೪

ಹುರುಡಿಗರನೇಕಾಂತದೊಳಗಾ
ದರಿಸುವರು ಭೇದಕರ ಬುದ್ಧಿಗೆ
ತೆರಹುಗೊಡುವರು ಕುಟಿಲರಿಗೆ ವಿಶ್ವಾಸಹೀನರಿಗೆ |

---

1 ಕಳವಿಯುಸಾರವಿದು, ಕ. ಜ. 2 ಬೇಸರೆಯೆಲೇ ಭೂಪಾಲ ನೀನೆಂದ, ಚ. ಠ.
3 ಹುಸಿಕರಿಗೆ ಡುಬುಕ, ಚ.

ಮರುಳುಗೊಂಬರು ಖೂಳರಿಗೆ ಭಂ
ಡರಿಗೆ ತೆರುವರು ಧನವನೀಧರೆ
ಯರಸುಗಳಿಗಿದು ಸಹಜ ನಿನ್ನಂತಸ್ಥವೇನೆಂದ ॥ ೩೫

ಒಳಗೆ ಕುಜನರು ಹೊಱಗೆ ಧರಣೀ
ವಳಯವಮಾನ್ಯಗು ಛತ್ರಚಮರದ
ನೆಳಲು ಖೂಳಗಾತಪದ ಬಲು ಬೇಗೆ ಬುಧಜನಕೆ ।
ಒಳಗೆ ರಾಜದ್ರೋಹಿಗಳು ಹೊಱ
ವಳಯದಲಿ ಪತಿಕಾರ್ಯಸಿಷ್ಠರು
ಬಳಸಿಹುದು ನೃಪಚರಿತ ನಿನ್ನಂತಸ್ಥವೇನೆಂದ ॥ ೩೬

ಪ್ರಜೆಗಳನುರಾಗಿಗಳ ಸುಭಟ
ವ್ರಜಕೆ ಜೀವಿತ ಸಂದಿಹುದೆ ವರ
ಸುಜನರಿಗೆ ಸಂತೋಷವೇ ಮಧುರೋಕ್ತಿರಚನೆಯಲಿ ।
ವಿಜಯಭೀಮರು ಯಮಳರಿವರ
ಗ್ರಜರೊಳನುಜರಭಿನ್ನರೇ ಗಜ
ಬಜೆಕೆಯಂತಃಪುರದೊಳಿಲ್ಲವೆ ರಾಯ ಹೇಳೆಂದ ॥ ೩೭

ಖೂಳರೊಡನೆ ವಿನೋದ ಭಂಡರೊ
ಳಾಳಿ ಸ್ವಾಮಿದ್ರೋಹಿಯೊಡನೆ ಸ
ಮೇಳ ನಂಬುಗೆ ಡಂಭರೊಡನೆ ವಿಕಾರಿಯೊಡನಾಟ ।
ಸೂಳಯರು ಸಮಜೀವಿಗಳು ಕುಲ
ಬಾಲಕಿಯರೋಗಡಿಗೆಯವರು ನೃ
ಪಾಲಜನಕಿದು ಸಹಜ ನಿನ್ನಂತಸ್ಥವೇನೆಂದ ॥ ೩೮

ವಿಹಿತಕಾಲದ ಮೇಲೆ ಸಂಧಿಯ
ನಹಿತರೊಳು ವಿರಚಿಸುವ ಮೇಲ್ವಿ
ಗ್ರಹದ ಕಾಲಕೆ ವಿಗಡಿಸುವುದೆಂಬರ ಸುನೀತಿಯಲಿ ।

ವಿಹಿತವೇ ಮತಿ ವೈರಿರಾಯರ
ವಿಹರಣವನವರಾಳು ಕುದುರೆಯ
ಬಹಳತೆಯನಲ್ಪತೆಯನಱಿವೈ ರಾಯ ನೀನೆಂದ ॥ ೩೯

ನೆನೆದ ಮಂತ್ರವ ನಿನ್ನೊಳಾಳೋ
ಚನೆಯು ನಿಶ್ಚಯವಿಲ್ಲದಿರಲೊ
ಬ್ಬನಲಿ ಮೇಣ್ ಹಲಬರಲಿ ಜಡರಲಿ ಮತಿವಿಹೀನರಲಿ ।
ಮನಬರಡರಲಿ ಸಲೆ ವಿಧಾವಂ
ತನಲಿ ಮಂತ್ರಾಳೋಚನೆಯ ಸಂ
ಜನಿಸಿ ಪರಹಿನೊಳಟ್ಟಿಯಲೇ ಭೂಪಾಲ ಕೇಳೆಂದ ॥ ೪೦

ಬಂದರಾಯಕೆ ಬೀಯ ಸರಿ ಮ
ತ್ತೊಂದು ಕಡೆಯಲಿ ಹೀನಫಲವಿ
ನ್ನೊಂದು ಕಾರ್ಯದುಪೇಕ್ಷೆತೆಗೆ ಕಡೆಯಿಲ್ಲ ಮೊದಲಿಲ್ಲ ।
ಒಂದು ದುರ್ಘಟ ದೈವಸಾಧಿತ
ವೊಂದು ಶಂಕಿತಫಲವೆನಿಪ್ಪವೆ
ಹಿಂದುಗಳವೈ ಮಂತ್ರದಲಿ ಭೂಪಾಲ ಕೇಳೆಂದ ॥ ೪೧

ಕಿಱಿದುಪೇಕ್ಷೆಯ ಬಹಳ ಫಲವನು
ಹೊಱೆವುದಿದು ಮೇಣಲ್ಪಭೇದಕೆ
ಮುಱಿವುದಿದು ವಿಕ್ರಮಕೆ ವಶವಿದು ನೀತಿಸಾಧ್ಯವಿದು ।
ಹರಿವುದಿದು ನಯಶಕ್ತಿಗೆಂಬುದ
ನಱಿದು ನಡೆವೈ ರಾಜಧರ್ಮದ
ಹೊರಿಗೆಯನು ಮುಱಿದಿರೆಯೆಲೀ ಭೂಪಾಲ ಕೇಳೆಂದ ॥ ೪೨

ನುಡಿದೆರಪನಾಡದಿರು ಕಾರ್ಯವ
ಬಿಡದಿರಾವನೊಳಾದರೆಯು ನಗೆ
ನುಡಿಯ ಕುಂದದಿರೊಡೆಯದಿರು ಹೃದಯವನು ಕಪಟಿಯಲಿ ।

ಬಡವನವ ಮಾಡದಿರು ಮಾರ್ಗದೊ
ಳಡಿಯಿಡದಿರನುಜರೊಳೊ
ಗ್ಗೊಡೆಯದಿರು ನೃಪನೀತಿ ಯಿದು ಭೂಪಾಲ ಕೇಳೆಂದ ॥ ೪೩

ಆಯವಿಲ್ಲದ ಬೀಯವನು ಪೂ
ರಾಯವಿಲ್ಲದ ಘಾಯವನು ನಿ
ರ್ದಾಯವಿಲ್ಲದ ಮಂತ್ರವನು ಲೇಸಾಗಿ ಮಿಗೆ ರಚಿಸಿ ।
ನ್ಯಾಯವಿಲ್ಲದ ನಡವಳಿಯಲ
ನ್ಯಾಯ ಹೊದ್ದುವ ಪಾಪವನು ನಿಜ
ಕಾಯದಲಿ ನೀ ಧರಿಸೆ ಯೆಲೆ ಭೂಪಾಲ ಕೇಳೆಂದ ॥ ೪೪

ಆವ ಕಾಲದೊಳಾವ ಕಾರ್ಯವ
ದಾವನಿಂದಹುದವನ ಮನ್ನಿಪ
ತಾವಿದೆಂಬುದನಱಿದಿಹೈ ಮೃಗಜೀವಿಯಂದದಲಿ ।
ಲಾವಕರ ನುಡಿಗೇಳಿ ನಡೆದರೆ
ಭೂವಳಯದೇಕಾಧಿಪತ್ಯದ
ಠಾವು ಕೆಡುವುದನಱಿದಿಹೈ ಭೂಪಾಲ ಕೇಳೆಂದ ॥ ೪೫

ಅರಸು ರಾಕ್ಷಸ ಮಂತ್ರಿಯೆಂಬುವ
ಮೊಱೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವ ನಿನ್ನಾರು ಕೇಳುವರು ।
ಉರಿವುರಿವುತಿದೆ ದೇಶನಾವಿ
ನ್ನಿರಲು ಬಾರೆವೆನುತ್ತ ಜನ ಬೇ
ಸರಿನ ಬೇಗೆಯಲಿರದಲೇ ಭೂಪಾಲ ಕೇಳೆಂದ ॥ ೪೬

ಸರಳಲೆಚ್ಚರೆ ಹಗೆಯ ತಾಗವು
ದಱಿವುದೊಲೆವುದು ದೈವಗತಿಯಲಿ
ಸಿರುತಬುದ್ಧಿಯ ಬಾಣವನು ಕೊಟ್ಟೆಚ್ಚನರಿನೃಪರ ।

ಸಿರಿಯನಾ ರಾಜ್ಯವನು ತತ್ಪರಿ
ಕರವ ಸಂಹರಿಸುವುದೆನಿಪ ಬಂ
ಧುರಧನುರ್ವಿದ್ಯಾಂಗ ವುಂಟೇ ರಾಯ ನಿನಗೆಂದ ॥ ೪೭

ಮಂತ್ರವುಳ್ಳವನವನೆ ಹಿರಿಯನು
ಮಂತ್ರವುಳ್ಳವನವನೆ ರಾಯನು
ಮಂತ್ರವುಳ್ಳವನವನೆ ಸಚಿವನಿಯೋಗಿ ಯೆನಿಸುವನು ।
ಮಂತ್ರವಿಲ್ಲದ ಬಱಿಯ ಬಲು ತಳ
ತಂತ್ರದಲಿ ಫಲವಿಲ್ಲವೈ ಸ್ವಾ
ತಂತ್ರ್ಯವೆನಿಸಲ್ಕಱಿವುದೇ ಭೂಪಾಲ ಕೇಳೆಂದ ॥ ೪೮

ಸೋತು ನುಡಿವಾಹಿರಿಯರಲಿ ಸಂ
ಪ್ರೀತಿಯನು ಸುಜನರಲಿ ನಿರ್ಮಲ
ನೀತಿಯನು ಪರಿವಾರಪುರಜನನಾಡುಬೀಡಿನಲಿ ।
ಖ್ಯಾತಿಯನು ಧರ್ಮದಲಿ ವೈರಿ
ವ್ರಾತದಲಿ ಪೌರುಷವನಧಿಕ
ಜ್ಞಾನಿಗಳಲೆಚ್ಚರಿಕೆ ಯುಂಟೇ ರಾಯ ನಿನಗೆಂದ ॥ ೪೯

ಮೋಹದವಳಲಿ ವೈದ್ಯರಲಿ ವೈ
ಗಾಹಿನವರಲಿ ಬಾಣಸಿಗರಲಿ
ಬೇಹಮಂತ್ರಿಗಳಲಿ ವಿಧಾವಂತರಲಿ ಹಿರಿಯರಲಿ ।
ಗೇಹ [1] ರಕ್ಷಕರಲಿ ಸಹೋದಕ
ವಾಹಿಯಲಿ ಹಡಪಾಳಿಯಲಿ ಪ್ರ
ತ್ಯೂಹವನು ವಿರಚಿಸೆ ಯೆಲೇ ಭೂಪಾಲ ಕೇಳೆಂದ ॥ ೫೦

ರಣಮುಖದೊಳಂಗನೆಯಲಾರೋ
ಗಣೆಯಲರಿಗಳ ಕೂಟದಲಿ ವಾ
ರಣತುರಗದೇಱಾಟದಲಿ ವಿವಿಧಾಯುಧಂಗಳಲಿ ।

1 ದೇಹ, ಚ.

ಎಣಿಸನೃಪರ ಸೋಂಕಿನಲಿ ಸೆಜ್ಜೆಯ
ಉಣಿಯ ಮಜ್ಜನದಲ್ಲಿ ಬಲುಮೃಗ
ಗಣನೆಯೊಳಗೆಚ್ಚರಿಕೆ ಯುಂಟೇ ರಾಯ ನಿನಗೆಂದ ॥ ೫೧

ತರುಣಿಯಲಿ ಹಗೆಗಳಲಿ ಬಹಳೈ
ಶ್ವರಿಯದಲಿ ಶಸ್ತ್ರಾಂಗಿಯಲಿ ಸಂ
ಸ್ತರಣದಲಿ ಮದ್ಯಪನಲಿ ಬಲಾರ್ಥಿಯಲಿ ಶೃಂಗಿಯಲಿ ।
ಉರಗನಲಿ ನದಿಯಲಿ ಸಖಿಯರಾ
ತುರಿಯದಲಿ ದುರ್ಮಂತ್ರಿಯಲಿ ದು
ಶ್ಚರಿತನಲಿ ವಿಶ್ವಾಸಿಸೆ ಯಲೆ ಭೂಪ ಕೇಳೆಂದ ॥ ೫೨

ಪರಿಜನಕೆ ದಯೆಯನು ವರಸ್ತ್ರೀ
ಯರಲಿ ಭೀತಿಯ ಹಗೆಗಳಲಿ ನಿ
ಷ್ಕರುಣತೆಯ ಬಡವರಲಿ ದಾನವದ್ದೈವಗುರುದ್ವಿಜರ ।
ಚರಣಸೇವೆಯಲಾರ್ತತೆಯ ಪಿಸು
ಣರ ನುಡಿಗಳಲಿ ಮೂರ್ಖತೆಯ ನೀ
ವಿರಚಿಸುವೆಯೋ ಬೇಸರುವೆಯೋ ಭೂಪ ಕೇಳೆಂದ ॥ ೫೩

ಭಜಿಸುವಾ ಭಕ್ತಿಯಲಿ ದೈವ
ದ್ವಿಜಗುರುಸ್ಥಾನವನು ದೇಶ
ಪ್ರಜೆಯನರ್ಥಾಗಮದ ಗಡಣೆಗೆ ಘಾಸಿ ಮಾಡಿಯಲೆ ।
ಕುಜನರಭಿಮತದುಗ್ರದಂಡ
ವ್ಯಜನದಲಿ ಜನಜಠರವಹ್ನಿಯ
ಸೃಜಿಸೆಯಲೆ ಭವದೀಯರಾಜ್ಯಸ್ಥಿತಿಯ ಹೇಳೆಂದ ॥ ೫೪

ಫಲವೆಹುದ ಕೆಡಲೀಯದಳಿ ಪರಿ
ಮಳವ ಕೊಂಬಂದದಲಿ ನೀನಾ
ಳ್ವಿಳೆಯ ಕರದರ್ಥವನು ತೆಗೆವೈ ಪ್ರಜೆಯ ನೋಯಿಸದೆ ।

ಹಲವು ಸಂಧಾನದಲಿ ಗುಣದಲಿ [1]
ಚಲಿಸದಿಪ್ಪಂದದಲಿ ರಾಜ್ಯವ
ನಿಲಿಸುವನುಪಮಮಂತ್ರಿಯುಂಟೇ ರಾಯ ನಿನಗೆಂದ ॥ ೫೫

ಸೂಕರನ ತುಂಬಿಯ ಮರಾಳನ
ಭೇಕವೈರಿಯ ಕಾರುರಗ ಕಪಿ
ಕೋಕಿಲನ ಬರುಹಿಯ ಸುಧಾಕಿರಣನ ದಿನಾಧಿಪನ ।
ಆಕಸದ ದರ್ಪಣದ ಬಕರ
ತ್ನಾಕರನಲೊಂದೊಂದು ಗುಣವಿರ
ಬೇಕು ನೃಪರಿಗೆ ನಿನ್ನೊಳುಂಟೇ ರಾಯ ಹೇಳೆಂದ ॥ ೫೬

ಮೇಲನಱಿಯದ ನೃಪನ ಬಾಳಿಕೆ
ಗಾಳಿಗೊಡ್ಡಿದ ಸೊಡರು ನೀರದ
ಜಾಲದೊಡ್ಡಣೆ ಸುರಧನುವಿನಾಕಾರ ಶವದುಡಿಗೆ ।
ಬಾಳಗೌತಿದ ಕೊರಲು ಭುಜಗನ
ಹೇಳಿಗೆಯಲಿಕ್ಕಿದ ಕರವು ಬೆ
ಳ್ಳಾರಹಬ್ಬುಗೆಯವನ ಸಿರಿ ಭೂಪಾಲ ಕೇಳೆಂದ ॥ ೫೭

ನೆಚ್ಚದಿರು ಸಿರಿಯನು ವೃಥಾ ಮದ
ಗಿಚ್ಚಿನುರಿಯಲಿ ಬೇಯದಿರು ಮಿಗೆ
ಬೆಚ್ಚಿ ಬೆದಱದಿರೆಡರಿನಲಿ ಸತ್ಯವನು ಚಲಿಸದಿರು ।
ಮುಚ್ಚದಿರು ಸತ್ವವನು ಹೃದಯವ
ಬಿಚ್ಚದಿರು [2] ಯುಪಕೀರ್ತಿನಾರಿಯ
ಮೆಚ್ಚದಿರು ಮರುಳಾಗದಿರು ಭೂಪಾಲ ಕೇಳೆಂದ ॥ ೫೮

ನೀತಿವಿಡಿದರಸಿಂಗೆ ಬಹಳ
ಖ್ಯಾತಿಯಿಂ ಜನರಾಗ ರಾಗ
ವ್ರಾತದಿಂ ಧನ ಧನದಿ ಪರಿಕರ ಪರಿಕರದಿ ಜಯವು ।

---

1 ಸನ್ಮಾನದಲಿ ನಯದಲಿ, ಚ.

2 ಮೆಚ್ಚದಿರಸತ್ಯವನು ಗುಣವನು ಮುಚ್ಚದಿರು, ಚ. ಶ.

ಆತಜಯದಿಂ ಧರ್ಮ ಧರ್ಮಸ
ಮೇತದಿಂ ಸುರತುಷ್ಟಿ ತುಷ್ಟಿಯು
ನೀತಿಯಿಂದಿಹಪರವ ಗೆಲುವೈ ರಾಯ ನೀನೆಂದ ॥ ೫೯

ಆವನಾಗಲಿ ಬೇಡಿದಂಗೊಲಿ
ದೀವುದೈ ನೃಪಧರ್ಮ ಹಗೆ ಕಲಿ
ಯಾವನಾಗಲಿ ಸೆಣಸಿದರೆ ಕಾದುವುದೆ ನೃಪನೀತಿ ।
ಆವನಾಗಲಿ ಶರಣುಹೊಕ್ಕನ
ಕಾವುದೇ ಕ್ಷತ್ರಿಯರ ಮತ ನೀ
ನಾವುದುಚಿತವನರಿದಿಹೈ ಭೂಪಾಲ ಕೇಳೆಂದ ॥ ೬೦

ಮನ್ನಣೆಯುನಲ್ಪತೆಯು ನುಡಿಯೊಳ
ಗುನ್ನತೆಯುನೆಸಗುವುದು [1] ಪರರಿಗೆ
ತನ್ನವರಿಗುಗ್ಗಡದ ಪತಿಕಾರ್ಯವನು [2] ಮಾತಿನಲಿ ।
ಭಿನ್ನವನು ತೋರುವುದು ರಾಯರ
ಗನ್ನಗತಕ ಕಣಾ ನಿಪುಣಸಂ
ಪನ್ನಮತಿ ನಿನಗುಂಟೆ ಭೂಮಿಪಾಲ ಹೇಳೆಂದ ॥ ೬೧

ಸತ್ಯವುಳ್ಳರೆ ಧರಣಿ ಸಾರುಗು
ಸತ್ಯವುಳ್ಳರೆ ಪದವಿ ಸಾರುಗು
ಸತ್ಯವುಳ್ಳರೆ ಸಕಲದೇಶದ ವೀರಸಿರಿ ಸಾರ್ಗು ।
ಸತ್ಯ ಬೇಹುದು ನೃಪರಿಗಾ
ಸತ್ಯ ಭುಜಬಲಗೂಡಿ ಮಂತ್ರದ
ಸತ್ಯವೇ ಸತ್ವಾಧಿಕವು ಭೂಪಾಲ ಕೇಳೆಂದ ॥ ೬೨

ಗುರುವಿರೋಧ ಮಹೀಸುರರ ಮಾ
ತ್ಸರಿಯ ಬಂಧುದ್ವೇಷ ಗುಣಸಂ
ಹರಣ ದೈವದ್ರೋಹ ವತ್ಯಾಲೀಢದೀನತನ ।

1 ನೆನಸುವುದು, ಚ. ಠ. 2 ಪರಿಕರಣವನು, ಚ. ಠ

ಶರಣಜನದಂಡಿತ್ವವೆಂಬಿವ
ನರವರಿಸದಂಗೈಪ ಭೂಪನ
ಸಿರಿಗೆ ಮುಂಡುಗು ಕೇಡು ನಿಮಿಷಕೆ ಭೂಪ ಕೇಳೆಂದ ॥ ೬೩

ಪರಮಸುಖನಾದೊಡೆಯು ಬಡವಾ
ದುರಿಯು ತಾನೇ ಕೆಡಿಸಿ ಕಳವುದು
ಮುಂತತನೆಂದರೆ ತನ್ನ ಸಾಹಸದಂತರವನಱಿದು ।
ಅರಿಗಳೇ ಕಿಂಕರರು ಕಿಂಕರ
ರರಿಗಳು ಹದನನಱಿದು ಸತ್ಪೋ
ತ್ಕರದಲವನಿಯನಾಳುವ್ಯೆ ಭೂಪಾಲ ಕೇಳೆಂದ ॥ ೬೪

ಧನದಲುರುಧಾನ್ಯದಲಿ ನೆರೆದಿಂ
ಧನದಲುದಕದ ಹೆಚ್ಚುಗೆಯುಲಂ
ಬಿನಲಿ ಯಂತ್ರೌ[1]ಘದಲಿ ಶಿಲ್ಪಿಗರಲಿ ಶಿಲಾ[1]ಳಿಯಲಿ ।
ವನವಳಯ ಕೋಟಾವಳಯುಜೇ
ವನವಳಯ ಗಿರಿವಳಯ ದುರ್ಗವ
ವೆನಿಪ ದುರ್ಗಾವಳಿ ಸಮಗ್ರವೆ ಭೂಪ ನಿನಗೆಂದ ॥ ೬೫

ಧನದಿ ಪಂಡಿತರಶ್ವತತಿಯಾ
ಧನದಿ ಧಾರುಣಿಮಾನ ಮೋಕ್ಷಾ
ಧನದಿ ಕಾಂತೆಯರಖಿಳವಸ್ತುಗಳ್ಳದೆ ಸೇಱುವುದು ।
ನೆನವು ತೃಪ್ತಿ ಯೊಳ್ಳದದಱಿಂ
ಧನವೆ ಸಾಧನ ವರಸಿಗಾಧನ
ವೆನಿತು ದೊರಕೊಳಲಿದಿರದಾರ್ಕ್ಕೆ ಧಾತ್ರಿಪತಿಗಳಲಿ ॥ ೬೬

ಖಡ್ಗಧಾರೆಯು ಮಧು ಮಹಾಹಿಯ
ಹೆಡೆಯು ಮಾಣಿಕ ವಜ್ರದಿಂ ಬಿಗಿ
ದೊಡಲಿಗೊಡ್ಡಿದ ಸುರಗಿ ಕಡು ಕೆರಳಿದ ಮೃಗಾಧಿಪನ ।

1 ಶಸ್ತ್ರೌ, ಚ. ಠ.

ನಡುಗುಹೆಯೊಳಹ ಸುಧೆಯು ಘಟ ವೀ
ಪೊಡವಿಯೊಡೆತನ ಸದರವೇ ಕಡು
ಬಡವರಿಗೆ ದೊರೆಕೊಂಬುದೇ ಭೂಪಾಲ ಕೇಳೆಂದ ॥ ೬೭

ಮಗಗೆ ಮುನಿವನು ತಂದೆ ತಂದೆಗೆ
ಮಗ ಮುನಿವನೊಡಹುಟ್ಟಿದರು ಬಲು
ಪಗೆ ಕಣಾ ತಮ್ಮೊಳಗೆ ಭೂಪರ ಕುಲದ ವಿದ್ಯೆಯಿದು [1] ।
ಬಗೆಯೆ ನಿನ್ನೊಡಹುಟ್ಟಿದರು ಮಂ
ತ್ರಿಗಳೊಳಾಪ್ತರು ಭಿನ್ನರೇ ದಾ
ಯಿಗರೊಳಂತರ್ಭೇದವೇ ಭೂಪಾಲ ಕೇಳೆಂದ [2] ॥ ೬೮

ಕೇಳು ನೀ ರಾಜೇಂದ್ರ ಭಾವದೊ
ಳಾಲಿಸುವೊಡಾವೇಷ್ಟೆ ನಾರಿಯ
ರಾಳುಗೊಂಬರು ತಮ್ಮ ಚಿತ್ತದ ಬಯಕೆ ಯದು ಬೇಱೆ ।
ಸೋಲುವರು ತಾವಲ್ಲ ಪರರನು
ಸೋಲಿಸಿಯೆ ಹಿಮ್ಮೆಟ್ಟುವರು ಮನ
ವೇಱಿಕವಲಾಗಿಹುದು ಸತಿಯರ ನಂಬಬೇಡೆಂದ ॥ ೬೯

ಬೆರಸಿದಂದದಲಿಹರು ಚಿತ್ತವ
ಹರಿಸುವರು ಮತ್ತೊಬ್ಬನಲಿ ನಿಜ
ದೆರಕವೆಂಬವೊಲಿಹರು ಬೇಱೊಂದೆಡೆಯಲೊಲವಿಹುದು ।
ಎರಡುಮನ ವೆರಡೊಲವು ಚಿತ್ತದ
ಪರಿಯೆರಡು ಮೈಯೆರಡು ನಾರಿ
ಯರೆರಡನಲ್ಲದೆ ಬಗೆಯರವನೀಪಾಲ ಕೇಳೆಂದ ॥ ೭೦

ಮಡದಿಯರು ಲತೆಗಳು ಧರಾಧಿಪ
ರೆಡಬಲದಲಿದ್ದವರುಗಳನೊಡ
ಬಡುವರಲ್ಲದೆ ಕಾರ್ಯಗತಿಗಳ ಹೆಚ್ಚುಕುಂದುಗಳ ।

---

1 ಭುಲ್ಲವಿದ್ಯೆಗಳು, ಕ. ಖ. 2 ಭೇದವುಂಟೇ ರಾಯ ನಿನಗೆಂದ, ಚ.

ಹಿಡಿವರಲ್ಲಿದು ಜಾತಿಧರ್ಮದ
ಗಡಣೆ ಯಿದನರಿದೊಳಗೆ ಪರರಿಂ
ಗೊಡೆತನವ ನೀನೀಯೆ ಯೆಲೆ ಭೂಪಾಲ ಕೇಳೆಂದ ॥ ೨೧

ಎಲ್ಲಿ ಸುಲಲಿತವಿದ್ಯೆ ಬಹುಧನ
ವೆಲ್ಲಿ ಗಣಿಕಾನೀಕ ಮಣಿಗಣ
ವೆಲ್ಲಿ ಗಜಜಾತಾಶ್ವ ವೆಲ್ಲಿ ವರೂಥಸಂದೋಹ ।
ಎಲ್ಲಿ ಸುಭಟನಿಕಾಯ ನೆರೆದಿಹು
ದಲ್ಲಿ ತನ್ನಾಧೀನ ಮಾಡಲು
ಬಲ್ಲವನೆ ನರನಾಥನವನೀಪಾಲ ಕೇಳೆಂದ ॥ ೨೨

ಶೂರ ಧೀರನುದಾರ ಧರ್ಮೋ
ದ್ಧಾರ ವಿವಿಧವಿಚಾರ ಸುಜನಾ
ಧಾರ ರಿಪುಸಂಹಾರ ಚತುರೋಪಾಯಸಾಕಾರ ।
ಸಾರಮಂತ್ರವಿಚಾರ ಭುವನಾ
ಧಾರ ಸುಜನಸ್ವಾಮಿಕಾರ್ಯೋ
ದ್ಧಾರ [1] ನೆನಿಸುವ ಮಂತ್ರಿಯುಂಟೇ ರಾಯ ನಿನಗೆಂದ ॥ ೨೩

ಲಲಿತಶ್ರುತದೃಷ್ಟಾನುಮಾನಂ
ಗಳಲಿ ನಿಪುಣನ ನಿಶ್ಚಲನ ನಿ
ರ್ಮಲನ ರಾಗದ್ವೇಷರಹಿತನ ಬಹುಲಿಪಿಜ್ಞಕನ ।
ಹಲವುಬುದ್ಧಿಯನುಳ್ಳವನ ಕೈ
ಚಳಕಲಿಖಿತನ ವಾಚಕನ ಬಗೆ
ಗೊಳಿಸಿ ಕರಣಿಕಪತಿಯ ಮಾಡುವುದರಸ ಕೇಳೆಂದ ॥ ೨೪

ತುರಗಗಜಭಟರಳವರಿವ ಸಂ
ಗರಮಹೋತ್ಸಾಹನ ಜಿತಶ್ರಮ
ನರನನಧಿಕನ ಭೇದಕನ ನಾನಾಯುಧಜ್ಞಕನ ।

---

[1] ಯರ್ಗಾರ, ಚ. ಠ.

ಭರಿತಧೈರ್ಯನ ನೀತಿವಿದ ಕಾ
ಪುರನುದಾರನನೂರ್ಧ್ವರೋಮನ
ನಿರದೆ ಸೇನಾಪತಿಯು ಮಾಡುವುದರಸ ಕೇಳೆಂದ ॥ ೭೫

ಮನವಚನಕಾಯದಲಿ ದಾತಾ
ರನ ಹಿತವನುಳ್ಳವನ ವಿನತನ
ವಿನುತವನಿತಾನತಮುಖನ ನಿಶ್ಚಲನ ತೋಷಕನ ।
ಮುನಿವರರ ಬುದ್ಧಿಗೆ ಸಿಲುಕದಾ
ಪ್ತನ ಸುಧರ್ಮಕಲಾಪ್ರವೀಣನ
ಜನಪ ಚಿತ್ತೈಸುವುದಲೈ ತಾಂಬೂಲಧಾರಕನ ॥ ೭೬

ಎಡಬಲವನಾರೈವುತೊಡೆಯನ
ಬಿಡದೆ ನೋಡುತ ಮಕ್ಷಿಕಂಗಳ
ಗಡಣವನು ಝಾಡಿಸುತ ಕೆಗಣ್ಣಿಕ್ಕಿ ಕೆಲಬಲನ ।
ಬಿಡದೆ ನೋಡುತ ಸ್ವಾಮಿಕಾರ್ಯಕೆ
ಕೆಡೆಯೆನಿಸದಾಹವದ ಸೇವೆಗೆ
ಸೆಡೆಯದವನೇ ಚಮರಧಾರಕನರಸ ಕೇಳೆಂದ ॥ ೭೭

ನಿಶಿತಪರಿಮಳದಿಂದಲಾವೋ
ದಿಸಿ ಸುಗಂಧದ್ರವ್ಯದಲಿ ಬಂ
ಧಿಸಿದ ಮುದ್ರೆಯು ಜೀವ ತನ್ನಯ ಜೀವನವದೆಂದು ।
ವಸುಮತೀಶ್ವರಗಿತ್ತು ತಾ ಭೋ
ಗಿಸದೆ ಬಳಸದೆ ಮುನಿವರರ ತೊಲ
ಗಿಸುವವನೆ ಪಾನೀಯಧಾರಕನರಸ ಕೇಳೆಂದ ॥ ೭೮

ಮಿಸುಪ ಮಣಿಗಣ ಲೋಹಕಾಂಚನ
ವಿಸರ ಭೇದವನಱೆವ ಕೊಟ್ಟದ
ನೆಸುಸುಲೀಯದೆ ತಾನು ಭಕ್ಷಿಸದಹಿಸಿಧಾನವನು ।

ಒಸೆದು ಕಾದಿಪ್ಪಂತೆ ಕಾದಿಹ
ಪುಸಿಯದಾಪ್ತನ ಬಹುಕುಟುಂಬಿ
ವ್ಯಸನವುಳ್ಳನ ಮಾಳ್ಪುದೈ ಭಂಡಾರರಕ್ಷಕನ ॥ ೭೯

ಪಲಿತಕಾಯಕುರೂಪಿಯನು ನಿ
ರ್ಮಲನ ಲೋಭಿಯ ಸಾವಧಾನಿಯ
ಸಲೆ ಜಿತೇಂದ್ರಿಯನಿಂಗಿತಾಕಾರಪ್ರಭೇದಕನ ।
ಮಲಿನನನು ಕಡುಶುಚಿಯನಬಲಾ
ವಳಿಯ ಸುಧಾನಕ್ಕೆ ನಿಲಿಸುವು
ದಿಳೆಯೊಳಗ್ಗದ ಜಾಣನವಸ್ಯೆ ಭೂಪ ಕೇಳೆಂದ ॥ ೮೦

ಧರೆಯ ವ್ಯೈಸಿರಿಯಲ್ಲಿ [1] ಕುಲವೃ
ದ್ಧರನು ಹೀನಾಂಗರನಹಿಂಸಾ
ಚರತರನು ಜಾತ್ಯಂಧರನು [2] ಧನದಾಸೆಯುಳ್ಳವರ ।
ಅರಮನೆಯ ಸಂರಕ್ಷಣಾರ್ಥದೊ
ಳಿರಿಸಿದರೆ ಮಾನೋನ್ನತಿಗೆ ವಿ
ಸ್ತರಣವಹುದಿದನಱಿದಿಹೈ ಭೂಪಾಲ ಕೇಳೆಂದ ॥ ೮೧

ಅರಸ ಕೇಳಂತಃಪುರವು ಕಾ
ತರಿಸುವುದದಾವಂಗವನ ಹಿಂ
ದಿರಿಸಲಾಗದು ಮುಂದೆ ಮಾನಸ್ಥಿತಿಗೆ ಭಯವಹುದು ।
ಹಿರಿದು ಭೀಭತ್ಸಯಲಿ ಹುದುಗಿ
ರ್ದರನ ರಾಜದ್ವಾರವಂಗೀ
ಕರಿಸುವುದು ನೃಪನೀತಿ ಯಿದು ಭೂಪಾಲ ಕೇಳೆಂದ ॥ ೮೨

ಸತಿಯರೊಲುಮೆಯಲಿ ವಿಟರುಗಳನು
ಸತಿಯರ ಸ್ಥಿತಿಗತಿಗೆ ನೀನೆಂ
ದತಿಶಯೋಕ್ತಿಯ ನುಡಿವವರನರಮನೆಯ ಕಾಹಿಂಗೆ ।

---

1 ಜರೆನರೆಯವ್ಯೈಸಿರಿಯ, ಚ. 2 ವಿಜ್ಞಾಪ್ತರ, ಕ. ಖ.

ಪತಿಕರಿಸಿದರೆ ಜಗವೆಱಿಯಲಾ
ಕ್ಷಿತಿಪನಭಿಮಾನವು ನಿರರ್ಥಕ
ಗತವಹುದು ನೀನಱಿದಿಹೈ ಭೂಪಾಲ ಕೇಳೆಂದ ॥ ೮೩

ಪಿತೃಪಿತಾಮಹ ಸೂಪಶಾಸ್ತ್ರ
ಪ್ರತತಿಕೈಕರಣೆಗಳೊಳಧಿಕನ
ನತಿಶುಚಿಯನಸದೃಶನನಕ್ರೋಧಿಯನನಾಲಸನ ।
ಪತಿಹಿತನ ಷಡುರಸವಿಶೇಷಾ
ನ್ವಿತನ ನಿತರಾಲಯವಿದೂರನ
ಪತಿಕರಿಸುವುದು ಸೂಪಕಾಱತೆಗರಸ ಕೇಳೆಂದ ॥ ೮೪

ತಿಳಿದವನ ಮತಿಯುತನ [1] ಭಾಷಾ
ವಳಿಲಿಪಿಜ್ಞನ ಸಾಕ್ಷರಿಕಮಾಂ
ಡಳಿಕಸಾಮಂತರನಶೇಷರನಿಂಗಿತವನಱಿದು ।
ಸಲೆ ಕರವ ಕಳುಹಿಸುವ ಸಿಲಿಸುವ [2]
ಬಲುಹನುಳ್ಳನ ಸುಕೃತದುಷ್ಕೃತ
ಫಲಿತಕಾರ್ಯನನಧಿಕಮಂತ್ರಿಯ ಮಾಱ್ಪುದೊಲವಿಂದ ॥ ೮೫

ಚಂಡನೀತಿಸ್ಥಾನ ಶೌಚೋ
ದ್ದಂಡಗರ್ಗಾಂಗಿರಸನಿಪುಣನ
ಪಂಡಿತಪ್ರಿಯಶಾಂತಿಪಾಷ್ಟಿಕಕರ್ಮಕೋವಿದನ ।
ಚಂಡದೈವಜ್ಞನನು ಪೂತಗುಣ
ಮಂಡಿತನ ಬಹುಶಾಸ್ತ್ರವಿದನನು
ಖಂಡಿತನ ಪುರೋಹಿತನ ಮಾಡುವುದು ಕೇಳೆಂದ ॥ ೮೬

ಘಾಯದಲಿ ಸಲೆ ಚೊಕ್ಕಯದಲು
ಪಾಯಕರದಂಡೆಯಲಿ ಲಗುಡೆಯ
ಲಾಯಿಯೊಳಗೆ ನವಾಯಿಬಿನ್ನಾಣದಲಿ ಬೇಸರದೆ ।

1 ವಿದನ, ಚ. ಠ. 2 ಕಟ್ಟಿಸುವಕಳಚುವ, ಚ. ಠ.

ಸ್ಥಾಯಿಯಲಿ ಸಂಚರಿಯಲೀಯದ
ಳ್ಳಾಯಿಯಲಿ ಬಂಧದ ವಿನೋದದ
ಲಾಯತವನೞದಿಹನೆ ಮಲ್ಲನು ರಾಯ ಕೇಳೆಂದ ॥ ೮೭

ಗುಳಿತವರ [1] ನೀಕ್ಷಿಸುತ ಬಟ್ಟೆಯ
ಮೊಳೆಮರಂಗಳ ಹೊಯ್ಲ ತಪ್ಪಿಸಿ
ನೆಳಲನಱಸುತ ವೇಗಗತಿ ಸಾಮಾನ್ಯಗತಿಗಳಲಿ ।
ಬಳಿವಿಡಿದು ಭೂಭುಜರ ಯಾನ
ಗಳೊಳಳುಕದೆ ದಗೆಯ ಸೈರಿಸಿ
ಬಳಸುವವನೇ ಛತ್ರಧಾರಕ ನರಸ ಕೇಳೆಂದ ॥ ೮೮

ಹರುಷದಲಿ ನಿಜಜನನಿ ಗರ್ಭವ
ಧರಿಸಿ ಕೊಂಡಾಡುವ ವೊಲುತ್ತಮ
ಪುರುಷನಂತರ್ಯಾಮಿಯನು ತಾಳ್ವಂತೆ ಭೂಭುಜರ ।
ಧರಿಸಿ ಸುಖಸಂಗತಿಗಳಲಿ ಸಂ
ಚರಿಸುತಾಳ್ದನ ಹಾನಿ ವೃದ್ಧಿಯ
ಲಿರಲು ವಾಹನಧಾರಿಗಳು ಭೂಪಾಲ ಕೇಳೆಂದ ॥ ೮೯

ಹಿಂದೆ ಮಾಡಿದ ಸುಕೃತಫಲವೈ
ತಂದು ಬೆರಸುವವೋಲು ನಾನಾ
ಛಂದದಾಪತ್ತಿನಲಿ ಹರಿ ನಿಜಭಕ್ತಸಂಗತಿಯ ।
ಮುದದೆ ನಿಲುವವೊಲವನಿಪಾಲನ
ದಂದುಗದ ಹೊತ್ತಿನಲಿ ಗಜಪುಲಿ
ವೃಂದವನು ಚಾಚುವನೆ ವಾಹಕನರಸ ಕೇಳೆಂದ ॥ ೯೦

ಬೇಸರದೆ ಕಾಳೋರಗನನ
ಡ್ಡೈಸಿ ಕಟ್ಟಿರುಹೆಗಳು ಮಿಗೆ ವೇ
ಡೈಸಿ ಕಡಿದಱಿಯಟ್ಟುವಂದದಲಹಿತಬಲದೊಳಗೆ ।

1 ಕುಳಿತವರ, ಖ.

ಓಸರಿಸದೊಳಹೊಕ್ಕು ಸಮರವಿ
ಲಾಸವನು ನೆಱೆ ಮೆಱೆದು ಕೇಶಾ
ಕೇಶಿಯಲಿ ಹಿಡಿದಿಱಿವ[1] ವನೆ ಕಾಲಾಳು ಕೇಳೆಂದ ॥ ೯೧

ಬಿಟ್ಟ ಸೂಟಿಯಲರಿನೃಪರ ನೆಱೆ
ಯಟ್ಟಿ ಮೊದಲಿಸುತ್ತ ಮುಂದಣ
ಥಟ್ಟನೊಡೆಹಾಯ್ದು ಹಿತಬಲದೊಳಗಾನೆ ವರಿವರಿದು ।
ಹೊಟ್ಟು[2] ಗುಟ್ಟುತ ಹೆಣವ ಸಾಲುಗ
ಳೊಟ್ಟಿ ಮೆಱೆಯಲು ಕಳನ ಚೌಕದ
ಲಟ್ಟಿಯಾಡಿಸಬಲ್ಲವನೆ ರಾವುತನು ಕೇಳೆಂದ ॥ ೯೨

ಹೆಬ್ಬಲವ ನೊಡೆತುಳಿದು ಧರಣಿಯ
ನಿಬ್ಬಗೆಯ ಮಾಡಿಸುತ ಗಜಹಯ
ದೊಬ್ಬುಳಿಯ ಹರೆಗಡಿದು ಕಾದಿಸುತಾನೆಗಳ ಮೇಲೆ ।
ಬೊಬ್ಬಿಱಿದು ಶರವಳೆಯ ಕಱೆವುತ
ಲಿಬ್ಬರದ[3] ಬವರದಲಿ ರಿಪುಗಳ
ಗುಬ್ಬಸವನೆಸಗುವನೆ ಜೋದನು ರಾಯ ಕೇಳೆಂದ ॥ ೯೩

ಕುದುರೆಗಳನಾರೈದು ರಥವನು
ಹದುಳಿಸುತ ಸಾರಥಿಯ ನೋಡುತ
ಲಿದಿರ ಮುಱಿವುತ ತನ್ನ ಕಾಯಿದುಕೊಳುತ ಕೆಲಬಲನ ।
ಸದೆದು ಮುರಳುವ ಲಾಗುವೇಗದ
ಕದನಕಾಲಾನಳನವನು ತಾ
ಮೊದಲಿಗನಲ್ಲೈ ರಥಿಕರಿಗೆ ಭೂಪಾಲ ಕೇಳೆಂದ ॥ ೯೪

ಧೊರೆಯ ಕಾಣುತ ವಂದಿಸುತಲಂ
ಕರಿಸುತಂತರಿಸುತ್ತ ಮಿಗೆ ಹ
ತ್ತಿರನೆನಿಸದತಿದೂರನೆನಿಸದೆ ಮಧ್ಯಗತನೆನಿಸಿ ।

1 ಲಹಿತನೃಪರನು, ಚ. 2 ಹಿಟ್ಟು, ಚ. 3 ಲಬ್ಬರಿಸಿ, ಜ.

ಪರಿವಿಡಿಯುಲೋಲಗಿಸುತರಸನ
ಸಿರಿವೊಗವನೀಕ್ಷಿಸುತ ಬೆಸಸಲು
ಕರಯುಗವನಾನುವನೆ ಸೇವಕನರಸ ಕೇಳೆಂದ ॥ ೯೫

* ಗ್ರಾಮಮೂಱು ಸಂಚರಣೆಗಳ
ಸೀಮೆಯುಲಿ ಸ ರಿ ಗ ಮ ಪ ದ ನಿ ಗಳ
ನೇಮ ತಪ್ಪದೆ ಹರಣಭರಣದ ಹೊಂಪು ತಿರುಪುಗಳ ।
ಕೋಮಲಿತಶಾರೀರಹೃದಯದ
ರಾಮಣೀಯಕರಚನೆಗಳಲಿ ಸ
ನಾಮನೆನಿಸುವನವನೆ ಗಾಯಕನರಸ ಕೇಳೆಂದ ॥ ೯೬

ತಾಳಲಯಬೊಂಬಾಳಮಿಶ್ರದ
ಮೇಳವದು ತಾ ರಾಗ ಶುದ್ಧದ
ಸಾಳಗದ ಸಂಕೀರ್ಣದೇಸಿಯ ವಿವಿಧರಚನೆಗಳ ।
ಮೇಳವರಿ ಷಾಡವದ ಸಾಧನ
ದೇಟಿಗೆಯ ಸಂಪೂರ್ಣಮಾರ್ಗದ
ಸೂಟಿಗಳ ಲಯಮಾನವಱಿವವನವನೆ ಗಾಯಕನು ॥ ೯೭

ಗಳಿಸಿದರ್ಥವನೆರಡು ಭಾಗವ
ಸಲಿಸುವೈ ಕರಿತುರಗರಥಪಾ
ಯ್ದಳಿಕೆ ಧರ್ಮತ್ಯಾಗ ಭೋಗವ ಮಾಡಿ ಸುರತತಿಗೆ ।
ಕಳೆದ ಭಾಗದಲೊಂದು ಭಾಗವ
ನುಳುಹುವೈ ಭಂಡಾರದಲಿ ನೃಪ [1]
ತಿಲಕರಿಗೆ ಕರ್ತವ್ಯ [2] ವಿದು ಭೂಪಾಲ ಕೇಳೆಂದ ॥ ೯೮

---

* ಉನ್ನತನ ನಿರುಪಾಧಿಕನ ಸಂ । ಪೂರ್ಣದಕ್ಷನ ತನ್ನನನ್ಯರು ।
ಮನ್ನದನ ಪತಿಕಾರ್ಯನಿಷ್ಠನನಾಪ್ತಗುಪ್ತಕನ ॥ ಮನ್ನಣೆಗೆ
ಬೆರೆಯದನನತಿಶಯ । ನಿನ್ನ ಕಾರ್ಯವಿಶಾರದನನು । ಪನ್ನಪ್ರತಿ
ಹಾರಕರು ವುಂಟೇ ರಾಯ ನಿನಗೆಂದ ॥ ಡ.

1 ಕೋಶನೀನ್ಯಕ್ಕೆ, ಡ. 2 ತಿಲಕರಂತರ್ಬುದ್ಧಿ, ಡ.

ಮಲೆವ ರಾಯರ ಬೆನ್ನ ಕಪ್ಪವ
ನಲಗಿನಲಿ ಕೊಂಡಾಂತ ಮನ್ನೆಯ
ಕುಲದ ತಲೆಚಂಡಾಡಿ ರಿಪುಗಳ ದುರ್ಗದಲಿ ತನ್ನ ।
ಬಲುಸಚಿವರನು ನಿಲಿಸಿ ತಾ ಪುರ
ದಲಿ ವಿನೋದದಲಿರುತ ಪರುಷದ
ಲೀಳೆಯ ಪಾಲಿಸುವವನೆ ರಾಯನು ಭೂಪ ಕೇಳೆಂದ ॥ ೯೯

ಬಂದು ಕಡೆಯಲಿ ದಳ ಮುಳಿದು ಮ
ತ್ತೊಂದು ದೆಸೆಯಲಿ ಮನ್ನೆಯರು ಕವಿ
ದೊಂದು ಕಡೆ ಸಮವಲ್ಲಿ ಮತ್ತೊಂದ [1] ಧಿಕಬಲವೆನಿಸಿ ।
ಬಂದು ಸಂತಾಪದಲಿ ಕಾಳಗ
ದಿಂದ ಪುರದಲಿ ನಿಂದು ಕರಿಕರಿ
ಗುಂದುವ ಕ್ಷಿತಿಪಾಲನೇ ಭೂಪಾಲ ಕೇಳೆಂದ ॥ ೧೦೦

ಬೆಳಸು ಘನತೃಣವಧಿಕಜಲನಿ
ರ್ಮಲವೆನಿಪ ಕಾಲದಲಿ ಪರಮಂ
ಡಲಕೆ ನಡೆವುದು ದುಷ್ಟಕಾಲದೆ ಹೀನನೆಂದೆನಿಸೆ ।
ಬಲವಹುದು ನಿಜದಟಕೆ ಬರಲಾ
ನೆಲಕೆ ಮುಟ್ಟಲು ವೈರಿಸೇನಾ
ವಳಿಯ ಘಾತಕೆ ದೊರಕುವುದು ಭೂಪಾಲ ಕೇಳೆಂದ ॥ ೧೦೧

ಆಣೆಗಪಜಯವಿಲ್ಲಲೇ ಕೀ
ಳಾಣಿ ಟಂಕದೊಳಿಲ್ಲಲೇ ನಿ
ತ್ರಾಣದಲಿ ಸಂಗರವ ಹೊಗೆಯಲೆ ಶೌರ್ಯಗರ್ವದಲಿ ।
ವಾಣಿಯನು ಚಿತ್ತದಲಿ ಧರ್ಮದ
ಲೂಣೆಯವನಹಿತರಲುಪೇಕ್ಷೆಯ
ಕೇಣವನು ದಾನದಲಿ ಮಾಡೆಲೆ ರಾಯ ಕೇಳೆಂದ ॥ ೧೦೨

---

1 ದೆಸೆಯಲಿ ಬಲದೊಳೊಂದನೆಯ್ದು, ಚ.

ಕಳವು ಹುಸಿ ಹಾದರ ವಿರೋಧ
ಸ್ಖಲಿತ ವಾರಡಿ ಬಂದಿ ದಱಿದುಱ
ಬೆಳುಗವತೆ ಪರಿಭವಣೆ ಡಾವರ [1] ಠಕ್ಕು ಡೊಳ್ಳಾಸ ।
ಪಱಿವು ವಂಚನೆ ಜಾತಿಸಂಕರ
ಕೊಲೆ ನಿರೋಧವು ವಿಕೃತವಾಯಾ
ವಳಗಳಂಬಿವು ನಿನ್ನೊಳಿಲ್ಲವೆ ರಾಯ ಹೇಪೆಂದ ॥ ೧೦೩

ಬಡವರನು ಬಲ್ಲಿದರು ಮದದಲಿ
ಕೆಡಿಸುವರು ರಾಜ್ಯದೊಳಗವದಿರ
ಮಡದಿಮಕ್ಕಳ ಕಣ್ಣನೀರಿನ್ನಾರ ತಾಗುವುದು ।
ಪೊಡವಿಗಧಿಪತಿ ನೀನು ಧೂರ್ತರ
ಬಡಿದು ಶಿಕ್ಷಿಸದಿದ್ದಯಾದೊಡೆ
ನಡವಳಿಗೆ ಕೇಡಹುದು ಕುಲದಲಿ ಕರಣಿಕರ ನಡುವೆ ॥ ೧೦೪

ವಿದ್ಯೆ ಸತ್ಕುಲ ಬಹುವಿವೇಕವು
ಬುದ್ಧಿ ಜಾಣುಮೆ ನುಡಿಯು ಸಡಗರ
ಶುದ್ಧಚಿತ್ತ ಸುಶೀಲ ಭುಜಬಲಭದ್ರನೆಂದೆನಿಪ ।
ಉದ್ದಿಗವು ಮೊದಲಾಗುಣಂಗಳ
ಲಿದ್ದು ಫಲವೇನರಸ ಭಾಗ್ಯದ
ಬುದ್ಧಿಹೊದ್ದದವ ನರನು ದರಿದ್ರಾಂಗನವನೆಂದ ॥ ೧೦೫

ಸಿರಿಗೆ ಕಂಟಕವಾದ ದೋಷವ
ನೊರೆವೆನಾಲಸ್ಯವನು ಭಯವನು
ಮಱವೆಯನು ಕೋಪವನು ನಿದ್ರೆಯು ದೀರ್ಘಸೂತ್ರತೆಯು ।
ಪರಿಹರಿಸಬಲ್ಲವನಿಪಾಲಂ
ಗೆರವೆನಿಸದೈಶ್ವರ್ಯವಹುದು
ವರ್ಗರೆಯೊಳವ ರಾಜೋತ್ತಮನು ಭೂಪಾಲ ಕೇಳೆಂದ ॥ ೧೦೬

1 ಅ. ನ್ಯಾಯುಪರಿಭವ, ಚ.

ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ
ಪಸರಿಸುವುದಾಕೃಷಿಯುನುದ್ಯೋ
ಗಿಸುವ ಜನವನು ಪಾಲಿಸುವುದಾಜನಪದದ ಜನದಿ ।
ವಸು ತೆರಳುವುದು ವಸುವಿನಿಂ ಸಾ
ಧಿಸುವುದೆಲ್ಲವ ಭೂಪರದಱಿಂ
ಕೃಷಿವಿಹೀನನ ದೇಶವದು ದುರ್ದೇಶ ಕೇಳೆಂದ ॥ ೧೦೭

ತಲೆಯು ಮೇಲಿಱಿದವನನೊಗ್ಗಿಸಿ
ಸಲಹುವರು ಪುರುಷಾರ್ಥಜೀವರ
ನಿಟಿಕೆಗಾಂಬರು ಸ್ವಾಮಿದ್ರೋಹರನೊಲಿದು ನಂಬುವರು ।
ತಿಳಿಯಲಿದು ಕ್ಷತ್ರಿಯರ ಸಹಜದ
ಬಳಕೆ ನೀನರಸಾಗಿ ನಿನ್ನೊಳು
ಮುಳಿವರಿಗೆ ನೀನೊಲಿಯೆ ಯೆಲೆ ಭೂಪಾಲ ಕೇಳೆಂದ ॥ ೧೦೮

ಹಲವು ವಿನಿಯೋಗದಲಿ ಸುದತಿಯು
ರೊಲುಮೆಯಲಿ ಸಕಲಾಂಗದಲಿ ನಿ
ಸ್ಖಲಿತನಿಜವನೆ ಧರಿಸುವಾಶ್ರಮವರ್ಣಭೇದದಲಿ ।
ಹಟವು ನಿನಗಾವಂಗದಲಿ ಬಳಿ
ಸಲಿಸದಲೆ ಪರತತ್ವದಲಿ ಮೆ
ಗ್ಗಳಿಸದಲೆ ವೈರಾಗ್ಯ ಮತ ಭೂಪಾಲ ನಿನಗೆಂದ ॥ ೧೦೯

ಢಾಳರನು ಢವಳರನು [1] ಠಕಿನ
ಠೌಳಿಕಾಱಱ ಕೃತಕಮಾಯಾ
ಜಾಲರನು ಕಾಹುರರನಂತರ್ದಾಹಕರ ಶಠರ ।
ಖೂಳರನು ಖಳರನು ವಿಕಾರಿಯ
ಜಾಳುನುಡಿಗಳ ಜಡಮತಿಯ ನೀ
ನಾಳಗೊಂಬೆಯೊ ಲಾಲಿಸುವೆಯೋ ರಾಯ ಹೇಳೆಂದ ॥ ೧೧೦

---

1 ಡಾಳರನು, ಚ.

ನರಕಕರ್ಮವ ಮಾಡಿ ಇಹದೊಳು
ದುರಿತಭಾಜನರಾಗಿ ಕಡೆಯಲಿ
ಪರಕೆ ಬಾಹಿರರಾಗಿ ನಾನಾಯೋನಿಯೊಳು ಸುಳಿದು ।
ಹೊರಳುವರು ಕೆಲಕೆಲರು ಭೂಪರು
ಧರಿಸುವರಲ್ಲೈ ರಾಜಧರ್ಮದ
ಹೊಱಿಗೆಯನು ಮಱಿದಿರೆ ಯೆಲೇ ಭೂಪಾಲ ಕೇಳೆಂದ ॥ ೧೧೧

ನೃಗನ ಭರತನ ದುಂದುಮಾರನ
ಸಗರನ ಪುರೂರವಯಯಾತಿಯ
ಮಗನ ನಹುಷನ ಕಾರ್ತವೀರ್ಯನ ನಳನ ದಶರಥನ ।
ಪಗಲಿರುಳುವಲ್ಲಭರ ವಂಶದ
ವಿಗಡರಲಿ ಯಮಸೂನು ಸರಿಯೋ
ಮಿಗಿಲೊ ಯೆನಿಸುವ ನೀತಿ [1] ಯುಂಟೇ ರಾಯ ನಿನಗೆಂದ ॥

ಆಮುನೀಂದ್ರನ ವಚನರಚನಾ
ತಾಮರಸಮಕರಂದಕೇಳಿಯ
ಲೀಮಹೀಶಮನೋಮಧುವ್ರತ ವುಬ್ಬಿತೊಲವಿನಲಿ ।
ರೋಮಪುಳಕದ ರುಚಿರಭಾವ
ಪ್ರೇಮಪೂರಿತಹರುಷರಸದು
ದ್ದಾಮನದಿಯೊಳು ಮುಳುಗಿ ಮೂಡಿದನರಸ ಕೇಳೆಂದ ॥ ೧೧೩

ನಾರದರಿಂದ ಮಾಡಲ್ಪಟ್ಟ ಧರ್ಮೋಪದೇಶದಿಂದ ತುಷ್ಟನಾಗಿ
ನಾರದರನ್ನು ಸ್ತುತಿಸುವಿಕೆ.

ಎಲೆ ಮುನಿಯೆ ನೀವ್ ರಚಿಸಿದೀನಿ [2]
ರ್ಮಲನೃಪಾಲಾನ್ವಯ [3] ಪ್ರಪಂಚವ
ಬಳಸುವೆನು ಕೆಲಕೆಲವನಿನ್ನುಱಿ ಬಳಸುವೆನು ಕೆಲವ ।

[1] ಕೀರ್ತಿ, ಡ.   [2] ನೀ ಬೆಸಸಿದೀನಿ, ಡ.   [3] ರ್ಮಲದನೃಪನೀತಿ,

ಇಱಿದು ಧರಣಿಗೆ ಸುಱಿದು ನೀತಿ
ಸ್ಖಲಿತಜಡರನು ತಿದ್ದಿ ತಿಳುಹುವ
ಸುಲಭತನದಲಿ ದೇವರುಷಿ ನಿನಗಾರು ಸರಿ ಯೆಂದ । ೧೧೪

ಮುನಿಯೆ ಬಿನ್ನಹವಿಂದು ನೀವಿಂ
ದ್ರನ ವಿರಿಂಚಿಯ ಯಮನ ವರು
ಣನ ಧನಪತಿಯ ಶೇಷನ ಸಭಾಮಧ್ಯದಲಿ ಸುಱಿವಿರಲೇ ।
ಇನಿತು ರಚನೆಗೆ ಸರಿಯೊ ಮಿಗಿಲೋ
ಮನುಜಯೋಗ್ಯಸ್ಥಾನವೋ ಮೇ
ಣೆನಲು ನಗುತೆಂದನು ಮುನೀಶ್ವರನಾಯುಧಿಷ್ಠಿರಗೆ [1] ॥ ೧೧೫

ಜನಪ ಕೇಳುತ್ಸೇಧ [2] ಶತಯೋ
ಜನ ತದರ್ಧದೊಳಗಲದಳತೆಯಿ
ದೆನಿಪುದಿಂದ್ರಸ್ಥಾನ ವಲ್ಲಿಹುದಖಿಳಸುರನಿಕರ ।
ಜನಪರಲ್ಲಿ ಯಯಾತಿಯಾತನ
ಜನಕ ನಳನೃಗಭರತ [3] ಪೌರವ
ರೆನಿಪರಖಿಳಕ್ರತುಗಳಲಿ ಸಾಧಿಸಿದರಾಸಭೆಯ ॥ ೧೧೬

ವೈದಿಕೋಕ್ತಿಗಳಲಿ ಹರಿಶ್ಚಂ
ದ್ರಾದಿರಾಯರು ರಾಜಸೂಯದ
ಲಾದಿವಿಜಸಭೆಗಗ್ಗಳಯರಿಂದ್ರಂಗೆ ಸರಿ ಮಿಗಿಲು ।
ಆದುದಾ ಪುರುಹೂತಸಭೆಯೋ
ಪಾದಿ ಯಮನಾಸ್ಥಾನದಲ್ಲಿ ವಿ
ಷಾದದಲಿ ನಿಮ್ಮಯ್ಯನಿಹನಾತನ ಸಮೀಪದಲಿ ॥ ೧೧೭

ವರುಣಸಭೆಯೊಳಗಿಹುವು ಭುಜಗೇ
ಶ್ವರಸಮುದ್ರ ನದೀನದಾವಳಿ
ಗಿರಿತರುವ್ರಜವೆನಿಪ ಸಂಖ್ಯಾರಹಿತವಸ್ತುಗಳು ।

---

1 ರಾಯನ ನುಡಿಗೆ ನಗುತಿಂತೆಂದನಾಮುನಿಪ, ಡ. 2 ಳ ವಿಸ್ತೀರ್ಣ, ಕ. ಖ.
3 ನಹುಷ, ಡ.

ಅರಸ ಕೇಳು ಕುಬೇರಸಭೆಯಿದು
ಪರಿಯುಗಲ ವೆಪ್ಪತ್ತು ಯೋಜನ
ಹರಸಖನ ಸಿರಿ ಸದರವೇ ಬಣ್ಣಿಸುವೊಡರಿದೆಂದ ॥ ೧೧೮

ಬಗೆಯೊಳಗೆ ಮೊಳವುದು ಚತುರ್ದಶ
ಜಗವೆನಲು ಜಾವಳವೆ ತನ್ನೋ
ಲಗದ ಸಿರಿ ಪರಮೇಷ್ಠಿಗೇನರಿದೈ ಮಹೀಪತಿಯೆ ।
ಸುಗಮಗಾನಿಯುರುಪನಿಷದವಿ
ದ್ಯೆಗಳು ವೇದಸ್ಮೃತಿಪುರಾಣಾ
ದಿಗಳು ಬಿರುದಾವಳಿಯ ಪಾಠಕರಾತನಿದಿರಿನಲಿ ॥ ೧೧೯

ಮುನಿಗಳೇ ಮಾಣಿಯರು ಮಂತ್ರಾಂ
ಗನೆಯರೋಲೆಯಕಾತಿಯರು ಸುರ
ಜನವೆ ಕಿಂಕರ [1] ಜನರು ಸೂರ್ಯಾದಿಗಳ ಸಹಚರರು ।
ಘನಚತುರ್ದಶವಿದ್ಯೆ ಪಾಠಕ
ಜನವಲೈ ಪಾಡೇನು ಪದ್ಮಾ
ಸನನ ಪರುಠವವಾ ಸಭೆಗೆ ಸರಿಯಾವುದೈ ನೃಪತಿ ॥ ೧೨೦

ಇನಿಬರಾಸ್ಥಾನದಲಿ ಸುಕೃತದ
ಲಿನಕುಲನು ತೇಜಸ್ವಿ ಗಡ ಸುರ
ಮುನಿ ಹರಿಶ್ಚಂದ್ರಂಗೆ ಸಾಱಿದ ಸುಕೃತಫಲವೇನೊ ।
ಜನಕನಪದೆಸೆಗೇನು ನಿಷ್ಕೃತ
ವೆನಲು ನಕ್ಕನು ರಾಜಸೂಯದ
ಘನವನಱಿಯಾ ಧರ್ಮನಂದನ ಯೆಂದನಾಮುನಿಪ ॥ ೧೨೧

ಆಮಹಾಕ್ರತುವರವನೀ ಮಾ
ಡಾ ಮಹೀಶ್ವರಪಙ್ಕ್ತಿಯಲಿ ನಿ
ಸ್ಸೀಮದಲಿ ನಿಮ್ಮಯ್ಯನಿಹುವ ಸುತೇಜದಲಿ ಬಟಿಕ ।

---

1 ಕಿನ್ನರ, ಕ. ಖ.

ಸೋಮವಂಶದ ರಾಯರೊಳಗು
ದ್ದಾಮರಹ [1] ಬಲುಗೈಕುಮಾರ
ಸ್ತೋಮನೀವಿರಲಯ್ಯಗರಿದೇನೆಂದನಾಮುನಿಪ ॥ ೧೨೨

ಮುನಿಯ ಮಾತಿನ ಬಲೆಗೆ ಸಿಲುಕಿತು
ಜನಪತಿಯ ಚೈತನ್ಯಮೃಗವೀ
ತನ ಮಹೋಮರುಷದಲಿ ನೆನೆದುವು ಕರಣವೃತ್ತಿಗಳು ।
ಮನದಲಂಕುರ [2] ವಾಯ್ತು ನಾಲಗೆ
ಗೊನೆಯಲೆರಡೆಲೆಯಾಯ್ತು ಯಜ್ಞದ
ನೆನಹು ಭಾರವಣೆಯಲಿ ಬಿಗಿದುದು ಧರ್ಮನಂದನನ ॥ ೧೨೩

ಕಳುಹಿದನು ಸುರಮುನಿಯನುದರದೊ
ಳಡಿದುದಂತಸ್ತಾಪ ಯಜ್ಞದ
ಬಲುಹ ನೆನೆದಡಿಗಡಿಗೆ ಕಂಪಿಸಿ ಕೈಯ್ಯ ಗಲ್ಲದಲಿ ।
ಬಲಿದೊಲಿದು ಮಿಗೆ ಭಾವದಲಿ ಕಳ
ವಳಿಸಿ ಯೋಚಿಸಿ ಮತ್ತೆ ಭೂಪತಿ
ತಿಲಕ ಚಿಂತಿಸಿ ನೆನೆಯುತಿರ್ದನು ವೀರ ನಾರಣನ ॥ ೧೨೪

ಒಂದನೆಯ ಸಂಧಿ ಮುಗಿದುದು.

ಎರಡನೆಯ ಸಂಧಿ.

ಸೂಚನೆ

ಬಲಿಮಥನಫಲುಗುಣರು ಸಹಿತ
ಗಳೆಯನೇಕಾಂಗದಲಿ ರಣದಲಿ
ಕಲಿಜರಾಸಂಧನನು ಸೀಳಿಯೆ ಬಿಸುಟನಾಭೀಮ ॥

[1] ತೆಯ, ಡ
[2] ಮನದೊಳಿದು ನೆಲೆ, ಡ.

ಧರ್ಮರಾಯನು ಭೀಮಾದಿಗಳನ್ನು ಕರೆಸಿ ಆಲೋಚನೆ ಮಾಡಿದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಮಂತ್ರಾಳೋಚನೆಗೆ ಭೂ
ಪಾಲ ಕರೆಸಿದನನುಜರನು ಧೌಮ್ಯಾದಿಮಂತ್ರಿಗಳ |
ಮೇಳವದ ತನಿ[1] ವೆಳಗುಗಳ ಮಣಿ
ಮೌಳಿಮಂಡಿತದುಪ್ಪರದ ಪಡಿ
ಸೂಳುಪಾಯನವಧಾರೆನಲು ಹೊಕ್ಕರು ಸಭಾಂತರವ || ೧

ದ್ರುಪದಧೃಷ್ಟದ್ಯುಮ್ನಮತ್ಸ್ಯಾ
ಧಿಪರು ಕೈಕಯಪಾಂಡವಾತ್ಮಜ
ರು ಪತಿಕಾರ್ಯವಿಚಾರನಿಷ್ಠರು ಬಂದರೋಲಗಕೆ |
ನೃಪತಿ ಹದನೇನಮರಮುನಿವರ
ನುಪಚರಿತಮಂತ್ರಾರ್ಥಸಿದ್ಧಿಗೆ
ರಪಣ ವೆಮಗುಂಟೀಗ ಬೆಸಸೆಂದರು ಯುಧಿಷ್ಠಿರಗೆ || ೨

ಧರೆ ನಮಗೆ ವಶವರ್ತಿ ಖಂಡೆಯ
ಸಿರಿ ಯೆಮಗೆ ಮೈವಳಿ ಯುಧಿಷ್ಠಿರ
ನರಸುತನ ನಳನಹುಷನೃಗಭರತಾದಿಭೂಮಿಪರ |
ಮೆಱಸಿತೆಂಬುದು ಲೋಕವೀನಿ
ಬ್ಬರದ ಹೆಸರೆಮಗಿಂದು ಬೊಪ್ಪನ
ಸಿರಿಯನೇವಣ್ಣಿಸುವೆನೆಂದನು ಸುಯ್ದು ಯಮಸೂನು || ೩

ಅಲ್ಲಿ ಸುರರಲಿ ಸುಪ್ರತಿಷ್ಠಿತ
ನಲ್ಲ ಗಡ ಪಾಂಡುಕ್ಷಿತೀಶ್ವರ
ನಿಲ್ಲಿ ವೈಭವಕೇನು ಫಲ ನಾವವರ ಸದ್ಗತಿಗೆ |
ಇಲ್ಲಿ ರಚಿಸಿದ ರಾಜಸೂಯದಿ
ನೆಲ್ಲವಹುದಯ್ಯಂಗೆ ಮಖವಿದು[2]
ದುರ್ಲಭವು ಕೈಕೊಂಡೆವಾವುದು ಮಂತ್ರವಿದಕೆಂದ || ೪

---

1 ಮಱು, ಕ, ಖ. 2 ಮಖದಲಿ, ಝ.

ಆಗ ಅವರುಗಳೊಪ್ಪಿ ಕೃಷ್ಣನನ್ನು ಕರೆಕಳುಹಿಸುವಿಕೆ.

ಆಗಲದಕೇನರಸ ದೀಕ್ಷಿತ
ನಾಗು ನಿರುಪಮರಾಜಸೂಯಕೆ
ಭಾಗಧನವನು ಭೂಮಿಪರ ಸದೆದೆಳದು [1] ತಹೆವೆಂದು ।
ಆಗರುವರಬ್ಬೇಪೆ ತಪ್ಪೇ
ನಾಗಲಿದು ಗೋವಿಂದಮತದಲಿ
ತೂಗಿ ನೋಡುವೆವಿದಱ ತೂಕವನೆಂದನಾಭೂಪ ॥ ೫

ಕಳುಹಿದನು ಸಾರಥಿಯು ರಥವನು [2]
ಕೆಲವು ಪಯಣಕೆ ಕೃಷ್ಣಭವನ
ಸ್ಥಳದ ಹೊಱಬಾಹೆಯಲಿ ಬಾಚಿತು ಚಪಳಗಮನದಲಿ ।
ಒಳಗೆ ಬಂದನು ಪಾವುಡವನುಂ
ದಿಱಿಹಿದನು ಕೃಷ್ಣಂಗೆ ಪಾಂಡವ
ತಿಲಕನಟ್ಟಿದ ಹದನ ಬಿನ್ನಹ ಮಾಡಿದನು ಬಳಿಕ ॥ ೬

ತಿಳಿದನಲ್ಲಿಯು ರಾಜಕಾರ್ಯದ
ನೆಲೆಯನಕ್ರೂರಾದಿಸಚಿವರ
ತಿಳುಹಿದನು ಶಿಶುಪಾಲ ಕಂಸನ ಮಾವನಿಂತವರ ।
ಕೊಲುವೊಡಿದು ಹದ ನಮ್ಮ ಭಾವನ
ನಿಳಯದುತ್ಸವ ಸಾಮನಸ್ಯವ
ಬೆಳಸಿದರೆ ಹರಿವುದು ಮನೋರಥಸಿದ್ಧಿ ನಮಗೆಂದ ॥ ೭

ಕೃಷ್ಣನ ಆಗಮನ.

ಎಂದು ವಸುದೇವಾದಿಯಾದವ
ವೃಂದವನು ಬಲಭದ್ರರಾಮನ
ಹಿಂದಿರಿಸಿ ಬಳಿಕಿಂದ್ರಸೇನನ ಕೂಡೆ ನಲವಿನಲಿ ।

---

1 ನಿರದೆ, ಕ. ಚ. 2 ನಾತನು, ಚ. ಕ. ಖ.

ಬಂದನಿಂದ್ರಪ್ರಸ್ಥಕಿವರಿದಿ
ರ್ದಂದರೊಸಗೆಯ ಗುಡಿಯ ತೋರಣ
ದಿಂದ ಕನ್ನಡಿಕಳಶದಲಿ ಕೊಂಡೊಯ್ದರಾ [1] ಹರಿಯ ॥ ೮

ಪುರಕೆ ಬಿಜಯಂಗೈಸಿ ತಂದರು
ಹರಿಯನರಮನೆಗನಿಬರಂತಃ
ಪುರದ ಕಾಣಿಕೆಗೊಂಡು ಬಾಂಧವಜನವನುಚಿತದಲಿ ।

ಕೃಷ್ಣಧರ್ಮಜರ ಸಂವಾದ.

ಹರಸಿ ಮಧುರಪ್ರೀತಿಯಿಂದಾ
ದರಿಸಿ ಮಂತ್ರಾಳೋಚನೆಯ ಮಂ
ದಿರದಲೇಕಾಂತದಲಿ ನೃಪತಿಗೆ ನುಡಿದನಸುರಾರಿ ॥ ೯

ಏನು ಕರೆಸಿದಿರೈ ಪ್ರಯೋಜನ
ವೇನು ನಿನ್ನುತ್ಸಾಹಶಕ್ತಿಯ
ದೇನು ದುರ್ಘಟವೇನು ಶಂಕಿತವೇನು ಸಂಕಲ್ಪ ।
ದಾನವರ ಕೌರವರ ವೈರದೊ
ಳೇನು ವಿಗ್ರಹವಿಲ್ಲಲೇ ಹದ
ನೇನೆನಲು ಕೃಷ್ಣಂಗೆ ಬಿನ್ನಹ ಮಾಡಿದನು ಭೂಪ ॥ ೧೦

ದನುಜರಲಿ ಕುರುಸೇನೆಯಲಿ ಭಯ
ವೆನಗೆ ಭಾರವೆ ನಿಮ್ಮಡಿಯ ಪದ
ವನಜವಿದು ಸೇಸಕವಲೇ ತನ್ನುತ್ತಮಾಂಗದಲಿ ।
ಮುನಿಯ ಹೇಳಿಕೆ ಬೊಪ್ಪಗಮರೇಂ
ದ್ರನಲಿ ಸಮರಸವಿಲ್ಲ ಗಡ ನ
ಮ್ಮನಿಬರಲಿ ಸಾಮರ್ಥ್ಯವಿದ್ದುದಕೇನು ಫಲವೆಂದ ॥ ೧೧

---

1 ಕೊಂಡಾಡಿದರು, ಚ. ಡ

ಪಿತನ ಪರಮಪ್ರೀತಿಗುನ್ನತ
ಗತಿಗೆ ನಿರುಪಮರಾಜಸೂಯ
ಕ್ರತುವೆ ಸಾಧನವೆಂದು ಮುನಿಯುಪದೇಶಿಸಿದನೆಮಗೆ ।
ಕ್ರತು ಮಹಾಕ್ರತು ಸಕಲಧರಣೀ
ಪತಿಗಳರ್ಥವ ಗುಣದಲೀಯರು
ವ್ರತವೆನಗೆ ಸಂಕಲ್ಪವಾಯ್ತಿದಕೇನು ಮತಿಯೆಂದ ॥ ೧೨

ತಿರುಗಿದೊಡೆ ಸಂಕಲ್ಪಹಾನಿಯು
ಪರಮಪಾತಕವಿದು ಮಹಾನಿ
ಷ್ಠುರದ ಮಖವಿನ್ನಮರಮುನಿಪತಿ ದೇವಲೋಕದಲಿ ।
ಪರಹುವನು ಪರಿಹಾಸಮಯಸಾ
ಗರವ ದಾಂಟಿಸು ಜೀಯ ಭವಸಾ
ಗರಕೆ ಯಿದು ಮಿಗಿಲೇ ಮುರಾಂತಕ ಯೆಂದನಾಭೂಪ ॥ ೧೩

ಧರ್ಮರಾಜನ ಮಾತನ್ನು ಕೇಳಿ ರಾಜಸೂಯದ ದೌರ್ಘಟ್ಯ
ವನ್ನು ಹೇಳುವಿಕೆ.

ನಕ್ಕನಸುರವಿರೋಧಿ ಮುನಿ ಹಾ
ಯಿಕ್ಕಿದನಲಾ ಬಲೆಯನಕಟಾ
ಸಿಕ್ಕಿದರಲಾ ಪಾಪಿಗಳು ಸದರರೆ ಮಹಾನೃಪರು ।
ಅಕ್ಕಜದ ಮಖವಿದಱ ಚೂಣಿಗೆ
ಚುಕ್ಕಿಯಾಯ್ತು ಮಹಾಮಹೇಂದ್ರರು [1]
ಮಕ್ಕಳಾಟಿಕೆಯಾಯ್ತೆನುತ ತೂಗಿದನು ಸಿರಿಮುಡಿಯ ॥ ೧೪

ಕೆದಱಿ ಸಪ್ತದ್ವೀಪಪತಿಗಳ
ಸದೆದು ರಚಿಸುವ ರಾಜಸೂಯದ
ಹದನನಂ [2] ಘೈಸುವರದಾರೀವರ್ತಮಾನದಲಿ ।

---

1 ಮನಮಹೀಶನ, ಚ.   2 ಬೆದರದಂ, ಕ.ಖ.

ಸುದತಿಯರ ಸೂರಿಗಳ ಮುಂದು
ಬ್ಬಿದೆ ಯೆಲಾ ನಾರದನ ಘಲ್ಲಣೆ
ಗಿದು ಸುದುರ್ಘಟವಿಂದು ಬಿದ್ದವಿಘಾತಿ ಪಿರಿದೆಂದ ॥ ೧೫

ಮೊದಲಲೇ ನಿಮ್ಮವರು ನಿಮ್ಮ
ಭ್ಯುದಯವನು ಸೇರುವರೆ [1] ಕೌರವ
ರದಟರೊಳಗ್ಗದಕರ್ಣಶಕುನಿಜಯದ್ರಥಾದಿಗಳು ।
ಕುದುಕುಳಿಗಳೀಚೆಯಲಿ ಕಂಸನ
ಮದಮುಖನ ಪರಿವಾರವದೆ ತೂ
ಕದಲಿ ಮಗಧನ ಹೊರೆಯುಳಿದನೇವಣ್ಣಿಸುವೆನೆಂದ ॥ ೧೬

ಕಾಲಯವನನು ದಂತವಕ್ರನ
ಪಾಲರೊಳು ದುರುದುಂಬಿಯೈ ಶಿಶು
ಪಾಲಪೌಂಡ್ರಕರೆಂಬರಿಗೆ ಸಮದಂಡಿ ಯೆಮ್ಮೊಡನೆ ।
ಖೂಳರಿಬ್ಬರು ಹಂಸಡಿಬಿಕರು
ಸಾಳುವನ ಮುರನರಕರಾಳನ
ಮೇಳವವನೇನೆಂಬೆನೈ ಭೂಪಾಲ ಕೇಳೆಂದ ॥ ೧೭

ಕೆಲಬರವರೊಳು ನಮ್ಮ ಕೈಯಲಿ
ಕೊಲೆಯ ಭಂಗಕೆ ಬಂದು ಬಿದ್ದರು
ಕೆಲಕೆ ಸರಿವವನಲ್ಲ [2] ಮಲೆವರ ಮಾರಿ ಮಾಗಧನು ।
ಬೞಿಕೆಮಗೆ ಬಲವದ್ವಿರೋಧದ
ತೊಳಸು ಬಿದ್ದುದು ತೋಟಿಗಾಱದೆ
ಜಲಧಿಮಧ್ಯದೊಳೂರ ಕಟ್ಟಿದೆವರಸ ಕೇಳೆಂದ ॥ ೧೮

ಮಾವದೇವನ ಮುೞಿದೊಡಾತನ
ದೇವಿಯರು ಬೞಿಕೆಮ್ಮ ದೂಱಿದೊ
ಡಾವಿಗಡ ಮಗಧಂಗೆ ಮಧುರೆಯ ಮೇಲೆ ದಂಡಾಯ್ತು ।

---

1 ದಲಿ ಸೊಗಸುವರೆ, ಡ, 2 ನೆಲನನೇಱಿದನಲ್ಲಿ, ಕ. ಖ.

ನಾವು ನಾನಾದುರ್ಗದಲಿ ಸಂ
ಭಾವಿಸಿದೆವಾತನನು ನಿಮ್ಮೊಡ
ನಾವು ಕೂಡಿದೊಡಾತ ಮುನಿಯನೆ ಭೂಪ ಕೇಳೆಂದ ॥ ೧೯

ಅರಸ ಕೇಳ್ಳೊಂದು ವಂಶದ [1]
ಧರಣಿಪರು ಮಾಗಧನ ಮನೆಯಲಿ
ಸೆಱೆಯಲಿಪ್ಪರು ಬಿಡಿಸಬೇಕು ನಿರಂತರಾಯದಲಿ ।
ದುರಳನವ ಭಗದತ್ತಬಾಹ್ಲಿಕ
ನರಕವೃದ್ಧಕ್ಷತ್ರಮೊದಲಾ
ದರಸುಗಳು ಬಲುಗರ್ವಿತರಸಂಖ್ಯಾತರಿಹರೆಂದ ॥ ೨೦

ಅವರಿರಲಿ ಮತ್ತಿತ್ತಲುತ್ತರ
ದವನಿಪರು ಧಕ್ಕಡರು ಧರಣೀ
ಧವರೊಳಧಿಕಕುಠಾರರಗ್ಗದ ಚೀನಲಾಟಕರು ।
ರವಿಯುದಯಗಿರಿಶಿಖರದಲಿ ಪಾ
ರ್ಥಿವರು ದಕ್ಷಿಣಚೋಳಪಾಂಡ್ಯ
ಪ್ರವರರರದೆ ವಿಕ್ರಮಹಿರಣ್ಯಮದಾಂಧರವರೆಂದ ॥ ೨೧

ಔಕಿ ಚತುರಂಗದ ನರೇಂದ್ರಾ [2]
ನೀಕವಳುಕಿದರೇನು ಯಾಗ
ವ್ಯಾಕರಣಕಿವರಿಬ್ಬರೇ ದೂಷಕರು ಧರಣಿಯಲಿ ।
ಈಕುಠಾರರು ಕದನಮುಖದ ವಿ
ವೇಕಿಗಳು ಶಿಶುಪಾಲಮಾಗಧ
ರಾಕೆವಾಳರು ವೈರಿರಾಯರೊಳರಸ ಕೇಳೆಂದ ॥ ೨೨

ಅಧಿಕರಿವರಿಬ್ಬರೊಳಗಾಮಾ
ಗಧನೆ ಬಲುಗೈ ರಾಜಸೂಯಕೆ
ಸದರವನು ನಾ ಕಾಣೆನಾತನ ಖಂಡೆಯದ ಮೊನೆಗೆ ।

---

1 ದುರ್ಗದ, ಡ. 2 ನೃಪಾಲರ ನೂಕಿ, ಚ.

ನಿಧನವಲ್ಲದೆ ಧನವೆ ನೆಱಹುವ
ಹದನ ನೀನೇ ಬಲ್ಲೆ [1] ಯಾತನ
ವಧೆಗೆ ಪರಿಯದು ತಮ್ಮ ಕೈಯ್ಯಲಿ ಭೂಪ ಕೇಳೆಂದ ‖ ೨೩

ಕಂಸನನು ಕೆಡಹಿದೆವು ಮುಱಿದೆವು
ಹಂಸಡಿಬಿಕರ ಪೌಂಡ್ರಕನ ನಿ
ರ್ವಂಶವೆನೆ ಸದೆದೆವು ಮುರನರಕಾದಿದಾನವರ ।
ಹಿಂಸೆಯಿವನಲಿ ಮೆಱೆಯದಿವ ನಿ
ಸ್ಸಂಶಯದಲಿ ಜಯದಲಿ ಯಾಗ
ಧ್ವಂಸಕನ ನೆಱೆ ಮುಱಿವುಪಾಯವ ಕಾಣೆ ತಾನೆಂದ ‖ ೨೪

ಕೃಷ್ಣವಾಕ್ಯದಿಂದ ಯಾಗದಲ್ಲಿ ಧರ್ಮರಾಯನ ಉಪೇಕ್ಷೆ.

ಈಸು ಗಹನವೆ ಕೃಷ್ಣ ಯಾಗ
ದ್ವೇಷಿಗಳು ಘನವಾದೊಡೆಮಗಿ
ನ್ನೈಸಲೇ ವರರಾಜಸೂಯಾಧ್ವರಕೆ ಸಂನ್ಯಾಸ ।
ಈಸು ದೈತ್ಯರು ನಿಮ್ಮ ಕೈಯ್ಯಲಿ
ಘಾಸಿಯಾದರು ಮಗಧನೊಬ್ಬನು
ಮೀಸಲಳಿಯನು ಗಡ ಮಹಾದೇವೆಂದನಾಭೂಪ ‖ ೨೫

ಯಾಗ ಮಾಡುವುದರಲ್ಲಿ ಭೀಮನು ಧೈರ್ಯವನ್ನು ಕೊಡುವಿಕೆ.

ಅಹಹ ಯಾಗವ್ರತಕೆ ಭಂಗವ
ತಹನೆ ಜೀಯ ಮುಕುಂದಕೃಪೆ ಸ
ನ್ನಿಹಿತವಾಗಲಿ ಸಾಕು ನೋಡಾ ತನ್ನ ಸಾಹಸವ ।
ಬಹಳಬಲನೇ ಮಾಗಧನು ನಿನ
ಗಹಿತನೇ ತಾ ವೀಳಯವ ಸುರ
ಮಹಿಳೆಯರ ತೋಳಿನಲಿ ತೋಱುವೆನೆಂದನಾ ಭೀಮ ‖ ೨೬

ಮುಱುಕಿಸುವೆ ಮನ್ನೆಯರ ನಾಳವ
ಮುಱಿವೆನಖಿಳದ್ವೀಪಪತಿಗಳ
ತಱಿಸುವೆನು ವಸ್ತುವನು ತಾನವರ ನೆತ್ತಿಯಲಿ ।

1 ಕಾಂಬೆ, ಡ.

ಕಱುಬನೇ ಮಾಗಧನು ರಣದಲಿ
ತಱಿವೆನಾತನ ಯಾಗದಲಿ ನೆಱೆ
ಹೊಱಗೆ ನನ್ನದು ಕರೆಸು ಋಷಿಗಳನೆಂದನಾಭೀಮ ॥ ೧೭

ಅಹುದಲೇ ಬಳಿಕೇನು ಯಾಗ
ಪ್ರಹರಣಕೆ ಸಂನ್ಯಾಸ ಗಡ ವಿ
ಗ್ರಹದೊಳಧಿಕರು ಗಡ ಜರಾಸಂಧಾದಿನಾಯಕರು ।
ಮಹಿಯ ಮನ್ನೆಯರಧ್ವರವ ನಿ
ರ್ವಹಿಸಲೀಯರು ಶಿವ ಶಿವಾ ಕಡು [1]
ರಹವ ಮಾಡಿದನರಸನೆಂದನು [2] ನಗುತ ಕಲಿಪಾರ್ಥ ॥ ೧೮

ಯಾಗಕ್ಕಾಗಿ ಪ್ರಯತ್ನಿಸುವುದು ಯುಕ್ತವೆಂದು
ಭೀಮಾರ್ಜುನರ ವಾಕ್ಯ.

ಏಕೆ ಗಾಂಡಿವವಿದು ಶರಾವಳಿ
ಯೇಕೆ ಯಿಂದ್ರಾಗ್ನೇಯ ವಾರುಣ
ವೇಕೆ ರಥವೀರಾಮಭೃತ್ಯಧ್ವಜವಿಳಾಸವಿದು ।
ಲೋಕಶಿಕ್ಷಾರಕ್ಷೆಗಿಂತಿವು
ಸಾಕು ಹುಲುಮಂಡಳಿಕರಿವದಿರ
ನೂಕಲರಿದೇ ಜೀಯ ಜಂಜಡವೇಕೆ ಬೆಸಸೆಂದ ॥ ೧೯

ನೆರಹು ನೀ ಪಾರ್ವರ ದಿಗಂತಕೆ
ಹರಹು ನಮ್ಮನು ಬಂಧುವರ್ಗವ
ಕರೆಸು ರಚಿಸಲಿ ಕಾಣಬಹುದಾ [3] ಕದನಕಾಮುಕರ ।
ಸೊರಹಲಱಿಯೆನು ಸಾಧುಗಳನಾ
ದರಿಸುವೆನು ಮಾಱಾಂತರನು [4] ಚಿ
ಮ್ಮರಿಯ ಬಿಗಿಸುವೆನವರಿಯರ ಕಡೆಗಣ್ಣ ಕಣ್ಣಯಲಿ ॥ ೨೦

1 ಗಡ ಯುಧಿಷ್ಠಿರ, ಡ.
2 ಶಿವ ಶಿವೆಂದನು, ಡ.
3 ಬೇಹುದು, ಚ.
4 ಚೌಪಟಯಾರನು, ಡ.

ಅದರಂತೆ ಶ್ರೀಕೃಷ್ಣನು ಸಮ್ಮತಿಸಿದುದು.

ಅಹುದು ಭೀಮಾರ್ಜುನರ ನುಡಿ ನಿ
ರ್ವಹಿಸದೇ ತಪ್ಪೇನು [1] ನಿಜಕುಲ
ವಿಹಿತವಲ್ಲಾ ವಿನಯ ವಿಕ್ರಮ ವಿದ್ಯೆ ನೃಪನೀತಿ ।
ಗಹನವೇ ಗಂಡುಗಲಿಗಿದಿರಾ
ರಹಿತಬಲವಿನ್ನರಸ ಚಿಂತಾ
ಮಹಿಳೆಗವಸರವಲ್ಲ ಮನ ಮಾಡೆಂದನಸುರಾರಿ ॥ ೩೧

ಅಲ್ಲದೆ ಭೀಮಾರ್ಜುನರನ್ನು ಕಳುಹಿಸು ನಾನು ಅನುಕೂಲವಾಗಿರುವೆನೆಂದು ಕೃಷ್ಣವಾಕ್ಯ.

ಎಮಗೆ ಭೀಮಾರ್ಜುನರ ಕೊಡು ರಿಪು
ರಮಣಿಯರ ಸೀಮಂತಮಣಿಗಳ
ನಿಮಿಷದಲಿ ತರಿಸುವೆನು ಬರಿಸುವೆನಖಿಳ [2] ಭೂಮಿಪರ ।
ಸಮರಜಯವಿನ್ನಾಯ್ತು ಯಜ್ಞ
ಕ್ರಮಕೆ ನಿಷ್ಪ್ರತ್ಯೂಹವಿನ್ನು
ಭ್ರಮೆಯ ಮಾಡದಿರೆಂದು ನೃಪತಿಗೆ ನುಡಿದನಸುರಾರಿ ॥ ೩೨

ಆಗ ಸಂತುಷ್ಟನಾಗಿ ಧರ್ಮರಾಯನು ಶ್ರೀಕೃಷ್ಣನನ್ನು ಸ್ತುತಿಸುವಿಕೆ.

ಕಂಗಳನುಜರು ಚಿತ್ತ ನೀವೆಮ
ಗಂಘವಣೆಗಿನ್ನೇನು ಭಯವಾ
ವಂಗದಲಿ ನಂಬಿಹೆವಲೈ ನಿಮ್ಮಂಘ್ರಿಪಂಕಜವ ।
ಸಂಗರದ ಜಯ ನಿಮ್ಮದಲ್ಲಿಯ
ಭಂಗ ನಿಮ್ಮದು ಭಕ್ತಸಿಕರದ
ಸಂಗಿ ನೀವಿರಲೆಮ್ಮಗರಿದೇನೆಂ [3] ದನಾಭೂಪ ॥ ೩೩

---

1 ದರೆಬಟಿಕೇನು, ಡ. 2 ನಹಿತ, ಚ. 3 ನೀನಿರಲೇನು ನಮಗಿನ್ನೆಂ, ಡ.

ಮಾಗಧನನ್ನು ಜಯಿಸುವುದು ಮುಖ್ಯವೆಂದು
ಕೃಷ್ಣವಾಕ್ಯ.

ವಿಗಡಯಾಗಕೆ ನಿಖಿಲರಾಯರು
ನೃಗ ಮರುತ್ತನು ಕಾರ್ತವೀರ್ಯಾ
ದಿಗಳು ಕೇಳಭಿಷಿಕ್ತರಾದರು ರಾಜಸೂಯದಲಿ !
ಬಗೆಯಲಿದು ದುಷ್ಕಾಲ ವಿದಱೊಳ
ಗಗಡು ಮಾಗಧನವನ ಮುಱಿದೊಡೆ
ಸುಗಮ ನಿಮ್ಮಯ್ಯಂಗೆ ಸುರಪದವೆಂದನಸುರಾರಿ ‖ ೩೪

ಆರವನು ಹಿರಿದಾಗಿ ಸೀ ಕೈ
ವಾರಿಸುವೆ ಕಮಲಾಕ್ಷ ಮಾಗಧ
ನಾರುಭಟೆ ತಾನೇನು ವರವೊ ಸಹಜವಿಕ್ರಮವೊ ।
ವೀರರೆದೆ ಸಿಡಿಲಂತೆ ಸಕಲವು
ಹೀರಮುಱಿದಿರೊಳಗಿವನು ವೆಂಖ
ವೈರಿ ಗಡ ಬೆಸಸೆಂದೊಡೆಂದನು ನಗುತ ಮುರವೈರಿ ‖ ೩೫

ಮಾಗಧನ ಕಥೆಯಲ್ಲಿ—ಬೃಹದ್ರಥನೆಂಬ ರಾಜನು ಪುತ್ರರಿಲ್ಲದ
ದುಃಖದಿಂದ ವನಕ್ಕೆ ಹೋಗುವಿಕೆ.

ಧರಣಿಪತಿ ಕೇಳ್ಬೃಹದ್ರಥ
ನರಸು ಮಾಗಧಮಂಡಲಕೆ ತ
ತ್ಪುರಗಿರಿವ್ರಜವೆಂಬುದಲ್ಲಿ ಸಮಸ್ತವಿಭವದಲಿ ।
ಧರೆಯ ಪಾಲಿಸುತಿರ್ದನಾತಂ
ಗರಸಿಯರು ಸೇಱಿದರು ಕಾಶೀ
ಶ್ವರನ ತನುಜೆಯರಿಬ್ಬರದುಭುತರೂಪು ಸುಗುಣೆಯರು ‖ ೩೬

ಅವರೊಡನೆ ಸುಖಸತ್ಕಥಾಸಂ
ಭವವಿನೋದದಲಿರುತಲೀ ವೈ
ಭವವು ನಿಷ್ಫಲ ಪುತ್ರರಿಲ್ಲದೆ ಲೋಕ [1] ವಿಲ್ಲೆಂದು ।

1 ನಾಕ, ಡ.

ಅವನಿಪತಿ ವೈರಾಗ್ಯದಲಿ ರಾ
ಜ್ಯವನು ಬಿಸುಟು ತಪಃಪ್ರಭಾವ
ವ್ಯವಹರಣದಲಿ ತನುವ ನೂಕುವೆನೆಂದು ಹೊಱವಂಟ ॥ ೩೭

ಮಾರ್ಗದಲ್ಲಿ ಚಂಡಕೌಶಿಕ ದರ್ಶನ.

ಊರ ಹೊಱವಡುತತ್ತ ಕಂಡನು
ಪಾರಿಕಾಂಕ್ಷಿಪ್ರವರನನು ಮುನಿ
ವೀರಕೌಕ್ಷೇಯುಕನನಗ್ಗದ [1] ಚಂಡಕೌಶಿಕನ ।
ನಾರಿಯರು ಸಹಿತವನ ಚರಣಾಂ
ಭೋರುಹಕ್ಕಭಿನಮಿಸಲತಿ ವಿ
ಸ್ತಾರಿಸಿದನಾಶೀರ್ವಚನವನು ಮುನಿ ನೃಪಾಲಂಗೆ ॥ ೩೮

ರಾಜನು ಆವರ ಮುಂದೆ ತನ್ನ ಸಂಕಟವನ್ನು ಹೇಳಲು ಅನುಗ್ರಹಿಸುವಿಕೆ.

ಏನಿದರಸನೆ ವದನದಲಿ ದು
ಮ್ಮಾನವೆನಲನಪತ್ಯತಾಜಂ
ತಾನುರೂಪದ ದುಗುಡವಿದು ನಿಮ್ಮಂಘ್ರಿಸೇವೆಯಲಿ ।
ಹಾನಿ ದುಷ್ಕೃತಕಹುದಲೇ ಸುತ
ಹೀನರಾಜ್ಯವ ಬಿಸುಟೆನೆನಗೀ
ಕಾನನದ ಸಿರಿ ಸಾಕೆನುತ ಬಿಸುಸುಯ್ದನಾಭೂಪ ॥ ೩೯

ರಾಯನ ತೊಡೆಯ ಮೇಲೆ ಬಿದ್ದ ಹಣ್ಣನ್ನು ಸತಿಗೆ ಕೊಡೆಂದು ಋಷಿಗಳ ಅಪ್ಪಣೆ.

ಐಸಲೇ ಸುತಹೀನರಾಜ್ಯವಿ
ಳಾಸ ನಿಷ್ಫಲವಹದಲೇ ಸಂ
ತೋಷವೇ ಸುತಲಾಭವಾದೊಡೆ ಪೊಲ್ಲಯೇನಿದಕೆ [2] ।

---

1 ಕಾಂಕ್ಷಿಯುನಾಂಗಿರಾತ್ಮಜ, ಚ. 2 ಹೊಲ್ಲವೇನೆನುತ, ಕ. ಖ. ಡ.

ಆಸಮಸ್ತಮುನೀಂದ್ರನಂತ
ಭಾಸಿತಾತ್ಮಧ್ಯಾನಸುಖವಿ
ನ್ಯಾಸದಿರಲಂಗೈ [1] ಗೆ ಬಿದ್ದುದು ಮಧುರಚೂತಫಲ ॥ ೪೦

ಕಂಡೆಚಿದು ಮುನಿ ಬಳಿಕ ಭೂಪತಿ
ಗೆಂದನಿದಕೋ ಪುತ್ರಸಂತತಿ
ಗಿಂದು ಸಾಧನವಿದನು ಕೊಡು ನಿನ್ನರಸಿಯರಿಗೆನಲು [2] ।
ಕಂದಿದಾನನವುಜ್ವಲಪ್ರಭೆ
ಯಿಂದ ಬೆಳಗಿತು ರಾಣಿಯರು ಸಹಿ
ತಂದು ಮುನಿಪತಿಗೆಱಗಿ ಪರಿತೋಷದಲಿ ಬೀಳ್ಕೊಂಡ ॥ ೪೧

ವರವನೆಂಟನು ಹೆಸರು ಕೊಂಡಾ
ಧರಣಿಪನ ತನಯಂಗೆ ಕೊಟ್ಟನು
ಪುರಕೆ ಮರಳಿದನರಸನಾಮುನಿ ತೀರ್ಥಯಾತ್ರೆಯಲಿ ।

ಮನೆಗೆ ಹೋಗಿ ಹಣ್ಣನ್ನು ಭಾಗಮಾಡಿ ತನ್ನ ಸತಿಗೆ ಕೊಟ್ಟದ್ದು.

ಸರಿದನತ್ತಲು ಚೂತಫಲವದ
ನೆರಡುಮಾಡಿ ಬೃಹದ್ರಥನು ತ
ನ್ನರಸಿಯರಿಗಿತ್ತನು ಯುಧಿಷ್ಠಿರ ಕೇಳು ಕೌತುಕವ ॥ ೪೨

ಬಳಿಕ ಗರ್ಭಿಣಿಯರಾಗಿ ಪ್ರಸವಕಾಲದಲ್ಲಿ ಹುಟ್ಟಿದ ಎರಡು
ಸೀಳುಗಳನ್ನು ಬಿಸುಡುವಿಕೆ.

ಬಲಿದುದವರಿಗೆ ಗರ್ಭ ಜನನದ
ನೆಲೆಯ ಕಾಲಕೆ ಸತಿಯರುದರದಿ
ನಿಳಿದುದೊಂದೊಂದವಯದ ಸೀಳೆರಡುಸರಿಯಾಗಿ ।
ಬಳಿಕ ಕಂಡವರಕಟ ದುಷ್ಕೃತ
ಫಲವ ಸುಡಲಿವನೆನುತ ಬಿಸುಟರು
ಹೊಱಲ ಹೊಱವಳಯದಲಿ ಧರಣೀಪಾಲ ಕೇಳೆಂದ ॥ ೪೩

---

1 ಲಂಕದಲಿ, ಖ. 2 ನಿನಗೊಲಿದ ವಧುಗೆನಲು, ಡ.

ನಡುವಿರುಳು ಜರೆ ಯೆಂಬ ರಕ್ಕಸಿ
ಯಡಗನಱಸುತ ಬಂದು ಕಂಡಳು
ಮಿಡುಕುತಿಹ ಸೀಳೆರಡುವನು ಹೊಱಹೊೞಲ ಬಾಹೆಯಲಿ |
ತುಡುಕಿದಳು ಸೀಳ್ದೇಕೆ ತಿನ್ನದೆ
ಮಡಗಿದರೊ ಕೌತುಕವಿದೇನೀ
ಯಡವಿಯೊಳಗೆಂದಸುರೆ ದಿಟ್ಟಿಸಿ ನೋಡಿದಳು ಬೞಿಕ ॥ ೪೪

ಜರೆಯೆಂಬುವಳು ಸೀಳುಗಳನ್ನು ಜೋಡಿಸಲು ಜರಾಸಂಧನ ಜನನ.

ಶಿಶುವನಾರೋ ಸೀೞ್ದು ತಿನ್ನದೆ
ಬಿಸುಟು ಹೋದರೆನುತ್ತ ಜರೆ ಸಂ
ಧಿಸಿದಳಾಕಸ್ಮಿಕದ ಸೀಳೆರಡನು ವಿನೋದದಲಿ |
ಪಸರಿಸಿದುದಸು ಮೇಘರವ ಘೋಂ [1]
ಬಿಸುವ [2] ವೊಲು ಚೀಱಿದನು ಗಿರಿಗಳ
ಬೆಸುಗೆ ಬಿಡೆ ನಡುವಿರುಳು ಕೋಲಾಹಲಿಸಿತಾರಭಸ ॥ ೪೫

ಊರ ಹೊಱವಳಯದಲಿದೇನೊ ಮ
ಹಾರಭಸ ವಿರುಳನುತ ಕವಿದುದು
ಪೌರಜನ ಝಳಪಿಸುವ ಕೈದೀವಿಗೆಗಳುಗ್ಗನಲಿ |
ಅರಿವಳು ತಾನೆನುತ ಕಂಡರು
ದೂರದಲಿ ದಾನವಿಯನವಳ ಘ
ನೋರುಗಳ ಸೋಗಿನಲಿ ಕೈದೊಟ್ಟಿಲ ಕುಮಾರಕನ ॥ ೪೬

ನಿಂದುದಲ್ಲಿಯದಲ್ಲಿ ರಕ್ಕಸಿ
ಯೆಂದು ಭಯದಲಿ ಬೞಿಕ ಕರುಣದ
ಲೆಂದಳವಳಂಜದಿರಿ ಹೋ ಹೋ ಯೆನುತ ಕೈನೆಗಹಿ |
ಇಂದಿವನು ಮಗನೆನಗೆ ಭೂಪತಿ
ಬಂದನಾದೊಡೆ ಕೊಡುವೆಸೀತನ
ನೆಂದೊಡಾಕ್ಷಣಕವರು ಹೇೞಲು ಬಂದನಾಭೂಪ ॥ ೪೭

---

1 ಮಿಗೆ ಗ, ಡ. 2 ಜೆಸುವ, ಡ.

ಅರಸ ಕೇಳ್ ನಿನ್ನ ವನನೀತನು
ವರಕುಮಾರಕನೆನ್ನ ಹೆಸರಲಿ
ಕರೆವುದೀತನ ಸೀೞಿ ಬೆಚ್ಚ ವಳಾನು ಬೆದಱದಿರು |
ಜರೆಯೆನಿಪುದಭಿಧಾನವೆನ್ನದು
ವರಜರಾಸಂಧಕನಿವನು ಸುರ
ನರರೊಳಗೆ ಬಲುಗೈಯನಹನೆಂದಿತ್ತಳರ್ಭಕನ || ೪೮

ಆಕೆಯು ಆಮಗುವನ್ನು ರಾಜನಿಗೆ ಕೊಡಲು
ಅದನ್ನು ಸಂರಕ್ಷಿಸುವಿಕೆ.

ಅಸುರೆಯುನು ಮನ್ನಿಸಿದನಾಕೆಯ
ಹೆಸರ ಮಗನಿವನೆಂದು ಲೋಕ
ಪ್ರಸರವೞಿಯಲು ನಲವಿನಲಿ ಸಲಹಿದನು ಮಾಗಧನ [1] |
ಅಸುರರಲಿ ಮರ್ತ್ಯರಲಿ ಸುರರಲಿ
ಜಸಕವುಳ್ಳವನೆನಿಸಿದನು ಸಾ
ಹಸದ ಜೋಡಣೆ ಮೆಱೆದುದವನಲಿ ಭೂಪ ಕೇಳೆಂದ || ೪೯

ಅಂಥವನ ವಿಜಯ ಯಾತ್ರೆಗೆ ತಮ್ಮಂದಿರನ್ನು ಕಳುಹೆಂದು
ಕೃಷ್ಣನ ಅಪ್ಪಣೆ.

ಅದಱಿಸೀಮಾಗಧನ ಮುಱಿದ
ಲ್ಲದೆ ನೃಪಾಲಕರಂಜಿ ಕಪ್ಪದೊ
ಳೊದಗಲಱಿಯರು ಮೆಱೆಯಲೀಯರು ಯಜ್ಞಮಂಟಪವ |
ಇದು ನಿಧಾನವು ಭೀಮಪಾರ್ಥರಿ
ಗಿದು ಮುಹೂರ್ತವು ವೀಳಯವ ತಾ
ಕದನವಿಜಯದ ವೀರಸೇಸೆಯನಿಟ್ಟು ಕಳುಹೆಂದ || ೫೦

ಮ ಯುದೇತಕೆ ರಾಜಸೂಯದ
ಹೊಱೆಗೆ ನಿಮ್ಮದು ರಾಣಿ [2] ಕವನಾ
ನಱಿಯೆ ನೀನರ್ಥಾಭಿಮಾನಪ್ರಾಣದೊಡೆಯನಲೆ |

---

1 ನಂದನನ, ಡ. 2 ಕೌಳಿಕ, ಖ.

ಕಿಱಿಯರಿವದಿರು ರಾಜಸೂಯದ
ಕಱುಬರತಿಬಲ್ಲಿದರು ಕೃಪೆಯನು
ಮೆಱೆವುದೆನುತಸುರಾರಿಯಂಘ್ರಿಗೆ ಚಾಚಿದನು ಹಣೆಯ ॥ ೫೧

ಎತ್ತಿದನು ನಸುನಗುತ ರಾಯನ
ನೆತ್ತಿಯನು ಮುರವೈರಿ ಕರೆಸು ಮು
ಹೂರ್ತಿಕರನಕ್ಷೋಹಿಣಿಯ ಬರಹೇೞು ದಳಪತಿಯ ।
ಸುತ್ತಣರಸರಿಗೋಲೆಯುಡುಗೊಱೆ
ಯಿತ್ತು ದೂತರ ಕಳುಹು ಬೞಿಕಿನೊ
ಳುತ್ತರೋತ್ತರಸಿದ್ಧಿ ನಿನಗಹುದೆಂದನಸುರಾರಿ ॥ ೫೨

ಮಾಗಧನ ಪತ್ತನಕ್ಕೆ ತೆರಳುವಿಕೆ.

ರೂಢಿಸಿದ ಸುಮುಹೂರ್ತದಲಿ ಹೊಱ
ಬೀಡ ಬಿಟ್ಟರು ದಧಿಯ ದೂರ್ವೆಯ
ಕೂಡಿದಕ್ಷತೆಗಳ ಸುಲಾಜಾವಳಿಯ ಮಂಗಳದ ।
ಗಾಡಿಸಿದ ಜಯರವದ ದೈತ್ಯವಿ
ಭಾಡಸೂಕ್ತದ ವಿಗಡ ಬಿರುದಿನ [1]
ಗಾಢ ಪಾಠಕ ಗಡಬಡೆಯು ರೂಢಿಸಿತು ಗಗನವನು [2] ॥ ೫೩

ಆಳು ನಡೆಯಲಿ ಮಗಧರಾಯನ
ಮೇಲೆ ದಂಡು ಮುಕುಂದದಳಪತಿ
ಹೇೞಿಕೆಗೆ ಭೀಮಾರ್ಜುನರ ಬರಹೇೞು ಹೇೞೆನುತ ।
ಆಳು ಸಾಱಿದುದವನಿಪಾಲರು
ಮೇಳವಿಸಿ ಹೊಱವಂಟು ಬರೆ ದೆ
ಖ್ಖಾಳವನು ನೋಡಿದರು ನಡೆದರು ಪಯಣಗತಿಗಳಲಿ ॥ ೫೪

---

1 ಬಿರುದುಪ, ಕ. ಚ.

2 ವಾಡಗಳ ಪಾಠಕರ ಗಡಬಡೆ ಗಾಢಿಸಿತು ನಭವ, ಕ ಚ.

ಕೃಷ್ಣಭೀಮಾರ್ಜುನರು ವಿಪ್ರವೇಷವನ್ನು ಧರಿಸುವಿಕೆ.

ಜನಪ ಕೇಳ್ಕೃಷ್ಣ ಭೀಮಾ
ರ್ಜುನರು ವಿಮಳಸ್ನಾತಕವ್ರತ
ಮುನಿಗಳಾದರು ನಡೆದು ಪಯಣದ ಮೇಲೆ ಪಯಣದಲಿ |
ಜನದ ಕಾಣಿಕೆಗೊಳುತ ನಾನಾ
ಜನಪದಂಗಳ ಕಳೆದು ಗಂಗಾ
ವಿನುತನದಿಯನು ಹಾಯ್ದು ಬಂದರು ಪೂರ್ವಮುಖವಾಗಿ || ೫೫

ಮಗಧದೇಶದ ವರ್ಣನೆ.

ಬರುತ ಕಂಡರು ಮುಂದೆ ಕೊಬ್ಬಿದ
ಸಿರಿಯನೂರೂರುಗಳ ಸೊಂಪಿನ
ಭರಿತಗೋಧನಕುಲವನಮಳಸುಧಾನ್ಯರಾಶಿಗಳ |
ವರನದಿಯ ಕಾಲುವೆಯ ತೋಟದ
ತೆರಳಿಕೆಯ ಪನಸಾಮ್ರಪೂಗೋ
ತ್ಕರದ ರಮ್ಯಾರಾಮಮಂಡಿತ ಮಗಧಮಂಡಲವ || ೫೬

ಮೆಳೆಗಳೇ ದ್ರಾಕ್ಷಿಗಳು ವೃಕ್ಷಾ
ವಳಿಗಳೇ ಸಹಕಾರದಾಡಿಮ
ಫಲಿತನಿಬಿಡಕ್ರಮುಕಜಂಬೂಮಾತುಳಂಗಮಯ |
ಕಳವೆ ಶಾಲೀಮಯವು ಹೊಲನ
ಗ್ಗಳಿಕೆ ಲಕ್ಷ್ಮೀಮಯವು ನಗರಾ
ವಳಿಗಳನೆ ಶೋಭಿಸಿತು ಜನಪದವಿವರ ಕಣ್ಮನಕೆ [1] ೫೭

ದೇಶ ಹಗೆವನದೆಂದು ಕಡ್ಡಿಯ
ಗಾಸಿಮಾಡದೆ ಮಿಗೆ ವಿನೋದದ
ಲೈಸುಪಡೆ ನಡೆತಂದು ಬಿಟ್ಟುದು ಗಿರಿಯ ತಪ್ಪಲಲಿ |

---

೧ ಸೋಲಿಸಿತು ಜನಪದವಿವರ ಕಣ್ಮನವ, ಖ.

ಆಸರೋರುಹಬಂಧು ಚರಮದಿ
ಶಾಸತಿಯು ಚುಂಬಿಸೆ ಗಿರಿವ್ರಜ
ವಾಸಿಖರವನು ಹತ್ತಿದರು ಹರಿಭೀಮಫಲುಗುಣರು ॥ ೫೮

ಅಲ್ಲಿರುವ ಬೆಟ್ಟದ ಮೇಲೆ ಭೇರಿಯನ್ನು ಒಡೆಯುವಿಕೆ.

ವೃಷಭಚರ್ಮನಿಬದ್ಧಭೇರಿಗ
ಳಸೆದುವಕ್ಷತೆಗಂಧಮಾಲ್ಯ
ಪ್ರಸರದಲಿ ಶೈಲಾಗ್ರದಲಿ ಸಂಪನ್ನಪೂಜೆಯಲಿ ।
ಅಸುರರಿಪುಭೀಮಾರ್ಜುನರು ತ
ದ್ವಿಷಮಭೇರೀತ್ರಯವ ಹೊಯ್ದ
ಬ್ಬಿಸಿದರದ್ಭುತರವ ಮಸಗೆ ಕೆಡಹಿದರು ಖಾತಿಯಲಿ ॥ ೫೯

ಭೇರಿಯ ವೃತ್ತಾಂತ.

ಭೇರಿಗಳ ಮಗಧಂಗೆ ಕೊಟ್ಟವ
ರಾರು ತಾನಿದು ವರವೊ ಸಹಜವೊ
ಕಾರಣವ ಹೇಳೆಂದು ಜನಮೇಜಯನು ಬೆಸಗೊಳಲು ।
ಧಾರುಣೀಪತಿಗಂದು ಮಿಗೆ ವಿ
ಸ್ತಾರದಿಂದಱುಹಿದನು ಹಿಂದೆ ಸು
ರಾರಿಭಸ್ಮಾಸುರನು ಶಿವನ ವಿರೋಧಿಸಿದ ಹದನ ॥ ೬೦

ಹರಿಯು ನೆನೆಯಲು ಶಂಭು ಕರುಣಾ
ಕರನು ಬಿಜಯಂಗೈದು ದೈತ್ಯನ
ಶಿರದೊಳಸುರನ ಕರವನಿಡಿಸಲು ಮರಣಗಂಡಲ್ಲಿ ।
ಮರಳಿ ಜನಿಸಿದನವನು ಧರೆಯಲಿ
ಸುರನರರ ಪರಿಭವಿಸೆ ರಣದಲಿ
ನೆರೆದು ದಿವಿಜಸಮೂಹ ಬಿನ್ನೈಸಿದುದು ಪಶುಪತಿಗೆ ॥ ೬೧

ಅದರಲ್ಲಿ—ಮಾಷಾಸುರನ ಸಂಹಾರ.

ಕೇಳು ಶಿವನೈತಂದನಲ್ಲಿಗೆ
ಕಾಳದನುಜನ ಬಲುಹನುರುಹಲು
ಧಾಳಿಬಂದಡ್ಡವನು ಗಟ್ಟಿದ ಮಾಷನೆಂಬವನ ।
ಶೂಲದಿಂದಿಡಲ್ಕೈದೆ ಕಂಠದ
ನಾಳವನು ಕತ್ತರಿಸೆ ತಲೆಗಳು
ಬೀಳಲವನಿಗೆ ಮೊಱುಮುಂಡದ ತಲೆಯು ಮಧ್ಯದಲಿ ॥ ೬೨

ವೃಷಭಾಸುರ ಸಂಹಾರ ಮತ್ತು ಅವನ ಚರ್ಮದಿಂದ ಭೇರೀರಚನೆ

ದುಷ್ಟದಾನವ ಮಡಿದೊಡವನೊಡ
ಹುಟ್ಟಿದಾತನು ವೃಷಭನೆಂಬವ
ದಿಟ್ಟನವ ಕಲಿಯಾಗಿ ಕಾದಿದೊಡವನ [1] ನಿಮಿಷದಲಿ ।
ಮೆಟ್ಟಿ ಚರ್ಮವ ಸೀಳಿ ನಾಳಕೆ
ಕಟ್ಟಿದನು ಕಲಿ ಶಂಭು ಭೇರಿಯು
ಧಟ್ಟಿಸಿದೊಡಾಧ್ವನಿ ಭಯಂಕರವಾದುದಮರರಿಗೆ ॥ ೬೩

ಬೇಗದಲಿ ಮಾಗಧನು ಪೌಂಡ್ರಕ
ಯಾಗವನು ಮಾಡಿದನು ಬಹಳೋ
ದ್ಯೋಗದಿಂದವೆ ಬಂಧುವರ್ಗವ ನೆರಹಿ ಮುನಿಜನವ ।
ನಾಗಪುರದರಸುಗಳ ಕೂಡಿ ಸ
ರಾಗದಿಂದವೆ ಸಕಲಯಜ್ಞದ
ಭಾಗಧೇಯವನುಳಿದು ಮಾಡಿಸಿದನು ಮಹಾಕ್ರತುವ ॥ ೬೪

ಅರಸ ಕೇಳ್ ಹರಿಭಕ್ತಿದೂರರು
ನೆರೆದು ಮಾಡುವ ಸಕಲಯಾಗವು
ಶರಧಿಯೊಳಗುಬ್ಬಿದ್ದ ಬೊಬ್ಬುಳಿಕೆಗಳ ತೆಱನಂತೆ ।

---

1 ಕಟ್ಟಡವಿಯಲಿ ಕಾಧಿದರೆ ಬಳಿಕವನ, ಖ.

ಮಾಗಧನ ತಪಸ್ಸು.

ಪರದು ಹೋಹುದು ಸುಕೃತರಾಶಿಗ
ಳಿರದೆ ನಿಮಿಷಕೆ ವೇದಸಿದ್ಧವಿ
ದಱಿಯ ಜಯಿಸುವೆನೆಂದು ಮಾಗಧ ಮಾಡಿದನು ತಪವ ॥ ೬೫

ಹಿರಿದು ಮೆಚ್ಚಿದನವಗೆ ಗೌರೀ
ವರನು ತಲೆದೋಱಿದನು ಬೇಡ್ಕೈ
ವರವ ಕೊಡುವೆನೆನಲ್ಕೆ ಕಣ್ದೆಱೆದೆದ್ದು ಕೈಮುಗಿದ ।
ಕರುಣಿಸೈ ಭೇರೀತ್ರಯವ ಸಂ
ಗರದೊಳಾಧ್ವನಿಗೇಳ್ದರಿಗಳು
ಹಿಱಿದು ಭಯಗೊಂಡೋಡುವಂತಿರೆ ಕೃಪೆಯ ಮಾಡೆಂದ ॥ ೬೬

ಕಾಳಗದೊಳನ್ನಯ ಶರೀರದ
ಸೀಪೆರಡು ಬೆಸುವಂತೆ ಕರುಣಿಸು
ಭಾಳಲೋಚನ ನೀನೆ ಜಂಬಲವಾಗಿ ರಣಜಯವ ।

ಮಾಗಧಗೆ ಭೇರಿಯ ಪ್ರಾಪ್ತಿ, ಮತ್ತು ಈಶ್ವರನ ವರಗಳು.

ಪಾಲಿಸೆಂದೆನೆ ಮೂಱುವರವ ಕೃ
ಪಾಳು ಕರುಣಿಸಿ ಮಾಗಧೇಂದ್ರಗೆ
ಢೋಳಗಳನಿತ್ತು ಭವ ಬಿಜಯಂಗೈದನೊಲವಿನಲಿ ॥ ೬೭

ಇಂದುಧರನನು ಬೀಳುಕೊಂಡವ
ನಂದು ಮೊದಲಾಗಖಿಳರಾಯರ
ವೃಂದವನು ಬಂಧಿಸಿದ ನಾನಾ ದ್ವೀಪಪಾಲಕರ ।

ಅಕಾಲದಲ್ಲಿ ನಡೆದ ಭೇರೀನಾದಕ್ಕಾಗಿ ಮಾಗಧನು ಶಾಂತಿಯನ್ನು ಮಾಡುವಿಕೆ.

ಕಂದ ಕೇಳ್ಕೈ ಬಳಿಕಲಾಗೋ
ವಿಂದಭೀಮಾರ್ಜುನರು ಭೇರಿಯ
ನಂದು ಹೊಡೆಯಲು ಕದಡಿದುವು ಕಲ್ಪಾಂತಶರಧಿಗಳು ॥ ೬೮

ಮಾಗಧನ ಮನೆಗೆ ಕೃಷ್ಣಾದಿಗಳ ಆಗಮನ.

ಏನಿದದ್ಭುತವೆನುತ ನಡುವಿರು
ಳಾನರೇಶ್ವರನಮಳವೇದವಿ
ಧಾನದಲಿ ತಚ್ಛಾಂತಿಗೋಸುಗ ಕರೆಸಿ ಭೂಸುರರ ।
ದಾನದಲಿ ವಿವಿಧಾಗ್ನಿಕಾರ್ಯವಿ
ಧಾನದಲಿ ವಿಪ್ರಘವೆಚನಸ [1]
ಘಾನದಲಿ [2] ಮಗಧೇಶನಿದ್ದನು ಭೂಪ ಕೇಳಂದ [3]॥ ೬೯

ಇವರು ಗಿರಿಯಿಂದಿಳಿದು ರಾತ್ರಿಯೊ
ಳವನ ನಗರಿಯ ರಾಜಬೀದಿಯ
ವಿವಿಧವಸ್ತುವ ಸೂಱೆಗೊಂಡರು ಹಾಯ್ದು ದಟದುಟವ ।
ತಿವಿದರಡ್ಡೈಸದರನುಬ್ಬಿದ
ತವಕಿಗರು ಮದದಿಂದ ರಾಯನ
ಭವನವನು ಹೊಕ್ಕರು ವಿಡಂಬದ ವಿಪ್ರವೇಷದಲಿ ॥ ೭೦

ಉರುವಣಿಸಿದರು ಮೂಱುಕೋಟೆಯ
ಮುಱಿದರದ್ವಾರದಲಿ ರಾಯನ
ಹೊರೆಗೆ ಬಂದರು ಕಂಡರಿದಿರೆದ್ದನು ಜರಾಸಂಧ ।

ಬಂದವರಿಗೆ ಮಾಗಧನ ಆದರ.

ಧರಣಿಯಮರರಪೂರ್ವಿಗರು ಭಾ
ಸುರದ ಭದ್ರಾಕಾರರೆಂದಾ
ದರಿಸಿ ಮಧುಪರ್ಕಾದಿಗಳ ಮಾಡಿದನು ಭಕ್ತಿಯಲಿ ॥ ೭೧

ಕೇಳಿದನು ಕುಶಲವನು ಕುಶಲವ
ಹೇಳಿದರು ಕುಳ್ಳಿರಿ ಯೆನಲು ಭೂ
ಪಾಲಕರು ಕುಳ್ಳಿರ್ದರವೆ ಯಿಕ್ಕದೆ ಸಿರೀಕ್ಷಿಸುತ ।

---

[1] ವಿಪ್ರಘನಿಬಿಡ, ಖ. [2] ಸ್ಥಾನದಲಿ, ಖ [3] ಹೊತ್ತುದುಗುಡದಲಿ, ಖ.

ಇವರನ್ನು ನೋಡಿ ನಾನಾವಿಧವಾಗಿ ತರ್ಕಿಸುವಿಕೆ.

ಹೇಳಿರೈ ನಿಮಗಾವದೇಶ ವಿ
ಶಾಲಗೋತ್ರವದಾವುದೆನುತ ಸು
ಲೋಲಮತಿ ಚಿಂತಿಸಿದನಿವದಿರು ವಿಪ್ರರಲ್ಲೆಂದು ॥ ೩೦

ಸ್ನಾತಕವ್ರತವೇಷದಲಿ ಬಂ
ದಾತಗಳು ಬಟಿಕವರು ಶಸ್ತ್ರ
ವ್ರಾತದಲಿ ಶಿಕ್ಷಿತರು ಕರ್ಕಶಬಾಹುಪಾಣಿಗಳು ।
ಕೈತವದಿನ್ನೈತಂದರರ್ಥವ
ನೀತಗಳು ಬಯಸರು ವಿರೋಧ
ಪ್ರೀತಿಮುಖರಿವರಾರೊ ಶಿವ ಶಿವ ಯೆನುತ ಚಿಂತಿಸಿದ ॥ ೩೩

ಆರಿವರು ದೇವತ್ರಯವೊ ಜಂ
ಭಾರಿ ಯಮ ಮಾರುತರೊ ರವಿ ರಜ
ನೀರಮಣ ಪಾವಕರೊ ಕಪಟಸ್ನಾತಕವ್ರತರು ।
ಧಾರುಣೀಶ್ವರರೊಳಗೆ ದಿಟ್ಟರ
ದಾರೊ ತವೆನ್ನೊಳು ತೊಡುಕಿ ನಿಲುವ ವಿ
ಕಾರಿಗಳ ನಾ ಕಾಣೆನೆಂದನು ತನ್ನ ಮನದೊಳಗೆ ॥ ೩೪

ಈಗ ಮಿಡ್ರುಕುಳ್ಳವರು ಮಹಿಯಲಿ
ನಾಗಪುರದರಸುಗಳು ನಮ್ಮವ
ರಾಗಿಹರು ಪಾಂಡುವಿನ ಮಕ್ಕಳು ಮಿಾಱಿ ಖಳರಲ್ಲ ।
ಸಾಗರೋಪಾಂತ್ಯದ ನರೇಂದ್ರರು
ಭೋಗಿಸಿದ ಮುತ್ತುಗಳು ಭಾವಿಸ
ಲೀಗಯಾಳರ ಗರ್ವವೇನು ವಿಚಿತ್ರವಾಯ್ತೆಂದ ॥ ೩೫

ಯಾದವರು ಹಿಂದೆಮ್ಮೊಡನೆ ಹಗೆ
ಯಾದವರು ಬಟಿಕವರೊಳಗೆ ಕಱು
ಗಾದವನ ತುಱುಗಾದವನ ಮಾಧವನ ಮಾತೇನು ।

ಮೇದಿನಿಯು ಮಂಡಳಿಕ ಮನ್ನೆಯ
ರಾದವರು ನಮ್ಮೊಡನೆ ಸೆಣಸುವ
ರಾದೊಡಿದು ದುಷ್ಕಾಲವಶವಿದು [1] ಯೆಂದನಾಮಗಧ ॥ ೨೬

ಕೃಷ್ಣಾದಿಗಳನ್ನು ಕುರಿತು ಮಾಗಧನ ಪ್ರಶ್ನೆ

ಬವರಿಗರು ನೀವ್ ವಿಪ್ರವೇಷದ
ಜವನಿಕೆಯು ಜಾಣಾಯ್ಲತನದಿಂ
ದವಗಡಿಸಿ ಯೊಳಹೊಕ್ಕಿರದ್ವಾರದಲಿ ನೃಪಸಭೆಯ ।
ನಿವಗಿದೇನೀವ್ಯಸನ ಕಪಟ
ವ್ಯವಹರಣೆ ಕೃತ್ರಿಮವೊ ಸಹಜವೊ
ರವಣ ಮತ್ತೇನುಂಟು ಹೇಳೆನ್ನಂಜಬೇಡೆಂದ ॥ ೨೭

ಸ್ನಾತಕವ್ರತವೇನು ಪಾರ್ಥಿವ
ಜಾತಿಗಿಲ್ಲವೆ ವೈಶ್ಯಕುಲಕಿದು
ಪಾತಕವೆ ನಾವೀಗ ಪಾರ್ಥಿವಜಾತಿಸಂಭವರು ।
ಸ್ನಾತಕರು ನಾವ್ ವೈರಿಕುಲದಲ
ಭೀತರದ್ವಾರಪ್ರವೇಶವ
ನೀತಿ ಯುಲ್ಲ ಪುರಾಣಸಿದ್ಧವಿದೆಂದನಸುರಾರಿ ॥ ೨೮

ಕೃಷ್ಣಾದಿಗಳಿಗೂ ಮಾಗಧಗೂ ನಡೆದ ಸಂವಾದ.

ವೈರಿಭವನವೆ ನಮ್ಮದಿದು ನಾವ್
ವೈರಿಗಳ ನಿಮಗೆಮಗೆ ಜನಿಸಿದ
ವೈರಬಂಧನಿಮಿತ್ತವಾವುದು ನಿಮ್ಮ ಪಕ್ಷದಲಿ ।
ಆರು ನೀವೀಬ್ರಾಹ್ಮಣಬ್ರುವ
ರಾರುಪಾಧ್ಯರು ನಿಮಗೆ ನಿಮ್ಮವಿ
ಕಾರ ಬಿಡದೇ ಹೋಗದೆಂದನು ಮಗಧಪತಿ ನಗುತ ॥ ೨೯

1 ಗತಿ ಶಿವ, ಕ, ಖ.

ಮುಱಿದು ಹಲಬರಿಳಾಧಿನಾಥರ
ಸೆಱೆಯಲಿಕ್ಕಿದೆ ರಾಜ್ಯಮದದಲಿ
ಮೆಱೆದು ಮಾನ್ಯರನಿಱಿದು ಮೆಚ್ಚಿಸಿಕೊಂಡೆ ರೌರವವ [1] |
ಅಱಿಯದಳುಪಿದ ಪಾತಕಕೆ ಬಿಡು
ಸೆಱೆಯ ಪ್ರಾಯಶ್ಚಿತ್ತವಿದು ಕೇ
ಳುಱುವುಪಾಧ್ಯರು ನಾವೆ ಯೆಂದನು ನಗುತ ಮುರವೈರಿ || ೮೦

ಆನೃಪಾಲರ ಮಗನೊ ಮೊಮ್ಮನೊ
ನೀನವರ ಬಾಂಧವನೊ ಭೃತ್ಯನೊ
ಸೂನುಪ [2] ಕ್ಷನೊ ಬೆರಳ ಬಗದನೊ ಕುರಳಕೋಮಳನೊ |
ಏನು ನಿನ್ನಂಘವಣೆ ನೀನಾ
ರಾನರೇಂದ್ರರ ಸೆಱೆಯ ಬಿಡುಗಡೆ
ಗೇನನೆಂಬೆನು ರಹವನೆಂದನು ತೂಗಿ ನಿಜಶಿರವ || ೮೧

ಎಲವೊ ಧರೆಯಲಧರ್ಮಶೀಲರ
ತಲೆಯ ಚೆಂಡಾಡುವೆವು ಧರ್ಮವ
ನೊಲಿದು ಕೊಂಡಾಡುವೆವು ಶಿಕ್ಷಾರಕ್ಷಣವ್ಯಸನ |
ನೆಲೆ ನಮಗೆ ನೀನಱಿಯೆ ರಾಜಾ
ವಳಿಯ ಬಿಡು ಘಡ ಭಂಡವಿದ್ಯೆಯ
ಬಳಸುವರೆ ನಮ್ಮೊಡನೆ ಯೆಂದನು ದಾನವಧ್ವಂಸಿ || ೮೨

ಇವರು ಗಡ ಜಗದೊಳಗೆ ಶಿಕ್ಷಾ
ಸವನದಲಿ ದೀಕ್ಷಿತರು ಬಲುಕೈ
ತವದ ಭಂಡರು ನೀವೊ ನಾವೋ ಸಾಕದಂತಿರಲಿ |
ಧವಡರ್ಕೈ ನೀವ್ ದಿಟ್ಟರಹಿರಂ
ಗವಣೆಯೊಳ್ಳತು ನಿಮ್ಮ ನಿಜವನು
ವಿವರಿಸಾ ನೀವಾರು ಹೇಳೆಂದನು ಜರಾಸಂಧ || ೮೩

1 ಹೆಚ್ಚಿಸಿಕೊಂಡ ಭುಜಬಲವ, ಚ. 2 ಲೂನಪ, ಕ. ಖ.

ತನ್ನ ವೃತ್ತಾಂತವನ್ನು ಕೃಷ್ಣನು ಹೇಳುವಿಕೆ.

ಕೇಳಿ ಮಾಡುವುದೇನು ತಾನಸು
ರಾಳಿಧೂಳೀಪಟಲರೌದ್ರನ
ಪಾಲಚೌಪಟಮಲ್ಲನೀತನು ಭೀಮಸೇನ ಕಣಾ ।
ಭಾಳನೇತ್ರನ ಭುಜಬಲದ ಸಮ
ಪಾಳಿಯರ್ಜುನನೀತನೀತಾ
ಕಾಳಗವ ಕೊಡು ನಮ್ಮೊಳೊಬ್ಬರಿಗೆಂದನಸುರಾರಿ ॥ ೧೪

ಕೇಳಿ ಕೆದಱಿದ ಬಿಱುನಗೆಯುಲಿಹ
ಬೀಱುತೇಱುತ ಬಿಱುವನಿಯು ಕ
ಣ್ಣಾಲಿಗಳ ಝೊಮ್ಮದ್ದ ರೋಮದ ಜಡಿವ ಬಿಡುದಲೆಯ ।
ಸೂಳುನಗೆ ಬೞುನಗೆಯುಲಿಹಗಡಿ
ಗಾಳುಮುಱುಗುಬ್ಬಸದಲಿದ್ದ ಕ
ರಾಳಮತಿ ಸಂತೈಸಿದನು ತನ್ನವರಿಗಿಂತೆಂದ ॥ ೧೫

ಕೃಷ್ಣ ಮಾಗಧರ ಪರಸ್ಪರಾಪಹಾಸ

ಈತನಾರೆಂದಱಿವಿರೈ ನ
ಮ್ಮಾತನೀತನು ನಮ್ಮ ಕಂಸಂ
ಗೀತನಳಿಯನು ನಮಗೆ ಮೊಮ್ಮನು ಮಗನು ದೇವಕಿಗೆ ।
ಈತ ಕಾಣಿರೆ ಹಿಂದೆ ಚೌರಾ
ಸೀತಿದುರ್ಗದಲೋಡಿ ಬದುಕಿದ
ನೀತ ಬಲುಗೈಬಂಟನೆಂದನು ಮಗಧಪತಿ ನಗುತ ॥ ೧೬

ಕೊಳಲ ರಾಗದ ರಹಿಯೊ ಕಲ್ಲಿಯ
ಕಲಸುಗೂಳೋ ಹಳ್ಳಿಕಾತಿಯ
ರೊಳಗುಡಿಯ ಹಾದರವೊ ತುಱುಗಾಹಿಗಳ ಗಾಹುಗಳೊ [1] ।

1 ತೋಹುಗಳೊ, ಚ.

ಬಲುಸರಳ ಸುರಿವಳೆಯ ಮಿದುಳೊಡೆ
ಗಲಸುಗಳದಾಯುಧದ ತಳುಕಿನ
ಕೊಳಗುಳದ ಜಯಸಿರಿಯ ಕಾಹಿನೊಳಾರು ನೀನೆಂದ ॥ ೮೭

ಹೋಱಿ ಹೆಂಗಸು ಬಂಡಿ ಪಕ್ಷಿ ಸ
ಮೀರಣಾಶ್ವಾಜಗರ ಗರ್ದಭ
ವೀರರೀತನ ಘಾತಿಗಳುಕಿತು ಕಂಸಪರಿವಾರ ।
ಆರುಭಟೆಯುಳ್ಳವನು ಕಂಸನ
ತೋೞಹತ್ತನ ತೊಡಕಿದನು ಗಡ
ಭಾರಿಯಾಳಹನುಂಟು ಶಿವ ಶಿವ ಯೆಂದನಾಮಗಧ ॥ ೮೮

ಎಲವೊ ಗೋವಳ ನಿನ್ನ ಕಂಸನ
ನಿಳಯವೋ ಪೌಂಡ್ರಕನ ಕದನದ
ಕಳನೊ ಹಂಸನ ಹೋಱಟೆಯೊ ಮೇಣ್ ಡಿಬಿಕಸಂಗರವೊ[1] ।
ಹುಲಿಗೆ ಮೊಲನಭ್ಯಾಗತನೆ ಕರಿ
ಕಳಭ ಸಿಂಹಕೆ ಸರಿಯೆ ಸೀ ನಿ
ನ್ನಳವನಱಿಯದೆ ಹೊಕ್ಕು ಕೆಣಕಿದೆ ಕೆಟ್ಟೆ ಹೋಗೆಂದ ॥ ೮೯

ಇದುವೆ ಪಿತ್ತದ ವಿಕಳತೆಯೊ ಮ
ದ್ಯದ ವಿಕಾರವೊ ಭಂಗಿ ತಲೆಗೇ
ಱುವುದೊ ಭಟನಾದೊಡೆ ವಿಘಾತಿಯಲೇಱು ಕಾಳಗಕೆ ।
ಸದನ ನಿನ್ನದು ಸೂಳೆಯರ ಮುಂ
ದೊದಱಿ ಫಲವೇನೆದ್ದು ಬಾ ಬಾ
ಳವಲಿ ಬರೆದುದ ತೊಡೆವೆನೆಂದನು ದಾನವಧ್ವಂಸಿ ॥ ೯೦

ಎಲವೊ ಗೋಪಕುಮಾರ ಕಂಸನ
ಲಲನೆಯರ ವೈಧವ್ಯದುಃಖಾ
ನಲನ ನಂದಿಸಲಾಯ್ತು ನಿನ್ನಯ ರುಧಿರಜಲಧಾರೆ ।

---

1 ನಡುಪಾಯೊ, ಚ.

ಅಳಿದ ಕಂಸನ ಕಾಲಯವನನ
ಕಳನ ಹರಿಬವ ಗೆಲಿದು ದೈತ್ಯಾ
ವಳಿಯ ಬಂಧುತ್ವವನು ಬಳಸುವೆನಿನ್ನು ನೋಡೆಂದ [1] ॥ ೯೧

ಭೀಮಾದಿಗಳನ್ನು ಕುರಿತು ಮಗಧನ ವಚನ.

ಗೋವಳರು ನಿರ್ಲಜ್ಜರದಱೊಳು
ನೀವು ಗರುವರು ರಾಜಪುತ್ರರು
ಸಾವ ಬಯಸುವನೊಡನೆ ಬಂದಿರಿ ತಪ್ಪು ಮಾಡಿದಿರಿ ।
ನೀವು ಮಕ್ಕಳು ನಿಮ್ಮ ಹಿರಿಯರ
ಠಾವಿನಲಿ ಬುಧರಿಲ್ಲಲಾ ನಿಮ
ಗಾವ ವಿಧಿಯಹುದೆಂದು ನುಡಿದನು ಭೀಮಫಲುಗುಣರ ॥ ೯೨

ಯುದ್ಧಕ್ಕೆ ಬಾ ಎಂದು ಭೀಮನ ವಾಕ್ಯ.

ಸಾಕಿದೇತಕೆ ಹೊಳ್ಳು ನುಡಿಗೆ ವಿ
ವೇಕಿಗಳು ಮೆಚ್ಚುವರೆ ಯುದ್ಧ
ವ್ಯಾಕರಣಪಾಂಡಿತ್ಯವುಳ್ಳರೆ ತೋಱಿಸುವುದೆಮಗೆ ।
ಈ ಕಮಲನೇತ್ರಂಗೆ ಘಡ ನೀ
ನಾಕೆವಾಳನೆ ಶಿವ ಶಿವಾ ಜಗ
ದೇಕದೈವದ ಕೂಡೆ ದಂಡಿಯೆ ಯೆಂದನಾ ಭೀಮ ॥ ೯೩

ಭೀಮಾರ್ಜುನರನ್ನು ಹೆದರಿಸುವಿಕೆ.

ದಿಟ್ಟರಹಿರೋ ಸಾವನಱಿಯದೆ
ಕೆಟ್ಟರಕಟಾ ಕಾಳುಗೋಪನ
ಗೊಟ್ಟೆಯಾಟಿಕೆ ಗುಱಿಗಳಾದಿರಿ ನಿಮ್ಮ ಗುರುಸಹಿತ ।
ಚಟ್ಟೆಳಿಯ ಚತುರಾಸ್ಯ ಭಾಳನ [2]
ಲಿಟ್ಟನವರಿಗೆ ಜೋಳಿ [3] ಗಡ ಜಗ
ಜಟ್ಟಿಗಳು ತಾವಿವರೆನುತ ತಲೆದೂಗಿದನು ಮಗಧ ॥ ೯೪

---

1 ಬಳಸುವೆನೆಂದನಾಮಗಧ, ಚ. 2 ನಿವರೊಡ, ಚ.
3 ಹುಟ್ಟಿದರ ಸಮಜೋಳಿ, ಚ.

ಕೃಷ್ಣಜರಾಸಂಧರ ಸಂವಾದ.

ಬೈದು ಫಲವೇನೆಮಗೆ ಮೇಳದ
ವೈದುನರು ನೀವಲ್ಲಲೇ ದಟ
ವೈದೆ ನೂಕಲಿ ನಿಮ್ಮ ಮೂವರು ಸಹಿತ ನಮ್ಮೊಡನೆ ।
ಕೈದು ಬೇಕ್ಕೆ ತರಿಸಿ ಕೊಡಿಸುವೆ
ನೈದೆ ನೀವೆನುವಾಗಿ [1] ನಿಮ್ಮೊಡ
ನೈದುವೆನು ತಾನೊಬ್ಬನೆಂದನು ಮಗಧಪತಿ ನಗುತ [2] ॥ ೯೫

ಎಲವೊ ಬಾಹಿರ ಮಗಧ ಹಲಧರ
ನುಟಿಯೆ ಪಾಂಡವನೃಪರು ಪರಿಯಂ
ತಳವು ನಿನಗೊಬ್ಬಂಗೆ ಸೇಱುವುದೇ ಮಹಾದೇವ ।
ಅಟಿವು ತಪ್ಪದು ನುಡಿಯೊಳಲ್ಪವ
ಬಳಸಲೇತಕೆ ವೀರನಹೆ [3] ನ
ಮ್ಮೊಳಗೆ ಮೂವರೊಳೊಬ್ಬನನು ವರಿಸೆಂದನಸುರಾರಿ ॥ ೯೬

ಅಕಟ ನಮಗೀಸಮರವಾವ
ಶ್ಯಕವೆ ನಮಗಖ್ಯಾತಿ ಯಲ್ಲಿದು
ಸಕಲಜನವೆಱಿದಿರೆ ಯೆನುತ ನೋಡಿದನು ತನ್ನವರ ।
ಪ್ರಕಟವೈ ನಿಮ್ಮೊಳುತನ ಯದು
ನಿಕರಕಾವೆಂಜುವೆವು ರಣನಾ
ಟಕಪಲಾಯನಪಂಡಿತರು ನೀವೆಂದನಾಮಗಧ ॥ ೯೭

ಪಾರ್ಥ ನೀ ಮಗುವೆಮ್ಮೊಡನೆ ರಣ
ದಥಿಯಾದೊಡೆ ಭೀಮಸೇನ ಸ
ಮರ್ಥನಹನೀತಂಗೆ ಕೊಟ್ಟೆನು ಕಳನ ಕಾಳಗವ ।

---

1 ವಾಳಾಗಿ, ಚ. 2 ಬಲರಾಮನುಟಿದಾನೆಂದನಾಮಗಧ, ಚ.
3 ವಿವೇಕಿಯೈ, ಕ. ಖ.

ಯುದ್ಧೋದ್ಯೋಗ.

ವ್ಯರ್ಥವಾಗಿಯೆ ಹೋಗದಿಂದು ಪ
ರಾರ್ಥಕಂಟಕವಾಗಲೇತಕೆ [1]
ತೀರ್ಥವೈ ಸಲೆ ಯೆಂದು ನಿಂದಿರ್ದನು ಜರಾಸಂಧ [2] ‖ ೯೮

ತರಿಸಿದನು ಚಂದನದ ಸಾದಿನ
ಭರಣಿಗಳ ಕರ್ಪೂರವರಕ
ಸ್ತೂರಿಜವಾದಿಪ್ರಮುಖಬಹುವಿಧಯಕ್ಷಕರ್ದಮವ |
ಹರಿವೃಕೋದರಪಾರ್ಥರಿದಿರಲಿ
ಭರಣಿಗಳ ನೂಕಿದನು ಮಾಲ್ಯಾಂ
ಬರವಿಲೇಪನದಿಂದಲಂಕರಿಸಿದರು ನಿಜತನುವ ‖ ೯೯

ಅಂಕಕಿಬ್ಬರು ಭಟರು ತಿಲಕಾ
ಲಂಕರಣಶೋಭೆಯಲಿ ರಣನಿ
ಶ್ಶಂಕರನುವಾದರು ಸುಕರ್ಪೂರವೀಳೆಯವ ಕೊಳುತ |
ಬಿಂಕದುಬ್ಬಿನ ರೋಮಪುಳಕದ
ಮುಂಕುಡಿಯ ಸುಮ್ಮಾನದಂಕೆಯ
ಝುಂಕೆಗಳ ಭರ ಭುಲ್ಲವಿಸಿದುದು ಭೀಮಮಾಗಧರ ‖ ೧೦೦

ರಣದೊಳಾವುದು ನಿನಗೆ [3] ಹಿರಿಯು
ಬ್ಬಣವೊ ಪರಿಘವೊ ಸುರಿಗೆಯೋ ಡೊಂ
ಕಣಿಯೊ ಮುಸಲವೊ ಗದೆ ಕಠಾರಿಯೊ ಪರಶುತೋಮರವೊ |
ಕಣಿಧನುವೊ ಕಕ್ಕಡೆಯೊ ಮುಷ್ಟಿಯೊ
ಹಣಿದಕಾವುದು ಸದರವದಱಲಿ
ಕೆಣಕಿ ನೋಡಾ ತನ್ನನೆಂದನು ಭೀಮ ಮಾಗಧನ ‖ ೧೦೧

ಆಯುಧಂಗಳಲೇನು ನೀ ನಾ
ಗಾಯುತದ ಬಲನೆಂಬರಾನುಡಿ

---

1 ರಾರ್ಥವಾದೊಡೆ ಸಾಕು ನಮಗಿದು, ಕ. ಖ.

2 ಶಸ್ತ್ರಧಾರೆ ಯಿದೆಂದನಾಮಗಧ, ಚ. 3 ಕೈದು, ಚ. ಠ.

ವಾಯುವೋ ಬಿನ್ನಣವೊ ದಿಟವೊ ನೋಡಬೇಹುದಲೆ ।
ಆಯಿತೇ ಸಮಜೋಡಿ ನೀ ನಡು
ಪಾಯುವೋ ಜೋಕೆಯುವೊ ನುಡಿ ಮನ
ದಾಯುತವನಿನ್ನೆನುತ ಹತ್ತಾಹತ್ತಿಗನುವಾದ ॥ ೧೦೨

ಯುದ್ಧಾರಂಭ.

ಧರಣಿಪತಿ ಕೇಳ್ ಮಗಧನೃಪಮಂ
ದಿರದ ರಾಜಾಂಗಣದೊಳವನೀ
ಸುರರು ನೋಟಕರಾದರಿಲ್ಲಿ ಮುರಾರಿಫಲುಗುಣರು ।
ಎರಡುಬಲ ಮೋಹರಿಸಿ ನಿಂದುದು
ಪುರದ ಹೊಱಬಾಹೆಯಲಿ ಕೃತಸಂ
ಚರಣಕಾರ್ತಿಕಶುದ್ಧಪಾಡ್ಯದೊಳಾಹವಾರಂಭ ॥ ೧೦೩

ಸಿಡಿಲು ಬೊಬ್ಬಿಡುವಂತೆ ಹೊಯ್ದರು
ಮುಡುಹುಗಳ ಝೂ ಹೋ ತು ಮಲ್ಲನು
ತಡಿಗಡಿಗೆ ನೂಕಿವರು ಲವಣಿಯು ತಿರುಗಿ ಸಾರದಲಿ ।
ತುಡಕಲೀಯದೆ ಬವರಿಯಲಿ ಗಡ [2]
ಬಡಸಿ ದಂಡೆಯೊಳೌಕಿದರು ಸಂ
ಗಡಿಸಿ ನಿಂದರು ನೀಲ ನಿಷಧಾಚಲಕೆ ಮಲೆವಂತೆ ॥ ೧೦೪

ಯುದ್ಧನಡೆದಕ್ರಮ.

ಸಿಕ್ಕರೊಬ್ಬರಿಗೊಬ್ಬರುಱೆ ಕೈ
ಮಿಕ್ಕು ಹರಿಯರು ಕೊಂಡಹೆಜ್ಜೆಯ
ಠಕ್ಕಿನಲಿ ಮೈಗೊಡರು ತಿಱಿಮುಱುವುಮಂಡಿಗಳ ।
ಇಕ್ಕಿದರು ಗಳಹತ್ತದಲಿ ಸಲೆ
ಮಿಕ್ಕು ಸತ್ರಾಣದಲಿ ಮಿಗೆ ಸರಿ
ಹೊಕ್ಕು ಹಿಡಿದರು ಬಿನ್ನಣದ ಜೊಕ್ಕೆಯದ ಜಾಳಿಯಲಿ [3] ॥ ೧೦೫

---

1 ಮಝುಪೂತು, ಚ. 2 ತಿರುಗಿದರು, ಚ.

3 ಚೊಕ್ಕೆಯದ ಚಾಳಿಯಲಿ, ಕ. ಖ.

ಬಿಡಿಸಿ ಗಳಹತ್ತವನು ಡೊಕ್ಕರ
ಕೊಡೆ ಮುಱಿವ ಸಕ್ರೋಧ ಡೊಕ್ಕರ
ಕಡಸಿ ಕತ್ತರಿಯಾಡಿಸುವ ಗಳಹತ್ತ ಡೊಕ್ಕರವ ।
ತಡೆವ ಚವ್ವಂಗುಲ ದುವಂಗುಲ
ಕೊಡೆ ಮುಱಿವ ಪಟ್ಟಸಕೆ ಚಾಚುವ
ಚಡಿಕೆಗೊದಗುವ ಭಟರು ಹೆಣಗಿದರರಸ ಕೇಳೆಂದ ॥ ೧೦೬

ಎಳೆದುದಣುವ್ರೊಟ್ಟೆಯಲಿ ಬೊಪ್ಪರ
ದೊಳಗೆ ಜಾಳಿಸಿ ಚಿಮ್ಮಿ ಜಡಿತೆಯು
ಸೆಳೆದು ಮುಡುಹಿನಲೌಕಿ ಬಿಗಿದರು ಪಟ್ಟಮುಡುಹಿನಲಿ ।
ಸುಳಿದು ಮರ್ಕಟಬಂಧದಲಿ ಕರ
ವಳಯದಲಿ ಕೈದುಡಕಿ ಶಿರವ
ಟ್ಟಳೆಯ ಚಲ್ಲಣಪಟ್ಟೆಯವರೊದಗಿದರು ಪಟುಭಟರು ॥ ೧೦೭

ಅಗಡಿಯಲಿ ಲೋಟಿಸಿ ನಿರಂತರ
ಲಗಡಿಯಲಿ ಲಾಗಿಸಿ ನಿಬಂಧದ
ಬಿಗುಹುಗಳ ಕುಮ್ಮಱಿಯ ಕುಹರದ ನಾಗಬಂಧಗಳ ।
ತೆಗಹುಗಳ ತೊಡಕುಗಳ ತುಳುಕಿನ
ಜಗಳಗಳ ಜೋಡಣೆಯ ನಿಡು ಸೂ
ಯುಗಳ ಸಂರಂಭದ ಸಗಾಡರು ಹೊಕ್ಕು ಹೆಣಗಿದರು ॥ ೧೦೮

ಧೂಳಿ ಕುಡಿದುದು ಬೆಮರನಾಕೆಂ
ಧೂಳಿ ನೆನೆದುದು ಬೆಮರಿನಲಿ ತಳ
ಮೇಲು ನಿಮಿಷಕೆ ಮೇಲು ತಳಮಿಗೆ ಬಿಡುಹು ಬಿಗುಹುಗಳ ।
ಸೂಟಿ ನಾಸಾಪುಟದ ಪವನನ
ತಾಳಿಗೆಯ ಕರ್ಪುರದ ಕವಳದ
ತೋಳತೆಕ್ಕೆಯ ತವಕಿಗರು ಹೆಣಗಿದರು ಪಟುಭಟರು ॥ ೧೦೯

ತೀರದಿಬ್ಬರ ಸತ್ವವವನಿಯು
ಸಾರವಿಬ್ಬರ ಬಲುಹ ಗಾಣದು
ಪಾರಕಾಣದುವಧಟರಿಬ್ಬರ ಭುಜಬಲಾಟೋಪ ।
ಸಾರವೆತ್ತಿಯುದು ಮುಳಿಸು ದರ್ಪದ
ಧಾರೆ ಮುಱಿಯುದು ಜಯದ ತೃಷ್ಣೆಯು
ತೋಱಹತ್ತರು ಹೆಣಗಿದರು ಮಾಗಧವೃಕೋದರರು ॥ ೧೧೦

ಪೂತು ಮಝು ಜಗಜಟ್ಟಿ ಧಣು ಧಣು
ವಾತಸುತ ಪರಬಲಭಯಂಕರ
ಸೋತನೈ ಪ್ರತಿಮಲ್ಲನೆಂದರು ಕೃಷ್ಣಫಲುಗುಣರು ।
ಭೀತನಾದನು ಭೀಮನಹಿತವಿ
ಘಾತಮಾಗಧರಾಯಮಲ್ಲ
ವ್ರಾತಕುಲಗಿರಿವಜ್ರನೆಂದುದು ಮಗಧಪರಿವಾರ ॥ ೧೧೧

ಅಲಸಿದರು ಬಿನ್ನಣಕೆ ಬಿಗುಹಿನ
ಕಱವುಗಳ ಬೇಸರಿಕೆಯುಲಿ ಕಡು
ಉಳಿ ಮಸಗಿ ಡಾವರಿಸಿ ಮನವನುಪಾಯುಡಾವರಕೆ ।
ತೊಲಗಿ ಸಿಂದರು ಕರ್ಪೂರದ ತನಿ
ಹಳುಕನಣಲೊಳಗಡಸಿ ದಂಡೆಯು
ಬಲಿದು ಬಱಸಿಡಿಲೞಿಕವೆನೆ ತಾಗಿದರು ತವಕದಲಿ ॥ ೧೧೨

ಬಾಱಿ ಪೊಯ್ಲೋ ಸಿಡಿಲ ತೊಡಱಿನ
ಸೂಱುಗಳೂ ಸಿಡಿಸಲೆಯು ಗಱಿಗಳ
ಬೀಱುಗಳೂ ಬಿಱುಪೊಯ್ಲ ಧಾರೆಯು ಕಿಡಿಯ ತುಂಡುಗಳೂ ।
ತೋಳ ನೆಗಹಿನ ಮುಷ್ಟಿಘಾತದ
ಮೇಲುಗಾಯದ ಉಳಿಯ ಘೋಟಾ
ಘೋಟಿಗಳನಾರೆಣಿಸುವರು ಮಾಗಧನ ಪವನಜನ [1] ॥ ೧೧೩

---

1 ಕಲಿಭೀಮ ಮಾಗಧರ, ಚ.

ಕುಸಿದು ಘಾಯವ ಕಳದು ವಕ್ಷದ
ಬೆಸುಗೆ ಬಿಡೆ ಸಿಡಿದೆದ್ದು ಹೊಯ್ಲಿಗೆ
ಮುಸುಡ ತಿರುಹುವ ಮೈಯ್ಯನೊಡ್ಡಿದಡೌಕಿ ಘಟ್ಟಿಸುವ ।
ಅಸವಸೆಗೆ ಮೈಯುಳುಕದೆಱಗುವ
ಹುಸಿವ ಜಾಱುವ ಹೊಳುವ ಹೆಣಗುವ
ಬೆಸುಗೆ ಬಿಡಿಸುವ ದಿಟ್ಟವಾಳರು ತಿವಿದರಡಬಡಿಸಿ [1] ॥ ೧೧೪

ಪವನಜನ ರಾವಣನ ಝಾಡಿಯ
ಕಿವಿಗಳೊೞೀ ಚಾಣೂರಕೃಷ್ಣರ
ಜವಳಿವೊಯ್ಲುವರೊರೆಗೆ ಜೋಡಿಸಲೇನ ಹೇೞುವೆನು ।
ಶಿವನ ಹಣೆಗಣ್ಣೋಟವೋ ಭೈ
ರವನ ಡಮರುಗದಾಟವೋ ಬಿರು
ದಿವಿಗುಳಿನ ದೆಕ್ಕಳ ಮಸಗಿತು ಭೀಮಮಾಗಧರ ॥ ೧೧೫

ಕುಣಿದುವಿಬ್ಬರ ಮುಷ್ಟಿಯಿಬ್ಬರ
ಹಣೆಯಲೆದೆಯಲಿ ಮೋಱೆಯಲಿ ಭುಜ
ದಣಸಿನಲಿ ಕಂದದಲಿ ಶಿರದಲಿ ಬದಿಯಲುದರದಲಿ ।
ಝಣು ವಿರೋಧವಿಭಾಡ ಝಣು ಝಣು
ಝಣು ಜಗತ್ತ್ರಯಜಟ್ಟಿ ಝಣು ಝಣು
ಝಣು ಝಣೆಂಬಬ್ಬರಣೆ ಮಸಗಿದುದೆರಡುಬಾಹೆಯಲಿ ॥ ೧೧೬

ಹೊಯ್ಲು ಹೊದಱೆದ್ದುವು ವಿಘಾತದ
ಕಯ್ಲುಳಿಯ ಕಡುಘಾಯ ಘಾಯಕೆ
ಮೈಯ್ಲವಣೆ ಲಂಬಿಸಿತು ಕದುಹಿನ ಖತಿಯ ಕೈಮುಸಕ [2] ।
ಹೊಯ್ಲ ಹೊಗೆಗಳ ಹೋಱಟೆಯ ವೇ
ಗಾಯ್ಲ ಮುಷ್ಟಾಮುಷ್ಟಿ ಹಂತಿಯ ದೃ
ಢಾಯ್ಲರಪ್ಪಳಿಸಿದರು ಪದಘಟ್ಟಣೆಗೆ ನೆಲ ಕುಸಿಯೆ ॥ ೧೧೭

---

1 ಹೊಕ್ಕು ಹೆಣಗಿದರು, ಚ.

2 ಸೋಹೆಯ ಸರಿಸ ಸೂಟಿಯಲಿ, ಡ. ಸೂಟಿನ ಲುಳಿಯ ಲಹರಿಯಲಿ, ಖ.

ಆವಸಾಧನೆಯೋ ವಿಘಾತಿಯು
ಲಾವಣಿಗೆಗದ್ರಿಗಳು ಬಿರಿದುವು
ಪ್ರವಳಿಯುಉಕ್ಕಿಮದು ಕಡುಹಿನ ಖತಿಯು ಕೈಮಸಕ ।
ತಾವರೆಯು ತೆತ್ತಿಗನ ಕುಮದದ
ಜೀವಿಗನ ಮಿಗೆ ಮೇಲುನೋಟದ
ಲಾಪಿಗಡಭಟರಡಸಿ ತಿವಿದಾಡಿದರು ಬೇಸಱದೆ ॥ ೧೧೮

ತೆಗೆಯುರರ್ಜುನಕೃಷ್ಣರೀತನ
ಸುಗಿಯುರವನವರವೆನನಿರುಳಿನ
ಹಗಲ ವಿವರಣೆಯಿಲ್ಲ ಮಜ್ಜನಭೋಜನಾದಿಗಳ ।
ಬಗೆಗೆ ತಾರರು ಬಾಹುಸತ್ವದ
ಹೊಗರು ಹಿಂಗದು [1] ಮನದ ಖಾತಿಯು
ತೆಗಹು ತಗ್ಗದು ಹೊಕ್ಕು ತಿವಿದಾಡಿದರು ಪಟುಭಟರು [2] ॥ ೧೧೯

ಸತ್ವ ಸವೆಯದು ಮನದ ಮುಳಿಸಿನ
ಬಿತ್ತು ಬೀಯದು ಜಯದ ಬಯಕೆಯು
ಸುತ್ತು ಸಡಿಲದು ಬಿಂಕ ಬೀಱಿಯದು ನೋಯದಾಟೋಪ ।
ತೆತ್ತ ಕೈ ಕಂಪಿಸದು ಮುಷ್ಟಿಯು
ಹತ್ತುಗೆಗೆ ಮನ ಝೋಂಪಿಸದು ಮದ
ವೆತ್ತಿ ಮೆಟ್ಟಿದರೊಬ್ಬರೊಬ್ಬರ ಮರ್ಮಘಾತದಲಿ ॥ ೧೨೦

ಅರಸ ಕೇಳೃದನೆಂಟುದಿವಸದೊ
ಳುರುಭಯಂಕರವಾಯ್ತು ಕದನದ
ಭರದೊಳಡೆದೆಱಿಹಿಲ್ಲ ವಿಶ್ರಮವಿಲ್ಲ ನಿಮಿಷದಲಿ ।
ಎರಡುದೆಸೆಯಲಿ ವೀಳಯದ ಕ
ರ್ಪುರದ ಕವಳದ ಕೈಚಳಕದಾ
ತೆಱಸನಲ್ಲದೆ ಮರಳಿ ಕಾಣೆನು ಯುದ್ಧರಂಗದಲಿ ॥ ೧೨೧

1 ಹೋಗದು, ಚ. 2 ಬೇಸಱದೆ, ಡ.

ಭರದ ಭಾರಣೆಯಲಿ ಚತುರ್ದಶಿ
ಯಿರುಳು ಮಗಧನ ಬಾಹುಸತ್ವದ
ಮುಱಿವು ಮೊಳತುದು ಶೌರ್ಯ ಸಡೆದುದು ಭಯದ ಬಿಗುಹಿನಲಿ ।
ಉರುಪರಾಕ್ರಮತೇಜ ಪಡುವಣ
ತರಣಿಯಾದುದು ಧಟ್ಟಣೆಯ
ಧರಧುರಕೆ ನಿದ್ರಾವಜಿಹ್ವೆಯಾದುದು ನಿಮಿಷನಿಮಿಷದಲಿ ॥ ೧೨೨

ಆಗ ಜರಾಸಂಧನಿಗೆ ಯುದ್ಧದಲ್ಲಿ ಅಧೈರ್ಯ ಹುಟ್ಟುವಿಕೆ.

ಬೇಸಱಿಕೆ ಬೇಱೊಱಿದುದು ಜಯ
ದಾಸೆ ಜಾಱಿತು ದಿಟ್ಟತನದ ಪಿ
ಲಾಸ ಹಾಱಿತು ಸುಪ್ರತಾಪದ ಕೆಂಪು ಕಱಿದಾಯ್ತು ।
ಮೀಸಲಳಿದುದು ಮುಳಿಸು ಶೌರ್ಯದ
ವಾಸಿ ಪೈಸರವಾಯ್ತು ರಣದಾ
ವೇಶ ವಿಳಿದುದು ಮಗಧಪತಿಗಿದನಱಿದನಸುರಾರಿ ॥ ೧೨೩

ಹೊಱಗೆ ಬಲಿದೊಳಡಿಳ್ಳವನು ಪರ
ರಱಿಯದಂತಿರೆ ತಿವಿವ ಮಗಧನ
ಪರಿಯನಱಿವನು ದನುಜವೈರಿ ಪರೇಂಗಿತಜ್ಞನಲೆ ।
ಅಱಿವುದರಿದೇ ಚರಾಚರಂಗಳ
ಹೊಱಗೊಳಗು ತಾನಲ್ಲದಿಲ್ಲದ
ನಱಿಯನೇ ಶಿವ ಯೆಂದನಾ ಜನಮೇಜಯಗೆ ನಗುತ ॥ ೧೨೪

ಭೀಮನನ್ನು ಕುರಿತು ಕೃಷ್ಣನ ಉಪದೇಶ.

ಎಲೆಲೆ ಪವನಜ ಮಾಗಧೇಶ್ವರ
ನಳವನಱಿದಾ ನಿನ್ನ ತಂದೆಯು
ಬಲುಹ ಕೊಂಡೀರಿಪ್ಪುವ ಮುಱಿ ನೀನೆನೆ ಸಮೀರಣನ ।
ಬಲುಮುಗಿಲು ಬಿಱುಗಾಳಿಯೊಡ್ಡಿನ
ಲಳುಕದೇ ಫಡ ಬೇಗ ಮಾಡೆನೆ
ಕಲಿವೃಕೋದರನನಿಲರೂಪಧ್ಯಾನಪರನಾದ ॥ ೧೨೫

ಧ್ಯಾನದಲಿ ತನ್ಮನತೆಯಾಗಲ
ನೂನಸಾಹಸಿಯಾಗೆ ಮಗಧಮ
ಹಾನರೇಂದ್ರನ ತುಡುಕಿ ಹಿಡಿದನು ಮಲ್ಲಗಂಟಿನಲಿ |
ಆನಗೆಯುನೇವಣ್ಣಿಸುವೆನನು
ಮೂನಿಸದೆ ಬೀಸಿದನು ಭವಣಿಯು
ಭಾನುಮಂಡಲದಂತೆ ತಿರುಗಿದನಾಜರಾಸಂಧ ॥ ೧೭೬

ಭೀಮಸೇನನು ಜರಾಸಂಧನನ್ನು ಸೀಳುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಪವನಜನಧಿಕರೋಷ
ಜ್ವಾಲೆಯಲಿ ಕುಡಿವಿಾಸೆ ಕೋಱಿಡೆ ಬಟ್ಟಿಕ ರಿಪುಭಟನ |
ಕಾಲ ಹಿಡಿದುಱಿ ಮೆಟ್ಟಿ ಸಬ್ರನೆ
ಸೀಳ್ದನದೆರಡಾಗಿ ತನುವನು
ಘೋಳಿಡಲು ಮಾಗಧನ ಪರಿಜನವಧಿಕಶೋಕದಲಿ ॥ ೧೭೭

ಬಿಸುಟನಾಸೀಳೆರಡನತ್ತ
ತ್ತಸಮಸಾಹಸಿ ಭೀಮಸೇನನು
ನಸುನಗುತ ಬಂದೆಱಗಿದನು ಶ್ರೀ ಕೃಷ್ಣನಂಘ್ರಿಯಲಿ |

ಜರಾಸಂಧನು ದೇಹದ ಸೀಳೆರಡು ಸೇರಲು ಯುದ್ಧಕ್ಕೆ ಸಿದ್ಧನಾಗುವಿಕೆ.

ಒಸೆದು ಹಿಡಿದೆತ್ತಿದನು ಮುರಹರ
ನಸುರನಾಸೀಳೆರಡು ಬೆಚ್ಚೆಱಿ
ಮಸಗಿದಾಮದದಾನೆಯಂತಿರೆ ಮಲೆತು ಬೊಬ್ಬಿಱಿದ ॥ ೧೭೮

ಇನ್ನಱಿಯಬಹುದೋ ವೃಕೋದರ
ಬೆನ್ನಲುಗಿವೆನು ಕರುಳನಕಟಾ
ನಿನ್ನ ಕಯ್ಯಲಿ ಮಡಿವೊಡಾ ಬಕನೋ ಹಿಡಿಂಬಕನೊ |

ಎನ್ನಳವ ನೋಡೆನುತ ಹಿಡಿದನು
ತನ್ನ ದಂಡೆಯನೊಡ್ಡಿ ನಿಮಿಷಕೆ
ಮನ್ನಿಸದೆ ಕಲಿಭೀಮ ಸೀಳ್ದನು ಮತ್ತೆ ಮಾಗಧನ ॥ ೧೯

ಮತ್ತೆ ಹರಿತಂದೆರಡು ಹೋಳಿವು
ಹತ್ತಿದುವು ವೈಮುಖಿದು ನಿಂದಿ
ದೊತ್ತರಿಸಿ ದಂಡೆಯಲಿ ಮಂಡಿಸಿ ತಿವಿದನನಿಲಜನ ।
ಎತ್ತಿದದುಭುತಕೋಪದಲಿ ಹಿಡಿ
ದೊತ್ತಿ ಸೀಳಲು ಹೋಳು ನಿಮಿಷಕೆ
ಹತ್ತಿ ಮೊದಲಿಸುತ್ತ ಬರುತಿರೆ ಭೀಮ ಬೆಱಗಾದ ॥ ೧೩೦

ಹೇಳುವರು ರಘುಜನ ದಶಾಸ್ಯನ
ಕಾಳಗದ ಸಿರವರಿದ ಕೊರಳಿನ
ಲಾಳದಲಿ ತಲೆ ಮೂಡಿದುದು ತಾನೆಂಬುದೇನರಿದೆ ।
ಸೀಳಿ ಬಿಸುಡಲಿಕವಯವದ ಸವು
ಹೋಳು ಸಂಧಿಸಿತಮಮ ಕದನಕ
ರಾಳಭೈರವನಿವನೆನುತ ಕಲಿಭೀಮ ಮಾಱಾಂತ ॥ ೧೩೧

ಎದ್ದು ಕಡುಗೋಪದಲಿ ಮಾಗಧ
ನುದ್ದುರುಟುತನದಿಂದನನಿಲಜ
ಗೆದ್ದು ಹೋಗದಿರೆನುತ ಮೇಲ್ವಾಯ್ದನು ವೃಕೋದರನ ।
ಹದ್ದಿಗಿದಿರಾದಹಿಗೆ ಜಯವದು
ಹೊದ್ದುವದೆ ರಣಮುಖದಿ ಭೀಮನ
ಗೆದ್ದು ಬದುಕಿದರುಂಟೆ ಧರಣೀಪಾಲ ಕೇಳೆಂದ ॥ ೧೩೨

ತಿವಿದನುರವಣೆಯಿಂದ ಭೀಮನ
ಪವನಜನು ಮಾಗಧನನೆಱಗಿದ

ಸವೆಡಿಸಿಡಿಲುಗಳಂತೆ ಯಿಬ್ಬರ ಮುಷ್ಟಿಯಬ್ಬರಕೆ ।
ಅವನಿ ನಡುಗಿತು ಮೇಲೆ ನೋಡುವ
ದಿವಿಜರುಚಿ ಹೆದಱಿದರು ರೂಢಿಯ
ಬವರವನು ನಾ ಕಾಣೆನಮರಾಸುರರ ಯುದ್ದದಲಿ ॥ ೧೩೩

ಕಾದಿದರು ಬಿಡದೊಬ್ಬರೊಬ್ಬರೊ
ಳೇದುರಾಗ್ರಹದಿಂದ ಸುಭಟರು
ಮೇದಿನಿಯೊಳದಿರಿಲ್ಲ ಪಡಿಗಟ್ಟುವರೆ ಪಟುಭಟರು ।
ಆದಿಯುಗದ ಹಿರಣ್ಯಕಾಕ್ಷನ
ನಾದಿಸೂಕರ ಸೀಳ್ದ ಬಿಸುಟವೊ
ಲೀದುರಾತ್ಮನ ಮೆಟ್ಟಿ ಸರ್ರನೆ ಸೀಳ್ದನಾಭೀಮ ॥ ೧೩೪

ಕಾಲ ಹಿಡಿದಪ್ಪಳಿಸೆ ದಿಕ್ಕರಿ
ಘೀಳಿಡಲು ದೆಸೆದೆಸೆಗೆ ಬಿಸುಟನು
ಮೇಳವಿಸಿ ಸೀಳಿರಡು ಬಂದಿದಿರಾಗಿ ಜೊಬ್ಬಿಸಲು ।
ಬಾಳು ಧರ್ಮಜ ಯೆನುತಲಾನೆಯ
ಮೇಲುವಾಯ್ದ ಮೃಗೇಂದ್ರನಂತಿರೆ
ಮೇಲಣಮರರು ನಲಿಯಲಪ್ಪಳಿಸಿದನು ಕಲಿಭೀಮ ॥ ೧೩೫

ಘಡ ಘಡೆಲವೋ ಭೀಮಸೇನನ
ಮೃಡನ ವರ ಹಿಂಗುವುದೆ ಮಿಗೆ ತ
ನ್ನೊಡೆಯ ಮುನಿಪನ ಕರುಣ ಹಿರಿದುಂಟೆನುತಲಸುರಪತಿ ।
ಅಡಿಗಡಿಗೆ ತಲೆಯೊತ್ತಿ ಕಾದಿದ
ನೊಡನೊಡನೆ ಕಲಿಭೀಮ ಸೀಳಲು
ಬಿಡದೆ ಸಂಧಿಸೆ ಕಾದಿದನು ಹದಿನೆಂಟು ಸೂಳಿನಲಿ ॥ ೧೩೬

ಕಾದಿದರೆ ಮುರವೈರಿ ಮೃಡ ಕೊಂ
ಡಾಡಿದನು ವರವವಗೆ ಘಟಿಸಿತು

ರೂಢಿಗಚ್ಚರಿಯೆನುತ ನಸುನಗುತನಿಲನಂದನನ ।
ನೋಡಿ ಮಿಗೆ ಕಣ್ಸನ್ನೆಯಲಿ ಕಯು
ಕೋಡಿಯಿಲ್ಲದೆ ದನುಜನುರವನು
ಕೂಡೆ ಪಿಡಿದೊತ್ತಿದನು ಬದಿಯಲು ನುಗ್ಗುನುಸಿಯಾಗೆ ॥ ೧೩೭

ಬರಸೆಳೆದು ಕರದಿಂದ ಮಾಗಧ
ನೆರಡು ಕಾಲನು ಹಿಡಿದು ಸೀಳಿಯೆ
ಧರೆಗೆ ಬಿಸುಟನು ಸಂಧಿಸುವುವಾಸೀಳು ತತ್‍ಕ್ಷಣಕೆ ।
ಮರಳಿ ಪವನಜ ಹಿಡಿದು ಸೀಳಲಾಗ
ಳಿರದೆ ಮಗುಳವು ಸಂಧಿಸಿದುವೀ
ಪರಿ ಹಲವುಸೂಳಿನಲಿ ಭೀಮನೊಳೊದಗಿದನು ಮಗಧ ॥ ೧೩೮

ಕೃಷ್ಣನ ಅಪ್ಪಣೆಪ್ರಕಾರ ಜರಾಸಂಧನನ್ನು ಸೀಳುವಿಕೆ.

ಮುರಮಥನನದನರಿದು ನಿಜ
ಕರವೆರಡಪಲ್ಲಟವಾಗಿ ಸಂಧಿಸ
ಲರಿವಿದಾರಣಭೀಮ ನೋಡುತ ಮರಳಿ ಮಾಗಧನ ।
ಎರಡುಸೀಳನು ಮಾಡಿ ಹೊಯ್ದು
ಬ್ಬರಿಸಿ ಪಲ್ಲಟವಾಗಿ ಸಂಧಿಸಿ
ತಿರುಗಿಸಿದನೇನೆಂಬೆನುನ್ನತಬಾಹುವಿಕ್ರಮವ [1] ॥ ೧೩೯

ತಿರುಹಿದನು ನೂರೆಂಟುಸೂಳಿನು
ಧರೆಯೊಳಪ್ಪಳಿಸಿದನು ಸೀಳಿದ
ನರಿಭಟನ ಸೀಳೆರಡು ಕರದಲಿ ಹಿಡಿದು ಕಲಿಭೀಮ ।
ಹರಿಯ ಮೊಗವನು ನೋಡೆ ಭಾಪುರೆ
ಮರುತನಂದನ ಯೆನುತ ಹೊಗಳಿಯೆ
ಮುರಮಥನ ಬೆರಳೆರಡ ತಲೆಕೆಳಗಾಗಿ ಸಂಧಿಸಿದ ॥ ೧೪೦

1 ಸತ್ವದಲಿ, ಚ.

ಹಿರಿಸಿದನು ಧರಣಿಯಲಿ ಕಾಲಿನ
ಲೊರಸಿದನು ನೋಟಕರ ಧರಣೀ
ಸುರಜನದ ಪರಿಜನದ ಹಾ ಹಾ ರವದ ರಹಿ ಮಸಗೆ ।
ತೆರಳಿತಲ್ಲಿಯದಲ್ಲಿ ಮಾಗಧ
ನರಸಿಯರು ಬಿಡುಮುಡಿಯ ಜ
ತರದ ಕರಗ ಬಿಱುಹೊಯ್ಲಿನಲಿ ಹೊಱವಂಟರು ನಿಜಾಲಯವ ॥

ಆಗ ಸರ್ವರೂ ಭಯದಿಂದೋಡುತ್ತಿರಲು ಅಂಜದಿರಿ ಯೆಂದು
ಶ್ರೀಕೃಷ್ಣನು ಹೇಳುವಿಕೆ.

ಮನೆಮನೆಯ ಕದವಿಕ್ಕಿದುವು ನೃಪ
ವನಿತೆಯರು ಹೊಱವಂಟರಲ್ಲಿಯ
ದನುಜರಡಗಿದರದ್ರಿಗುಹೆಯಲಿ ಬೇಹಬೇಹವರು ।
ಜನದ ಕೋಲಾಹಲವನಾತನ
ತನುಜರೋಟವನವನ ಸತಿಯರ
ನಿನದವನು ಕಂಡಸುರರಿಪು ಸಾಱಿದನು ಕೈನೆಗಹಿ ॥ ೧೪೦

ಅಂಜದಿರಿ ಪುರಜನವು ವನಿತೆಯ
ರಂಜದಿರಿ ಮಾಗಧನ ಪರಿಜನ
ವಂಜದಿರಿ ಸಕಲಪ್ರಧಾನಪಸಾಯ್ತ ಸಂದೋಹ ।
ಅಂಜದಿರಿ ಕರೆ ಯಿವನ ಮಗನನು
ಭಂಜಿಸುವುದಿಲ್ಲಕಟ ಭೀಮನ
ನಂಜಯರು ಕೊಟ್ಟಭಯವೆಂದನು ಜನಕೆ [1] ಮುರವೈರಿ ॥ ೧೪೧

ಮುಱಿದು ಕೆಡಹಿದರರಿಯನಲ್ಲಿಯ
ಸೆಱೆಯ ಮನೆಗಳ ಹೊಕ್ಕು ರಾಯರ
ಸೆಱೆಗಳನು ಬಿಡಿಸಿದರು ನಾನಾದ್ವೀಪಪಾಲಕರ ।

---

1 ನಗುತ,

ಬಂಧನದಲ್ಲಿದ್ದ ರಾಜರನ್ನು ಬಿಡಿಸುವಿಕೆ.

ಮೆಱೆವ ಮಣಿಗಣರಶ್ಮಿವಳಯದ
ಮಿಱುಪರಥವನು ಕೊಂಡು ನಗರದ
ಹೊಱಗೆ ಬಿಜಯಂಗೈದು [1] ಹೊಕ್ಕರು ತಮ್ಮ ಪಾಳಯವ [2] ‖ ೧೪೪

ಆನೃಪರು ಅಪ್ಪಣೆಯನ್ನು ನಿರೀಕ್ಷಿಸುವಿಕೆ.

ಪೌರಜನ ಕಾಣಿಕೆಗಳಲಿ ಕಂ
ಸಾರಿಭೀಮಾರ್ಜುನರ ಕಂಡರು
ಧಾರುಣೀಪಾಲಕರು ಬಂದರು ಬೆನ್ನಲಿವರುಗಳ |
ಘೋರವಡಗಿದುದೆಂದು [3] ಕಾರಾ
ಗಾರಬಂಧವಿಮುಕ್ತವಾಯ್ತುಪ
ಕಾರವೆಮ್ಮಿಂದಾವುದೆಂದರು ನೃಪರು ಕೈಮುಗಿದು ‖ ೧೪೫

ನೀವು ರಾಜಸೂಯಸಮಯದಲ್ಲಿ ಬನ್ನಿರೆಂದು ಕೃಷ್ಣನ ಅಪ್ಪಣೆ.

ನವೆದಿರತಿದುಃಖದಲಿ ಬಿಡುಗಡೆ
ಪವನಸುತನಿಂದಾಯ್ತು ನಿಜದೇ
ಶವನು ಹೊಗುವುದು ಪೌರಜನಪರಿಜನವ ಸಲಹುವುದು |
ಎಮಗೆ ಮಾಳ್ಪುಪಕಾರ ಬೇಱಿ
ಲ್ಲವನಿಪಾಲನ ರಾಜಸೂಯಕೆ
ನಿವನಿವಗೆ ಮುಂಕೊಂಡು ಬಹುದೆಂದಸುರರಿಪು ನುಡಿದ [4] ‖ ೧೪೬

ಸಪರಿವಾರನಾಗಿ ಸಹದೇವನು ಭೀಮಾರ್ಜುನರನ್ನು ವಂದಿಸುವಿಕೆ.

ನಗರಜನಮಂತ್ರಿಪ್ರಧಾನಾ
ದಿಗಳು ಸಹಿತಕುಮಾರನೈತಂ
ದಗಧರನ ಪದಕೆಱಗಿದನು ಭೀಮಾರ್ಜುನಾಂಘ್ರಿಯಲಿ |

---

1 ಹೊಱವಳಯದಲಿ ಬಂದು, ಚ. 2 ಪೋಹರವ, ಡ.
3 ದೆಮ್ಮ, ಚ 4 ನುಮುರಾಂತಕನು, ಚ.

ಮಗನೆ ತಂದೆಯ ಮಾರ್ಗದಲಿ ನಂ
ಬುಗೆಯೊ ಕರುಣಾವೀಕ್ಷಣದ ನಂ
ಬುಗೆಯೊ ಚಿತ್ತ್ರಸಂಪದಾಮಂತ್ರಿಗಳು ಕೈಮುಗಿದು ॥ ೧೪೭

ಜರಾಸಂಧನ ಸಂಸ್ಕಾರ.

ಶವವ ಸಂಸ್ಕರಿಸುವುದು ಮಾಗಧ
ನವನಿಯಲಿ ಸಹದೇವಗಭಿಷೇ
ಕವನು ಮಾಡಿಸಿದಲ್ಲದೆತ್ತಲು ಮುಖವುದಿಲ್ಲೆಂದು ।
ಅವರಿಗಭಯವನಿತ್ತು ಪರಿವಾ
ರವನು ಕಳುಹಿದನಿತ್ತಲಾತನ
ಯುವತಿಯರು ಬೇಡಿದರು ವಹ್ನಿಯ ಪಡೆದು ನೆರಳಿದರು ॥ ೧೪೮

ಅವನ ಸಂಸ್ಕಾರದಲಿ ನಾರೀ
ನಿವಹ ಸಹಗತವಾಯ್ತು ವೈದಿಕ
ವಿಧಿವಿಧಿಯಲಿ ಮಾಡಿದರು ಶವಕ್ರಿಯಾದಿಗಳ ।
ಅವನ ಮಗ ಸಹದೇವನಾತಂ
ಗವನಿಯಲಿ ಪಟ್ಟಾಭಿಷೇಕೋ
ತ್ಸವವ ಮಾಡಿಸಿ ಕೊಟ್ಟನಭಯವನಾಪರಿಗ್ರಹಕೆ ॥ ೧೪೯

ಸಹದೇವನಿಗೆ ರಾಜ್ಯವನ್ನು ಕೊಡುವಿಕೆ.

ತೇರುಗಳ ತೇಜಿಗಳ ನಾಭಂ
ಡಾರವನು ಗಜಘಟೆಸಹಿತ ವಿ
ಸ್ತಾರವಿಭವವನೊಪ್ಪುಗೊಂಡರು ಮಗಧನಂದನನ ।
ಧಾರುಣಿಯನವಗಿತ್ತು ಸಕಲವ
ಹೀರವೊಣರನು ಕಳುಹಿ ಬಂದನು
ವೀರನಾರಾಯಣನು ಶಕ್ರಪ್ರಸ್ಥಪುರವರಕೆ ॥ ೧೫೦

ಎರಡನೆಯ ಸಂಧಿ ಮುಗಿದುದು.

ಮೂರನೆಯ ಸಂಧಿ.

ಸೂಚನೆ

ಭೂಪತಿಯು ನೇಮದಲಿ ಜಂಬೂ
ದ್ವೀಪನವಖಂಡದಲಿ ಸಕಲಮ
ಹೀಪತಿಗಳನು ಗೆಲಿದು ಕಪ್ಪವ ತಂದನಾಪಾರ್ಥ ||

ಅರ್ಜುನನ ದಿಗ್ವಿಜಯ.

ಕೇಳು ಜನಮೇಜಯ ಧರಿತ್ರೀ
ಪಾಲ ಪಾಂಡವಪುರಿಗೆ ಲಕ್ಷ್ಮೀ
ಲೋಲ ಬಿಜಯಂಗೈದು ಭೀಮಾರ್ಜುನರ ಮೇಳದಲಿ |
ಬಾಲೆಯರ ಕಡೆಗಣ್ಣ ಮಿಂಚಿನ
ಮಾಲೆಗಳ ಲಾಜಾಭಿವರ್ಷದ
ಲಾಲನೆಯ ರಚನೆಯಲಿ ಹೊಕ್ಕನು ರಾಜಮಂದಿರವ || ೧

ಕಂಡು ಕೃಷ್ಣನನಿವರ ಕಾಣಿಸಿ
* ಕೊಂಡು ಸುಕ್ಷೇಮಂಗಳನು ಬೆಸ
ಗೊಂಡು ಕುಳ್ಳಿರಲಾಪ್ರಯಾಸಂಗಳಲಿ ಫಲವೇನು * |
ಕಂಡೆವೈ ನಿನ್ನಮಳ ಕರುಣಾ
ಖಂಡಜಲಧಿಯ ಭಕ್ತಜನಕಾ
ಖಂಡಲದ್ರುಮವೆಂದು ತಕ್ಕೈಸಿದನು ಹರಿಪದವ || ೨

ಕೃಷ್ಣನು ಯುಧಿಷ್ಠಿರನಿಗೆ ಮಾಗಧಪುರಪ್ರವೇಶಾದಿಗಳನ್ನು ಹೇಳುವಿಕೆ.

ನಡೆದ ಪರಿಯನು ರಿಪುಪುರವನವ
ಗಡಿಸಿ ಹೊಕ್ಕಂದವನು ಕೋಟೆಯ [1]
ನಡೆದು ಮಗಧನ ತೊಡಚಿ [2] ಭೀಮನ ಕಾದಿಸಿದ ಪರಿಯ |

---

* ಕೊಂಡನರಸು ಕ್ಷೇಮಕುಶಲವ
ಕಂಡು ಬೆಸಗೊಳಲೇಕೆ ಬಹುಮಾತಿನಲಿ ಫಲವೇನು, ಚ. *

1 ಮಗಧನ, ಚ.   2 ತುಡುಕಿ ತೋಟಯ ಮಾಡಿ, ಚ.

ಬಿಡದೆ ಹಗಲಿರುಳೊದಗಿ ವೈರಿಯು
ಕಡೆಯು ಕಾಣಿಸಿ ನೃಪರ ಸೆರೆಗಳ
ಬಿಡಿಸಿ ಬಂದಂದವನು ಹರಿ ವಿಸ್ತರಿಸಿದನು ನೃಪಗೆ ॥ ೩

ಎಲೆ ಮಹೀಪತಿ ನಿನ್ನ ಯಾಗ
ಸ್ಥಳಕೆ ಬಾಧಕರಿಲ್ಲ ಬನದಲಿ
ಹುಲಿ ಯಿರಲು ಗೋಧನಕುಲಕೆ ಯವಸಾಂಬು ಗೋಚರವೆ ।
ನೆಲನ ಗರುವರ ಗೊಂದಣವನಂ
ಡಲೆವನಖಿಳದ್ವೀಪಪತಿಗಳ
ನೆಳಲ ಸೈರಿಸನಳಿದನಿನ್ನೇನರಿದು ನಿನಗೆಂದ ॥ ೪

ಯಾಗಾರಂಭಕ್ಕೋಸುಗ ಕೃಷ್ಣನ ಅಪ್ಪಣೆ.

ರಚಿಸು ಯಜ್ಞಾರಂಭವನು ನೃಪ
ನಿಚಯವನು ದಾಯಾದ್ಯರನು ಬರಿ
ಸುಚಿತವಚನದಲೆಮ್ಮ ಕರೆಸಿದೊಡಾಕ್ಷಣಕೆ ಬಹೆವು ।
ಸಚಿವರಾವೆಡೆ ಕಳುಹು ಬದರಿಯ
ರುಚಿರಮುನಿಪನ ಕರೆಸು ನಿನ್ನೀ
ರಚನೆ ನಿಷ್ಪ್ರತ್ಯೂಹವೆಂದನು ದಾನವಧ್ವಂಸಿ ॥ ೫

ಶ್ರೀಕೃಷ್ಣನ ದ್ವಾರಕಾಗಮನ.

ಎಂದು ಕಳುಹಿಸಿಕೊಂಡು ದ್ವಾರಕೆ
ಗಿಂದಿರಾಪತಿ ಮಾಗಧನ ರಥ
ದಿಂದ ಬಿಜಯಂಗೈದನನಿಬರು ಕಳುಹಿ ಮರಳಿದರು ।

ಯುಧಿಷ್ಠಿರನು ವೇದವ್ಯಾಸರೊಡನೆ ಮಾಡಿದ ಯೋಚನೆ.

ಬಂದ ವೇದವ್ಯಾಸಧೌಮ್ಯರ
ನಂದು ಕರೆಸಿ ಯುಧಿಷ್ಠಿರನು ನಿಜ
ಮಂದಿರದೊಳೊಪ್ಪಿದನು ಪರಿಮಿತಜನಸಮೂಹದಲಿ ॥ ೬

ಧರ್ಮರಾಯನ ಚಿಂತೆ.

ಅಕಟ ನಾರದನೇಕೆ ಯಾಗ
ಪ್ರಕಟವೆನು ಮಾಡಿದನೊ ನಮಗೀ
ಸಕಲಧರಣೀಕ್ಷತ್ರವರ್ಗದ ವಿಜಯ ಕಿಱುಕುಳವೇ ।
ವಿಕಟಜಂಬೂದ್ವೀಪಪರಿಪಾ
ಲಕರು ನಮ್ಮನಿಬರಿಗೆ ಸದರವೆ
ಸುಕರವೇ ವರರಾಜಸೂಯವೆನುತ್ತ ಬಿಸುಸುಯ್ದ[1] ॥ ೭

ಮಣಿವರಲ್ಲರಸುಗಳು ಮಾಡದೆ
ಮಣಿದೆವಾದೊಡಕೀರ್ತಿಕಾಮಿನಿ
ಕುಣಿವಳೈ ತ್ರೈಜಗದ ಜಿಹ್ವಾರಂಗಮಧ್ಯದಲಿ ।
ಬಣಗುಗಳು ನಾವೆಂದು ನಾಕದ
ಗಣಿಕೆಯರು ನಗುವರು ಸುಯೋಧನ
ನಣಕವಾಡುವೊಡಾಯ್ತು ತೆಱನೆಂದರಸ ಬಿಸುಸುಯ್ದ ॥ ೮

ಅರ್ಜುನನು ಧೈರ್ಯವನ್ನು ಹುಟ್ಟಿಸುವಿಕೆ.

ಎನಲು ಧಿಮ್ಮನೆ ನಿಂದು ಭುಗಿಲೆಂ
ದನು ಕಿರೀಟಿ ವೃಥಾಭಿಯೋಗದ
ಮನಕೆನಗೆ ಮಾರಾಂಕವಾಯ್ತೀ ಶಿವ ಮಹಾದೇವ ।
ನಿನಗಕೀರ್ತಿವಧೂಟಿ ಕುಣಿವಳೆ
ಜನದ ಜಿಹ್ವಾರಂಗದಲಿ ಹಾ
ಯೆನುತ ತಲೆದೂಗಿದನು ಘನಶೌರ್ಯಾನುಭಾವದಲಿ ॥ ೯

ಮಣಿಯರೇ ಮನ್ನೆಯರು ನಾಕದ
ಗಣಿಕೆಯರು ನಗುವರೆ ಸುಯೋಧನ
ನಣಕವಾಡುವನೇ ಶಿವಾ ತಪ್ಪೇನು ತಪ್ಪೇನು ।

1 ಚಿಂತಿಸಿದ,

ಕಣೆಗಳವು ನಾಳನಲಿ ಕಬ್ಬಿನ
ಗಣಿಕೆಗಳು ಗಾಂಡೀವವಿದು ನಿ
ರ್ಗುಣವೋ ತಾನರ್ಜುನವಮಹೀರುಹವೆಂದನಾಪಾರ್ಥ ॥ ೧೦

ಸಕಲಜಂಬೂದ್ವೀಪಪರಿಪಾ
ಲಕರ ಭಂಡಾರಾರ್ಥಕಿದೆ ಸು
ಪ್ರಕಟವೆಂದುಂಗುರುವ ಕೊಟ್ಟನು ನೃಪನ ಹಸ್ತದಲಿ ।
ಸುಕರದುಷ್ಕರವೆಂಬ ಚಿಂತಾ
ವಿಕಳತೆಗೆ ನೀ ಪಾತ್ರನೇ ಸಾ
ಧಕರನೇ ಸಂತವಿಸು [1] ತಾ ವೀಳೆಯವನೆನಗೆಂದ ॥ ೧೧

ವಿಜಯಯಾತ್ರೆಗೋಸುಗ ಭೀಮಾದಿಗಳನ್ನು ವ್ಯಾಸರು ಕಳುಹಿಸಿದುದು.

ಪೂತು ಫಲುಗುಣ ನಿನ್ನ ಕುಲಕಭಿ
ಜಾತಶೌರ್ಯಕೆ ಗರುವಿಕೆಗೆ ಸರಿ
ಮಾತನಾಡಿದೆ ಸಲುವುದಿದು ನಿನಗೆಂದು ಕೊಂಡಾಡಿ ।
ಈತನುತ್ತರದೆಸೆಗೆ ಭೀಮನು
ಶಾತಮನ್ಯುವ ದೆಸೆಗೆ ಯಮಳರ
ಭೀತರಿದ್ದೆಸೆಗೆಂದು ವೇದವ್ಯಾಸ ನೇಮಿಸಿದ ॥ ೧೨

ನೆರಹಿ ಬಲವನು ನಾಲ್ಕು ದಿಕ್ಕಿಗೆ
ಪರುಠವಿಸಿದರು ಫಲುಗುಣನನು
ತ್ತರಕೆ ಮೂಡಲು ಪವನಸುತ ದಕ್ಷಿಣಕೆ ಸಹದೇವ ।
ವರುಣದಿಕ್ಕಿಗೆ ನಕುಲಸೇನಾ
ಲ್ವರಿಗೆ ಕೊಟ್ಟನು ವೀಳೆಯವ
ಹಿರಿಯರಸಿ ತಂದಳು ತಳಿಗೆದಂಬುಲಮಂಗಳಾರತಿಯ ॥ ೧೩

---

1 ಸಂಹರಿಪೆ, ಚ.

ಪರಮಲಗ್ನದೊಳಿಂದು ಕೇಂದ್ರದೊ
ಳಿರಲು ಗುರುಭಾರ್ಗವರು ಲಗ್ನದೊ
ಳಿರೆ ಶುಭಗ್ರಹದೃಷ್ಟಿ ಸಕಳೈಕಾದಶಸ್ಥಿತಿಯು ।
ಕರಣತಿಥಿನಕ್ಷತ್ರವಾರೋ
ತ್ಕರದಲಭಿಮತಸಿದ್ಧಿಯೋಗದೊ
ಳರಸನನುಜರು ದಿಗ್ವಿಜಯಕನುವಾದರೊಗ್ಗಿನಲಿ ॥ ೧೪

ಅರ್ಜುನನ ವಿಜಯಯಾತ್ರೆ.

ಅರಸ ವೇದವ್ಯಾಸಧೌಮ್ಯಾ
ದ್ಯರಿಗೆ ಬಲವಂದೆರಗಿ ಕುಂತಿಯ
ಚರಣಧೂಳಿಯ ಕೊಂಡು ವಿಪ್ರವ್ರಜಕೆ ಕೈಮುಗಿದು ।
ಅರಸಿಯರು ದೂರ್ವಾಕ್ಷತೆಯ ದಧಿ
ವಿರಚಿತದ ಮಾಂಗಲ್ಯವೆನಲು ಮಿಗೆ
ಧರಿಸಿ ಬಹುವಿಧವಾದ್ಯದಲಿ ಹೊರವಂಟರರಮನೆಯ ॥ ೧೫

ಸಾಲ್ವದೇಶದ ವಿಜಯ.

ಅರಸ ಕೇಳೈ ಮೊದಲಲರ್ಜುನ
ಚರಿತವನು ವಿಸ್ತರದಲುಸುರುವೆ
ನುರುಪರಾಕ್ರಮಿ ಸದೆದು ಬಿಟ್ಟನು ಸಾಲ್ವದೇಶವಲಿ ।
ಪುರಕೆ ದೂತರ ಕಳುಹಲವನಿಪ
ನುರವಣೆಗೆ ಮನವಳುಕಿ ಕೊಟ್ಟನು
ತುರಗಗಜರಥಧನವಿಳಾಸಿಸೀಜನವನುಚಿತವಲಿ ॥ ೧೬

ಕಟದೇವನ ಪರಾಜಯ.

ಅವನ ಕಾಣಿಸಿ ಕೊಂಡು ರಾಜ್ಯದೊ
ಳವನ ನಿಲಿಸಿ ತದೀಯಸೇನಾ
ನಿವಹಸಹಿತಲ್ಲಿಂದ ನಡೆದನು ಮುಂದೆ ಪಥದಲಿ ।

ಅವನಿಪತಿ ಕಟದೇವನೆಂಬನ
ನವಗಡಿಸಿ ಸರ್ವಸ್ವವನು ಕೊಂ
ಡವನ ಬಲಸಹಿತಾ ದ್ಯುಮಂತನ ರಣದೊಳೋಡಿಸಿದ[1] ॥ ೧೭

ಪ್ರತಿವಿಂಧ್ಯಾದಿಗಳನ್ನು ಗೆಲ್ಲುವಿಕೆ.

ಆತನನು ಗೆಲಿದನು ಸುನಾಭನ
ನೀತಿಗೆಡಿಸಿ ತದೀಯಸೇನಾ
ವ್ರಾತಸಹಿತಲ್ಲಿಂದ ಪ್ರತಿವಿಂಧ್ಯಕನನಪ್ಪಳಿಸಿ ।
ಆತನರ್ಥವ ಕೊಂಡು ತತ್ಪ್ರಾ
ಗ್ಜ್ಯೋತಿಷಕೆ ಧಾಟಿಟ್ಟನಲ್ಲಿ ಮ
ಹಾತಿಬಲನವನೊಡನೆ ಬಲುಹಾಯ್ತರ್ಜುನನ ಸಮರ ॥ ೧೮

ಅರ್ಜುನ ಭಗದತ್ತರ ಯುದ್ಧ.

ಚೀನಕರ ಬೋಟಕಿ[2] ಕಿರಾತರ
ನೂನಬಲಸಹಿತೀಮಹೀಸುತ
ನೇನನೆಂಬೆನು ಕಾದಿದನು ಭಗದತ್ತನತಿಬಲನು ।
ಈನರನ ಶರಜಾಲವಿದು ಕ
ಲ್ಪಾನಲನ ಕಾಲಾಟವಿದಱೊಡ
ನಾನಲಿಂದ್ರಾದ್ಯರಿಗೆ ಸುಲಭವೆ ರಾಯ ಕೇಳೆಂದ ॥ ೧೯

ಮುಱಿಯದಾಬಲವಾತನುಱುಬೆಗೆ
ಹರಿಯದೀಬಲವುಭಯಬಲದಲಿ
ಕುಱಿದಱಿಯ ಕುಮ್ಮಱಿಯ ಕಡಿತಕೆ ಕಾಣೆನವಧಿಗಳ ।
ಅಱಿಯದೀತನ ದುರ್ಗವೀಬಲ
ದಿಱಿವುಗಳ ಬೇಳಂಬವನು ಬೇ
ಸರದೆ ಕಾದಿದನೆಂಟುದಿನ ಭಗದತ್ತನೀತನಲಿ ॥ ೨೦

1 ದ್ಯುಮತ್ಸೇನಕನ ಝೋಂಪಿಸಿದ, ಚ. 2 ಭೋಟಕ, ಕ, ಖ.

ಭಗದತ್ತನು ಅರ್ಜುನನೆಂದು ತಿಳಿದು ಸನ್ಮಾನಿಸುವಿಕೆ.

ಆವನೈ ನೀನಧಿಕನತಿಸಂ
ಭಾವಿತನು ಹೇಳೆನೆ ಯುಧಿಷ್ಠಿರ
ದೇವನನುಜ ಕಣಾ ಧನಂಜಯನೆನಲು ಮಿಗೆ ಮೆಚ್ಚಿ |
ನಾವು ನಿಮ್ಮಯ್ಯಂಗೆ ಸಖರಿಂ
ದಾವು ನಿನ್ನವರೇನು ಬೇಹುದು
ನೀವೆಮಗೆ ಕಡುಪ್ರಸನ್ನರೆನುತಲೆ ಕಂಡನರ್ಜುನನ || ೨೧

ಆದರಿನ್ನೇನಮರ[1] ಪತಿಯೋ
ಪಾದಿ ನೀವೆಮ್ಮಣ್ಣದೇವನ
ಮೇದಿನಿಯ ಸಾಮ್ರಾಜ್ಯಪದವಿಯ ರಾಜಸೂಯವನು |
ಆದರಿಸಿ ಸಾಕೆನಲು ಗಜಹಯ
ವಾದಿಯಾದ ಸಮಸ್ತವಸ್ತುವ
ನೈದೆ ಕೊಟ್ಟನು ಫಲುಗುಣಂಗೆ ಸುಮಿತ್ರಭಾವದಲಿ || ೨೨

ಭಗದತ್ತನಿಂದ ಅರ್ಜುನನಿಗೆ ಆದ ಮರ್ಯಾದೆ

ಬಂದುತಿಂಗಳು ಹಲವು ಮನ್ನಣೆ
ಯಿಂದ ಮನ್ನಿಸಿ ತನ್ನ ಸೇನಾ
ವೃಂದವನು ಕಳುಹಿದನು ಬಳಿಯಲಿ ನರನ ಸತ್ಕರಿಸಿ[2] |
ಮುಂದೆ ನಡೆದನು ರಾಮಗಿರಿಯಲಿ
ನಿಂದು ಕಪ್ಪವ ಕೊಂಡು ತೆರಳಿಯ
ಮುಂದಣೀಶಾನ್ಯದಲಿ ಹೊಕ್ಕನು ಭವನ ಪರ್ವತವ || ೨೩

ಪರ್ವತವಾಸಿಗಳನ್ನು ಜಯಿಸುವಿಕೆ.

ಆಗಿರೀಂದ್ರನಿವಾಸಿಗಳ ಸರಿ
ಭಾಗಧನವನು ಕೊಂಡು ಬಟ್ಟಿಕ ಮ
ಹಾಗಜಾಶ್ವವನೆಯ್ದೆ ಕೊಂಡನು ಮುಂದೆ ದಂಡೆತ್ತಿ |

1 ರಮಣೆಯ ದಿವಿಜ, ಚ.

2 ಹೇಳಿದನು ಬಳಿಯಲಿ ಕಳುಹಿದನು ನರನ, ಚ.

ಆಗಯಾಳರ ಗಾವಿಲರ ನಿ
ಭಾರ್ಗಧೇಯರ ಮಾಡಿ ಯುತ್ತರ
ಭಾಗದಲಿ ತಿರುಗಿತ್ತು ಪಾಳಯವರಸ ಕೇಳೆಂದ ॥ ೨೪

ವನಚರರನ್ನು ಮತ್ತು ದೈತ್ಯರನ್ನು ಜಯಿಸುವಿಕೆ

ಗಿರಿಯು ತಪ್ಪಲ ವನಚರರ ಸಂ
ಹರಿಸಿ ಮುಂದೆ ಬೃಹಂತಕನ ಕಾ
ತರಿಸಿ ಕಾಣಿಸಿಕೊಂಡು ಸೇನಾಬಿಂದುನಗರಿಯಲಿ ।
ಇರವ ಮಾಡಿ ಸುದಾಮದೈತ್ಯರ
ನುಱೆ ವಿಭಾಡಿಸಿ ಪಾರ್ವತೇಯರ
ಸಿರಿಯ ಗೊಂಡು ಕುಲಾಲಕರ ಕೌರವರ [1] ಭಂಗಿಸಿದ ॥ ೨೫

ಕಾಶ್ಮೀರಾದಿಗಳನ್ನು ಜಯಿಸುವಿಕೆ.

ಮುಂದೆ ದಸ್ಯುಗಳೇಳುವನು ಕ್ಷಣ
ದಿಂದ ಕಾಶ್ಮೀರಕನ ಸಾಧಿಸಿ
ಮುಂದೆ ದಶಮಂಡಲದ ಲೋಹಿತನನು ವಿಭಾಡಿಸಿದ ।
ತಂದ ಕಪ್ಪದಲಾತ್ರಿಗರ್ತರ
ನಂದು ಪದುಳಿಸಿ ಗರುವಿಕರನಾ
ಟಂದು ಕೊಂಕಣಕಾಭಿಚಾರಕರೂಪಕರ ಗೆಲಿದ ॥ ೨೬

ಸಿಂಹನಗರಿಯ ಗಮನ

ಧಾಟಿಯಿಟ್ಟನು ರೋಚಮಾನನ
ಮೇಲೆ ಕಪ್ಪವ ಕೊಂಡು ಬಿಟ್ಟುದು
ಪಾಳಯವು ಚಿತ್ರಾಯುಧನ ವರಸಿಂಹನಗರಿಯಲಿ ।
ಮೇಲೆ ವಂಗರ ಮುಱಿದು ಭರದಿವ [2]
ರಾಳ [3] ಕರ್ಪರಪೂಣಯವನವಿ
ಶಾಲಕಾಂಭೋಜಾದಿಗಳನಪ್ಪಳಿಸಿದನು ತಿರುಗಿ ॥ ೨೭

1 ಕುಲೂತರನುಪಾರವರ, ಡ. 2 ವರನೇ, ಚ. 3 ಪಾಳ, ಚ.

ಕಿರಾತಾದಿಗಳನ್ನು ಜಯಿಸುವಿಕೆ.

ಪಾರಸೀಕಕಿರಾತ [1] ಬರ್ಬರ
ಪಾರಿಯಾತ್ರರ ಮುಱಿದು ಸರ್ವಾಪ
ಹಾರವನು ಮಾಡಿದನು ಮ್ಲೇಚ್ಛಸಹಸ್ರಕೋಟಿಗಳ |
ಕ್ಷಾರಕರ ಹೂಣಕರ [2] ಡೊಕ್ಕರ
ಪಾರಕರ ಖುರಸಾಣಭೂಪರೊ
ಳಾರುಭಟೆಯಲಿ ಕಾದಿ ಕೊಂಡನು ಸಕಲವಸ್ತುಗಳ || ೨೮

ಹಿಮಾಲಯದಲ್ಲಿದ್ದ ಜನರನ್ನು ಜಯಿಸುವಿಕೆ.

ಬೆದಱಿಸಿದನಾಹಿಮಗಿರಿಯ ಪಾ
ರ್ಶ್ವದ ಕಿರಾತರ ಮುಂದೆ ವಾಯು
ವ್ಯದಲಿ ಶೋಧಿಸಿ ತಿರುಗಿದನು ಹಿಮಗಿರಿಯ ಕಕ್ಷದಲಿ |
ಹುದಿದ ನಾನಾದ್ರೋಣಿಗಳ ಮ
ಧ್ಯದ ಕಿರಾತಪುಳಿಂದನಿಚಯವ
ಸದೆದು ಹತ್ತಿದರಗ್ರಶಿಖರಕೆ ಪಾರ್ವತೀಪಿತನ || ೨೯

ಎರಡುಸಾವಿರಯೋಜನವು ಹಿಮ
ಗಿರಿಯ ಬಹಳೋತ್ಸೇಧ ಶಿಖರಕೆ
ಸರಿಸದಲಿ ಹತ್ತಿದುದು ಪಾಳಯವೇನನುಸುರುವೆನು ||
ಕರಿತುರಗವರರಥಪದಾತಿಗೆ
ಪರಿಗಣನೆ ಯೆಲ್ಲಿಯದು ಹಿಮಗಿರಿ
ಯೆರಡುಸಾವಿರವಗಲ ತೀವಿತು ಭೂಪ ಕೇಳೆಂದ || ೩೦

ಗಿರಿಯ ಕೋಣೆಯ ಕುಹರಗುಹೆಗಳ
ಗರುವರುಂಟೆಂದಾಪುಳಿಂದರ
ನೊರಸಿ ಕಾಣಿಸಿಕೊಂಡನಲ್ಲಿಯ ಸಕಲವಸ್ತುಗಳ |
ಗಿರಿಯನಿಳಿದುದು ನಡೆದು ಬಲ ಕಿಂ

---

1 ವರಾಳಕಬರ್ಬರ, ಜ. 2 ಹವಣಕರ, ಕ.

ಪುರುಷಖಂಡದ ಬಹಳನದಿಗಳ
ಲೆರಡು ತಡಿಯಲಿ ತಳೆತು ಬಿಟ್ಟುದು ವನವನಂಗಳಲಿ ॥ ೩೧

ಅದು ಗಣನೆಗೊಂಬತ್ತುಸಾವಿರ
ವದಱೊಳದ್ದರು ಯಕ್ಷಕಿನ್ನರ
ಸುದತಿಯರು ಕಿಂಪುರುಷರತಿರಾಗಿಗಳು ಸುಖಮಯರು ।
ಇವಱ ಘಲ್ಲಣೆಗಾನಲಾಪರೆ [1]
ಬೆದಱಿತೀಜನವೆಳಕಿ ಕಿತ್ತಿತು [2]
ಸುದತಿಯರನಾಮಂಡಲಕೆ ಯುಂಟಾದವಸ್ತುಗಳ ॥ ೩೨

ಅಲ್ಲಿ ಕೆಲಕಡೆಗಳಲಿ ಗಿರಿಗುಹೆ
ಯಲ್ಲಿ ನೆರೆದ ಕಿರಾತವರ್ಗವ
ಚೆಲ್ಲಬಡಿದಪಹರಿಸಿದನು ಬಹುವಿಧ ಮಹಾಧನವ ।
ಮೆಲ್ಲಮೆಲ್ಲನೆ ಹೇಮಕೂಟದ
ಕಲ್ಲನಡರಿದನಾಮಹಾದ್ರಿಗ
ಳಲ್ಲಿ [3] ಹಿಮಶೈಲದ ಮಹೋನ್ನತಿ ಬಹಳವಿಸ್ತಾರ ॥ ೩೩

ಅದರಿತೀಬಲವಿದಱ ಬೊಬ್ಬೆಯ
ಗದಬಡೆಗೆ ಪದಘಟ್ಟಣೆಗೆ ಹುಡಿ
ಪುಡಿಯಲಾಗಲು ಕೋಟೆ ಕೋಳಾಹಳದ ಬೊಬ್ಬೆಯಲಿ ।
ನಡೆದು ಬಿಟ್ಟುದು ಗಿರಿಯ ತುದಿಯಲಿ
ತುಡುಕಿದುದು ನಾನಾದಿಗಂತದ
ತಡಿಯನದ್ಭುತವಾದ್ಯಗಜಹಯರಥದ ನಿರ್ಘೋಷ ॥ ೩೪

ಹೇಮಕೂಟದ ಗಂಧರ್ವಾದಿಗಳನ್ನು ಜಯಿಸುವಿಕೆ.

ಹೇಮಕೂಟದ ಗಿರಿಯ ಗಂಧ
ರ್ವಾಮರರ ಝೋಂಪಿಸಿದನವರು
ದ್ದಾಮವಸ್ತುವ ಕೊಂಡನಿೞಿದನು ಬೞಿಕ ಪರ್ವತವ ।

1 ಲೇನಾ, 2 ಫುದು ತದೀಯಜನಂಗಳೆತ್ತಿದು, ಕ. 3 ಳೆಲ್ಲ, ಚ

ಆಮಹಾಹರಿವರ್ಷದಲ್ಲಿಯು
ಸೀಮೆ ಯೋಜನನವಸಹಸ್ರ ವಿ
ರಾಮವದಱೊಳಗಿಲ್ಲ ವಿವರಿಸಲಱಿಯೆ ನಾನೆಂದ ॥ ೩೫

ಉತ್ತರೋತ್ತರದೇವಭೂಮಿಗ
ಳತ್ತಣವರೀದಳನಿಚಯು ತಾ
ನೆತ್ತ ಭೂರಿಧ್ವನಿಯನೀಗಜಬಜವನೀಜನವ ।
ಎತ್ತಲೆಂದಱಿಯರು ವಿನೋದಕೆ
ತೆತ್ತರಲ್ಲಿಯು ಪಕ್ಷಿಮೃಗಲಸ
ದುತ್ತಮಾಂಗನೆಯರನು ಮನ್ನಿಸಿ ಕೊಂಡು ಫಲುಗುಣಗೆ ॥ ೩೬

ಎರಡುಕಡೆಯಂಬುಧಿಯ ಪಾರ್ಶ್ವದ
ದುರುಳರನು ಧಟ್ಟಿಸಿ ತದೀಯರ
ವೆರಸಿ ಬಡಗಲು ನಡೆದನಲ್ಲಿಯು ನಿಷಧಪರ್ವತಕೆ ।
ಎರಡುಸಾವಿರಯೋಜನದ ತುದಿ
ವರೆಗೆ ಹತ್ತಿತು ಬಿಟ್ಟುದಾಗಿರಿ
ಬಿರಿಯೆ ಸೂೞಯ್ಸಿದುವು ನಿಸ್ಸಾಳಕೋಟಿಗಳು ॥ ೩೭

ನಿಷಧಾಚಲವಾಸಿಗಳಾದ ದೈತ್ಯರನ್ನು ಜಯಿಸುವಿಕೆ.

ಮೇಲೆ ನಿಷಧಾಚಲದ ಸುತ್ತಲು
ಧಾಟಿ ಹರಿದುದು ದೆಸೆದೆಸೆಗೆ ದೈ
ತ್ಯಾಳಿ ಹೆಚ್ಚಿದ ದುಷ್ಟದಾನವಮಂಡಲೇಶ್ವರರ ।
ಶೈಲಶಿಖರದೊಳುಳ್ಳ ಧೊರೆಗಳ
ಕಾಳಗೊಳ ಬೞಿಕುತ್ತರದಿ ಕಾ
ಲಾಳು ಹೊಕ್ಕುದು ಹೊಯ್ಲು ಕಟ್ಟಿತು ಕೂಡೆ ಸೂಱೆಗಳ ॥ ೩೮

ಗಿರಿಯ ಶಿಖರದ ಮೇಲ್ಕಡೆಯ ನಾ
ಚರಿಸಿ ನಿಷಧಾಚಲವನಿಳಿದುದು
ನರನ ಪಾಳೆಯ ಬಿಟ್ಟುದಾಗಲಿಳಾವೃತದ ಮೇಲೆ ।

ಅರಸ ಕೇಳೊಂಬತ್ತುಸಾವಿರ
ಪರಿಗಣಿತಯೋಜನದ ನೆಲೆ ಸುರ
ಗಿರಿಯ ಸುತ್ತಣದೇಶವತಿರಮಣೀಯತರವೆಂದ ॥ ೩೯

ಚೂಣಿಗಾನುವರಿಲ್ಲ ಪಾರ್ಥನ
ಬಾಣಕಿದಿರಾರುಂಟು ವಾದ್ಯ
ಶ್ರೇಣಿ ಚಾತುರ್ಬಲದ ಘಲ್ಲಣೆಗಿಲ್ಲ ಗರ್ವಿತರು ।
ಹೂಣೆ ಹೊಕ್ಕುದು ಕನಕಶೈಲ
ದ್ರೋಣಿಗಳ ದುರ್ಬಲಸುರೌಘವ
ನಾಣೆಗಂಜಿಸಿ ಕಳದು ಕೊಂಡನು ಸಾರವಸ್ತುಗಳ ॥ ೪೦

ಗಂಧಮಾದನದ ಯಕ್ಷವಿದ್ಯಾಧರರನ್ನು ಗೆಲ್ಲುವಿಕೆ.

ಹರಿದು ಹತ್ತಿತು ಗಂಧಮಾದನ
ಗಿರಿಯ ಸುತ್ತಣ ಯಕ್ಷವಿದ್ಯಾ
ಧರರನಂಜಿಸಿ ಕೊಂಡನಲ್ಲಿಯ ಸಾರವಸ್ತುಗಳ ।

ಜಂಬೂವೃಕ್ಷದರ್ಶನ.

ಗಿರಿಯನಿಳಿದನು ಜಂಬುನೇರಿಲ
ಮರನ ಕಂಡನು ಗಗನಚುಂಬಿತ
ವೆರಡುಸಾವಿರಯೋಜನಾಂತರದೊಳತಿವಿಳಾಸದಲಿ ॥ ೪೧

ಅದಱ ಫಲ ಹೇರಾನೆಗಳ ತೋ
ಱದಲಿಹುವು ಗಿರಿಸಾನುಶಿಲೆಗಳ
ಹೊದಱಿನಲಿ ಬಿದ್ದೊಡೆದು ಹೊಳೆಯಾದುದು ಮಹಾರಸದ ।
ಅದು ಸುಧಾಮಯವಾಯ್ತು ಜಂಬೂ
ನದಿಜಲಸ್ಪರ್ಶದಲಿ ಜಾಂಬೂ
ನದಸುವರ್ಣವೆಯಾದುದಾನದಿಯೆರಡು ತಡಿವಿಡಿದು ॥ ೪೨

ಆರಸೋದಕಪಾನವೇ ಸಂ
ಸಾರಸಾಖ್ಯದ ಸಿದ್ಧಿ ಯಿತರಾ

ಹಾರವಿಂಧನತಂಡುಲಾಗ್ನಿಕ್ರಮವಿಧಾನವದು ।
ನಾರಿಯರು ಸಹಿತಲ್ಲಿ ಸಿದ್ಧರು
ಚಾರಣರು ರಮಣೀಯತೀರವಿ
ಹಾರಿಗಳು ಬಹುರತ್ನದಲಿ ಮನ್ನಿಸಿದರರ್ಜುನನ ॥ ೪೩

ಜಾಂಬೂನದನದಿಯ ತೀರದಲ್ಲಿರುವಿಕೆ.

ಕೇಳಿ ಸೊಗಸಿದ ವಸ್ತುವಿಗೆ ಕ
ಣ್ಣಾಲಿ ಬಿದ್ದಿನವಾಯ್ತುಲಾ ಸುರ
ಪಾಲಪದವಿದಱೊರೆಗೆ ಬಹುದೇ ತೀರವಾಸಿಗಳ ।
ಧಾಟಿದಟ್ಟಣೆಗಳನು ಮಾಣಿಸಿ
ಪಾಳಯವನುಪವನಸರೋವರ
ವೇಲೆಯಲಿ ಬಿಡಿಸಿದನು ಜಾಂಬೂನದಿಯ ತೀರದಲಿ ॥ ೪೪

ಇಳಾವೃತವರ್ಷಪ್ರವೇಶ.

ಲಲಿತದಿವ್ಯಾಭರಣರತ್ನಾ
ವಳಿಯನನುಕರಿಸಿದನು ಪಾಳೆಯ
ಸುಳಿದುದಮರಾಚಲದ ಕೇಸರಶಿಖರಗಳ ಕಳದು ।
ಹೊಳಹೊಳದು ಮೇರುವಿನ ಸುತ್ತಣ
ವಳಯದರ್ಥವನಾಕರಿಸಿ ಕೈ
ವಳಸಿ ಬಿಟ್ಟನು ಹೊಕ್ಕಿಳಾವೃತವರ್ಷಸೀಮೆಯಲಿ ॥ ೪೫

ಸೇನೆ ಪಡುವಲು ತಿರುಗಿ ಮರ್ಯಾ
ದಾನುಪೂರ್ವಿಯ ಗಂಧಮಾದನ
ಸಾನುವನು ವೆಂಠಣಿಸಿ ಪಡರಿತು ಚೂಣಿ ಬಿಂಕದಲಿ ।
ಆನಗೇಂದ್ರವನಿಳಿದು ಪಡುವಣ
ಕಾನನಂಗಳ ಕೇತುಮಾಲದ ನ
ದಿನದಂಗಳ ಬಳಸಿ ಹೊಯ್ದುವು ಗುಡಿಗಳರ್ಜುನನ [1] ೪೬

1 ಕಾನನಂಗಳ ಕಳಿದು ಬಿಟ್ಟುದು ಸೇನೆ ಬಳಸಿನಲಿ, ಚ.

ಅಲ್ಲಿ ಮಹಾಧನಸಂಗ್ರಹ.

ಅಲ್ಲಿ ಸಾಗರತೀರಪರ್ಯಂ
ತಲ್ಲಿ ಮಣಿಮಯವೆಲ್ಲಿ ಗಜಹಯ
ವೆಲ್ಲಿ ಸುದತಿಯರೆಲ್ಲಿ ಬಹುಧನವೆಲ್ಲಿ ರವಣೀಯ ।
ಅಲ್ಲಿಗಲ್ಲಿಗೆ ನಡೆದು ಸಾಧಿಸಿ
ಕೆಲ್ಲ ಕುಹರದ ಕೋಣೆಬಾಗುಗ
ಳೆಲ್ಲವನು ಹೊಕ್ಕರಿಸಿ ತೆಗೆಳಚಿದನು ಮಹಾಧನವ ॥ ೪೭

ಮಂದರಾದ್ರಿಯ ದರ್ಶನ.

ಎಡಗಡೆಯೊಳೊಂಬತ್ತು ಸಾವಿರ
ನಡುನೆಲನನಾಕರಿಸಿ ಮೂಡಣ
ಕಡೆಗೆ ತಿರುಗಿತು ಗಂಧಮಾದನಗಿರಿಯ ನೇಱಿತದು ।
ನಡೆದಿಳಾವೃತದೊಳಗೆ ಬಿಟ್ಟುದು
ಪಡೆ ಸುರಾಬ್ಧಿಯನುಱುಹಿ ಬಲದಲಿ
ನಡೆನಡೆಯ ದೂರದಲಿ ಕಂಡರು ಮಂದರಾಚಲವ ॥ ೪೮

ಅಲ್ಲಿದ್ದ ರಾಜರನ್ನು ಜಯಿಸುವಿಕೆ.

ಇದುವೆ ಕಡೆಗೋಲಾಯ್ತು ಕಡೆವಂ
ದುದಧಿಯನು ತಾನಿದು ಮಹಾಗಿರಿ
ಯಿದಱ ಬಿಂಕವ ನೋಡಬೇಕೆಂದರ್ಜುನನ ಸೇನೆ ।
ಒದಱಿ ಹತ್ತಿತು ನಡುವಣರೆಜೆ
ಟ್ಟದಲಿ ದುರ್ಗಂಗಳಲಿ ನೃಪರಿ
ದ್ದುದು ಮಹಾಹವವಾಯ್ತು ಪಾರ್ಥನ ಚೂಣಿಯವರೊಡನೆ ॥ ೪೯

ಇಱುಹಿದರು ಚೂಣಿಯನು ಮುಂದರೆ
ನೆಲೆಯ ಭಟರವುಕಿದರು ಬಾರಿಯ
ತಲೆವರಿಗೆಗಳಲೊತ್ತಿದರು ಹೊಗಿಸಿದರು ದುರ್ಗವನು ।

ಕಲುಮಡೆಯ ಕೋಳಾಹಳಕ್ಕವೆ
ರಳುಕದಿಱಿದರು ಸುರಗಿಯಲಿ ತೆನೆ
ವಳಿಯ ಹಿಡಿದರು ಹೊಯ್ದು ಕೇಶಾಕೇಶಿಯುದ್ಧದಲಿ ॥ ೫೦

ಶಕರು ಖದ್ಯೋತಪ್ರತಾಪರು
ವಿಕಳಜಂಘರು ದೀರ್ಘಮಯವೇ
ಣಿಕರು ಪಶುಪಾಲಕಪುಳಿಂದರು ಟಂಕಣಾಹ್ವಯರು ।
ಸಕಲದಸ್ಯುಗಳ್ಕಸೆ ಸೋತುದು
ವಿಕಳಬಲವೊಪ್ಪಿಸಿತು ಸರ್ವ
ಸ್ವಕವ ಸಂಧಾನದಲಿ ನಿಂದರು ತಮ್ಮ ನಿಳಯದಲಿ ॥ ೫೧

ಶೋಧಿಸಿದನಾಗಿರಿಯನಾಚೆಯ
ಹಾದಿಯಲಿ ಹೊಱವಂಟು ಬರೆ ಮೆರಿ
ಯಾದೆಗಿಕ್ಕದ ಬೆಟ್ಟವಿದ್ದುದು ಮಾಲ್ಯವಂತಗಿರಿ ।
ಭೇದಿಸಿದನದಱೊಳಗುಹೊಱಗಿನೊ
ಳಾದ ವಸ್ತುವ ಕೊಂಡು ತಚ್ಛಿಖ
ಲೋದರವನೇಱಿಳಿದು ಭದ್ರಾಶ್ವಕ್ಕೆ ನಡೆತಂದ ॥ ೫೨

ಅದು ಮಹಾರಮಣೀಯತರವಂ
ತದಱೊಳಿದ್ದುದು ಶುದ್ಧಭೋಗಾ
ಸ್ಪದರು ರಕ್ಷೋಯಕ್ಷಗಂಧರ್ವಾಪ್ಸರೋನಿಕರ ।
ಕುದುರೆಗಜರಥಪತ್ತಿನಿರ್ಘೋ
ಷದಲಿ ಬೆಬ್ಬಳಿಯಾಯ್ತು ಬೇಳಂ
ಬದ ವಿಘಾತಿಗೆ ತೆತ್ತುದಗಣಿತವಾದ ವಸ್ತುಗಳ ॥ ೫೩

ದೊರಕಿತಲ್ಲಿಯಪೂರ್ವವಸ್ತೂ
ತ್ಕರ ಸಮುದ್ರಾನೂಪ[1] ಪರಿಯಂ
ತರ ನಡೆವನೊಂಬತ್ತುಸಾವಿರಯೋಜನಾಂತರವ ।

---

1 ದ್ರದ್ವೀಪ, ಚ.

ತಿರುಗಿದನು ಭದ್ರಾಶ್ವಕವನಾ
ಕರಿಸಿ ಬಡಗಲು ನಡೆವರಲ್ಲಿಯು
ಗಿರಿಯು ಕಂಡರು ಹತ್ತಿದರು ಸರಿಸದಲಿ ಬೊಬ್ಬಿಡುತ ॥ ೫೪

ನೀಲಗಿರಿಯುಗ್ರದಲಿ ಬಿಟ್ಟರು
ಪಾಳೆಯವು ಬೊಬ್ಬೆಯಲಿ ದಿಕ್ಕಿನ
ಮೂಲೆ ಬಿರಿದುದು ಜಱಿದುವದ್ರಿಗಳೇನನುಸುಱುವೆನು ।
ಮೇಲುದುರ್ಗದ ಸಂದಿಗೊಂದಿಯು
ಲಾಳು ಹರಿದುದು ಸೂಱೆಗೊಂಡು ವಿ
ಶಾಲವಸ್ತುವ ತಂದರಲ್ಲಿದ್ದರಸುಗಳ ಗೆಲಿದು ॥ ೫೫

ಎರಡುಸಾವಿರದುದ್ದವದು ಮು
ತ್ತೆರಡು ಸಾವಿರದಗಲವದನಾ
ಕರಿಸಿ ರಮ್ಯಕಭೂಮಿಗಿಳಿದರು ಹೊಕ್ಕರಾನೆಲನ ।
ಅರಸ ಕೇಳಲ್ಲಲ್ಲಿ ಸುಮನೋ
ಹರದ ವಸ್ತುವ ಕೊಂಡು ನವಸಾ
ವಿರವನಗಲಕೆ ಸುತ್ತಿ ಬಂದರು ಗೆಲಿದು ಗರ್ವಿತರ ॥ ೫೬

ಅರಸ ಕೇಳಲ್ಲಿಂದ ಬಡಗಲು
ಹರಿದು ಬಿಟ್ಟರು ಹತ್ತಿದರು ಬೇ
ಸರದೆ ಕಲುದರಿಗಳಲಿ ಬಹಳಶ್ವೇತಪರ್ವತವ ।
ಗಿರಿಯ ತುದಿಗಳ ತೋಟದಲಿ ಗ
ಹ್ವರದ ಕೊಳ್ಳದ ಕೋಹಿನಲಿ ಹೊ
ಕ್ಕಱಿದು ಶೋಧಿಸಿ ಕೊಂಡರಲ್ಲಿಯು ಸಕಲವಸ್ತುಗಳ ॥ ೫೭

ಇಳಿದರಾಗಿರಿಯನು ಹಿರಣ್ಮಯ
ದೊಳಗೆ ಬಿಟ್ಟರು ಪಾಳೆಯವ ತ
ದ್ವಲಯ ಮಿಗಿಲೊಂಬತ್ತುಸಾವಿರ ಯೋಜನಾಂತರವ ।

ಬಳಸಿ ಬಂದರು ವಿಮಳಸಾಧಾ
ವಳಿಯು ನೆಲೆಯುಪ್ಪರಿಗೆಗಳ ವರ
ಲಲನೆಯರು ಕಂಡೀತನನು ಹೊಗಳಿದರು ತವುತವುಗೆ ॥ ೫೮

ಈತ ಭಾರತವರುಷಪತಿಯನು
ಜಾತ ಗಡ ತತ್ಕರ್ಮಭೂಮಿಯೊ
ಳೀತನಧಿಪತಿ ಗೆಲಿದನಿತ್ತಲು ದೇವಭೂಮಿಪರ ।
ಈತ ಗೌರೀಸುತನ ಪೋಲ್ ಪುರು
ಹೂತತನುಜನ ಪೋಲು ಭುವನ
ಖ್ಯಾತನೆಂದಾಸ್ತ್ರೀಕಟಕ ಕೊಂಡಾಡಿತರ್ಜುನನ ॥ ೫೯

ತನತನಗೆ ತರುಣಿಯರು ಹೂವಿನ
ತನಿವಣೆಯ ಕಳಿದರು ಕನತ್ಕಾಂ
ಚನವಿಭೂಷಣರತ್ನಚಯಪೂರಿತದ ಪೆಟ್ಟಿಗೆಯ ।
ವನಿತೆಯರನಾದೇಶದಲಿ ಮಿ
ಟೆನಿಪುದನು ಮೃಗಪಕ್ಷಿಕೃಷ್ಣಾ
ಜಿನವನಂತವನಿತ್ತು ಸತ್ಕರಿಸಿದರು ಫಲುಗುಣನ ॥ ೬೦

ಧಾರುಣೀಪತಿ ಕೇಳು ದಳ ನಡೆ
ದಾರಿ ಬಡಗಣ ಶೃಂಗಪರ್ವತ
ದೋರೆಯಲಿ ಧೊರೆಗಳನು ದಟ್ಟಿಸಿ ಸೆಳೆದು ಬಹುಧನವ ।
ಭಾರಣೆಯ ಮುಂಗುಡಿಯ ಕೊಳ್ಗ
ಳೋರಣಿಸಿ ತುದಿಗೇಱಿ ಸಿದ್ಧರ
ಚಾರಣರ ವಿದ್ಯಾಧರರ ಮುತ್ತಿದರು ಮನ್ನಿಸದೆ ॥ ೬೧

ಅರಸು ಮೋಹರ ಹತ್ತಿತಾಗಿರಿ
ಯೆರಡುಸಾವಿರದಗಲವದಱಲಿ
ತುಱುಗಿ ಬಿಟ್ಟುದು ಸೇನೆ ಸೂಳೈಸಿದುವು ನಿಸ್ಸಾಳ ।

ಬಿರಿದುದಾಗಿರಿ ಕೆಳಗಣುತ್ತರ
ಕುರುಗಳದೆ ಜರ್ಝರಿತವಾಯ್ತು
ಬ್ಬರಕೆ ಬಡಗಣಕಡಲು ಕದಡಿತು ತಳದ ತಾಯ್ಮಳಲ ॥ ೬೨

ನೆರೆದರಲ್ಲಿಯು ನೃಪರು ದೂತರ
ಹರಿಯಬಿಟ್ಟರು ಪಾರ್ಥನಿದ್ದೆಡೆ
ಗರಸ ಚಿತ್ತೈಸವರು ಬಂದರು ಕಂಡರರ್ಜುನನ ।
ಗಿರಿಯನಿಂಚೀಯದಿರಿತ್ತಲುತ್ತರ
ಕುರುಗಳಿಹ ಸಂಸ್ಥಾನವಿದು ಗೋ
ಚರಿಸಲರಿಯದು ನರರ ಕಾಲ್ದಳಿಗೆಂದರವರಂದು ॥ ೬೩

ಅಲ್ಲದಾಕ್ರಮಿಸಿದೊಡೆ ನಿನಗವ
ರಲ್ಲಿ ಕಾಣಿಕೆ ದೊರಕಲರಿಯದು
ಬಲ್ಲಿದವರುತ್ತರದ ಕುರುಗಳು ನಿಮ್ಮ ಬಾಂಧವರು ।
ಗೆಲ್ಲದಲಿ ಫಲವಿಲ್ಲ ಸಾಹಸ
ವಲ್ಲಿ ಮೆಱೆಯದು ಮರಳಿ ಮರ್ತ್ಯರಿ [1]
ಗಲ್ಲಿ ಸುಳಿವುದಸಾಧ್ಯವೆಂದರು [2] ಚರರು ಫಲುಗುಣಗೆ ॥ ೬೪

ಮಾಣಲದು ನಮಗವರು ಬಂಧು
ಶ್ರೇಣಿಗಳು ಗಡ ಹೋಗಲದು ಕ
ಟ್ಟಾಣೆಯಾವುದು ನಿಮ್ಮ ದೇಶದೊಳುಳ್ಳವಸ್ತುಗಳ ।
ವಾಣಿಯವ ಮಾಡದೆ ಸುಯಜ್ಞದ
ಕಾಣಿಕೆಯನೀವುದು ಯುಧಿಷ್ಠಿರ
ನಾಣೆ ನಿಮಗೆನೆ ತಂದು ಕೊಟ್ಟರು ಸಕಲವಸ್ತುಗಳ ॥ ೬೫

---

1 ಮೆಱೆಯದು ಮರ್ತ್ಯದೇಹದೊ, ಚ.

2 ಇಲ್ಲಿ ಸುಳಿವುದು ಭಾರವೆಂದರು, ಚ.

ತಿರುಗಿತಲ್ಲಿಂದಿತ್ತ ಪಾಳಯ
ಮುಱಿದು ಬಿಟ್ಟು ಹಿರಣ್ಮಯವನಾ
ದರಿಸಿ ರಮ್ಯಕದಿಂದಿಳಾವೃತದಿಂದ ದಕ್ಷಿಣಕೆ ।
ಭರದಿನೆಯ್ದಿತು ಹರಿವರುಷಕಿಂ
ಪುರುಷವನು ದಾಟಿತು ಹಿಮಾನ್ವಿತ
ಗಿರಿಯನೇಱಿದುದಿೞಿದು ಬಂದುದು ತೆಂಕಮುಖವಾಗಿ ॥ ೮೮

ಕಳುಹಿ ಕಳದನು ಹಿಂದೆ ಕೂಡಿದ
ಬಲವನವನಿಪರೆಲ್ಲ ಯಾಗ
ಸ್ಥಳಕೆ ಬಹುನೇಮದಲಿ ಹರಿದರು ನಿಜಪುರಂಗಳಿಗೆ ।
ನೆಲದ ವಲಯದ ವಸ್ತುವಿದನೆಂ
ತಳವಡಿಸಿದನೊ ಶಿವ ಯೆನುತ ಸುರ
ರುಲಿಯೆ ಹೊಕ್ಕನು ಪಾರ್ಥನಿಂದ್ರಪ್ರಸ್ಥಪುರವರವ ॥ ೮೯

ಮೂಱನೆಯ ಸಂಧಿ ಮುಗಿದುದು.

ನಾಲ್ಕನೆಯ ಸಂಧಿ.

ಸೂಚನೆ

ಯಾಗಸಿದ್ಧಿಗೆ ನಡೆದು ಪೂರ್ವವಿ
ಭಾಗದಲಿ ಭೂಮಿಪರ ಕೈಯ್ಯಲಿ
ಸಾಗರೋಪಮಧನವನಳವಡಿಸಿದನು [1] ಕಲಿಭೀಮ ॥

1 ಮೇಳಯಿಸಿ. ಪ್ರ, ಚ. ಡ.

ಭೀಮಸೇನನ ದಿಗ್ವಿಜಯ.

ಕೇಳು ಜನಮೇಜಯ ಧರಿತ್ರೀ
ಪಾಲ ಯಮನಂದನನ ಭಾಗ್ಯದ
ಹೋಲಿಕೆಗೆ ಬಹರುಂಟೆ ನಳನಹುಷಾದಿರಾಯರಲಿ ।
ಆಳು ನಡೆದುದು ಭೀಮಸೇನನ
ಧಾಟಿ ಯಿದೆಯೆನೆ ತೆತ್ತುದವನೀ
ಪಾಲಕರು ತಂತಮ್ಮ ನಿಜಪಿತ್ರಾನುರೂಪದಲಿ ॥ ೧

ನಡೆದು ಸಾಧಿಸಿ ರೋಚಮಾನನ
ಹಿಡಿದು ಬಿಟ್ಟನು ಸರ್ವವಿತ್ತವ
ನಡಕಿತನಿಲಜನಾಳು ಮುಂದಣಚೇದಿದೇಶದಲಿ ।
ಘುಡುಘುಡಿಸೆ ನಿಸ್ಸಾಳವೀಗಡ
ಬಡೆ ಯಿದೇನೆನೆ ಭೀಮಸೇನನ
ಪಡೆ ಯೆನಲು ಶಿಶುಪಾಲ ಬಂದನು ಕಂಡನುಚಿತದಲಿ ॥ ೨

ಏನು ಬಂದೆಯಪೂರ್ವವೆನೆ ಯಾ
ಗಾನುರಾಗವನಱುಪಲತಿ ಸು
ಮ್ಮಾನದಲಿ ಶಿಶುಪಾಲ ಹೇೞಿಸಿದನು ಮಹಾಧನವ ।
ಮಾನಿಸರ ಕಳುಹಿದೊಡೆ ಸಾಲದೆ
ನೀನದೇಕೆಂದುಚಿತದಲಿ ಸ
ನ್ಮಾನಿಸುತ ನಿಲಿಸಿದನು ತಿಂಗಳು ಪವನನಂದನನ ॥ ೩

ನಡೆದು ಮುಂದೆ ಕಳಿಂಗದೇಶದ
ಲಡಸಿ ಬಿಟ್ಟನು ಶ್ರೇಣಿಮಂತನ
ಹಿಡಿದು ಕಪ್ಪವ ಕೊಂಡು ಸದೆದನು ಕೋಸಲೇಶ್ವರನ ।
ಅಡಕಿತಲ್ಲಿಯು ಧನವಯೋಧ್ಯೆಯು
ಕಡೆಯ ಕೋಟೆಯ ಮುಱಿಯಲವನೆದೆ
ಯೊಡೆದು ದೀರ್ಘಪ್ರವರನಿತ್ತನು ಬೇಹವಸ್ತುಗಳ ॥ ೪

ಆಳು ನಡೆದುದು ಚರ್ೂಣಿಯಲಿ ಗೋ
ಪಾಲನೆಂಬನ ಮುಖಿಯೆ ತೆತ್ತುದು
ಹೇಳಲಳಿಯೆನು ಸಂಖ್ಯೆಯನು ಮುಂದಂತಪಾಲಕನ ।
ಜಾಳಿಸಿದನಾಕಾಶಿರಾಜನ [1]
ಧಾಟಿಯಲಿ ಕೊಂದನು ಸುಪಾರ್ಶ್ವಕನ
ಮೇಲೆ ನಡೆದನು ಗಯನ ಮತ್ಸ್ಯನ ಗೆಲಿದನಾಭೀಮ ॥ ೫

ನಡೆದು ಮುಂದೆ ವಿದೇಹನನು ಸದೆ
ಬಡಿದು ಮತ್ತೆ ಕಿರಾತಭಟರವ
ಗಡಿಸಿ ಕಾದಿತನಂತಬಲವದ ಕೇಳು ಮಾನಿಸರು ।
ಒಡೆಯರವದಿರ ಪಂಗಡವ ಹುಡಿ
ಹುಡಿಯ ಮಾಡಿ ನಿಷಾದವರ್ಗವ
ಕೆಡಹಿ ನಿಷಧನ ಹೊಯ್ದು ಸೆಳೆದನು ಸಕಲವಸ್ತುಗಳ ॥ ೬

ಮಲೆತು ಕಾದಿದ ದಂಡಧಾರನ
ಗೆಲಿದು ಮಗಧೇಶನ ಗಿರಿವ್ರಜ
ದೊಳಗೆ ಪಾಳೆಯ ಬಿಟ್ಟುದವನಿಧಿರಾಗಿ ನಡೆತಂದು ।
ದಟವ ಹೇಳಿದನಾತನಲ್ಲಿಂ
ದಿಟಿದು ಕರ್ಣನ ಮುಳಿದು ಕಪ್ಪವ
ಸೆಟೆದು ಕೊಂಡದ್ರಿಯಲಿ ಸದೆದನು ಬವಳವನಚರರ ॥ ೭

ಸೂಱೆ ಗೊಂಡಲ್ಲಿಂದ ನಡೆದನು
ಮೀಱ ಗಂಗಾಸಾಗರಕೆ ಕೈ
ಮೀಱಲಱಿಯದೆ ಸಂಧಿಗವನೀಶ್ವರರು ವಶವಾದ್ರು ।
ಹೇಱಿಸಿದನನುಪಮದ ವಸ್ತುವ
ನಾಱುಸಾವಿರಬಂಡಿಯಲಿ ನಡೆ
ದೇಱಿ ಹೊಯ್ದನು ವಾಸುದೇವನ ಪೌಂಡ್ರಕಾಹ್ವಯನ ॥ ೮

1 ಸೋಲಿಸಿದ ಕಾಶೀನೃಪಾಲನ, ಕ ಖ.

ಪುರವರವನಲ್ಲಿಂದ ಮೌಳ್ಯದ
ತೆರಳಿಕೆಯ ಮಾಡಿದನು ಮೊದಲು
ಹರಿದು ಮುರಿದು ಸಮುದ್ರಸೇನನ ಗರ್ವವನು ಬಲದಿ ।
ತೆರಳಿಯಲ್ಲಿಂದಿಂದ್ರಸೇನನ
ನೊರಸಿ ಭಂಡಾರವನು ಹೇರಿಸಿ
ಮರಳಿ ಮಂಗನನಪ್ಪಳಿಸಿದನು ಲುಬ್ಧಕರು ಸಹಿತ ॥ ೯

ಸಾರಲೋಹಿತನೆಂಬ ಸಾಗರ
ತೀರವಾಸಿಗಳೊಳಗೆ ಕುರುಪದವಿ
ಕಾರಿಜೋನೆಗಚೀನಬೋಟಕಬರ್ಬರಾದಿಗಳು [1] ।
ಓರೆಬಾಗಿಲ ಕುಱುವಕೊಳ್ಳದ
ಗೈರಿಕರನಪ್ಪಳಿಸಿ ಮಲೆಯ ವಿ
ಹಾರಿಗಳ ಸಂಹರಿಸಿ ಕೊಂಡನು ಸಕಲವಸ್ತುಗಳ ॥ ೧೦

ಧಾಟಿ ಹರಿದುದು ಪಂಚಗೌಳವ
ರಾಳವೊಡ್ಡಿಯನಾಂಧ್ರಜಾಳಾಂ
ದ್ರಾಳಿಗಳನಾಕರಿಸಿ ಹೊರಡಿಸಿದನು ಮಹಾಧನವ ।
ಮೇಲುದುರ್ಗದ ಪಾರ್ವತೀಯರಿ
ಗಾಳು ಹರಿದುದು ಸಂದಿಗೊಂದಿಯ
ಶೈಲಗುಹೆಗಳೊಳಱಸಿ ಹಿಡಿದನು ಬಹಳಧನಯುತರ ॥ ೧೧

ಅಱಸಿದನು ನಾವೆಗಳಲಬ್ಧಿಯ
ಕುಱುವದಲಿ ಕೊಬ್ಬಿದ ಧನಾಢ್ಯರ
ಮುಱಿದು ಮರಳಿಯೆ ಕೆಲಬಲದಲಾದ್ವೀಪಪಾಲಕರ ।
ಸೆಱೆವಿಡಿದು ತನಿಸೂಱೆಯಲಿ ಪಡೆ
ನೆಱೆ ದಣಿಯಲಾ ಮ್ಲೇಚ್ಛವರ್ಗವ
ನಿಱಿದು ಸಾಧಿಸಿ ತೆಗೆದನಗ್ಗದ ವಸ್ತುಸಂತತಿಯ ॥ ೧೨

---

1 ಬೋಟರನೂಪವಾಸಿಗಳ, ಡ. ರನುನಿವಾಸಿಗಳ, ಚ.

ಆಮಹಾಬೋಟಕಮಹಾಹ್ವಯ
ಧಾಮದಲಿ ದಸ್ಯುಗಳನತಿನಿ
ಸ್ಸೀಮಯವನಕರೂಷರನು ತಾಗಿದನು ವಹಿಲದಲಿ ।
ಹೇಮಮುಕ್ತಾರಜತ ಚಂದನ
ರಾಮಣೀಯಕವಸ್ತುನಿಚಯದ
ಸೀಮೆಗಳ ನಾವೆಣಿಸೆನಳವಡಿಸಿದನು ಕಲಿಭೀಮ ॥ ೧೩

ಮರಳ್ದನನಿಲಜನೀಮಹಾದ್ಭುತ
ತರದ ವಸ್ತುವನಾನಲಾಪುದೆ
ಧರಣಿ ಯೆನೆ ಸಂದಣಿಸಿದುವಸಂಖ್ಯಾತರಥನಿಚಯ ।
ಅರಸುಗಳು ಸಹಿತಾಮಹಾದಟ
ವರಸಿ ಬಂದನು ಭೀಮನಣ್ಣನ
ಚರಣಕೆಱಗಿದನರ್ಜುನನ ತಕ್ಕೈಸಿದನು ನಗುತ ॥ ೧೪

ನಾಲ್ಕನೆಯ ಸಂಧಿ ಮುಗಿದುದು.

ಐದನೆಯ ಸಂಧಿ.

ಸೂಚನೆ.

ನಡೆದು ವಿವಿಧದ್ವೀಪಪತಿಗಳ
ಜಡಿದು ಕಪ್ಪವ ಕೊಂಡು ತೆಂಕಣ
ಕಡಲ ವಳಯದ ನೃಪರ ಗೆಲಿದನು ವೀರಸಹದೇವ ॥

ಸಹದೇವನ ದಿಗ್ವಿಜಯ.

ಕೇಳು ಜನಮೇಜಯ ಧರಿತ್ರೀ
ಪಾಲ ಸಹದೇವನ ಸಗಾಡಿಕೆ
ಯಾಳುತನ ವಿವರಾರ ಹವಣಲ್ಲೆಂಬ ತೆಱನಾಯ್ತು ।

ಅನೇಕರಾಜರ ಜಯ ಮತ್ತು ಧನಸಂಗ್ರಹ.

ಆಳು ನಡೆದುದು ತೆಂಕಣವನೀ
ಪಾಲರೀತನ ಬಿಱುಸಿಗೀತನ
ಧಾಟಿಗೀತನ ದೆಸೆಗೆ ದೆಸೆಗೆಟ್ಟುದು ದಿಗಂತದಲಿ ॥ ೧

ಶೂರಸೇನನ ಸದೆದು ನೆಱೆ ಭಂ
ಡಾರವೆಲ್ಲವ ಕೊಂಡು ತೆಂಕಣ
ವೀರಮತ್ಸ್ಯರ ಗೆಲಿದು ಸರ್ವಸ್ವಾಪಹಾರದಲಿ ।
ಭೂರಿಬಲನಹ ದಂತವಕ್ತ್ರನ
ವಾರಣಾಶ್ವರಥಂಗಳನು ಕೊಂ
ಡಾರುಭಟೆಯಲಿ ಮುಂದೆ ನಡೆದನು ತೆಂಕಮುಖವಾಗಿ ॥ ೨

ಖಳನಿಶಾಚರ [1] ಕೋಟಿಗಳನರೆ
ಘಳಿಗೆಯೊಳಗಾಕ್ರಮಿಸಿದನು ಮಂ
ಡಳಿಕರೂರುಗಳ ಬಿಟ್ಟೋಡಿದರು ಕೊಳ್ಳಗರ ಕಾಲ್ದುಳಿಗೆ [2] ।
ಹೊಳತಡಿಯ ಗಿರಿದುರ್ಗವಿಪಿನ
ಸ್ಥಳದ ಧರಣಿಪರಿದಿರುವೆಂದ
ಗ್ಗಳಿಯ ಗಜರಥಹಯಸಹಿತ ತೆತ್ತರು ಸುವಸ್ತುಗಳ ॥ ೩

ಬಂದು ಕುಂತೀಭೋಜ ಮೊಮ್ಮನ
ಮಂದಿರದ ಸುಕ್ಷೇಮವಿಭವವ
ನಂದು ಕೇಳಿಯೆ ಕೊಟ್ಟನನುಪಮಸಾರವಸ್ತುಗಳ ।
ಮುಂದೆ ಚರ್ಮಣ್ವತಿಯ ಜಂಭಕ
ನಂದನನನಪ್ಪಳಿಸಿ ಗಜಹಯ
ವೃಂದವನು ಕೊಂಡೊಲಿದು ಬಿಟ್ಟನವಂತಿದೇಶದಲಿ ॥ ೪

---

[1] ಸಪಾದರ, ಡ. [2] ಖಳಿಕ ಮನ್ನೆಯರಾಂಪರೇ ಚತುರಂಗಪದಹತಿಗೆ, ಚ.

ತಱುಬಿದರ ವಿಂದಾನುವಿಂದರ
ಮುಱಿದು ಕಪ್ಪವ ಕೊಂಡು ಭೀಷ್ಮಕ
ನರಪತಿಯ ಗೆಲಿದಲ್ಲಿ ಮನ್ನಿಸಿಕೊಂಡನುಚಿತದಲಿ ।
ಬರಬರಲು ಕುಂತಳನೃಪನನಾ
ಕರಿಸಿ ಕಪ್ಪವ ಕೊಂಡು ಕಳತಿ
ತ್ರಿರಿಗಳಂಧ್ರಕರೆಂಬ ಬೇಡರ ರಣದೊಳೋಡಿಸಿದ ॥ ೫

ಉರವಣಿಸಿ ದಟಿ ತುಂಗಭದ್ರಾ
ವರನದಿಯನುತ್ತರಿಸಿ ಪಂಪಾ
ಸರದ ತಡಿಯಲಿ ಬಿಟ್ಟುದಾ ವಿರುಪಾಕ್ಷಸೀಮೆಯಲಿ ।
ಗಿರಿಚರರ ವನಚರರ ಬಿಂಕವ
ನೊರಸಿ ಕಿಷ್ಕಿಂಧಾದ್ರಿಯಲಿ ಸಂ
ಚರಿಸಿ ಬಿಟ್ಟುದು ಕಟಕಬಹುವಿಧವಾದ್ಯರಭಸದಲಿ ॥ ೬

ಕೇಳಿದನು ಕಿಷ್ಕಿಂಧಗಿರಿಯ ವಿ
ಶಾಲಶೃಂಗವನೇಱಿ ಘನನಿ
ಸ್ಸಾಳ ಮೊಱಗಿದರೊಡನೆ ಮೊಱಗಿತು ಗಿರಿಗುಹಾನಿಕರ ।
ಆಳಿದೆತ್ತಣದೆನುತ ಕಪಿವರ
ಜಾಲ ನೆರೆದುದು ಮುಱಿದು ತರುಶಾ
ಖಾಳಿಗಳ ಕೈದುಗಳ ಕೈಯ್ಯಲಿ ತಱುಬಿದರು ಬಲವ ॥ ೭

ಕವಿದುದೀಚತುರಂಗಬಲ ಸಂ
ತವಿಸಿ ಲಗ್ಗೆಯ ಮಾಡಿ ವಾನರ
ನಿವಹದಲಿ ಕಱಿದುದು ಶರಾಳಿಯ ಸುಭಟಮೇಘಚಯ ।
ತಿವಿದುವಂಬಿನ ಸೋನೆಗಳು ಕದೆ
ಸವಡಿ ಮರದಲಿ ಸದೆದು ಹೊಕ್ಕುದು
ರವಿಸುತನ ಸಂತತಿಸುಷೇಣನು ವೀರವೃಷಸೇನ ॥ ೮

ಧೊರೆಗೆ ಧೊರೆಯಿದಿರಾಗಿ ಕಾದಿತು
ತೆರಳದಿದು ದಿನವೇೞುಪರಿಯಂ
ತರ ವಿಘಾತಿಯೊಳೊದಗೆ ಮುಱಿದರುಭಯವಾನರರು |
ಅರಸ ನೀನಾರೆನೆ ಯುಧಿಷ್ಠಿರ
ನರಪತಿಯು ಕಥೆವೇೞೆ ಕೊಟ್ಟರು
ಪರವ ವಸ್ತುಪ್ರಚಯವನು ಮಾದ್ರೀಕುಮಾರಂಗೆ ॥ ೯

ಕಾವೇರಿಯ ಬಳಿ ಇರುವ ಮಾಹಿಷ್ಮತೀ ನಗರಪ್ರವೇಶ.

ತೆರಳೆತಲ್ಲಿಂ ಬೞಿಕ ತೆಂಕಣ
ನರಪತಿಗಳಾನುವರೆ ಸೇನೆಯ
ಖುರಪುಟಕೆ ನುಗ್ಗಾಯ್ತು ತೆತ್ತುದು [1] ಸಕಲವಸ್ತುಗಳ |
ಉರುವಣಿಸಿ ಬಲ ನಡೆದು ನದಿಗಳ
ನಱಿಸಿ ಕಾವೇರಿಯಲಿ ಬಿಟ್ಟುದು
ಹರಿದುದಲ್ಲಿಂ ಧಾೞಿ ಘನಮಾಹಿಷ್ಮತೀಪುರಕೆ ॥ ೧೦

ಧಾಟಿಯೆನಲಿದಿರಾಗಿ ಹೊಱವಂ
ಟಾಳು ಕಾದಿದುದಲ್ಲಿಗಧಿಪತಿ
ನೀಲನೆಂಬಾತನು ಮಹಾಹವವಾಯ್ತು ಚೂಣಿಯಲಿ |

ಅಲ್ಲಿ ಸಹದೇವನ ಸೈನ್ಯದಹನ.

ಹೇೞಲದ್ಭುತ ವುರಿದುದಗ್ನಿ
ಜ್ವಾಲೆಯಲಿ ಚತುರಂಗಬಲ ಹರ
ಭಾಳನಯನಕವಾಟ ತೆಗೆದಂತಾಯ್ತು ನಿಮಿಷದಲಿ ॥ ೧೧

ಉರಿಸಮುದ್ರದೊಳದ್ದದೋ ಮೋ
ಹರವು ತೆಗೆ ತೆಗೆ ಸುನ್ನಿಗಳ ಕಾ
ತರಸಲೀಯದಿರಾನೆ ಮುಱಿಯಲಿ ಹೊಕ್ಕು ಕುದುರೆಗಳು |

---

[1] ನುಗ್ಗಾಗಿ ತೆತ್ತರು, ಚ.

ಮುರಳಿಚಲಿ ತೇರುಗಳ ಸೂತರ
ಕರದ ವಾಘೆಯು ಸೆಳೆ ಪದಾತಿಯು
ತಿರುಗ ಹೊಯ್ ಹೊಯ್ಯೆನುತ ಮಿಗೆ ಗಜಬಿದನು ಸಹದೇವ ॥

ಸುಟ್ಟುದಕ್ಕೆ ಕಾರಣವನ್ನು ವೈಶಂಪಾಯನರು ಹೇಳಿದುದು.

ರಾಯದಚಿವೇಕುರಿದುದೇನಿದ
ಋಾಯತವು ಹೊಸತಾಯ್ತು ವೈಶಂ
ಪಾಯನನೆ ಹೇಳೆನಲು ನಗುತಿಂತೆಂದನಾಮುನಿಪ ।
ರಾಯ ಕೇಳೈ ಪೂರ್ವದಲಿ ಕಮ
ಲಾಯತಾಕ್ಷಿಯರುಂಟು ಹಲಬರು
ವಾಯುಸಖ ಪರದಾರಗಮನವ ಮೆಚ್ಚಿದನು ಬಳಿಕ ॥ ೧೩

ಪಾವಕ ದ್ವಿಜವೇಷದಲಿ ಬಂ
ದಾವಧುಗಳೊಡನಿರಲು ನಗರವ
ಕಾವವರು ಹಾದರವ ಹಿಡಿದರು ಹವ್ಯವಾಹನನ ।
ಕೋವಿದರ ಮುಂದಿಕ್ಕಿದರು ಧ
ರ್ಮಾವಲಂಬನಶಾಸ್ತ್ರಗಳನು
ಭಾವಿಸಲು ಭುಗಿಲೆಂದು ತೋಱಿದನಗ್ನಿ ನಿಜತನುವ ॥ ೧೪

ಧರಣಿಸುರರಲಿ ಸುಪ್ರಧಾನರು
ವೆರಸಿ ಬಂದಗ್ನಿಯ ಪದತ್ರಯ
ಕೆಱಗಿ ಕೋಪಸ್ತಂಭವನು ಮಾಡಿದರು ದೈನ್ಯದಲಿ ।
ಪುರದೊಳದುಮೊದಲಾಗಿ ಕಾಮಿನಿ
ಯರಿಗೆ ಹಾದರ ಸಲುವುದಿದು ವಿ
ಸ್ತರಣವೆಂದು ಕೃಶಾನು ನಂಬುಗೆಗೊಂಡನಾನೃಪನ ॥ ೧೫

ಅದುವೆ ಮೊದಲಾಗೀಗಳಲ್ಲಿಯು
ಸುದತಿಯರು ಸ್ವಾಚ್ಛಂದಚಾರಿಗ
ಳದಱಿನಾನೃಪತಿಗೆ ಸಹಾಯುವೆನಗ್ನಿ ಮಾಡುವನು ।

ಆಗ ಸಹದೇವನು ಅಗ್ನಿಯನ್ನು ಸ್ತುತಿಸುವಿಕೆ.

ಅದನರಿತು ಸಹದೇವನುಪವಾ
ಸದಲಿ ಮಿಂದು ಕುಶಾಗ್ರಸಂಸ್ತರ
ಣದಲಿ ಪವಡಿಸಿ ಬೇಡಿಕೊಂಡನು ವಹ್ನಿಸೂಕ್ತದಲಿ ॥ ೧೬

ಯಾಗವಿದು ನಿನಗೋಸುಗವೆ ನೃಪ
ಯಾಗಸಿದ್ಧಿಗೆ ಬಂದೆವಲ್ಲದೆ
ಮೇಗೆ ತಾನರಿಯದೆ ಧನಾಶೆಯಲಿವನ ಮುಳಿಯುವಲ್ಲೈ ।
ಈಗ ನೀನಡ್ಡವಿಸಲೆಮ್ಮಯ
ಯಾಗ ವ್ರುಟಿಯಲಿ ನಿನಗೆ ಮಾಣಲಿ
ಯಾಗಪಾರೋಹಿತ್ಯವೆಂದನು ನಗುತ ಸಹದೇವ ॥ ೧೭

ಅಗ್ನಿಯು ಸಹದೇವನಿಗೆ ವರವನ್ನು ಕೊಡುವಿಕೆ.

ಎಂದು ನಾನಾವಿಧವರಸ್ತುತಿ
ಯಿಂದ ಹೊಗಳಿದೊಡಗ್ನಿ ಮೆಚ್ಚಿದ
ನಂದು ಕೊಟ್ಟನು ವರ [1] ವನೀತನ ಮಾರಿದೆನು ನಿನಗೆ ।
ಎಂದು ಶಿಖಿ ಹಿಮ್ಮೆಟ್ಟಲಾಪಡೆ
ಮುಂದೆ ನಡೆದುದು ನೀಲಪುರದಲಿ
ಸಂದಣಿಸಿ ಬಳಿಕಾತನೀತನಕಂಡು ಪೊಡವಟ್ಟ ॥ ೧೮

ತೆತ್ತನವ ಸರ್ವಸ್ವವನು ತಾ
ನೆತ್ತಿ ಬಂದನು ಕೂಡೆ ಬಳಿಕಿನೊ
ಳುತ್ತರೋತ್ತರವಾಯ್ತು ಸಹದೇವಂಗೆ ದಿಗ್ವಿಜಯ ।
ಮತ್ತೆ ಸಹ್ಯಾಚಲದ ಕೊಳ್ಳದ
ಕುತ್ತಿರಿನ ಭೂಪರ ವಿಭಾಡಿಸಿ
ಸುತ್ತಿ ಬಂದಾಕರಿಸಿದನು ತದ್ಗಿರಿನಿವಾಸಿಗಳ ॥ ೧೯

---

1 ಪಥವ, ಕ. ಖ.

ಬಳಿಕ ಅನೇಕರಾಜರನ್ನು ಗೆಲ್ಲುವಿಕೆ.

ಇಱಿದು ಕೊಂಕಣಗೌಳರನು ಕೇ
ರಳರ ಸದೆದು ಮಹಾರ್ಘರತ್ನಾ
ವಳಿಯ ಹೇಱಿಸಿದನು ವಿಚಿತ್ರಾಂಬರವಿಭೂಷಣವ |
ಜಲಧಿಯಂತರ್ದ್ವೀಪಪತಿಗಳ
ಕುಲವ ಶೋಧಿಸಿ ಚೋಳಪಾಂಡ್ಯರ
ದಳವ ಘಟ್ಟಿಸಿ ಕೊಂಡನನುಪಮವಸ್ತುವಾಹನವ || ೨೦

ಘಟೋತ್ಕಚನಿಗೆ ಸಹದೇವನ ಪತ್ರಪ್ರೇಷಣ

ಕಳುಹಿದನು ಮಿಗೆಯಾಪ್ತಪತ್ರಾ
ವಳಿಯುತನುಜನ ಬಳಿಯ ತತ್ಕ್ಷಣ
ದೊಳಗೆ ಹೇೞಿಕೆಯಾಯ್ತು ಪರಿವಾರಕೆ ಘಟೋತ್ಕಚನ |
ತಿಳಿದ ಕಾರಿರುಳೞಿಕವೋ ಮೇಣ್
ಖಳಜನರ ಹೃದಯಾಂಧಕಾರದ
ಹೊಳಕೆಯೋ ತಾನೆನಲು ಮಿಗೆ ನಡೆತಂದನಾದನುಜ || ೨೧

ಸಹದೇವನ ಅಪ್ಪಣೆಯಂತೆ ಘಟೋತ್ಕಚನ ಲಂಕಾಪ್ರಯಾಣ ಮತ್ತು ಅಲ್ಲಿನವರ ಜಯ.

ಪಾಳೆಯವ ಹೊಕ್ಕನು ಘಟೋತ್ಕಚ
ನಾಳುಸಹಿತಯ್ಯಂಗೆ ನಮಿಸಿದ
ನೂೞಿಗವ ಬೆಸಸೆನಗೆ ಹೇೞಾ ರಾಜಕಾರಿಯವ |
ವೀಳಯವ ತಾ ಯೆನಲು ನಗುತ ವಿ
ಶಾಲವಿನಯಕೆ ಮೆಚ್ಚಿದನು ಬಲು
ದೋಳಿನಲಿ ಸೆಳೆದಪ್ಪಿ ಮುಂಡಾಡಿದನು ನಂದನನ || ೨೨

ಮಗನೆ ಲಂಕೆಗೆ ಪೋಗು ಮಾನವ
ರಿಗೆ ಮಹೋದಧಿಗವ್ಯವಲ್ಲತಿ
ವಿಗಡತನ ಬೇಡಲ್ಲಿ ವಿನಯದೊಳನ್ನು ಕಾರಿಯವ |

ಸೊಗಸಿತೇ ಸಾಮದಲಿ ಕಪ್ಪವ
ತೆಗೆವುದವಗಡಿಸಿದರೆ ಬಳಿಕ
ಲ್ಲಿಗೆ ಶರಾಳಿಗಳಿವೆ ವಿಘಾತಿಗೆ ದೋಷವಿಲ್ಲೆಂದ ॥ ೭೩

ಎನೆ ಹಸಾದವ ಹಾಯ್ಕಿ ಭೀಮನ
ತನಯ ಕಳುಹಿಸಿ ಕೊಂಡು ತೆಂಕಲು
ವನುಜ ಬಂದನು ಕಂಡು ರಾಮೇಶ್ವರದ ಶಿವಗೃಹವ [1] ।
ವಿನಯ ಮಿಗೆ ಸತ್ಕರಿಸಿ ರಘುನಂ
ದನನ ಕೀರ್ತಿಸ್ತಂಭಡಂಬರ
ವೆನಿಸ ಸೇತುವ ಕಂಡು ನಡೆದನು ತೆಂಕಮುಖವಾಗಿ ॥ ೭೪

ತ್ರೋಱಿತತ್ರಿನೂರದಲಿ ಲಂಕೆಯ
ಮೂಱುಶಿಖರದ ದುರ್ಗವುದಧಿಗೆ
ಮಾಱುದಧಿಯೆನೆ ಹೊಳಹೊಳೆದುದಾ ಮಣಿಪ್ರಭಾಲಹರಿ [2] ।
ನೂಱುಯೋಜನ ಸೇತುಮೂಲದ
ಮೀಱಿ ನಡೆದನು ಬಡಗವಾಗಿಲ
ಕೀಱಿದಗಳಿನ ಪಡಿಮುಖವ ದಾಂಟಿದನು ವಹಿಲದಲಿ ॥ ೭೫

ಕೇರಿಕೇರಿಗಳೊಳಗೆ ನಿಜಪರಿ
ವಾರಸಹಿತ ವೃಕೋದರಾತ್ಮಜ
ನಾರಿವನು ತಾನೆನಲು ಮಿಗೆ [3] ನಡೆತಂದರೊಲವಿನಲಿ ।
ವೀರದಾನವವರ್ಗದಲಿ ಬಹ
ತೋಱುಹತ್ತನ ಕಂಡಪೂರ್ವವಿ
ಕಾರಿಮಾನಿಸನಲ್ಲೆನುತ ಮುತ್ತಿದುದು ಪೌರಜನ ॥ ೭೬

ಬಂದನರಮನೆಗಾಗಿ ಬಾಗಿಲ
ಮುಂದಣೆಡಬಲಹೇಮವೇದಿಯ

1 ಮನದಿ ಮುನ್ನವೆ ಬಂದ ರಾಮೇಶ್ವರದ ಶಿವಗೃಹಕೆ, ಚ.
2 ಮೆಱೆದುದಂದು ಮಣಿಪ್ರಭಾವದಲಿ, ಚ. 3 ತಾರೆನಲು, ಚ.

ಸಂದಣಿಯ ಜನ ನೋಡಲೆಂದನು ದ್ವಾರಪಾಲರಿಗೆ ।
ಇಂದು ನಾವುತ್ತರದ ಭೂಮಿಪ
ರಿಂದ ಬಂದೆವು ಹೇಳು ನಿಜಪತಿ
ಗೆಂದೊಡವ ಬಂದನು ವಿಭೀಷಣದೇವನೋಲಗಕೆ ॥ ೭೭

ಜೀಯ ಬಿನ್ನಹ ಬಂದನುತ್ತರ
ರಾಯನಟ್ಟಿದ ದೂತನೆನೆ ತ
ಪ್ಪಾಯಿತೇ ಹೊಗಿಸೆನಲು ಕರೆದನು ಕಲಿಘಟೋತ್ಕಚನ ।
ವಾಯುತನುಜನ ಸುತನು ತನ್ನ ಪ
ಸಾಯಿತರು ಸಹಿತೊಳಗೆ ಹೊಕ್ಕನ
ವಾಯಿಯಲಿ ನಡೆತಂದು ಕಾಣಿಕೆಗೊಟ್ಟು ಪೊಡವಟ್ಟ ॥ ೭೮

ಬಿಗಿದ ಮರಕತಮಣಿಯ ನೆಲಗ
ಟ್ಟುಗಳ ಹವಳದ ಹಲಿಗೆಗಳ ಮಾ
ಳಿಗೆಯ ವೈಡೂರ್ಯದ ಕವಾಟದ ವಜ್ರಭಿತ್ತಿಗಳ ।
ಹೊಗರಿಡುವ ಹರಿನೀಲಮಣಿವೇ
ದಿಗಳ ಮುತ್ತಿನ ಲಂಬಳದ ಲೋ
ವೆಗಳ ಕಾಂತಿಯ ಲಳಿಯ ಲಹರಿಯೊಳಿರ್ದನಮರಾರಿ ॥ ೭೯

ವಿಭೀಷಣಘಟೋತ್ಕಚರ ಸಂವಾದ.

ಇತ್ತ ಬಾರೈ ಕುಳ್ಳಿರೆತ್ತಣಿ
ನಿತ್ತ ಬರವಾರಟ್ಟಿದರು ನೀ
ವೆತ್ತಣವರೇನೆಂದು ನಿಮ್ಮಭಿಧಾನವೇನು ಹದ ।
ಬಿತ್ತರಿಸಿ ಹೇಳೆನಲು ಕೈಮುಗಿ
ಯುತ್ತ ನುಡಿದನು ರಾವಣಾನುಜ
ಚಿತ್ತವಿಸು ನಮ್ಮಖಿಳಪೂರ್ವಾಪರದ ಸಂಗತಿಯ ॥ ೮೦

ಅಲ್ಲಿ—ಘಟೋತ್ಕಚನು ಭೀಮನ ತನಯನೆಂದು ಹೇಳುವಿಕೆ.

ಸೋಮವಂಶದೊಳರಸುಗಳು ನಿ
ಸ್ಸೀಮರಿದ್ದರು ಪಲಬರವರೊಳು
ಭೂಮಿಗಧಿಪತಿ ಪಾಂಡುವಾತಂಗೈವರಾತ್ಮಜರು ।
ಆಮಹೀಪತಿ ಧರ್ಮನಂದನ
ಭೀಮಫಲುಗುಣನಕುಲನಲ್ಲಿ ಸ
ನಾಮಸಹದೇವಾಖ್ಯರೀಪರಿ [1] ಚಿತ್ತವಿಸಿ ಯೆಂದ ॥ ೨೧

ಅರಸನೆಂಬರೆ ಸಕಲಧರ್ಮಕೆ
ಕರಚರಣವಾದಂತೆ ಯಾತನ
ಕಿಱಿಯರಿಹರು ಚತುರ್ವಿಧೋಪಾಯಸ್ವರೂಪದಲಿ ।
ಸುರಮುನಿಯು ಮತದಿಂದ ಯಾಗೋ
ತ್ಕರುಷೆಗಾವುದು ಬುದ್ಧಿ ನೃಪಗ
ಧ್ವರದ ದಿಗ್ವಿಜಯಾಭಿಸಂಧಿಗೆ ಮಾಡಿದನು ಮನವ ॥ ೨೨

ಬಡಗಲರ್ಜುನನುತ್ತರಾಬ್ಧಿಯು
ತಡಿಯು ನೇಪರ್ಯಂತವಸ್ತುವ
ಜಡಿದು ತಂದನು ಮೂಡಲಾಕ್ರಮಿಸಿದನು ಕಲಿಭೀಮ ।
ಪಡುವಲರ್ಜುನನನುಜನಿತ್ತಣ
ಕಡೆಗೆ ಸಹದೇವಾಖ್ಯನೀಪರಿ
ನಡೆಪ್ರತಿಪರ್ವಮು ತಾ ಘಟೋತ್ಕಚ ಭೀಮಸುತನೆಂದ ॥ ೨೩

ಎಸಲು ನಸುನಗುತೆಂದ ಪಾಂಡವ
ಜನಪರು ಕ್ಷತ್ರಿಯರು ನೀನೀ
ದನುಜನವರಿಗೆ ತನಯನೆಂದೊಡದಾರು ಮೆಚ್ಚುವರು ।
ಮನುಜರಿಗೆ ದಾನವರು ಮಕ್ಕಳೆ
ವನಜನಾಭನೆ ಬಲ್ಲನೈ ಸಖಿ
ಯೆನಲು ಬಿನ್ನಹ ಮಾಡಿದನು ತಜ್ಜನನಸಂಗತಿಯ ॥ ೨೪

1 ರನಿಖರು, ಚ.

ಅರಸನೊಂದು ನಿಮಿತ್ತ ದೇಶಾಂ
ತರಪರಿಭ್ರಮಣೆಯಲಿ ವಿಪಿನಾಂ
ತರದೊಳಿರೆ ಬಂದನು ಹಿಡಿಂಬಕನೆಂಬನಸುರಪತಿ ।
ಕೆರಳಿಚಿದೊಡಾಭೀಮನಾತನ
ನೊರಸಿದನು ಖಳನನುಜೆ ಯಾತಂ
ಗರಸಿ ಯಾದಳು ಸತಿ ಹಿಡಿಂಬಿಕೆ ಮಾತೆ ಯೆನಗೆಂಪ ॥ ೨೫

ಇನಿಬರಿಗೆ ಪತಿ ದೇವಕೀನಂ
ದನನಘಾಸುರಮಥನ ಮಧುಸೂ
ದನ ಜನಾರ್ದನ ದೈತ್ಯಮರ್ದನ ಭಕ್ತಸುರಧೇನು ।
ಮುನಿಹೃದಯಪರ್ಯಂಕ ಕರುಣಾ
ವನಧಿ ರಾಮಣಕಂಠಕಾನನ
ಘನಪರಶು ಶ್ರೀಕೃಷ್ಣನೈವರ ಜೀವಸಖನೆಂದ [1] ॥ ೨೬

ರಾಜಸೂಯನಿಮಿತ್ತ ಧನವನು
ವ್ಯಾಜದಿಂದಾರ್ಜಿಸಲು ಬಂದಿರಿ
ತೇಜವಿದೆ ನಿಮಗೀಗ ನಿಮಗೆನಿತುಂಟು ಪರಿವಾರ ।
ಮಾಜದೆಯು ಹೇಳೆನಲು ಗಜಪುರ
ರಾಜಧರ್ಮಜನಾತನನುಜರು
ತ್ರೈಜಗಕೆ ಬಲ್ಲಿದರು ಬಲವಷ್ಟಾದಶಾಕ್ಷೋಣಿ ॥ ೨೭

ಎನಲು ನಕ್ಕನು ದಾನವೇಂದ್ರನು
ಮನೆಯ ಹೊರಗಣ ಹಂತ ಬಿಡದಿಹ
ಜನದನಿತು ತಾನೈಸೆ ನಿಮ್ಮಯ ಸೇನೆಯಿಂದಿನಲಿ ।
ಮನಕೆ ಬಾರದು ಕಪ್ಪವೀವುದು
ಕನಲಿ ಕವಿತರೆ ಮುಂದೆ ನೋಪುವೆ
ನೆನಲು ನುಡಿದಪನೀಘಟೋತ್ಕಚನಾವಿಭೀಷಣಗೆ ॥ ೨೮

---

1 ನೈವರಿಗೆ ತಾನೇ ಜೀವಸಖನೆಂದ, ಕ, ಖ

ಬಲವನೇಟಿಪ್ರೊಡಿನ್ನು ದಾನವ
ಕುಲದಿಶಾಪಟು ಕೃಷ್ಣ ಸಾರಥಿ
ಫಲುಗುಣನ ಧ್ವಜದಂಡದಗ್ರದಲಿಹನು ಹನುಮಂತ ।
ಕಲಹವನು ಬಯಸುವರೆ ತನ್ನನು
ನಿಲಿಸದೀಗಳೆ ಕಳುಹು ಬೇಗದ
ಲೆನೆ ವಿಭೀಷಣ ನೆನೆದು ನೋಡಿದ ಪೂರ್ವಸಂಗತಿಯ ॥ ೩೯

ವಿಭೀಷಣನು ಪೂರ್ವವೃತ್ತವನ್ನು ನೆನೆದು ಘಟೋತ್ಕಚನನ್ನಾದರಿಸುವಿಕೆ.

ರಾವಣನ ಬಿಸುಟಂದು ರಾಘವ
ದೇವನನು ಮರೆಯೊಗಲು ಬ್ರಹ್ಮನ
ಜೀವವುಳ್ಳನ್ನ ಬರ ಕೊಟ್ಟನು ತನಗೆ ಸಂಪದವ ।
ದೇವನಿವರನು ಕಾವ ಭರದಲಿ
ನಾವು ಬಲಿದೊಡಾವಪರಿಯಲಿ
ಹೇವ ತಪ್ಪುವುದೆನುತ ಚಿಂತಿಸುತಿರ್ದ ಮನದೊಳಗೆ ॥ ೪೦

ಕ್ರತುವಿದಸುರಾರಾತಿ ಯಾಕ್ರತು
ಪತಿ ಯುಧಿಷ್ಠಿರ ದೂತನಾನಿದ
ಅತಿಶಯವ ನೀವ್ ಬಲ್ಲಿರೆನೆ ನೋಡಿದನು ತನ್ನವರ ।
ಹಿತರುವಿದಱಿಂದಧಿಕಪುಣ್ಯ
ಪ್ರತತಿಯುಂಟೇ ರಾಮಚಂದ್ರಾ
ಕೃತಿ ತದೀಯತ್ರೇತೆ ಯಾದ್ವಾಪರದಲಾಯ್ತೆಂದ ॥ ೪೧

ತಾವು ಮರ್ತ್ಯರು ಪೂರ್ವಯುಗದವ
ರಾವು ತಮ್ಮಂತರವ ನೋಡದೆ
ದೇವರೆದೆದಲ್ಲಳದಲುಕ್ಕೆಯ ತಾವನೀಕ್ಷಿಸದೆ ।
ಆವುದುಚಿತಾನುಚಿತವೆಂಬುದ
ಭಾವಿಸದೆ ಗರ್ವಿತರು ನೋಡಿಂ
ನಾವ ಸದರವೊ ನಾವೆನುತ ಗರ್ಜಿಸಿತು ಭಟನಿಕರ ೪೨

ಆಗ ರಾಕ್ಷಸಭಟರು ಘಟೋತ್ಕಚನನ್ನು ಹಿಯ್ಯಾಳಿಸಿ ಗರ್ಜಿಸುವಿಕೆ.

ನೊಸಲಿನಲಿ ಕಣ್ಣುಳ್ಳದೇವನು
ಬಸೆಯ ಲಂಕಾದ್ವೀಪಸೀಮೆಗೆ
ಮಿಸುಗಲಮ್ಮನು ಬಂದು ಕಂಡವರಿಲ್ಲ ಪಟ್ಟಣವ ।
ಬಿಸಜಸಂಭವನಾದಿದಿವಿಜ
ಪ್ರಸರ ಮಿಗೆ ನಡಗುತ್ತಲಿಪ್ಪುದು
ನುಸಿಗಳಹ ಮಾನವರ ಪಾಡೇನೆನುತ ಗರ್ಜಿಸಿತು ॥ ೪೩

ಕಾಳಗದೊಳಿಂದೆಮಗೆ ದಿವಿಜೇಂ
ದ್ರಾಳಿಯಲಿ ಸಮಭಟರ ಕಾಣೆವು
ಮೇಳವೇ ಮರುಳುಪೂತು ಮರ್ತ್ಯರ ಸಹಸವೆಮ್ಮೊಡನೆ ।
ತೋಳನಳವಿಗೆ ಮಲೆತ ಕುಱಿಗಳ
ಜಾಲದಂತಿಹುದೆಂದು ಮಂಗಕ
ರಾಳಮತಿಗಳು ನಗಲು ಬೞಿಕೆಂದನು [1] ಘಟೋತ್ಕಚನು ॥ ೪೪

ನಾಲಿಗೆಯ ನೆಣಗೊಬ್ಬಿನಲಿ ಛ
ಡಾಳಿಸಿದೊಡೇನಹುದು ಸಭೆಯಲಿ
ಕಾಳಗದೊಳಿದಿರಾರು ಭೀಮಾರ್ಜುನರ ಭಾರಣೆಗೆ ।
ಆಳುತನವಂತಿರಲಿ ವೃಷ್ಣಿ ವ
ಮೌಳಿ ನುಡಿಯಲಿ ಕೇಳ್ವನೆನೆ ಕ
ಟ್ಟಾಳುಗಳ ದೇವನು ವಿಭೀಷಣ ನಗುತಲಿಂತೆಂದ ॥ ೪೫

ಆ ಭಟರನ್ನು ವಿಭೀಷಣನು ಸಮಾಧಾನಪಡಿಸುವಿಕೆ.

ಕಾಲವಾವುದು ತನ್ನ ಶಕ್ತಿಯ
ಕೀಲುಮೇಲಾವುದು ಸಹಾಯದ
ಮೇಲು ಸೆಱಗೇನೆಂದು ಬಗೆಯದೆ ಬಯಲಗರ್ವದಲಿ ।

1 ಕಂಡನು ಕಲಿ, ಚ.

ಸೋಲುವುದು ಜಗವಿಹಪರದ ಗತಿ
ಕಾಳಗವುದು ಖಳರಱಿಯರಿದನು
ಬ್ಬೇಳುವರು ಬಱಿದೆಂದು ಜಱಿದನು ತನ್ನ ಮಂತ್ರಿಗಳ ॥ ೪೬

ಅದಱಿನೀದ್ವಾಪರದಲಾಪರಿ
ಯುದಯಿಸಿದನಾಕಾಲದಲಿ ಸಲ
ಹಿದನು ನಮ್ಮನು ಹಿಡಿದನಿವರನು ವರ್ತಮಾನದಲಿ ।
ಪದದ ದರ್ಪದಲಂಬುಜಾಕ್ಷನ
ಪದವ ಮಱೆದೊಡೆ ಪಾತಕದ ದು
ರ್ಗದಲಿ ಕೆಡಹನೆ ನಮ್ಮನೆಂದು ವಿಭೀಷಣನು ನುಡಿದ ॥ ೪೭

ದೇವನೊಲಿದವರುಗಳು ಮಿಗೆ ಸಂ
ಭಾವಿತರು ಲೋಕದಲಿ ಕಮಲಾ
ದೇವವಿರಹಿತವಾದ ದಿವಿಜರ ಮಾತದಂತಿರಲಿ ।
ದೇವಕೀನಂದನನ ಚರಣದ
ಸೇವೆಗಿಂತಿದು ಯೋಗ್ಯವಾದೊಡೆ
ನಾವು ಧನ್ಯರೆನುತ್ತ ನಗುತ ವಿಭೀಷಣನು ನುಡಿದ ॥ ೪೮

ನಾನಾವಿಧಪದಾರ್ಥಗಳನ್ನು ತರಿಸಿ ಕೊಡುವಿಕೆ.

ತರಿಸಿದನು ಭಂಡಾರದಲಿ ಪರಿ
ಪರಿಯ ಪೆಟ್ಟಿಗೆಗಳನು ಕಂಠಾ
ಭರಣಕಂಕಣವಜ್ರಮಾಣಿಕಮರಕತಾವಳಿಯ ।
ಚರಣನೂಪುರಝುಳವಟಿಗೆಯುಂ
ಗುರಕಿರೀಟಾಂಗದಸುಕರ್ಣಾ
ಭರಣವೆನು ತೆಗಿಸಿದನು ಭೀಮಕುಮಾರ ನೋಡೆನುತ ॥ ೪೯

ನೀಲಮಣಿಕಾಂತಿಗಳ ಹೊಯ್ಲಲಿ
ಕಾಳರಜನಿಯೊಲಾಯ್ತು ಮುತ್ತಿನ
ಥಾಳ ಧವಳಿಸಲಾಯು ಚಂದ್ರಿಕೆ ತಮವ ಡೊಕ್ಕರಿಸಿ ।

ಮೇಲೆ ಹೊಂಬಿಸಲಾಯ್ತು ಮಾಣಿಕ
ದೇಟಿಗೆಯ ಲಹರಿಯಲಿ ಮರರ
ತ್ನಾಳಿರುಚಿಯಲಿ ಚಂಡಿಯಾಯಿತು ದಿವಸವಂದಿನಲಿ ॥ ೫೦

ತೆಗಿಸಿದನು ಗಜದಂತಮಯಪೆಟ್ಟಿ
ಗೆಗಳನು ಕರ್ಪೂರದ ತವೆಲಾ
ಯಿಗಳ ಹವಳದ ಮಂಚವನು ಮಣಿಖಚಿತರಚನೆಗಳ ।
ಬಿಗಿದ ವಜ್ರಪ್ರಭೆಯ ಹೊನ್ನಾ
ಯುಗದ ಖಡ್ಗಕಠಾರಿಗಳ ಝಗ
ಝಗಿಸ ಹೊಂಗೆಲಸದಲಿ ಚಿತ್ರದ ಜೋಡುಸೀಸಕವ ॥ ೫೧

ಗುಳವ ರೆಂಚೆಯ ಪಕ್ಕರೆಕೆವ
ಲ್ಲಳವ ಮಣಿಕಾಂಚನಮಯಂ
ಗಳ ಕೆಲಸಗತಿಗಳ ಹೇಮರೇಖೆಯ ರಜತಭಾಜನವ [1] ।
ಬಿಳಿಯಚಾಮರಿಯ ಹೊಸಗಳುರುಪ
ತ್ತಳದ ಕಟ್ಟುಗೆಬೀಂಟೆಗಳ ಪದ
ವಿಲು ತದೀಯಶರಂಗಳನು ತಂದಿಳುಹಿದರು ಚರರು ॥ ೫೨

ಬಲಮುಖಿಯ ಶಂಖಗಳ ಗಂಧದ
ಬಲುಹೊಡೆಯ ಕೃಷ್ಣಾಗರುಗಳೊ
ಟ್ಟಿಲ ಸುರಂಗದ ಪಟ್ಟೆಪಟ್ಟಾವಳಿಯ ದಿಂಡುಗಳ ।
ಪುಲಿದೊಗಲ ಕೃಷ್ಣಾಜಿನಂಗಳ
ಹೊಳೆವ ಹೊಂಗೊಪ್ಪರಿಗೆ ಚಿತ್ರಾ
ವಳಿಯ ಸತ್ತಿಗೆ ಹೇಮಘಟಸಂಕುಲವನೊಟ್ಟಿದರು ॥ ೫೩

ಕೀಚಿಸಿದನರಮನೆಯ ಹೇಮದ
ತಾಳಮರಕದಿನಾಲ್ಕನಧ್ವರ
ಶಾಲೆಯಿದಿರಲಿ ತೋರಣಸ್ತಂಭಂಗಳ ಪುಮಂಮ ।

1 ವಿವಿಧಚಿತ್ರಗಳ, ಚ.

ಮೇಲೆ ರಾಕ್ಷಸಕಟಂಕವಚಿನ
ಜಾಳಿಗೆಗಳನು ತರಿಸಿ ಕಟ್ಟಿಸಿ
ಮೇಲುಮುದ್ರೆಗಳಿಕ್ಕಿದುವು ತರಿಸಿದನು ಹೊಱೆಯುವರ ॥ ೫೪

ಆಪದಾರ್ಥಗಳನ್ನು ವಿಭೀಷಣಭಟರೇ ಹೊತ್ತುಕೊಂಡು ಬರುವಿಕೆ

ಕುಲಗಿರಿಯನೊಡೆಮೀಟ ತಮ್ಮಯು
ತಲೆಯೊಳಾನುವ ಕರ್ಕಶಾಂಗದ
ಕಲುದಲೆಯ ಹೇರೊಡಲ ಮಿಡುಕಿನ ಕಾಳರಕ್ಕಸರು ।
ಸೆಳೆದು ಹೊತ್ತರು ಹೊಱೆಯನವರಿ
ಟ್ಟಳಿಸಿ ಹೊಱವಂಟರು ವಿಭೀಷಣ
ಕಳುಹಿದನು ಪವಮಾನಸುತನಂದನನ ಸತ್ಕರಿಸಿ ॥ ೫೫

ಆಗ ಭಟರನ್ನು ನೋಡಿ ಸಹದೇವನ ಭಟರು ಹೆದರುವಿಕೆ.

ದನುಜನಬಳಿಯು ಹಾಟ ಸಹದೇ
ವನ ಸಮೀಪಕೆ ಬಂದು ರಾವಣ
ನನುಜ ಮಾಡಿದ ಬಹಳಸತ್ಕಾರವನು ಬಿನ್ನವಿಸಿ ।
ಅನಿಬರನು ಕಾಣಿಸಿದನಾಕಾಂ
ಚನಮಯದ ಹೊಱೆ ಯೆಂಟುಸಾಸಿರ
ವನುಪಮಿತರಕ್ಕಸರ ಕಂಡಂಜಿದುದು ನೃಪಕಟಕ ॥ ೫೬

ಲಾಲಿಸಿದನಾಖಳರನತ್ತಿತು
ಪಾಳೆಯವು ನಡೆತಂದು ಪಯಣದ
ಮೇಲೆ ಪಯಣದಲೈದಿ ಬಂದನು ತಮ್ಮ ಪಟ್ಟಣಕೆ ।
ಮೇಲೊಗುವ ಸುಮ್ಮಾನ ಸಿರಿಯ ಭ
ಡಾಳದಲಿ ತಂದಖಿಳವಸ್ತುವ
ನಾಲಯದೊಳೊಪ್ಪಿಸಿದನವನೀಪತಿಗೆ ಸಹದೇವ ॥ ೫೭

ಐದನೆಯ ಸಂಧಿ ಮುಗಿದುದು.

ಆರನೆಯ ಸಂಧಿ.

ಸೂಚನೆ

ನಕುಲ ಪಶ್ಚಿಮದೆಸೆಯ ಭೂಪಾ
ಲಕರ ಗೆಲಿದನು ಸಕಲವಸ್ತು
ಪ್ರಕರದಿಂದಳಕಾಪುರಿಗೆ ಮಿಗಿಲಾಯ್ತು ನೃಪನಗರ ||

ಯವನನೇಪಾಳಾದಿದೇಶಗಳ ಅರಸರನ್ನು ಗೆಲ್ಲುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಪಶ್ಚಿಮದೆಸೆಯ ಭೂಮೀ
ಪಾಲಕರ ಮೇಲೆತ್ತಿ ನಡೆದನು ನಕುಲನೊಲವಿನಲಿ |
ಧಾಟಿ ಹರಿದುದು ಮರುಯವನನೇ
ಪಾಳರೋಹಿತನೆಂದೆನಿಪ [1]ಭೂ
ಪಾಲಕರ ಮುಱಿದವರ ಸಪ್ತಾಂಗವ [2]ವಿಭಾಡಿಸಿದ || ೧

ಹೇಮಕರ ಸ್ಯೈರಿಭಕರೆಂಬ ಸ
ನಾಮರನು ಮುಱಿದನು ಕಳಿಂಗದ
ಭೂಮಿಪರ ಸದೆದನು ತ್ರಿಗರ್ತರ ಶಿಬಿಯ ಸಂತತಿಯ |
ಹೇಮಮಾತ್ರವನುಱುಹದವದಿರ
ಭೂಮಿಗಳವರ್ಗಿತ್ತು ವಸ್ತು
ಸ್ತೋಮವನು ನೆರಹಿದನು ನಡೆದನು ಮುಂದೆ ಪಶ್ಚಿಮಕೆ || ೨

ಮುಱಿದನಗ್ರದ ದಂಡಧಾರನ[3]
ನೆಱಗಿದನು ಬರ್ಬರ ತುರುಷ್ಕರ

1 ರಲಿ ರೋಹಿತಕನೆಂಬ ನೃ, ಕ. ಖ. 2 ಪಾಲಕನ ಮುಱಿದವನ, ಸಾ. ಕ. ಖ.
3 ಚೇಕಿತಾನರ, ಚ.

ನೊಱಗಿಸಿದನಾಹವದೊಳಗೆ ಭೀಕರದ [1] ಬಾಹ್ಲಿಕರ |
ಸೆಱೆಯ ಹಿಡಿದನು ಪಾರ್ವತೀಯರ
ನುಱುಕುಗೊಳಿಸಿದಚೀನರಂಬ
ಷ್ಠರನು ಸಿಂಧುಸರಸ್ವತೀತೀರದ ಮಹೀಶ್ವರರ || ೩

ರಣದ ಸಂಕೇತಕದೊಳುತ್ಸವ
ರಣಸಮರ್ಥರ ಹಿಂಡಿದನು ಚಾ
ಣರ ಪುರಸಾಹಣರ ಪುಷ್ಕರವನನಿವಾಸಿಗಳ |
ಹಣಿದನಲ್ಲಿಂದತ್ತಲಾಪಡು
ವಣದಿಗಂತದಲದಟಿಗರ ಪ
ಟ್ಟಣದ ವರಕಾಂಚನವ ಸೆಳೆದನು ಭೂಮಿಪರ ಗೆಲಿದು || ೪

ಖ್ಯಾತಿಕರವಣ್ಣ ಕಟಕರ ಕೃತ
ಯಾತಿಕರ ಯೌಧೇಯಸಂವೀ
ರಾತಿಶಯಪಡಿಹಾರರಮಳದ್ವಾರಪಾಲಕರ |
ಘಾತಿಸಿದನವರುಗಳ ವಿತ್ತ
ವ್ರಾತವನು ಹೇಱಿಸಿದನೆಡಬಲ
ದಾತಗಳನಪ್ಪಳಿಸಿ ತೆಗೆದನು ಸಾರವಸ್ತುಗಳ || ೫

ನಕುಲನಿಗೆ ಶಲ್ಯನಿಂದ ಆದಮರ್ಯಾದೆ.

ಮಾವನಲ್ಲಿಗೆ ಬಂದೊಡಾಮ
ದ್ರಾವನೀಪತಿ ಶಲ್ಯ ಮಿಗೆ ಸಂ
ಭಾವಿಸಿದನೊಲಿದಿತ್ತನೀತಂಗಖಿಳವಸ್ತುಗಳ |
ತೀವಿದರು ಭಂಡಿಯಲಿ ಮುಂದಣ
ಚಾವಟಿಯ ಚಪಳರಿಗೆ ಹರಿಯೆ ನೃ
ಪಾವಳಿಗಳಲ್ಲಲ್ಲಿ ತೆತ್ತುದು ಬಂದು ತಮತಮಗೆ [2] || ೬

---

1 ಗಂಭೀರಕರ, ಚ. 2 ತೆತ್ತರು ಕಂಡು ವಸ್ತುಗಳ, ಚ.

ಮ್ಲೇಚ್ಛರಾಜರನ್ನು ಗೆದ್ದುದು.

ತಳತು ಬಿಟ್ಟುದು ಸೇನೆ ಪಡುವಣ
ಜಲನಿಧಿಯ ಕೈವಳಿಗಳಲಿ ಕೇ
ವಳಿಸಿದರು ಕೊಲ್ಲಣಿಗೆಯಲಿ ಕೊಂಡರು ಸುವಸ್ತುಗಳ ।
ಕಳವಳಿದು ಹಿಮಗಿರಿಯ ಮೂಲೆಯ
ನಿಲುಕಿ ಸಕಲಮ್ಲೇಚ್ಛ ಭೂಪಾ
ವಳಿಯ ಭಂಗಿಸಿ ಹೇಱಿಸಿದನೊಂಟೆಗಳಲಾಧನವ ॥ ೭

ಹೇಱಿದುವು ಬಹುಧನವನೊಂಟೆಗ
ಳಾಱುಸಾವಿರ ಮಿಕ್ಕವಸ್ತುವ
ಹೇಱಿದುವು ಎತ್ತುಗಳ ಹೂಡಿದಭಂಡಿಸಾವಿರವು ।
ಆಱುಲಕ್ಷತುರಂಗವರರಥ
ಮೂಱುಕೋಟಿಯ ರಚನೆ ಗಣನೆಯ
ಮೀಱಿದುವು ಮೃಗಪಕ್ಷಿಕೋಣನ ಕುಱಿಯ ಹಿಂಡುಗಳು ॥ ೮

ಮರಳತಾತನ ಸೇನೆ ಬಂದುದು
ಪುರಿಗೆ ಕಂಡನು ಧರ್ಮಪುತ್ರನ
ಚರಣಕೆಱಗಿದನಖಿಳವಸ್ತುವ ಬೇಱೆ ತೋಱಿಸಿದ ।
ಅರಸನುತ್ಸವವನು ವೃಕೋದರ
ನರನಕುಲಸಹದೇವನಂತಃ
ಪುರದ ಹರುಷದ ಶಿರಿಯನದನೇವಣ್ಣಿಸುವೆನೆಂದ ॥ ೯

ಧರ್ಮರಾಯನ ರಾಜ್ಯಭಾರ

ಕಳವು ಹುಸಿ ಹಾದರ ವಿರೋಧ
ಸ್ಖಲಿತವಾಱಡಿ ಬಂದಿ ದಟಿದುಟಿ
ಬೆಳುಗವತೆ ಪರಿಭವಣೆ ಡಾವರ ಠಕ್ಕು ಡೊಳ್ಳಾಸ ।
ಹಟವು ವಂಚನೆ ಜಾತಿಸಂಕರ
ಕೊಲೆ ವಿರೋಧನ ವಿಕೃತಿ ಮಾಯಾ
ವಳಗಳಡಗಿದುವಾಯುಧಿಷ್ಠಿರನೃಪನ ರಾಜ್ಯದಲಿ ॥ ೧೦

ನೃಗನ ಭರತನ ದುಂದುಮಾರನ
ಸಗರನಾಪುರುವಿನ ಪುರೂರನ
ಮಗನ ನಹುಷನ ಕಾರ್ತವೀರ್ಯಾರ್ಜುನ ನಳನ ದಶರಥನ ।
ಹಗಲಿರುಳುವಲ್ಲಭರ ವಂಶದ
ವಿಗಡರೊಳು ಯಮಸೂನು [1] ಸರಿಯೋ
ಮಿಗಿಲೊ ಬಲ್ಲವರಾರೆನಲು ಸಲಹಿದನು ಭೂತಳವ ॥ ೧೧

ದ್ವಾಪರದ ಮಱುಜವನಿಕೆಯಲ್ಲಿ
ದ್ವಾಪರವೊ ಕೃತಯುಗವೊ ಧರ್ಮದ
ರೂಪು ನಾನಾಮುಖದಲವತರಿಸಿತೊ ದಿಗಂತದಲಿ ।
ಸ್ಥಾಪಿಸಿತು ವರ್ಣಾಶ್ರಮದ ಧ
ರ್ಮೋಪಚಯವೆರಡಂಘ್ರಿ ಮುಱಿದು ವಿ
ರೂಪವಾದುದುದಧರ್ಮವೀಧರ್ಮಜನ ರಾಜ್ಯದಲಿ ॥ ೧೨

ಬಡಗಲುತ್ತರಕುರುಗಳತ್ತಲು
ಪಡುವಲುದಧಿ ವಿಭೀಷಣನ ಪುರ
ಗಡಿ ಕೃತಾಂತನ ದೆಸೆಗೆ ಮೂಡಲು ದಿನಪನುದಯಾದ್ರಿ ।
ಪೊಡವಿಯುವಱೊಳು ಯಮಜನಾಜ್ಞೆಗೆ
ನಡುಗುವುದು ರಾಯಂಗೆ ತೆತ್ತುದು
ಗಡ ಸುವಸ್ತುವನೇನಸಾಧ್ಯವು ಕೃಷ್ಣನೊಲಿದರಿಗೆ ॥ ೧೩

ಖಳನ ಸವೆದರು ಮೂಱುಯೋಜನ
ವಳಯದಲಿ ಪಡಿಯಗಳು ಕೋಟಾ
ವಳಯ ಸುಯ್ಧಾನದಲಿ ಹೊಯ್ದರು ರತ್ನಕಾಂಚನವ ।
ಕೆಲದೊಳ್ಯಗಾವುದದಲಿಕ್ಕಿದ
ತಳಯ ಮಧ್ಯದಲಖಿಳವಸ್ತ್ರ
ವಳಯಸೊಟ್ಟಿದರದಱ ಕೆಲದಲಿ ಭೂಪ ಕೇಳೆಂದ ॥ ೧೪

1 ರಲ್ಲಿಯು ಸೂಱು, ಚ.

ಹತ್ತು ಯೋಜನವಳಯದಲಿ ಮಿಗೆ
ಸುತ್ತು ವೇಲೆಯ ಮಧ್ಯದಲಿ ಹಯ
ಮತ್ತು ಗಜರಥಗೋಮಹಿಷವರಸೈರಿಭದ ಚಯಕೆ ।
ಉತ್ತಮಾಂಗನೆಯರಿಗೆ ಭವನಗ
ಳತ್ತ ಬೇಱಿರವಾಯ್ತು ನೃಪಯಾ
ಗೋತ್ತಮಕೆ ಪರುಠವಿಸಿದರು ಭೂಪಾಲ ಕೇಳೆಂದ ॥ ೧೫

ಬಳಿದ ಸೊದೆಗಳ ಭಾವಿನೂಱಱ
ವಳಯ ತುಂಬಿತು ತೈಲಘೃತಮಧು
ಗಳಲಿವರ ಗುಡಶರ್ಕರಾದಿಯ ಕಣಜಕೋಟಿಗಳು ।
ಕಳವೆಯಕ್ಕಿಯ ಕಡಲೆ ಗೋಧಿಯ
ತಿಲದ ರಾಸಿಯದೇಸು ಯೋಜನ
ದಳತೆಯೆಂದಾರಱಿವರೆಂದನು ಮುನಿ ನೃಪಾಲಂಗೆ ॥ ೧೬

ಶ್ರೀಕೃಷ್ಣನನ್ನು ಕರೆಕಳುಹಿಸೆಂದು ವ್ಯಾಸರ ಉಪದೇಶ.

ನೆರೆದುದರ್ಥವನಂತವವನೀ
ಶ್ವರರು ವಶವಾದರು ಚತುಸ್ಸಾ
ಗರದ ಮಧ್ಯದಲಾಣೆ ಸಂದುದು ಧರ್ಮನಂದನನ ।
ಕರೆಸಿ ಬೇಹವರನು ಮಹೀಶಾ
ಧ್ವರಕೆ ಸಮಯವಿದೆಂದು ಪಾರಾ
ಶರಿಯಧಿವ್ಯರು ಮಂತ್ರಶಾಲೆಯೊಳೆಂದರರಸಂಗೆ ॥ ೧೭

ಅರ್ಜುನನು ಕೃಷ್ಣನ ಬಳಿಗೆ ಬಂದು ಕರೆಯುವಿಕೆ.

ಹೋಗು ಫಲುಗುಣ ಕಂಸಮಥನನ
ಬೇಗ ಬಿಜಯಂಗೈಸಿ ತಾ ನೃಪ
ಯಾಗವಾತನ ಹೊಱ ಮದೀಯಜಯಾಭಿವೃದ್ಧಿಗಳು ।
ಆಗು ಹೋಗಾತನದು ತಟ್ಟೈಯ
ಯಾಗದೀಕ್ಷಣವೆನಲು ಮನದನು
ರಾಗದಲಿ ಕಲಿಪಾರ್ಥ ಬಂದನು ಕಂಡನಚ್ಯುತನ ॥ ೧೮

ಬಿನ್ನವಿಸಿದನು ದಿಗ್ವಿಜಯುಸಂ
ಪನ್ನವಸ್ತುವಿಧಾನವನು ಮೇ
ಲಿನ್ನು ದೇವರು ಬಲ್ಲಿರುತ್ತರಕಾರ್ಯಸಂಗತಿಯು ।
ನಿನ್ನ ಕೃಪೆಯಲಿ ರಾಜಮುಖನಿ
ಷ್ಪನ್ನವಾದೊಡೆ ಬೊಪ್ಪನಿಂದ್ರನ
ಮನ್ನಣೆಯು ವೈಸೋಂಕಿನೋಲಗಸುಲಭವ [1] ಹುದೆಂದ ॥ ೧೯

ಶ್ರೀಕೃಷ್ಣನ ಬರುವಿಕೆ.

ಕರೆಸಿ ಯಾದವನಾಯಕರ ಸಂ
ವರಣವನು ನಿಜಪುರದ ಕಾಹಿಂ
ಗಿರಿಸಿ ವಸು [2] ದೇವಂಗೆ ನೇಮಿಸಿ ಸಕಲರಕ್ಷಣವ ।
ತರಿಸಿ ಭಂಡಾರದಲಿ ವಿವಿಧಾ
ಭರಣರತ್ನಾವಳಿಯ ಹೇಱಿಸಿ
ಹರಿ ಧನಂಜಯನೊಡನೆ ಬಂದನು ಬಂಧುಜನಸಹಿತ ॥ ೨೦

ಕೃಷ್ಣ ಮತ್ತು ಧರ್ಮರಾಯನ ಸಂಭಾಷಣೆ.

ಇದಿರುವಂದನು ಧರ್ಮಸುತ, ಹರಿ
ಪದಪಯೋಜದಲೆಱಗಿದನು ನಿನ
ಗಿದು ವಿನೋದವಲೇ ವಿಮುಕ್ತಿಗೆ ಭಕ್ತಸಂತರಣ ।
ಕುದಿದು ಮಱುಗಿದುವಱಿಸಿ ನಿನ್ನಯ
ಪದವ ಕಾಣದೆ ಶ್ರುತಿಗಳಮ್ನಾಯ
ಸದನವಖಿಳಾಮ್ನಾಯನಿಕರವನೇಡಿಸುವುದೆಂದ ॥ ೨೧

ನಗುತ ಸಾಕೇಪೆನುತ ರಾಯನ
ನೆಗಹಿ ತಳ್ಕಿಸಿ ಕೈಯ್ಯ ತಳುಕಿನೊ
ಳಗಧರನು ನೃಪಸಭೆಗೆ ಬಿಜಯಂಗೈದನೊಲವಿನಲಿ ।

---

1 ಸುಭಗನ, ಚ. 2 ಬಲ ಚ.

ಮುಗಿದ ಕರದಲಿ ವ್ಯಾಸಧೌಮ್ಯಾ
ದಿಗಳು ವೈಯಿಕ್ಕಿದರಖಿಳಮಂ
ತ್ರಿಗಳು ಸಚಿವರು ನೆರೆದರಾಳೋಚನೆಯ ಭವನದಲಿ ॥ ೧೧

ಕಳುಹಿದರು ನಾನಾನೃಪರ ಮಂ
ಡಲಕೆ ದೂತರ ನಿಖಿಳಋಷಿಸಂ
ಕುಳಕೆ ಶಿಷ್ಯರ ಪರುಠವಿಸಿದರು ಹಸ್ತಿನಾಪುರಕೆ ।
ಕಳುಹಿದರು ನಕುಲನನು ಬಳಿಕಿ
ತ್ತಲು ನೃಪಾಧ್ವರಶಾಲೆಗಲ್ಲಿಯ
ನೆಲನ ಶೋಧಿಸಿ ಕರೆಸಿದರು ಬಹುವಿಧದ ಶಿಲ್ಪಿಗಳ ॥ ೧೨

ಯಾಗಶಾಲಾನಿರ್ಮಾಣ.

ಮಯನ ಮತದಲಿ ವಿಶ್ವಕರ್ಮನ
ನಯವಿವೇಕದಲಮಳಮಖಶಾ
ಲೆಯನು ನಿರ್ಮಿಸಿದರು ಸುಲಕ್ಷಣಶಾಸ್ತ್ರಸೂತ್ರದಲಿ ।
ನಿಯತಪತ್ನೀಶಾಲೆ ಜನವೇ
ದಿಯವರಾಂತರ್ವೇದಿ ಮುಖವೇ
ದಿಯ ಬಹಿರ್ವೇದಿಗಳನಳವಡಿಸಿದರು ಹಲದಲಿ ॥ ೧೩

ಬಿಗಿದ ಬಿಂಗಾರಿಗಳ ಮೇಲ್ಕ
ಟ್ಟುಗಳ ಮಣಿಮಯಸೂಸಕದ ಲೋ
ವೆಗಳ ಮುಖಮಂಟಪದ ಚೌರಿಯ ನವಫಲಾವಳಿಯ ।
ಹೊಗರ ನೀಲದ ಪರಿಯ ನೆಲಗ
ಟ್ಟುಗಳ ಚಪ್ಪರದೆಡೆಯ ಯೆಡೆ ಚಾ
ಕಿಗೆಯ ಚತುರಂಗದ ವಿಚಿತ್ರದ ರಚನೆ ಚೆಲುವಾಯ್ತು ॥ ೧೪

ಪುರದ ಹೊರವಳಯದಲಿ ಯಮುನಾ
ವರನದಿಯ ತೀರದಲಿ ಧರಣೀ
ಶ್ವರರಿಗರಮನೆ ಮಾಡಿದುವು ನವರತುನಮಯವಾಗಿ ।

---

1 ವಾಸ್ತು, ಕ.

ಸುರಪುರದ ಮಾರಾಂಕ ಭುಜಗೇ
ಶ್ವರನ ಭೋಗಾವತಿಯು ಶಿಲ್ಪದ
ಗುರುವೆನಿಸಿತೀನಗರ ನಾರಾಯಣನ ಕರುಣದಲಿ ॥ ೨೬

ಆರನೆಯ ಸಂಧಿ ಮುಗಿದುದು.

ಏಳನೆಯ ಸಂಧಿ.

ಸೂಚನೆ.

ಸುರರ ದುಂದುಭಿ ಮೊಳಗೆ ಧರಣೀ
ಶ್ವರನ ಚಿಂತೆಗಳಡಗೆ ಯಮಸುತ
ಪುರಕೆ ಪುರುಷಾಮೃಗಸಹಿತ ನಡೆತಂದನಾಭೀಮ ।

ಧರ್ಮರಾಯನ ಚಿಂತೆ.

ಕೇಳು ಜನಮೇಜಯ ಧರಿತ್ರೀ
ಪಾಲ ಮಾಡುವ ರಾಜಸೂಯಕೆ
ಲೀಲೆಯಲಿ ಬುಧಜನವ ನಾವ್ ಸಂತವಿಪ ತೆಱನೆಂತು ।
ಜಾಲವನು ಕರೆದುದಕೆ ತಕ್ಕುದು
ಪೇಟಲೀಸಲು ಭೋಜನೋತ್ತರ
ಮೇಲಣಱಿಯರದೇನು ಹದನೆಂದರಸ ಚಿಂತಿಸಿದ ॥ ೧

ತಿಳಿಯಲಱಿಯದೆ ಬೞಿಕಲವನಿಪ
ತಿಲಕ ಧೌಮ್ಯನ ಕರೆಸಿ ಬೆಸಗೊಳ್
ಬೞಿಯಲಾಯಮನಂದನಂಗಿಂತೆಂದನೊಲವಿನಲಿ ।

ಧೌಮ್ಯರ ಅಪ್ಪಣೆಯಂತೆ ಶ್ರೀಕೃಷ್ಣನ ಬಳಿ ಬರುವಿಕೆ.

ತಿಳಿಯದೆಮಗಿದು ಕೃಷ್ಣರಾಯನ
ಬೞಿಗೆ ಪೋಗೆಂದಧಿಕಬುದ್ಧಿಯ
ಕಲಿವೃದೆನಲವನೀಶನಾಮುನಿ ಯೆನುತ ಹೊಱವಂಟ ॥ ೨

ಕಾಲುನಡೆಯಲಿ ಬರುತಿರಲು ಕರು
ಣಾಳು ಪರಿತೋಷದಲಿ ಕಂಡು ನಿ
ಜಾಲಯಕೆ ಕೊಂಡೊಯ್ದು ನತಿಪರುಷದಲಿ ಧರ್ಮಜನ ।
ಲೀಲೆಯಲಿ ವಿವಿಧೋಪಚಾರದಿ
ಲಾಲಿಸಿದನಾಬಳಿಕಲಕ್ಷ್ಮೀ
ಲೋಲ ನುಡಿದಪನವನಿಪಾಲಕನುಚಿತವಚನದಲಿ ॥ ೩

ಧರ್ಮರಾಯನನ್ನು ಕುರಿತು ಕೃಷ್ಣನ ಪ್ರಶ್ನೆ.

ಏನು ಬಂದಿರಿ ಕಾರಿಯದ ಹದ
ನೇನು ನಿಮ್ಮಯ ರಾಜಸೂಯವಿ
ಧಾನ [1] ವಾವುದು ಹೇಳಿರೆನುತಸುರಾರಿ ಬೆಸಗೊಂಡ ।
ಮೌನವೇಕೆಲೆ ಧೌಮ್ಯಮುನಿ ಯಮ
ಸೂನುವಿನ ಮೊಗ ನೋಡೆ ನಸುನಗು
ತಾ ನರಾಧಿಪನಾಗಲಸುರಾರಾತಿಗಿಂತೆಂದ ॥ ೪

ದೇವ ಚಿತ್ತವಿಸುವುದು ನಿಮ್ಮ ಕೃ
ಪಾವಲೋಕನದಿಂದ ಸಕಲವು
ಹಾವಿಭವದಲಿ ನಡೆಯಬಹುದೊಂದುಳಿಯೆ ಬಳಿಕದನು ।
ನೀವು ಮಿಗೆ ಪೂರೈಸಿದೊಡೆ ಮೇ
ಲಾವಪರಿಯಲಿ ಕೊರತೆ ಯಿಲ್ಲೆಂ
ದಾವಿಮಲಮತಿ ನುಡಿದ ಬಳಿಕಿಂತೆಂದನಸುರಾರಿ ॥ ೫

ರಾಜಸೂಯದಲ್ಲಿ ಎಂಜಲಿನ ಶುದ್ಧಿಗ ಪುರುಷಾಮೃಗವನ್ನು ತರಿಸೆಂದು
ಕೃಷ್ಣನ ಅಪ್ಪಣೆ.

ಹೇಳಿ ನೀವಿದಕಂಜಲೇಕೆ ನೃ
ಪಾಲ ಯೆನೆ ಕೈಮುಗಿದು ಲಕ್ಷ್ಮೀ
ಲೋಲನಂಘ್ರಿಗೆ ನಮಿಸಿ ನಗುತೆಂಜಲಿನ ಶುದ್ಧತೆಗೆ ।

1 ಕನೂನ, ಡ.

ಹೇಳಿದಕೆ ಬುದ್ಧಿಯೆನೆ ತದ್ವನ
ಮಾಲಿ ಪುರುಷಾಮೃಗವನಿಲ್ಲಿಗೆ
ನಾಪೆ ಭೀಮನ ಕಳುಹಿ ತರಿಸೆನಲರಸನಿಂತೆಂದ ॥ ೬

ಜಗದುದರ ಚಿತ್ತವಿಸು ಪುರುಷಾ
ಮೃಗವದೆಲ್ಲಿಹುದೆನೆ ಕೃತಾಂತನ
ಮಗನೆ ಕೇಳುತ್ತರದ ಹೇಮಾಚಲದ ದಕ್ಷಿಣದ ।
ದಿಗುತಟದ ಮಾನಸಸರೋವರ
ಸಿಗಮವೇದಿಕವಗಳ ತೀರದ
ಲಘುಪರನನರ್ಚಿಸುತಲಿಹುದೆನಲರಸ ಬೀಳ್ಕೊಂಡ ॥ ೭

ಅದನ್ನು ಕರೆತರುವುದಕ್ಕಾಗಿ ಭೀಮನನ್ನು ಕರೆಸುವಿಕೆ.

ಬಂದನರಮನೆಗವನಿಪತಿ ಹರಿ
ನಂದನನ ಕರೆ ಯೆನಲು ದೂತರು
ಬಂದು ಬಾಗಿಲಗಾಹಿಗಳಿಗರುಹಿದರು ನಿಮಿಷದಲಿ ।
* ಬಂದನಣ್ಣನ ಚರಣಕಮಲ
ದ್ವಂದ್ವದಲಿ ಮೈಯಿಕ್ಕಿ ಬೆಸಸುವು
ದೆಂದು ಕೈಮುಗಿದಾತ ನಿಂದಿರಲೆಂದನಾನೃಪತಿ * ॥ ೮

ಅಣ್ಣನ ಅಪ್ಪಣೆಯಂತೆ ಭೀಮಸೇನನ ಪ್ರಯಾಣ.

ಭೀಮ ಬಾರೈ ಹೋಗು ಕರೆದಾ
ವ್ಯೋಮಕೇಶನನಗಣಿತಾಮಳ
ನಾಮನಗಜಾವರನ ನಿರ್ಮಳನಪ್ರಮೇಯನನು ।
ಪ್ರೇಮದಿಂದಾದರಿಪ ವರಸಿ
ಸ್ಸೀಮಪುರುಷಾಮೃಗವ ತಾ ಯೆನೆ
ಭೀಮ ಭೂಪತಿಗೆರಗಿ ಬೀಳ್ಕೊಂಡಡರಿದನು ರಥವ ॥ ೯

---

* ನಿಂದು ಕೈಗಳ ಮುಗಿದು ಸೂಚಿಸ
ಲಂದು ನಗುತುತ್ಸಾಹದೊಡನೈ
ತಂದು ಯಮನಂದನನ ಪಾದಕ್ಕೆರಗಿ ನಿಂದಿರ್ದ, * ಪ. ॥

ಪದದ ಬಲುಘಟ್ಟಣೆಗೆ ಭೂತಳ
ವೆದುರಿ ಹಸ್ತಾಂಗುಲಿಯ ತಾಕಿದೊ
ಡದುರಿ ಬಿದ್ದುವೊ ಭುಜಗರಾಜಿಗಳಂಘ್ರಿಮೇಲಾಗಿ |
ಗದೆಯ ತಿರುಹುತ ಸಿಂಹನಾದದೊ
ಳೊದಱೆ ಮೃಗನಿವಹಂಗಳೆದೆಗಳು
ಅದುರೆ ಭರದಿಂ ಭೀಮ ಬಂದನು ವನದ ಮಧ್ಯದಲಿ || ೧೦

ಬಂದನೀಪರಿ ಹಲವುಯೋಜನ
ದಿಂದ ಹೇರಡವಿಯಲಿ ಬರುತಿರ
ಲಂದು ಕಂಡನು ನಿರ್ಜಿತೇಂದ್ರಿಯನಾಜಿತೇಂದ್ರಿಯನ |
ಅಂದು ಕಮಲಾಂಬಕನ ಚರಣ
ದ್ವಂದ್ವಸರಸಿರುಹಭ್ರಮರ ಹರಿ
ವೃಂದವಂದ್ಯಕಪೀಂದ್ರ ಕೇಳಿದನೀಮಹಾಧ್ವನಿಯ || ೧೧

ಮಾರ್ಗಮಧ್ಯದಲ್ಲಿ ಹನುಮಂತನ ದರ್ಶನ ಮತ್ತು ಸಂಭಾಷಣ

ಏನಿದದ್ಭುತ ರಭಸವಿದು ಪವ
ಮಾನಜನ ನಿಷ್ಠುರದ ಸಿಂಹ
ಧ್ವಾನವಹುದೆನುತಂಜನಾಸುತ ಕೇಳಿ ಕಣ್ದೆಱೆದು |
ಧ್ಯಾನಿಸುತ್ತಿರೆ ಬಂದು ಪವನನ
ಸೂನು ಕಂಡಡಿಗೆಱಗಲಂದಾ
ವಾನರನು ತೆಗೆದಪ್ಪಿ ಮುಂಡಾಡಿದನು ವಿನಯದಲಿ || ೧೨

ಕ್ಷೇಮವೇ ಕಲಿಭೀಮ ನಿಮ್ಮಯ
ಭೂಮಿಪತಿಯಮಳರಿಗೆ ಮಿಗೆ ಸು
ತ್ರಾಮಸುತ ದ್ರೌಪದಿಸುಭದ್ರಾದೇವಿಮೊದಲಾದ |
ಕಾಮಿನೀಜನವಿದುರಧೃತರಾ
ಷ್ಟ್ರಾದಿಮಹಿಪತಿಯರಸಿ ಕುಂತಿ ಸ
ನಾಮರನಿಬರು ಕುಶಲರೇ ಹೇಳೆಂದನಾಹನುಮ || ೧೩

ಕುಶಲರನಿಬರು ಜೀಯ ದಾನವ
ಪಶುವಿದಾರಣನನುಪಮಾಜ್ಞೆಯ[1]
ಲೆಸೆವ ಯಜ್ಞದ ಪರಮವಿಭವದ ಲಲಿತಮಂಟಪಕೆ[2] |
ಪಶುಪತಿಯ ನಾಮಾಮೃತವ ಸೇ
ವಿಸುವ ಪುರುಷಾಮೃಗವ ತರಲೆಂ
ದೊಸೆದು ಬಂದೆನು ತಂದೆ ಚಿತ್ತೈಸೆಂದನಾಭೀಮ || ೧೪

ಅಹುದು ಬಚ್ಚಿಕೇನಲ್ಲದಿಲ್ಲಿಗೆ
ಬಹೊಡಿದುವೆ ಕಾರಣವೆ ಯೆನೆ ಸಂ
ಗ್ರಹಿಸಿತೆನ್ನಯ ಪುಣ್ಯಫಲದಿಂದದನೆ ಪಡಿವಿಡಿದು |
ಮಹಿತ ನಿನ್ನಯ ಚರಣದರ್ಶನ
ವಹುದಿದೆನ್ನಯ ಸುಕೃತಫಲದಿಂ
ದುದಿಸಿದರೆ ಘನವೇನು ತನಗೆನಲೆಂದನಾಹನುಮ || ೧೫

ಆಮೃಗದ ಶಕ್ತಿಯನ್ನು ಹೇಳಿ ತರುವ ಉಪಾಯವನ್ನು ಹೇಳುವಿಕೆ.

ಬಗೆಯಲಱಿಯದು ನಿನಗೆ ಪುರುಷಾ
ಮೃಗ ಮನೋವೇಗದಲಿ ನಡೆವುದು
ನಗೆಗೆಡೆಯ ಮಾಡಿದೆ ಯೆಲಾ ಕಲಿಭೀಮ ನೀನಿಂದು |
ಜಗದೊಳದಱೊಡನೈದಿ ಬರುವಾ
ವಿಗಡರಾರುಂಟೆನಲು ಕೈಗಳ
ಮುಗಿದು ನಿಂದನು ತಮ್ಮ ಕೃಪೆಯಿರಲಾವುದರಿದೆಂದ || ೧೬

ಆದೊಡಂಜದಿರಿನ್ನು ಭಾಷೆಯ
ಕಾದು ತೋಱುವೆನೆನ್ನ ಬಾಲದ
ಕೂದಲೊಳಗೇಪೆಂಟುರೋಮವ ಕಿತ್ತು ನೀಡೆನಲು |
ಕೈದುಡುಕಿ ತನಗುಳ್ಳ ಸತ್ವದೊ
ಳೃದೆ ಸೆಳದೊಡೆ ಮಿಡುಕದಿರಲು ವೃ
ಕೋದರನು ತಿರುಗಿದನು ಸಂಮುಖಕಾಕಪೀಶ್ವರನ || ೧೭

---

[1] ನಾಜ್ಞೆಯಿಂದಾ, ಡ. [2] ವಸುಮತೀಶನ ರಾಜಸೂಯಾಧ್ವರದ ವೈಭವಕೆ, ಡ.

ನಗುತಲಾವಾಯುವಿನ ಪುತ್ರನ
ಮೊಗವ ನೋಡುತ ವಜ್ರರೋಮವ
ನೊಗೆದು ಕಿತ್ತನು ಕರೆದು ಕೊಟ್ಟನು ಪವನನಂದನಗೆ |
ಅಗಜೆಯರಸನ ಭಕ್ತನನು ಕರೆ
ವಿಗಡ ನುಡಿಯನು ಬೇಗ ಬಪ್ಪೆ
ವೆಗನೆ ನಿನ್ನೊಡನೆಂದರಂಜದಿರೊಂದುರೋಮವನು || ೧೮

ಅವನಿಯೊಳಗೀಡಾಡಿದಾಕ್ಷಣ
ಶಿವಭವನಪುಷ್ಪಾಪಟಯುಸಂ
ಭವಿಸುವುದು ಕಂಡಾತನರ್ಚಿಸಲೊಂದು ರೋಮವನು |
ಪವನವೇಗದೊಳೈದುವುದು ಮಗು
ಳಿವನು ಬರೆ ಮತ್ತೊಂದು ರೋಮವ
ನವನಿಯಲಿ ಬಿಸುಡುವುದು ಕ್ರಮ ನಿನಗೆಂದು ಬೀಳ್ಕೊಟ್ಟ || ೧೯

ಧರಣಿಪತಿ ಚಿತ್ತೈಸು ಕಪಿಕುಲ
ವರನ ರೋಮವ ಕೊಂಡು ಬೀಳ್ಕೊಂ
ಡರಿವಿದಾರಣ ನಡೆದು ಗಿರಿಗುಹೆಗಳಲಿ ಮೃಗಪತಿಯ |
ಅಱಸುತ್ತೈತರಲಮಳಕಾಂಚನ
ಗಿರಿಯ ದಕ್ಷಿಣಭಾಗದಲಿ ಬರ
ಬರಲು ತೀಡಿತ್ತಮಳಸೌಗಂಧದಲಿ ಪವಮಾನ || ೨೦

ಪುರುಷಾಮೃಗದರ್ಶನ.

ಹಿತವನೈಯ್ಯನೆನುತ್ತ ಪವನನ
ಸುತನು ಗಂಧದ ವಾಸನೆಗೆ ಹಿ
ಗ್ಗುತ ಹುತಾಶನಸಖನ ಬಟಿವಿಡಿದೈದಿ ಬರಲಮೃತ |
ಮಥನದಲಿ ಸಂಭವಿಸಿದ ಮಹಾ
ಸತಿಯುಳನ್ನೆಡಿಸುವಳೆಂಬಳ [1]
ನತಿಶಯದಿ ಮೆಱೆದಿಹ ಮೃಗೇಂದ್ರನ ಕಂಡನಾಭೀಮ [2] || ೨೧

---

1 ರೂಪಿಂದತಿಶಯದಲ್ಲಾ, ಖ. 2 ಮೆಱೆವಮಳಸರಸಿಯ ಕಂಡನಾಭೀಮ, ಖ.

ಆಸರೋವರದೊತ್ತಿನಲಿ ವಿ
ನ್ಯಾಸದಖಿಳಾಂಗದಲಿ ಭೂತಿಯ
ಪೂಸಿ ಶಿಖೆಮೊದಲಾದರುದ್ರಾಕ್ಷಿಗಳ ನಯಪದದ |
ಆಶ್ರಯಿಸಿ ಹೃದಯಾಂಬುಜದಲಿ
ರ್ದಸದಾಶಿವ ಕಣೆಯ ಚಿಂತೆಯ
ಲೋಸರಿಸಿ ಮೆಱೆದಿಹ ಮೃಗೇಂದ್ರನ ಕಂಡನಾಭೀಮ ॥ ೧೨

ಆಸಮಯದಲ್ಲರಸ ಕೇಳ್ ನರ
ವಾಸನೆಯದೆಲ್ಲಿಯದೆನುತ ಹೃ
ದ್ವಿಕಸಮಾನಸರೋಜಮಧ್ಯದಿ ಮೆಱೆವ ಪರಶಿವನ |
ವಾಸನೆಯ ಬಿಸುಟನ್ಯಚಿಂತೆಯ
ಲಾಸುಷುಪ್ತಿಯ ತಿಳಿದು ಕಣ್ಣ ವಿ
ಲಾಸದಿಂದೀಕ್ಷಿಸಿದನಾಗವನೆದ್ದು ನಾಲ್ದೆಸೆಯ ॥ ೧೩

ಇದುವೆ ಸಮಯ ಮಹಾನುಭಾವನ
ಪದಯುಗವ ಕಾಣುವೊಡೆನುತ ನಿಜ
ಗದೆಯನೆಡೆಗೈಯ್ಯಿಂದ ಹಿಡಿದೀಕ್ಷಿಸಿದನಾಮೃಗನ |
ವದನವಿಕಸಿತವರಸರೋರುಹ
ವೊದಗೆ ಮೆಯ್ಯೊಳು ಹರುಷಪುಳಕದ
ಪೊದಱಿನಲಿ ಪೊಱೆಯೇಱೆ ನಡೆತರುತಿರ್ದನಾಭೀಮ ॥ ೧೪

ಭೀಮ ಪುರುಷಾಮೃಗರ **ಸಂಭಾಷಣೆ.**

ಬಂದನೀಶ್ವರಭಕ್ತನಡಿಗಳಿ
ಗಂದು ಮಕುಟವ ಚಾಚೆ ಪೇಳ್ದೈ
ಕಂದ ನೀ ಪೇೞಾರ ಮಗನಭಿಧಾನವೇನು ಪದ |

ಹದುಳಪುಳಕದೊಳದುರಿ ಕೊದಱಿದ
ಪದದಿ ಮಿಗೆ ನಡೆತಂದು ಸದಮಳ
ಹೃದಯನನು ಮಿಗೆ ನೋಡಿ ಬೇಗದಲೆಂದನಾಭೀಮ |

ಬಂದ ಕಾರ್ಯವದೇನು ಪೇಳೆನ
ಲಿಂದುವಂಶದಲುದಿಸಿದರು ಯಮ
ನಂದನಾದಿಗಳವರೊಳನಿಲಜ ಭೀಮ ತಾನೆಂದ ॥ ೨೫

ಆಮಹೀಪತಿ ರಾಜಸೂಯದ
ನೇಮವನು ಕೈಕೊಂಡು ಪರಮ
ಪ್ರೇಮದಲಿ ನಿಮ್ಮವನು ಬಿಜಯಂಗೈಸಿ ತಹುದೆಂದು ।
ನೇಮಿಸದೊಡಾಂ ಬಂದೆ ನೀ ನಿ
ಸ್ಸೀಮ ಕೃಪೆ ಮಾಡೆನಲು ನಸುನಗು
ತಾ ಮೃಗಾಧಿಪ ನುಡಿದನಾಪವಮಾನತನಯಂಗೆ ॥ ೨೬

ಆ ಮೃಗವು ತೊಂದರೆಮಾಡಲು ಹನುಮಂತನು ಕೊಟ್ಟಿದ್ದ ರೋಮವನ್ನು ಹಾಕುವಿಕೆ.

ಕೇಳು ಪವನಜ ನಿನ್ನೊಡನೆ ಬಹೆ
ನೇಟು ನಡೆ ಹಿಂದುಳಿದೊಡಾಕ್ಷಣ
ಕಾಲ ಹಿಡಿದಪ್ಪಳಿಸುವೆನು ಕೇಳೆನ್ನ ಭಾಷಿತವ ।
ಪಾಲಿಸೆನು ತಾನೆಂದು ನರಮೃಗ
ಕಾಲಪಿಡಿಯಲ್ಕೈದಿ ಬರುತಿರೆ
ಬಾಲದಲಿ ಕಿತ್ತಿರ್ದ ರೋಮವನೊಂದ ಹಾಯ್ಕಿದನು ॥ ೨೭

ಆ ರೋಮವು ಈಶ್ವರಮೂರ್ತಿಯಾದದ್ದು.

ಅವನಿಪತಿ ಕೇಳಾಕಪೀಂದ್ರನ [1]
ಹವಣ ನಿಂತಿಂತೆಂದು ವರ್ಣಿಸ
ಲೆವಗೆ ತೀರದು ರೋಮವೀಶ್ವರಮೂರ್ತಿ ತಾನಾಗಿ ।
ಭುವನದಲಿ ಸ್ವಾಯಂಭು ತಾನು
ದ್ಭವಿಸೆ ಪುರುಷಾಮೃಗವು ಕಂಡಾ
ಭವನನರ್ಚಿಸುತಿರಲು ಗಮಿಸಿದನೊಂದು ಯೋಜನವ ॥ ೨೮

---

1 ಮೃಗೇಂದ್ರನ, ಡ.

ಆಗ ಆಮೃಗವು ಈಶ್ವರಗನ್ನು ಪೂಜಿಸುವಿಕೆ.

ಇತ್ತ ಕೇಳೀಶ್ವರನನರ್ಚಿಸಿ
ಭಕ್ತಿಯಿಂದ ಸಮೀರಜನ ಅಱ
ಸುತ್ತಲೀಕ್ಷಿಸಿ ಭರದಿ ಹೋದೊಡಿದಾತನಿರ್ದೆಡೆಗೆ ।
ಚಿತ್ತವನು ಬೇಡಿಕೊಂಡೊಡಾಗಲೆ
ಹತ್ತಿ ಬರ ಮತ್ತೊಂದು ರೋಮವ
ನೆತ್ತಿ ಬಿಸುಡಲು ಶಂಭು ನೆಲಸಿದನಾತನಿದಿರಿನಲಿ ॥ ೨೯

ಕಂಡು ಪುರುಷಾಮೃಗಶರೀರವ
ದಿಂಡುಗೆಡಹಿತು ಜಯ ತ್ರಿಪುರಹರ
ರುಂಡಮಾಲಾಧರನೆ ಜಯ ತ್ರೈಲೋಕ್ಯಮುನಿವಂದ್ಯ ।
ಖಂಡಶಶಿಮೌಳಿ ಪ್ರಭಾಕರ
ರುಂಡತೇಜೋಭಾನುತಿಮಿರದ
ಗಂಡ ಜಯ ಜಯ ಜಯತು ಜಯ ಯೆಂದೆನುತ ಬೇಡಿಕೊಂಡ ॥

ಮತ್ತೆ ಕಾಣದೆ ಮರುತನೈದಿವ
ಮರ್ತ್ಯನಲ್ಲೆಂದೆನುತ ಮೃಗಕುಲ
ಪಾರ್ಥವಿಜಯನು ಹರನ ಬೇಡಿಕೊಂಡಾಗ ಮಾರುತನ ।

ಮತ್ತೆ ತೊಂದರೆಮಾಡಲು ರೋಮವನ್ನು ಹಾಕುವಿಕೆ.

ಪುತ್ರನನು ಬೆಂಬತ್ತಲೀಕ್ಷಿಸಿ
ಮತ್ತೆ ತೆರಹಿಲ್ಲೆನುತ ಬರಬರ
ಬತ್ತಿ ಬಿಸುಟನು ಭೀಮ ಧರಣಿಯಲೊಂದುರೋಮವನು ॥ ೩೧

ತಿರುಗಿ ಈಶ್ವರಾಕಾರವನ್ನು ಧರಿಸಲು ಅದನ್ನಾರಾಧಿಸುವಿಕೆ.

ಅರಸ ಕೇಳಾರೋಮವವೆಸಿಯೊ
ಳೊಱಸಿಕೊಱಗದ ಮುನ್ನ ಕೇಳಾ [1]
ಯುರವನೊಡೆದುದ್ಭವಿಸಿ ಶಿವ ಸಂಪೂರ್ಣಕಲೆಗಳಲಿ ।

---

1 ಧರೆಯ, ಙ.

ಇರಲು ಕಾಣುತ ಕಂಡು ಕುಸುಮವ
ತಳಿದು ತಂದು ಶಿವಾಗಮದಿ ವಿ
ಸ್ತರಿಸಿ ಸಿತಿಕಂಠನ ಪದಾಂಬುಜಕೆಱಗಿ ಬೀಳ್ಕೊಂಡ ‖ ೩೦

ನೋಡಿ ಕಾಣದೆ ಪವನಜನಿವನು
ರೂಢಿಗತಿಶಯನೆಂದು ಪರಮಾ
ರೂಢನೈವಲು ಕಾಣುತವನಿಯಲೊಂದುರೋಮವನು ।
ನೀಡೆ ಧರೆಯೊಳಗುದ್ಭವಿಸೆ ಮಿಗೆ
ನೋಡಿ ಪರಮೇಶ್ವರನನಾಗಳ
ಬೇಡಿಕೊಳುತಿರೆ ಮೃಗದ ಪತಿ ಬಟಿಕಂಧಕಾಂತಕನ ‖ ೩೩

ಧರಣಿಪತಿ ಕೇಳೀಶ್ವರನ ವರ
ಚರಣಕಮಲಾರ್ಚನೆಯೊಳಾಮೃಗ
ವಿರಲು ಪವನಜ ಸಱಿದನನಿಲನ ಭರವ ಕೈಕೊಂಡು ।
ಪರಿವಿಡಿಯಲಿವನೈದಿ ಬರೆ ಮುರ
ಹರನ ನೆನೆಯುತ ಬರಲು ಮೃಗಪತಿ
ಯುರವಣಿಸಲುಱಿದೊಂದು ರೋಮವನವನಿಯಲಿ ಬಿಸುಟ ೩೪

ಭೀಮಸೇನನ ಚಿಂತೆ.

ಬಟಿಕ ಕರದಲಿ ರೋಮವಿಲ್ಲದೆ
ಕಳವಳಿಸುತತಿವೇಗದಲಿ ವೆ
ಗ್ಗಳಿಸಿ ಬರುತಿರಲವನಿಪನ ರಾಜ್ಯವ ನಿರೀಕ್ಷಿಸುತ ।
ಅಳುಕದವನಿಯು ಪೊಕ್ಕು ನಗರಾ
ವಳಿಯು ಗ್ರಾಮಂಗಳ ನಿರೀಕ್ಷಿಸಿ
ಬಟಿಕ ದೇವನ ಚರಣಯುಗಳವ ನೆನೆಯುತ್ತೈತಂದ ‖ ೩೫

ಬಂದುಯೋಜನವಾರಣಾವತ
ವೆಂದು ಕಂಡುತ್ಸವದಿ ಭಯಗೊಳು
ತಂದು ಹೊಕ್ಕನು ಬಟಿಕ ತಾನಧ್ವರದ ಬಾಗಿಲಲಿ ।

ಭೀಮಸೇನನು ಬೀಳಲು ಅರ್ಜುನನು ಎತ್ತುವಿಕೆ.

ಬಂದು ಪವನಜನೆಡಹಿ ಬೀಳೆ ಪು
ರಂದರನ ನಂದನನು ಕರವಿಡಿ
ದಂದು ಮೃಗ ಕಾಳ್ಪಿಡಿಯಲುಭಯರಿಗಾಯ್ತು ಸಂವಾದ ॥ ೩೬

ಅರ್ಜುನ ಪುರುಷಾಮೃಗರ ಸಂವಾದ.

ಇತ್ತ ತೆಗೆಯೆ ಧನಂಜಯನು ಮಗು
ಳತ್ತ ತೆಗೆವ ಮೃಗೇಂದ್ರನತ್ತಲು
ಮತ್ತೆ ತೂಗುವಸೀಶ್ವರಾರ್ಚಕನಿತ್ತ ಬರಸೆಳೆವ ।
ಅತ್ತಲಿತ್ತಲು ತೆಗೆಯಲಿಬ್ಬರ
ಸತ್ವ ಸರಿಯದು ನಡುವೆ ಪವನಜ
ನತ್ಯಧಿಕಜೆಂಡಾದನೈ ಭೂಪಾಲ ಕೇಳೆಂದ ॥ ೩೭

ಆಸಮಯದಲಿ ಕೃಷ್ಣ ಸಹಿತವ
ನೀಶ ಬಂದನು ಭೀಮ ಮಾಡಿದ
ಭಾಷೆಯನು ಕೇಳಿವನು ಪುರುಷಾಮೃಗವನೀಕ್ಷಿಸುತ ।
ಲೇಸ ಮಾಡಿದೆ ಧರ್ಮಸೂತ್ರವಿ
ಲಾಸವನು ನೀನರಿದಿಹೆ ಎನಲು ಮೃ
ಗೇಶ ಕೇಳ್ಕಾಯಕ್ಕೆ ಮುಖ್ಯ ಶಿರವೆಲಾಯೆಂದ ॥ ೩೮

ಎನುತ ಪುರುಷಾಮೃಗಕೆ ಧರ್ಮಜ
ಜನಪನೆಂದನು ಜಘನಕಾಲ್ಗಳು
ನಿನಗೆ ಮಿಕ್ಕಶಿರಸ್ಸು ದೇಹವು ತನ್ನದಾಯಿತೆನೆ ।
ತನತನಗೆ ಕೊಂಡಾಡಿ ಪಾರ್ಥಿವ
ಜನವೊಡಂಬಡೆ ಯೀಶಭಕ್ತನ
ಮನಕಿವಹುದೆನೆ ಧರ್ಮಸೂಕ್ಷ್ಮಾಧರ್ಮವನು ನುಡಿದ ॥ ೩೯

ಸರ್ವಗಾತ್ರಂಗಳಿಗೆ ಶಿರ ತಾ
ಸರ್ವಇಂದ್ರಿಯಗಳಿಗೆ ನೇತ್ರವು
ಸರ್ವಶೃಂಗಾರಕ್ಕೆ ವಸ್ತ್ರವು ಬೀಜಮಾತ್ರವಲೈ ।

ಸರ್ವಸಂಭಾರಕ್ಕೆ ಲವಣವು
ಸರ್ವಶಾಸ್ತ್ರಕೆ ಪ್ರಕರಣವು ಮಿಗೆ
ಸರ್ವಜನಕಭಿಮತವು ಚಿತ್ತೈಸೆಂದನಾಭೂಪ ॥ ೪೦

ಎಂದು ಧರ್ಮಕಥಾಪ್ರಸಂಗ
ಕ್ಕಂದು ಪುರುಷಾಮೃಗವ ತಿಳುಹಲಿ
ಕಂದು ನಗುತನಿಲಜನ ಕಾಲ್ಗಳ ಬಿಟ್ಟು ಹೊರೆಹಿಂಗಿ ।
ಸಿಂದಿರಲು ಕಲಿಭೀಮನೆದ್ದು ಮು
ಕುಂದನಂಘ್ರಿಗೆ ನಮಿಸಿ ಕಾಲನ
ನಂದನಂಗೆಱಗಿದನು ಮುನಿಸಂಕುಲಕೆ ಕೈಮುಗಿದು ॥ ೪೧

ಕೃಷ್ಣನ ಪ್ರಶ್ನೆ.

ವಂದಿಸಿದ ಪುರುಷಾಮೃಗಕೆ ಬೞಿ
ಕೆಂದನೆನ್ನಯ ಭಾಷೆ ಸಂದುದೆ
ತಂದೆ ಯೆನೆ ತಲೆದೂಗಲಸುರಾರಾತಿ ಬೞಿಕದನು ।
ತಂದು ಭೋಜನಶಾಲೆಯಲಿ ಬೞಿ
ಕೊಂದು ಸ್ವರ್ಣಸ್ತಂಭವಲಿ ಬಂಧಿಸಿ
ಸಂದುದೇ ನಿಮ್ಮಿಷ್ಟವೆಂದನು ಭೂಪ ಕೇಳೆಂದ ॥ ೪೨

ಧರ್ಮರಾಯನ ಉತ್ತರ.

ದೇವ ನಿಮ್ಮಂಘ್ರಿಗಳ ಕೃಪೆಯಿರ
ಲಾವುದರಿದೈ ವರಶರೀರದ
ಜೀವನವು ನೀವಲ್ಲದುೞಿದರಿಗುಂಟೆ ಜಗವಱಿಯೆ ।
ಭಾವಮೈದುನನಣ್ಣ ನಿಂತೆನೆ
ಭಾವನಿಗೆ ನೀನಂಜಬೇಡಂ
ದೋವಿ ಕರುಣಾಸಿಂಧು ಸಂತೈಸಿದನು ಧರ್ಮಜನ [1] ॥ ೪೩

---

[1] ಪವನಜನ, ಡ.

ಅರಸ ಕೇಳಾವೇಳೆಯಲಿ ಶಚಿ
ಯರಸ ಸಕಲದಿವೌಕಸರುಗಳು
ವೆರಸಿ ಪುಷ್ಪಕಮಾರ್ಗದಿಂದೈತಂದು ರುಕ್ಮಿಣಿಯ ।
ಅರಸನನು ಕೀರ್ತಿಸುತಲಾಪುರ
ವರವರಸಿ ಮಾಲಿಕೆಯ ಪುಷ್ಪದ
ಸರಿವಡೆಯ ಹೊನಲಿನಲಿ ಬಂದರು ಮರಳಿದರು ಪುರಕೆ ॥ ೪೪

ಏನನೆಂಬೆನು ಭೂಪ ಕಾಲನ
ಸೂನುವಿನ ಸುಮ್ಮಾನವನು ಪವ
ಮಾನನಂದನನುತ್ಸಹವನರ್ಜುನನ ಹರುಷವನು ।
ಮಾನನಿಧಿಮಾದ್ರೀಕುಮಾರರ
ಸಾನುಭಾವವನಾಮಹೀಶನ
ಮಾನಿನಿಯ ಮನದೊಲವನಭಿವರ್ಣಿಸುವೊಡರಿದೆಂದ ॥ ೪೫

ಅರಸ ಕೇಳ್ ಕೃಷ್ಣಂಗೆ ಕೃಪಾಳುಗ
ಳರಸಗೆಲ್ಲರು ಮೃಗವರನ ಶಂ
ಕರಸಮಾರಾಧನೆಗೆ ಪದನೇನೆಂದು ಕೈಮುಗಿಯೆ ।
ಅಱುಹಿದನು ಕಟ್ಟಿದರ್ ಕಂಭದಿ
ಹರನ ಹರಿ ನಿರ್ಮಿಸಲು ಪರಿನತಿ
ಭರದಿ ಪಾವನಮೂರ್ತಿ ಬಿಜಯಂಗೈದನೊಲವಿನಲಿ ॥ ೪೬

ಆಮುಕುಂದನ ಕೆಲಬಲದಲಾ
ಭೂಮಿಪತಿ ವಿದುರಾದಿಗಳು ಹಿಂ
ದಾ ಮುನೀಶ್ವರನಿಕರವೆನಿಬರ ಹಿಂದೆ ಭೂವರನು ।
ಹೋಮಶಾಲೆಗೆ ನಡೆದು ಕೃಷ್ಣನ
ನೇಮದಲಿ ತಂತಮ್ಮ ಠಾಣದ
ಸೀಮೆ ತಪ್ಪದೆ ತನತನಗೆ ಕುಳ್ಳಿರ್ದರೊಲವಿನಲಿ ॥ ೪೭

ಮತ್ತೆ ಚಿತ್ರೈಸಾ ಮೃಗೇಂದ್ರನ
ಸುತ್ತ ಮುತ್ತಿ ಮಹೋತ್ಸವದಿ ನೋ
ಡುತ್ತ ಭೂಮೀಪಾಲಕರು ತಲೆದೂಗಿ ಪವನಜನ ।
ಸತ್ವವನು ತಮತಮಗೆ ಕೊಂಡಾ
ಡುತ್ತ ಮಿಗುಚವರಿಗೆ ಸರೋರುಹ
ನೇತ್ರನಿರಲರಿದಾವುದೆಂದುದು ಮುನಿಜನಸ್ತೋಮ ॥ ೪೮

ಆಮೃಗಾಧಿಪನಾಗ ಯಾಗದ
ಲಾಮಹಾವಿಭವವ ನಿರೀಕ್ಷಿಸು
ತಾ ಮಹೇಶನ ಕಂಡು ಕರಗಳನೆತ್ತಿ ಕೈಮುಗಿದು ।
ಪ್ರೇಮದಿಂದಲೆ ಹೃದಯಸರಸಿಜ
ಸೀಮೆಯಲಿ ತಂದಿರಿಸಿ ತಾನಿ
ಷ್ಕಾಮತೆಯಲಭವನನು ಭಜಿಸುತ್ತಿದ್ದನೊಲವಿನಲಿ ॥ ೪೯

ಅವನಿಪತಿ ಕೇಳಂದು ಭೂಮಿಪ
ನಿವಹವಾಪುರುಷಾಮೃಗದ ಕಾ
ಯವ ನಿರೀಕ್ಷಿಸಿ ಹೋಹುದೀಪರಿವಿಡಿಯಲನುದಿನವು ।
ದಿವಸವೇಳ್ಪರಿಯಂತ ಹಗಲಿರು
ಳವಧಿಯಿಲ್ಲದೆ ನಡೆದುದಾಯಾ
ಪವಶಿರೋಮಣಿವೀರನಾರಾಯಣನ ಕರುಣದಲಿ ॥ ೫೦

ಏಳನೆಯ ಸಂಧಿ ಮುಗಿದುದು.

ಎಂಟನೆಯ ಸಂಧಿ.

ಸೂಚನೆ.

ಸಕಲಋಷಿಮುಖ್ಯರು ಮಹೀಪಾ
ಲಕರು ನೆರೆದರು ವಿಶ್ವಭೂತ
ಪ್ರಕರ ದಣಿದುದು ಧರ್ಮಪುತ್ರನ ರಾಜಸೂಯದಲಿ ||

ನಾನಾದೇಶದಿಂದ ರಾಜಾದಿಗಳು ಬರುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ದೂತರು ಹರಿದರವನೀ
ಪಾಲರಿಗೆ ಋಷಿಗಳಿಗೆ ಭೂಸುರವೈಶ್ಯಶೂದ್ರರಿಗೆ |
ಹೇಳಲೇನದ್ಭುತವನಂಬುಧಿ
ವೇಳೆ ಗಡಿ ಮಧ್ಯದ ಸಮಸ್ತಜ
ನಾಳಿ ನೆರೆದುದು ಪಿಳಸದಿಂದ್ರಪ್ರಸ್ಥನಗರಿಯಲಿ || ೧

ಚೋಳಸಿಂಹಳಪಾಂಡ್ಯಕೇರಳ
ಮಾಳವಾಂಧ್ರಕರೂಷಬರ್ಬರ
ಗೌಳಕೋಸಲಮಗಧಕೈಕಯಹೂಣಪಮ್ಮೀರ |
ಲಾಳಜೋನಗಬೋಟವರನೇ
ಪಾಳಶಿಬಿಕಾಶ್ಮೀರಭೋಟವ
ರಾಳಬಹುದೇಶಾಧಿಪತಿಗಳು ಬಂದರೊಲವಿನಲಿ || ೨

ಭೂರಿಭೂರಿಶ್ರವನು ಬಾಹ್ಲಿಕ
ಶೂರಸೇನಕಳಿಂಗಶಲಗಾಂ
ಧಾರಸೌಬಲಸೋಮದತ್ತಸುಷೇಣಭಗದತ್ತ |

ವೀರಪೌಂಡ್ರಕನೇಕಲವ್ಯಸು
ರಾರಿಗಳು ಶಿಶುಪಾಲನವನ ಕು
ಮಾರಗೌಳವದಂತವಕ್ರರು ಬಂದರೊಗ್ಗಿನಲಿ ॥ ೩

ಸಕಲದಳ ಮೇಳಾಪದಲಿ ಭೀ
ಷ್ಮಕರುಕ್ಮಕರು ಚಿತ್ರರಥಸಾ
ಲ್ವಕರು ರೋಚಮಾನಸಮುದ್ರಸೇನಕರು ।
ಪ್ರಕಟಬಲರುತ್ತರದಿಶಾಪಾ
ಲಕರು ಕುರುಪರಿಯಂತರಾಜ
ಪ್ರಕರ ಬಂದುದು ನೆರೆದುದಿಂದ್ರಪ್ರಸ್ಥನಗರಿಯಲಿ ॥ ೪

ದ್ರುಪದಧೃಷ್ಟದ್ಯುಮ್ನರಣಲೋ
ಲುಪಯುಧಾಮನ್ಯೂತ್ತಮೌಜಸ
ರುಪಚಿತರು ಬಂದರು ಸಗಾಢದಲಿವರಬಾಂಧವರು ।
ಕೃಪಜಯದ್ರಥಭೀಷ್ಮಮದ್ರಾ
ಧಿಪತಿಕರ್ಣದ್ರೋಣಮೊದಲಾ
ದಪರಿಮಿತಬಲಸಹಿತಕೌರವರಾಯನೈತಂದ ॥ ೫

ಗುರುತನೂಜಸುಶರ್ಮವಂಗೇ
ಶ್ವರಬೃಹದ್ರಥಭೀಮರಥದು
ರ್ಮರುಷಣನು ವರಭಾನುದತ್ತವಿಕರ್ಣದುಸ್ಸಹರು ।
ವರವಿವಿಂಶತಿದೀರ್ಘಭುಜದು
ರ್ದರುಶದುರ್ಜಯಶಂಕುಕ
ರ್ಣರು ಸಹಿತದುಶ್ಶಾಸನನು ನಡೆತಂದನೊಲವಿನಲಿ ॥ ೬

ಬಂದುದೈ ಚತುರಂಗದವನಿಪ
ವೃಂದವವರವರುಚಿತ ಮಿಗಿಲಿದಿ
ರ್ವಂದು ಭೀಷ್ಮದ್ರೋಣಕೃಪಧೃತರಾಷ್ಟ್ರರಿಗೆ ನಮಿಸಿ ।

ವಂದನೀಯರಿಗೆರಗಿ ಸಮರಿಗೆ
ನಿಂದು ಸಕಲ [1] ಕ್ಷೇಮಸಂಗತಿ
ಯಿಂದ ಸತ್ಕರಿಸಿದನು ನೃಪ ವಿದುರಾದಿಬಾಂಧವರ ‖ ೭

ಜನಪ ಕೇಳೀಚೆಯಲಿ ಬಂದರು
ಮುನಿಗಳಂಗಿರಕಣ್ವಭೃಗುಜೈ
ಮಿನಿಸುಮಂತರು ಕಂಕಶೌನಕಾಗಸ್ತ್ಯಬೃಹದಶ್ವ ।
ಸನಕಶುಕಜಾಬಾಲಿತಿತ್ತಿರಿ
ವಿನುತಮಾರ್ಕಂಡೇಯಮುದ್ಗಲ
ತನಯರೋಮಶರೈಭ್ಯಮೊದಲಾದಖಿಳಮುನಿವರರು ‖ ೮

ಚ್ಯವನಗೌತಮವೇಣುಜಂಘ
ಪ್ರವರಕೌಶಿಕಸತ್ಯತಪಭಾ
ರ್ಗವಸುಮಾಲಿಸುಮಂತ್ರಕಶ್ಯಪಯಾಜ್ಞವಲ್ಕ್ಯಮುನಿ ।
ಪವನಭಕ್ಷಣದೀರ್ಘತಪಗಾ
ಲವನು ಶಿತಶಾಂಡಿಲ್ಯಮಾಂಡ
ವ್ಯವರರೆಂಬ ಮಹಾಮುನೀಂದ್ರರು ಬಂದರೊಗ್ಗಿನಲಿ ‖ ೯

ದೇಶದೇಶಾಂತರದ ವಿದ್ವ
ದ್ಭೂಸುರರು ಮೊದಲಾಗಿ ವರ್ಣನಿ
ವಾಸಿಗಳು ಫಲಮೂಲದಧಿಘೃತದುಗ್ಧಭಾರದಲಿ ।
ಆಸಮಸ್ತಮಹೀತಳದ ಧನ
ರಾಶಿ ಜನಸಂತತಿಯುವೇಕಸಿ
ವಾಸದಲಿ ನೆಜಿ ಕಾಣಲಾಯ್ತು ಮಹೀಶ ಕೇಳೆಂದ ‖ ೧೦

ವಿಕಳವಾಮನಮೂಕಬಧಿರಾಂ
ಧಕರು ಮಾಗಧಸೂತವಂದಿ
ಪ್ರಕರಮಲ್ಲಮಹೇಂದ್ರಜಾಲಮಹಾಹಿತುಂಡಿಕರು ।

---

1 ಕುಶಲ, ಕ. ಖ.

ಸುಕವಿತಾರ್ಕಿಕವಾಗ್ಮಿ ವೈತಾ
ಳಿಕಸುಗಾಯಕಕಥಕಕಾರ್ತಾಂ [1]
ತಿಕರು [2] ನೆರೆದುದು ನಿಖಿಳಯಾಚಕವೃಂದ ಸಂದಣಿಸಿ ॥ ೧೧

ಧರ್ಮರಾಯನು ಭೀಷ್ಮರನ್ನು ಕುರಿತು ಪ್ರಾರ್ಥಿಸುವಿಕೆ.

ಕರೆಸಿ ಭೀಷ್ಮಂಗೆಱಗಿ ನುಡಿದನು
ಧರಣಿಪತಿ ಬಾಲಕರು ನಾವ
ಧ್ವರವಿದಗ್ಗ ದರಾಜಸೂಯ ಮಹಾಮಹೀಶ್ವರರು |
ನೆರೆದುದವನೀಪಾಲ [3] ಜನವಾ
ದರಿಸಲಱಿಯೆನು ಹೆಚ್ಚು ಕುಂದಿನ
ಹುರುಳ ನೀವೇ ಬಲ್ಲಿರೆಂದನು [4] ಮುಗಿದು ಕರಯುಗವ | ೧೨

ಚಿಂತೆ ಯೇಕೈ ಕೃಷ್ಣನಾರೆಂ
ದೆಂತು ಕಂಡೆ ಚತುರ್ದಶಾರ್ಥದ
ತಂತುರೂಪನು ತಾನೆ ಯೆನ್ನದೆ ನಿನಗೆ ಶ್ರುತಿವಚನ |
ತಂತುವಿನ ಪಟ ಮೃತ್ತಿಗೆಯ ಘಟ
ದಂತೆ ಜಗವೀತನಲಿ ತೋರ್ಕುವು
ರಾಂತಕನ ಸುಯ್ಧ್ಯಾನ ನಿನಗಿರಲಂಜಲೇಕೆಂದ ॥ ೧೩

ಕರೆಸು ಧೌಮ್ಯಾದಿಗಳನಿಲ್ಲಿಯ
ಪರುಠವವ ಮಾಡೆಂದು ಭೀಷ್ಮನು
ಗುರುಸಹಿತ ಕೈಕೊಂಡನಲ್ಲಿಯ ಮೇಲೆ ನೋಟವನು |

ರಾಜಸೂಯದಲ್ಲಿ ನೆರೆದ ಜನಗಳು ಕಾರ್ಯನಿರ್ವಹಿಸಿದ ಕ್ರಮ.

ಅರಸ ಕೇಳ್ ಧೃತರಾಷ್ಟ್ರ ಬಾಹ್ಲಿಕ
ವರಬೃಹದ್ರಥ ಸೋಮದತ್ತರು
ಪರಮಪೂಜ್ಯರು ಮಾನನೀಯರು ಯಜ್ಞವಾಟದಲಿ ॥ ೧೪

---

1 ಮಾರ್ಗಂ, ಚ. 2 ಗಿಕರು, ಚ.
3 ಖಿಲದ್ವೀಪ, ಚ. 4 ಕುರುಡ ನೀಕ್ಷಿಸಲಾಗದೆಂದನು, ಚ.

ಸವನಸಾಧನಸರ್ವಸಂಭಾ
ರವನು ಧೌಮ್ಯರು ತರಿಸಿ ಕೊಡಿಸುವ
ರವನಿಪತಿಗಳ ಪಾರಪತ್ಯದ ನೋಟ ಸಂಜಯಗೆ ।
ವಿವಿಧಋಷಿಯಾಜ್ಞಿಕರು ಮಾಂತ್ರಿಕ
ನಿವಹ ಸಹದೇವಂಗೆ ಭೋಜ್ಯ
ಪ್ರವರದಧಿಕಾರದ ನಿಯೋಗ ಯುಯುತ್ಸುವಿನ ಮೇಲೆ ॥ ೧೫

ನೆರೆದ ಭೂಸುರತತಿಯ ನೋಟಕೆ
ಕರೆದು ಕುಳ್ಳಿರಿಸುವುದು ಸಾತ್ಯಕಿ
ಭರದಿನಂಜಲ ತೆಗೆಸಿ ಸಾರಿಸುವುದು ವಿಕರ್ಣಂಗೆ ।
ಅರಸ ಕೇಳ್ ಭೋಜನದ ಸಮನಂ
ತರದ ವೀಳೆಯ ಗಂಧಮಾಲ್ಯಾಂ
ಬರವನೀವಧಿಕಾರ ದುಶ್ಶಾಸನನ ವಶವಾಯ್ತು ॥ ೧೬

ವಿತತಭೂಸುರದಕ್ಷಿಣೆಗೆ ಗುರು
ಸುತ ನಿಯೋಗಿ ಸಮಸ್ತವಸ್ತು[1]
ಪ್ರತತಿಗಳನಾರೈದು ತರಿಸುವನಾಕೃಪಾಚಾರ್ಯ ।
ಘೃತಮರಿಚಮಧುತೈಲಪರಿಮಳ
ಸಿತಲವಣಸಂಭಾರಶಾಕೋ
ಚಿತಸುವಸ್ತುವ ಕೊಡುವ ಕೊಂಬಾರೈಕೆ ವಿದುರಂಗೆ ॥ ೧೭

ಅರಸ ಕೇಳೈ ಪಾಕಶಾಲೆಯ
ಹಿರಿಯಪಂಕ್ತಿಗಳೊಳು ಚತುರ್ದಶ
ಕರಿಗಳೆಡೆಯಾಡುವುವು ತತ್ಸಂಭಾರಗಳ ಹೇಱಿ ।
ಹರಿವ ರಜತದ್ರೋಣಿಯಲಿ ಸುರಿ
ಸುರಿದು ನೀಡುವ ರಾಟಳಂಗಳ
ಲೆಱೆವ ಮಧುಘೃತತೈಲಧಾರಾರಚನೆ ಚಲುವಾಯ್ತು ॥ ೧೮

---

1 ರತ್ನ, ಚ.

ಧರಣಿಪತಿ ಕೇಳ್ದ್ರುಪಮೊದಲಾ
ಗಿರೆ ಸಮಸ್ತಪ್ರಜೆವಿಧಾವಂ
ತರಿಗೆ ಭೋಜನಗಂಧಮಾಲ್ಯಾಂಬರವಿಲೇಪನವ |
ಉರುನಿಯೋಗಿಗಳಿಂದ್ರಸೇನನು
ವರವಿಶೋಕನು ರುಕ್ಮನತಿಬಂ
ಧುರಸಮೀರಪತಾಕಸೇನನು ಸೂತರೈವರಿಗೆ ॥ ೧೯

ಅರಸ ಕೇಳೈ ಬಳಿಕ ಪೃಥ್ವೀ
ಶ್ವರರಿಗಭಿನವಗಜರಥಾವಳಿ
ತುರಗಶಸ್ತ್ರಾಸ್ತ್ರಗಳ ಸೇವೆ ನಿಯೋಗ ಕರ್ಣನದು |
ಕರೆಕರೆದು ಯೋಗ್ಯಾತಿಶಯವೆಱು
ದಿರದೆ ಯೋಷಿಜ್ಜನವ ಮದ್ರೇ
ಶ್ವರನು ಕೊಡುವವನಾದನಧಿಕೋತ್ಸವದ ಸಿರಿ ಮಿಗಲು ॥ ೨೦

ಸಕಲಮಣಿಕಾಂಚನದುಕೂಲ
ಪ್ರಕರ ದುರ್ಯೋಧನನ ವಶವಾ
ನಕುಲನವರವರುಚಿತವೃತ್ತಿಯು ಮಧುರವಚನವಲಿ |
ಪ್ರಕಟಿಸುವೆನವನಿಪರ ಸೇನಾ
ನಿಕರದಾರೈಕೆಗಳು ಪಾಂಚಾ
ಲಕಪತಿಗೆ ರಂಜಿಸಿತು ಮುಱ ಪರಿಪಾಟಿ ಪರುಷವದ [1] ॥ ೨೧

ಯಾಗಸಾಧನವು ಸಿದ್ಧವಾಗುವಿಕೆ.

ಆದುದನುಪಮಕುಂಡವಂತ
ವೇದಿಯು ಸಮೀಪದಲಿ ಹೊಱೆಗಳ
ಶೋಧಿಸಿದ ಯಿಧ್ಮದ ಕುಶಸ್ಥಂಡಿಲದ ಸೀಮೆಯಲಿ |
ಆದರಿಸಿ ಪರಿಚಾರಕರು ಸಂ
ಪಾದಿಸಿದ ಘೃತಚರುಪುರೋಡಾ
ಶಾದಿಸಂಭಾರಂಗಳಾಗನುವಾಯ್ತು ನಿಮಿಷದಲಿ ॥ ೨೨

---

[1] ಲಕನಿಗಾದುದು ರಂಜಿಸಿತು ಪರಿಪಾಟಿಯೊಡ್ಡವಣೆ, ಚ.

ಅಧ್ವರ್ಯೂದ್ಗಾತೃಹೋತೃಗಳ ವ್ಯವಸ್ಥೆ.

ಕರೆಸಿದರು ಋತ್ವಿಕ್ಕುಗಳನ
ಧ್ವರ್ಯುವಾದನು ಯಾಜ್ಞವಲ್ಕ್ಯನು
ವರಸುಮಿತ್ರಾಂಗಿರಸರುಗಳುದ್ಗಾತೃ ಹೋತೃಗಳು |
ಪರಮಋಷಿ ಮುನಿಕಣ್ವಕರತಿ
ತ್ರಿರಿಗಳಗ್ನೀಧ್ರಾದಿಜನಪಾ
ಧ್ವರಸಿಯೋಗಿಗಳಾಯ್ತು ವೇದವ್ಯಾಸನಾಜ್ಞೆಯಲಿ || ೨೩

ಆಸದಸ್ಯತ್ವವನು ವೇದ
ವ್ಯಾಸ ಕೈಕೊಂಡನು ಮುನೀಂದ್ರನು
ವಾಸವಾಜರು ಧೌಮ್ಯಋಷಿಮುನಿಸಪ್ತನಾರದರು |
ಭೂಸುರರು ಸಾಮಾಜಿಕರು ಧರ[1]
ಣೀಶಯಜ್ಞೋಪಕ್ರಮದ ವಿ
ನ್ಯಾಸದಲಿ ಬಂದನು ಯುಧಿಷ್ಠಿರನಚ್ಯುತನ ಹೊರೆಗೆ || ೨೪

ಧರ್ಮರಾಯನು ಕೃಷ್ಣನನ್ನು ಪ್ರಾರ್ಥಿಸುವಿಕೆ.

ದೇವ ನಿಮ್ಮಡಿಕರುಣದಲಿ ಸಕ
ಲಾವನೀಪತಿವಿಜಯ ಬಹಳಾ
ರ್ಥಾವಲಂಬನವೀಮಖಪ್ರಾರಂಭವಿಸ್ತಾರ |
ಈ ವಿಮಳವೈಭವವೆನಗೆ ಸಂ
ಭಾವಿತವೆ ವರರಾಜಸೂಯಕೆ
ದೇವ ದೀಕ್ಷಿತನಾಗಬೇಕೆಂದೆಱಗಿದನು ಪದಕೆ || ೨೫

ಯಾಗದೀಕ್ಷಿತನಾಗೆಂದು ಕೃಷ್ಣನ ಆಜ್ಞೆ.

ಮಣಿದು ಹಿಡಿದೆತ್ತಿದನು ರಾಯನ
ಪಣೆಯನನುಪಮಕರುಣಾನಿಧಿ ಕಡು
ಗಣಿಯೆ ಬಾ ಯೆನ್ನಾಣೆ ಬಾರೆಂದಪ್ಪಿ ಮೈದಡವಿ |

1 ಸಮಾಜಿಕರು ಖ, ಗ, ಕ. ೨.

ಗುಣವೆಹುದು ನಿನಗಿಂದುಕುಲದಿನ
ಮಣಿಯೆ ದೀಕ್ಷಿತನಾಗು ಮದವಾ
ರಣನೆ ದೀಕ್ಷಿತನಾಗೆನುತ ಪರಸಿದನು ಬೋಳವಿಸಿ || ೧೬

ಎನೆ ಪಸಾದವೆನುತ್ತ ಯಮನಂ
ದನನು ವೈಶಾಖದ ಚತುರ್ದಶಿ
ದಿನದಲುತ್ತರಪೂರ್ವವೇದಿವರಾಭ್ಯುದಯಿಕದಲಿ |
ವಿನುತಪುಣ್ಯಾಹದ ಮಹಾವಾ
ಚನೆಯ ನಿಗಮಪವಿತ್ರಜಲಪಾ
ವನನು ಮಱುದಿನ ಯಜ್ಞದೀಕ್ಷಿತನಾದನೊಲವಿನಲಿ || ೧೭

ಮುಡಿದನವನೀಶಾನುಲೇಪನ
ಹೊದೆದ ಕೃಷ್ಣಾಜಿನದ ಹಸ್ತಾ
ಗ್ರದಲೆಸೆವ ಸಾರಂಗಶೃಂಗದ ಯಜಮಾನ್ಯದಲಿ |
ಉದಧಿಗೊಱೆಗಟ್ಟುವ ಚತುರ್ವೇ
ದದ ಮಹಾಘೋಷದಲಿ ಮೊಱಕುಂ
ಡದ ತದಂತರ್ವೇದಿಗೈತಂದನು ಮಹೀಪಾಲ || ೧೮

ನೆರೆದುದವನೀಪಾಲಜನ ಸಾ
ಗರಬಹಿರ್ವೇದಿಯ ಮಹಾಚ
ತ್ವರದೊಳಗೆ ತಂತಮ್ಮ ಸಿಂಹಾಸನಸಗಾಡದಲಿ |
ಪರಮಋಷಿಗಳ ವೇದಘೋಷೋ
ತ್ಕರನೃಪಾಧ್ವರವಿಷಯತರ್ಕ
ಸ್ಫುರಣ ಪಾರಾಣಾದಿಕಳಕಳ ತುಂಬಿತಂಬರವ || ೧೯

ಚರುತಿಲದ ರಾಶಿಗಳ ಸುಕ್ಸ್ರುವ
ಬರುಹಿಗಳ ಬಲುಹೊಱೆಗಳಾಜ್ಯೋ
ತ್ಕರದ ಪಾತ್ರಾವಳಿಯ ನಿರ್ಮಳಸಾರಸಮಿಧೆಗಳ |

ಪರಿವಳಯದಾಮಿಕ್ಷೆಗಳ ಪರಿ
ಕರದ ವಿವಿಧದ್ರವ್ಯಮಯಬಂ
ಧುರವಲೆಸೆದುದು ಯಜ್ಞವಾಟಿಕೆ ರಾಜಸೂಯದಲಿ ॥ ೩೦

ಬಳಿಸಿದರು ಪರಿಮಥ್ಯಮಾನಾ
ನಳನನಗ್ಗದ ಸುಪ್ರಣೀತಾ
ನಳನನಾಹವನೀಯಗಾರುಹಪತ್ಯದಕ್ಷಿಣದ ।
ಜ್ವಲಿತವೆನೆ ಮೃಗಚರ್ಮವೀಜನ
ವಳಯವಲಿ ಪ್ರಾಗ್ವಂಶವಲಿ ಪರಿ
ಮಿಳಿತವಾಯ್ತು ಸದಸ್ಯಋತ್ವಿಗ್ಜನ ವಿಧಾನದಲಿ ॥ ೩೧

ಆಗ ಪಂಡಿತರ ವಿಚಾರ.

[1] ಏವಮುತ್ರಾನ್ವಿತಮಿತಿ ಚ ಸಂ
[2] ಭಾವನೀಯಮಿದಂ ಚ ನೈತ
ದ್ಭಾವಮಿದಮೇವಂ ಚ ಶ್ರುತಿಸಂಸಿದ್ಧಮಿದವೆಂಬ ।
ಕೋವಿದರ ಕಳಕಳಿಕೆ ಯನ್ಯೋ
ನ್ಯಾವಮರ್ದದ ರಭಸಮಿದು ಘೂ
ಪಾವಳಿಗಳುಪಹಾಸಘೋಷಕೆ ಕವಚವಾಯ್ತೆಂದ ॥ ೩೨

ವ್ಯಾಹೃತಿಯ ತ್ರ್ಯಕ್ಷರಾಕ್ಷರದ ವಿಮ
ಲಾಹುತಿಯ ಸ್ವಾಹಾವಷಟ್ಕೃತಿ
ಸೋಹ [3] ತಂದುದು ಸುರರ ಸುಹವಿರ್ಭಾಗಭೋಜಿಗಳ ।
ಲೋಹಿತಾಶ್ವನ ರಚನೆಯೊಳು ಹರಿ
ಪಾಹರಿಯೊಳುಬ್ಬಿದ್ದುವರ್ಚಿಗ
ಳಾಹ ಸಪ್ತಕವೇ ಸಹಸ್ರಕವೆನಲು ಹೊಸತಾಯ್ತು ॥ ೩೨

1 ಏವಮೇತನ್ನೈವಮಿತಿ ಸಂ, ಡ. ಏವಮೇವಸ್ಯಾತ್ತದಿತಿ ಸಂ, ಚ.
2 ನೈವಮಿದ, ಚ. 3 ಸೋಹಿ, ಚ.

ಕಳಿತು ತಿವಿದಾಡಿದುವು ಮುಳಿದೊಡೆ
ಗಲಿಸಿದುವು ಹೊಗೆ ಸುತ್ತಿ ಸಿಪಿಸಿವಿ
ಮೊಬಿಗಿ ಮುಳಿದೆದ್ದುವು ಸಗಾಢದಲುಬ್ಬಿ ಭುಗಿಭುಗಿಸಿ ।
ಸುಚಿಸುಚಿದು ಭೋರೆಂದು ಬಗಿದ
ವ್ವಳಿಸಿದುವು ಘೃತಧಾರೆಗಳು
ಚಳಿಸಿದುವು ಹರಹಿನಲಿ ನಾಲಿಗೆ ಹವ್ಯವಾಹನನ ॥ ೨೪

ತ್ರಿದಿವವನು ತುಡುಕಿತು ಹವಿರ್ಗಂ
ಧದ ಗಡಾವಣೆ ಧೂತಧೂಮದ
ತುದಿ ತಪೋಲೋಕದಲಿ ತಳಿತುದು ಸತ್ಯಲೋಕದಲಿ ।
ತ್ರಿದಶರುಚಿ ಬಾಯೊಡಿಸಿದರ
ಗ್ಗದ ಧ್ರುವಾದಿಗಳನು ಸುತೃಪ್ತಿಯು
ಹೊದಱುದೇಗಿನ ಹೊಟ್ಟೆ ನೂಕಿತು ಹರಿಹಯಾದ್ಯರಿಗೆ ॥ ೨೫

ಯಾಗದಲ್ಲಿ ವಿಪ್ರರು ತೃಪ್ತರಾಗುವಿಕೆ.

ದಣಿದುದಲ್ಲಿ ಸುರೌಘವೀಧ
ಕ್ಷಿಣೆಯುಲೂಟದಲಾದರಣೆ ಮು
ನ್ನಣೆಯುಲವನೀಸುರರು ಹಿಗ್ಗಿದರಿಲ್ಲಿ ಹಿರಿದಾಗಿ ।
ಎಣಿಸಬಹುದೇ ಭೋಜನದ ಸಂ
ದಣಿಯುನೀಸೈಸೆಂದು ಭಾರಾಂ
ಗಣದ ಭೂರಿಯ ವಿವರವನು ಬಣ್ಣಿಸುವದಾರೆಂದ ॥ ೨೬

ವೇದವೇದಾಂಗದ ರಹಸ್ಯವಿ
ವಾದತರ್ಕಸ್ಮೃತಿಗಳಂತ
ರ್ವೇದಿಯುಲಿ ಘನಲಹರಿ ಮುಸಗಿತು ತಂತ್ರಸಂಗತಿಯು ।
ಆದುದತ್ತಲು ಗದ್ಯಪದ್ಯವಿ
ನೋದನರ್ತನವಾದ್ಯಸಂಗೀ
ತಾದಿಸಕಲಕಲಾನುರಂಜನೆ ರಾಜವರ್ಗದಲಿ ॥ ೨೭

ಆ ಋಷಿಗಳಾಕ್ಷತ್ರಜನವಾ
ಭೂರಿನಿಕರದ ವೇದಶಾಸ್ತ್ರಪ
ಚಾರಣರ ಚಾರಣರ ಸಂಗೀತಾದಿಕಳಕಳದ ।
ಆರುಭಟೆ ಮಥಿತಾಂಬುನಿಧಿಯೊಡ
ಸಾರುವವೊಲುಬ್ಬೆದ್ದ ಬಹುಜ
ಝರ್ಝರವೆನೆ ಜಡಿದುದು ಯುಧಿಷ್ಠಿರರಾಜಸೂಯದಲಿ ॥ ೩೮

ಪಡಿದಿನಪರಿಯಂತ ಘಳಿಗೆಗೆ
ಮೇಲೆ ಮೇಲಧ್ವರದಲಗ್ನಿ[1] ಭ
ಡಾಳಿಸಿತು ಜಾಳಿಸೆ ಚತುರ್ದಶಲೋಕಚೇತನವ ।
ಕೇಳಿದೈ ಜನಮೇಜಯ ಕ್ಷಿತಿ
ಪಾಲ ಸುರಲೋಕದಲಿ ಪಾಂಡುವಿ
ನೋಲಗಕೆ ಬಹ ಬಣಗುಸುರರಿಗೆ ಸಮಯವಿಲ್ಲೆಂದ ॥ ೩೯

ಎವೆಗೆ ತವೆಗೆಂದಾಹವಿರ್ಭಾ
ಗವನು ಮುತ್ತಿತು ದೇವತತಿ ಸುರ
ಯುವತಿಯರೂರ್ವಶಿಯರು ತಿಲೋತ್ತಮೆ ರಂಭೆ ಮೇನಕೆಯು ।
ದಿವಿಜರೊಳಹಸುಗೆಗಳ ಲೆಕ್ಕದ
ಸವರಣೆಯ ಸವಿವಾಯ್ತು ತುತ್ತಿನ
ತವಕಿಗರು ತಿವಿದಾಡಿದರು ಸಭೆಯಲಿ ಸುರೇಶ್ವರನ ॥ ೪೦

ಈತನಾರೈ ಪಾಂಡುವಿನ ಮಗ
ನೀತ ಕಾಣಿರೆ ಪಾಂಡುವಿನ ಸುತ
ನೀತನೇ ಯಮಜಾತನೀತನೆ ಪಾಂಡುನಂದನನು ।
ಪೂತು ಧರ್ಮಜ ಪೂತು ಧರ್ಮಜ
ಪೂತು ಧರ್ಮಜ ಯೆಂದು ಭೂಪ
ವ್ರಾತ ಹೊಗಳಿತು ಭರತನೃಗನಳದಶರಥಾದಿಗಳು ॥ ೪೧

1 ಲಕ್ಷ್ಮಿ, ಚ.

ಏನ ಹೇಳುವೆನರಸ ಯಜ್ಞ ವಿ
ಧಾನದಭಿಷೇಕಾದಿಸಮಯಸ[1]
ಧಾನವಾಯ್ತು[2] ರಸಂಗೆ ಸುರದುಂದುಭಿಯ ರಭಸದಲಿ ।
ಆನಿರಂತರತುಷ್ಟಿಗಳ ವೈ
ಮಾನಿಕರ ಸಂದಣಿ ನವೀನವಿ
ತಾನವಾದುದು ಭೂಮಿ ಭಾರತವರುಷದಗಲದಲಿ ॥ ೪೨

ವರಸದಸ್ಯಾದಿಗಳ ದಕ್ಷಿಣೆ
ಬರಪಕಿಂಮಡಿ ನೂರುಮಡಿ ಸಾ
ವಿರಮಡಿಯು ವರಹೇಮವಸ್ತ್ರಾಭರಣಗೋವ್ರಜವ ।
ಅರಸನಿತ್ತನು ಮುಖನಿಯೋಗೋ
ತ್ಕರರಿಗನುಪಮಭೂರಿಜನಕಾ
ದರಿಸಿ ಕೊಟ್ಟನು ಹೊತ್ತು ನಡೆದುದು ಸಕಲಜನ ಧನವ ॥ ೪೩

ತಲೆಹೊರೆಯಲಡಕಿದರು ಹೆಗಲಲಿ
ಕೆಲರು ಶಿಷ್ಯರ ನೆತ್ತಿಯಲಿ ಕೆಲ
ಕೆಲರು ಹೊರಿಸಿತು ದೇಶದೇಶದ ಬಹಳಭೂಸುರರು ।
ಲಲಿತರತ್ನಾಭರಣಗೋಸಂ
ಕುಲದ ಸೂರೆಯನೇನನೆಂಬೆನು
ಸಲೆ ದಣಿದುದಾಸಕಲಜಾತಿ ಜನೇಶಯಾಗದಲಿ ॥ ೪೪

ಕಳಮವೆಗಣಿತಕಲ್ಪವಿವರದೊಳ
ಗಚಿವನರಿಯದರಿಬ್ಬರೇ ಮುನಿ
ತಿಲಕಮಾರ್ಕಂಡೇಯರೋಮಶರೀಮಹಾಧ್ವರದ ।
ಸುಚಿವೆನಾರಲಿ ಕಂಡರವನಿಪ
ರೊಳಗೆನುತ ಮನವುಕ್ಕಿ ನಾರದ
ನಲಿದು ನುಡಿದನು ತನ್ನ ಹೇಳಿಕೆ ಸಫಲವಾಯ್ತೆಂದು ॥ ೪೫

---

1 ಸಮಯೊ, ಚ. 2 ದ್ಧಾನವಾಯ್ತು, ಚ.

ಸುರರಿಗಾದುದು ತುಷ್ಟಿ ಧರಣೀ
ಸುರಮುನೀಂದ್ರರಿಗಾಯ್ತು ಶೂದ್ರೋ
ತ್ಕರರಿಗಾಚಂಡಾಲಪರಿಯಂತಾಯ್ತು ಸತ್ಕಾರ ।
ಧರಣಿಪಾಲಕರಿದೆ ಚತುಸ್ಸಾ
ಗರದ ತಡಿಪರಿಯಂತ ವಿಶ್ವಂ
ಭರೆಯ ಮಾನ್ಯರ ಮನ್ನಿಸೆಂದನು ಭೂಪತಿಗೆ ಭೀಷ್ಮ ॥ ೪೬

ಸ್ನಾತಕಪ್ರಿಯಋತ್ವಿಗಾಚಾ
ರ್ಯಾತಿಶಯಗುರುನೃಪತಿಸಹಿತೀ
ಭೂತಳದೊಳಿಂತಾರು ಮಾನಿಸರರ್ಘ್ಯಯೋಗ್ಯರಲೆ ।
ಪ್ರೀತಿಯಲಿ ನೀನರ್ಘ್ಯವನು ವಿ
ಖ್ಯಾತರಿಗೆ ಮಾಡೆನಲು ಮನ್ನಣೆ
ಯಾತನಾರೆನೆ ವೀರನಾರಾಯಣನ ತೋಱಿಸಿದ ॥ ೪೭

ಎಂಟನೆಯ ಸಂಧಿ ಮುಗಿದುದು.

ಒ ಂ ಬ ತ್ತ ನೆ ಯ ಸ ಂ ಧಿ .

ಸೂಚನೆ.

ರಾಜಸೂಯದಲಗ್ರಪೂಜಾ
ರಾಜಿತನ ಶ್ರುತಿಮೌಳಿಮಣಿಯ ವಿ
ರಾಜಿತನ ಶಿಶುಪಾಲ ಜಱಿದನು ಪೂರ್ವವೈರದಲಿ ॥

ಧರ್ಮರಾಯನು ಅಗ್ರಪೂಜಾರ್ಹರಾರೆಂದು ಭೀಷ್ಮರನ್ನು ಕೇಳುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಮುನಿಮಧ್ಯದಲಿ ನಿಂದು ನೃ
ಪಾಲ ಭೀಷ್ಮಂಗೆಂದನತಿಗಂಭೀರನಾದದಲಿ ।

ಭಾಳನೇತ್ರನ ಪಡಿಯೆನಿಪ ಭೂ
ಪಾಲರಿವರೊಳಗಗ್ರಪೂಜ್ಯರ
ಹೇಳೆನಲು ಗಾಂಗೇಯ ನುಡಿದನು ವೇದಸಮ್ಮತವ ॥ ೧

ಭೀಷ್ಮರು ಕೃಷ್ಣನು ಅಗ್ರಪೂಜಾರ್ಹನೆಂದು
ಹೇಳುವಿಕೆ.

ಆರು ತಾರಾಗ್ರಹಗಳೊಳಗ
ರ್ಘ್ಯಾರುಹರು ದಿನಕರನಲೆಯೆ ಮ
ತ್ತಾರು ಸುರಮುನಿನಿಕರಸೇವ್ಯರು ಶೂಲಧರನಲ್ಲದೆ ।
ಆರು ನಿರ್ಜರನಿವಹದಲಿ ಜಂ
ಭಾರಿಯಲ್ಲದೆ ಮಾನನೀಯರ
ದಾರು ಜಗದಲಿ ಕೃಷ್ಣನಲ್ಲದೆ ಪೂಜ್ಯತಮರೆಂದ ॥ ೨

ಗಿರಿಗಳೊಳು ಹೇಮಾದ್ರಿ ಘನ ಸಾ
ಗರಗಳೊಳು ದುಗ್ಧಾಬ್ಧಿ ದೇವಾ
ಸುರನರೋರಗನಿಕರದಲಿ ನಾರಾಯಣನೆ ಮಿಗಿಲು ।
ಅರಸ ಸಂಶಯವೇಕೆ ಕೃಷ್ಣನ
ಚರಣವನು ತೊಳೆ ರಾಜಸೂಯಾ
ಧ್ವರಕೆ ಪೂಜಾಪಾತ್ರನೀ ಹರಿಯೆಂದನಾಭೀಷ್ಮ ॥ ೩

ಈ ಮಾತನ್ನು ವ್ಯಾಸಾದಿಗಳು ಒಪ್ಪುವಿಕೆ.

ವ್ಯಾಸನಾರದರೋಮಶಾದಿಗ
ಳೇಸಮಸ್ತಮುನೀಂದ್ರರಿದೆ ಯೀ
ಕೇಶವನು ಪೂಜಾರ್ಹನೇ ಯೆಂದಿವರ ಕೇಳೆನಲು ।
ಲೇಸನಾಡಿದೆ ಭೀಷ್ಮ ಬಟಿಕೇ
ನೀಸಮಸ್ತಚರಾಚರದೊಳೀ
ವಾಸುದೇವನೆ ವಂದ್ಯನೆಂದುದು ಸಕಲಮುನಿನಿಕರ ॥ ೪

ತರಿಸಿದನು ನವಹೇಮಮಣಿಭಾ
ಸುರದ ಮಂಚದ ಮೇಲೆ ಲಲಿತಾ
ಸ್ತರಣದಡಕಿಲು ವಾಸಗಳ ನಿರ್ಮಳವಿಹಾರಗಳ |
ಮೆಱೆದುದಿಳೆ ಬೆಳುದಿಂಗಳಿನ ಮೋ
ಹರದ ಮಾಱೊಡ್ಡಿನಿಸಿ ಭೂಮೀ
ಶ್ವರಸಭಾಮಧ್ಯದಲಿ ಧರಣೀಪಾಲ ಕೇಳೆಂದ || ೫

ಆಗ ಸಹದೇವನು ಕೃಷ್ಣನನ್ನು ಪೂಜೆಯಿಂದ
ಆದರಿಸುಕೆ.

ವಿನಯದಲಿ ಸಹದೇವ ಕೈಗೊ
ಟ್ಟನುಪಮನ ತಂದನು ಪಿತಾಮಹ
ಜನಕ ಗಂಗಾಜನಕನವಧಾರು ಪಾಯವಧಾರು |
ದನುಜರಿಪು ವವಧಾನವವಧಾ
ನೆನುತ ವಿಮಲಮಹಾರ್ಘ್ಯಸಿಂಹಾ
ಸನಕೆ ಬಿಜಯಂಗೈಸಿದರು ಕುಳ್ಳಿರ್ದನಸುರಾರಿ || ೬

ತಂದು ಮಣಿಮಯಪಡಿಗದಲಿ ಗೋ
ವಿಂದನಂಘ್ರಿಯ ತೊಳೆದು ಗಂಗೆಯ
ತಂದೆವೀಗಳ ತಾವೆನುತ ತಮ್ಮುತ್ತಮಾಂಗದಲಿ |
ವಂದಿಸುತ ವೈದಿಕದ ಪರಿವಿಡಿ
ಯಿಂದ ಮಧುಪರ್ಕಾದಿಪೂಜೆಗ
ಳಿಂದ ಸತ್ಕರಿಸಿದರು ಸಚರಾಚರಜಗತ್ಪತಿಯ || ೭

ಕೃಷ್ಣಪೂಜೆಯನ್ನು ಸಭಿಕರೆಲ್ಲರೂ ಸಂತೋಷದಿಂದ
ಅಭಿನಂದಿಸುವಿಕೆ

ಆಯೆನುತ ಮನವುಕ್ಕಿ ಮುನಿಗಳು
ಘೋ ಯೆನಲು ನಿರ್ಜರರ ಭೇರಿ ನ
ವಾಯಿಯಲಿ ಮೊಳಗಿದುವು ಸುರಿದರು ಮುಗಿಳ ತನಿಮಳೆಯ |

ರಾಯನಧ್ವರಕರ್ಮ ಸತ್ಫಲ
ವಾಯಿತೈ ಭೂಪತಿ ಕೃತಾರ್ಥನ
ಲಾಯೆನುತ ಸಭೆ ಹೊಗಳಿತಂದು ಸಮುದ್ರಘೋಷದಲಿ ॥ ೮

ಈಮಹಾಧ್ವರಕರ್ಮವೇ ಸು
ತ್ರಾಮನವರಿಗೆ ಹವ್ಯಸಿದ್ಧಿ ಮ
ಹೀಸುರಮುನಿನಿಕರವೇಕತ್ರ ಸಂಮಿಳಿತ ।
ಈಮಹೀಶರ ಬರವಿದೆಲ್ಲರೂ
ಶ್ರೀಮುಕುಂದನ ಪೂಜೆ ಯಿದುವೆ ಸ
ಭಾಮನೋಹರವೆಂದು ಮಾರ್ಕಂಡೇಯ ಮುನಿ ನುಡಿದ ॥ ೯

ಅವನಿಯಮರರ ಕಳಕಳವ ಪಾಂ
ಡವರ ಸುಮ್ಮಾನವನು ರಿಪುಕೌ
ರವರ ಮಾತ್ಸರ್ಯೋಪಲಾಲಿತಹರುಷವಿಭ್ರಮವ ।
ಅವನಿಪಾಲರು ಕಂಡರೀ ಯು
ತ್ಸವವ·ಕಂಡಿರೆ ನೀವೆನುತ ತ
ಮ್ಮವರೊಳೊಬ್ಬರನೊಬ್ಬರುಜು ನೋಡಿದರು ಬೆಱಗಾಗಿ ॥ ೧೦

ಕೆಲರು ಪಾಂಡವಮೈತ್ರಿಯಲಿ
ಕೆಲಕೆಲರು ಕಷ್ಣನ ಬಲುಹಿನಲಿ
ಕೆಲಕೆಲರು ಧೀರತ್ವದಲಿ ಕೆಲರನುಚಿತದ ಭೀತಿಯಲಿ ।
ಕೆಲರಿದೇಕೆಮಗೆಂದು ಧರಣೀ
ವಳಯದವನಿಪರಿರ್ದರವರೊಳು
ಖಳಶಿರೋಮಣಿ ಮಸಗಿದನು ಶಿಶುಪಾಲ ಕೇಳೆಂದ ॥ ೧೧

ಆಗ ಶಿಶುಪಾಲನ ಆಕ್ಷೇಪಣೆ.

ಹೊತ್ತಿತೆದೆ ಹೇರಾಳತಮದಲಿ
ಕೆತ್ತಿದುವು ಮೀಸೆಗಳು ಕಂಗಳು
ಹೊತ್ತವರುಣಚ್ಛವಿಯನುಬ್ಬರಿಸಿದುವು ರೋಮಗಳು ।

ಕೆತ್ತುದಱವಿನ ಕದ ಕಟಾಕ್ಷದಿ
ಮೃತ್ಯುವೊಲಿದಳು ರೋಷ ಮಿಗೆ ಹೊಗ
ರೆತ್ತಿದುದು ಶಿಶುಪಾಲವೀರನ ವಚನಮಯಖಡುಗ ॥ ೧೨

ಸಹದೇವನನ್ನು ಕುರಿತು ಶಿಶುಪಾಲನ ಬಿರುನುಡಿಗಳು.

ಏನೆಲವೊ ಸಹದೇವ ವಸುಧೆಯ
ಮಾನನಿಧಿಗಳ ಮುಂದೆ ನಂದನ
ಸೂನುವಿಗೆ ಸಿಂಹಾಸನದ ಮೇಲರ್ಘ್ಯಸತ್ಕೃತಿಯೆ ।
ನೀನಱಿಯದವ ನಿಮ್ಮ ಯಾಗಕೆ
ಹಾನಿಯಲ್ಲಾ ನಿಮ್ಮ ಹಿರಿಯರಿ
ದೇನಮಾಡಿದರಕಟ ಖೂಳರು ಪಾಂಡುಸುತರೆಂದ ॥ ೧೩

ಯದುಗಳವದಿರು ಮುನ್ನ ರಾಜ್ಯಾ
ಸ್ಪದರೆ ಸಿಂಹಾಸನಕೆ ಬಾಹಿರ
ರದಱೊಳೀತನ ಖೋಡಿಯನು ಜಗವೆಲ್ಲ ಬಲ್ಲುದಲೆ ।
ಇದು ಮಹಾಧ್ವರವಿಲ್ಲಿ ನೆರೆದಿ
ರ್ದುದು ಮಹಾಕ್ಷತ್ರಿಯರು ಗೋವರ
ಸದೆಗನಿಲ್ಲಿಗೆ ಶಿಷ್ಟನೇ[1] ಸಹದೇವ ಹೇಳೆಂದ ॥ ೧೪

ತ್ರಿದಶರಿಗೆ ಸರಿತೂಕ ಸಾಮ
ರ್ಥ್ಯದಲಿ ಶುದ್ಧಶ್ರೌತಸನ್ಮಾ
ರ್ಗದಲಿ ಶಿವ ಶಿವ ರಾಜಋಷಿಗಳಲಾ ಮಹೀತಳಕೆ ।
ಉದಯದಿನನಂದದಲಿ ನೃಪರಿ
ರ್ದುದು ಸತೇಜೋವ್ರಜರು ಗೊಲ್ಲರ
ಸದೆಗನಿಲ್ಲಿಗೆ ಗರುವನೇ[2] ಸಹದೇವ ಹೇಳೆಂದ ॥ ೧೫

---

[1] ಶ್ರೇಷ್ಠನೇ, ಚ.   [2] ಶಿಷ್ಟನೇ, ಚ.

ಬಾಲಕನು ಸಹದೇವನೀತನು
ಹೇಳಿನಿಲ್ಲಿಯು ಹೆಚ್ಚು ಕುಂದ ನೃ
ಪಾಲ ನಿನ್ನದು ಧರ್ಮತತ್ವರಹಸ್ಯಸಂಗತಿಯು ।
ಕೇಳುವೆಗಳವು ಬೇಡ ಚರಿತದ
ಪಾಳಿ ತಾನದು ಬೇಡಲಾ ಪಶು
ಪಾಲರೀಯುಧ್ವರಕೆ ಪೂಜ್ಯರೆ ಶಿವ ಶಿವಾ ಯೆಂದ ॥ ೧೬

ಭೀಷ್ಮರನ್ನು ಕುರಿತು ಶಿಶುಪಾಲನ ಬಿರುನುಡಿಗಳು.

ತರಳರಿವದಿರು ಪಾಂಡುಸುತರಂ
ತಿರಲಿ ನೀ ಸುಪ್ರೌಢನೆಂದಾ
ದರಿಸಿದೈ ವಸುದೇವಸುತನಲಿ ಶಿಷ್ಟಯೋಗ್ಯತೆಯು ।
ಧರಣಿಪಾಲರ ಮಧ್ಯದಲಿ ಭಾ
ಸ್ಕರನು ಗಡ ತುಱುಹಳ್ಳಿಕಾಱಱ
ಪುರದ ಭಾಸ್ಕರನೀತನಲ್ಲಾ ಭೀಷ್ಮ ಹೇಪೆಂದ ॥ ೧೭

ಶಿವನ ಸರಿ ಮಂಚದಲಿ ಸರಸಿಜ
ಭವನ ಸಮ ಗದ್ದಿಗೆಗಳಲಿ ವಾ
ಸವನ ತೊಡೆ ಸೋಂಕಿನಲಿ ಕುಳ್ಳಿಹರೀಮಹೇಶ್ವರರು ।
ಇವರ ಸರಿಸಕೆ ಸಲ್ಲದೀಯಾ
ದವನನುದ್ದಲಿರಿಸಿ ಬಹುಮಾ
ನವನು ಮಾಡಿದೆ ಭೀಷ್ಮಯಜ್ಞವನಱಿದೆ ನೀನೆಂದ ॥ ೧೮

ಸಕಲಶಾಸ್ತ್ರಶ್ರವಣ ವೇದ
ಪ್ರಕರದರ್ಥವಿಚಾರ ಪೌರಾ
ಣಿಕಕಥಾಪ್ರಾಗಲ್ಭ್ಯವಿಸಿತರ ಸಾರಸಂಗತಿಯು ।
ಅಕಟ ನೀರಲಿ ನರಹಿ ಗೋಪಾ
ಲಕನ ಪೂಜಾಸಾಧನಾರ್ಥ
ಪ್ರಕಟನಾದೈ ಭೀಷ್ಮಮೂರ್ಖಾಧಮನು ನೀನೆಂದ ॥ ೧೯

ನಾನಾಕಾರಣಗಳಿಂದ ಕೃಷ್ಣನು ಪೂಜಾಯೋಗ್ಯನಲ್ಲವೆಂದು ಹೇಳುವಿಕೆ.

ಹಿರಿಯನೆಂದೀತನಲಿ ಪೂಜಾ
ವರಣವೇ ವಸುದೇವನೀಮುರ
ಹರನ ಪಿತನಿದ್ದಂತೆ ಮೋಣೀದ್ರುಪದಭೂಪತಿಯು ।
ವರಿಸಿ ನೀವಾಚಾರ್ಯನೆಂದಾ
ದರಿಸುವೊಡೆ ರಾಯರಿಗೆ ಶಸ್ತ್ರದ
ಗುರುವಲಾ ದ್ರೋಣಂಗೆ ಪೂಜೆಯ ಮಾಡಿರಿಂತೆಂದ ೨೦

ಈತನಿಲ್ಲಿ ಸದಸ್ಯನೇ ವಿ
ಖ್ಯಾತವೇದವ್ಯಾಸಋತ್ವಿ
ಗ್ಭೃತನಾಥಂಗಗ್ರಪೂಜೆಯನೇಕೆ ಮಾಡಿಸರಿ ।
ಈತ ನಿಮಗೆ ಪಿತಾಮಹನೆ ಗಂ
ಗಾತನುಜನೈದನೆ ವಿಶೇಷಕೆ
ಗೌತಮನಲಾ ಕೃಪನ ಮನ್ನಿಸರೇಕೆ ನೀವೆಂದ ॥ ೨೧

ವೀರರಿಗೆ ಕೊಡಬೇಹುದೇ ರಣ
ಧೀರನಶ್ವತ್ಥಾಮನೈದನೆ
ಶೂರನಲ್ಲಾ ಚಾಪಧರರೊಳಗೇಕಲವ್ಯನೃಪ ।
ಪೌರವೇಯರೊಳಿಂದುಬಾಹ್ಲಿಕ
ಗಾರು ಸರಿ ಕೊಡಿರೇಕೆ ಕೃಷ್ಣನಿ
ದಾರೊಳಾರೆಂದಗ್ರಪೂಜೆಯನಿತ್ತಿರಕಟೆಂದ ॥ ೨೨

ನರನ ಸಖನೀಕೃಷ್ಣನೆಂದಾ
ದರಿಸುವೊಡೆ ಗಂಧರ್ವ ನಿಮ್ಮ
ನರನ ಸಖನಲ್ಲೇ ವಿರೋಧಿಯೆ ಚಿತ್ರರಥ ನಿಮಗೆ ।
ಅರಸನಲ್ಲಾ ನೃಪನು ವರಕಿಂ
ಪುರುಷಮಾನ್ಯರು ನಿಮ್ಮ ಯಾಗದೊ
ಳುರುಳುಕರಿಗಲ್ಲದೆ ವಿಶಿಷ್ಟರಿಗಿಲ್ಲ ಗತಿಯೆಂದ ॥ ೨೩

ಮಾನ್ಯರಿಗೆ ಮನ್ನಣೆಯುಹರೆ ಸಾ
ಮಾನ್ಯನೇ ಭಗದತ್ತ ನಿಮಗೇ
ನನ್ಯನೇ ಸೈಂಧವನು ನೀವಿಂದೇಕೆ [1] ಮನ್ನಿಸರಿ ।
ಶೂನ್ಯವಿಭವನೆ ಮಗಧಸೂನು ಸು
ಮಾನ್ಯನಲ್ಲಾ ದಂತವಕ್ರನು
ಮಾನ್ಯಭಟ್ಟನು ಕೃಷ್ಣನಿಲ್ಲಿಗೆ ಯೋಗ್ಯನಹನೆಂದ ॥ ೨೪

ಉಱುವನೃಪನಲ್ಲಾ ಸುದಕ್ಷಿಣ
ನಱಿಯಿರೇ ಮಾಳವನನೀತನ
ಮಱೆಚಿರೇ ಸಾಲ್ವನನು ಭೀಷ್ಮಕರುಕ್ಮಭೂಪತಿಯ ।
ಮೊಱೆಯ ಮಱೆಚಿರೆ ಶಲ್ಯಭೂಪತಿ
ಹೊಱಗಲಾವರರಾಜಸೂಯಕೆ
ಕಱುವ ಕಾವವರಲ್ಲದುೞಿದರು ಯೋಗ್ಯರಲ್ಲೆಂದ ॥ ೨೫

ಭೂರಿಭೂರಿಶ್ರವನು ನಿಮ್ಮೊಳ
ಗಾರ ಹೊಯ್ದರು [2] ಸೋಮದತ್ತಮ
ಹೀರಮಣನತಿಮಾನ್ಯನಲ್ಲಾ ಯಜ್ಞಪೂಜೆಯಲಿ ।
ಸಾರಧರ್ಮವಿದೆಂದು ಬಂದವ
ರಾರು ಬಲ್ಲರು ಹಳ್ಳಕಾಱಱ
ನಾರಿಯರ ನೆಱೆ ಮಿಂಡನಲ್ಲದೆ ಯೋಗ್ಯರಿಲ್ಲೆಂದು ॥ ೨೬

ಮಿಂದನನುಮಿಂದಾವನೀಶರೆ
ಬಂದಿರೈ ಕಾಂಭೋಜನೃಪನೈ
ತಂದೆಲಾ ಗಾಂಧಾರಶಕುನಿಬೃಹದ್ರಥಾದಿಗಳ ।
ಬಂದಿರಿಲ್ಲಿಗೆ ಧರ್ಮಸಾಧನ
ವೆಂದು ಬಯಸಿದಿರಿ ವರಯಜ್ಞಕೆ
ನಂದಗೋಪನ ಮಕ್ಕಳಲ್ಲದೆ ಯೋಗ್ಯರಲ್ಲೆಂದ ॥ ೨೭

1 ಸಾಬಲಜಯದ್ರಥರೇಕೆ, ಚ. 2 ಗಾರುವೃದ್ಧರು, ಚ.

ಸ್ನಾತಕವ್ರತಿಯಲ್ಲ ಋತ್ವಿಜ
ನೀತನಲ್ಲಾಚಾರ್ಯನಲ್ಲಾ ಮ
ಹೀತಳಾಧಿಪನಲ್ಲ ಗುರುವಲ್ಲಸುರರಿಪು ನಿಮಗೆ ।
ಈತನೇ ಪ್ರಿಯನೆಂದು ಕೃಷ್ಣಂ
ಗೀತು ಕೊಡುವೊಡೆ ಬೇಱೆ ಕೊಡುವುದು
ಭೂತಳೇಶರ ಮುಂದೆ ಮನ್ನಿಪುದುಚಿತವಲ್ಲೆಂದ ॥ ೧೮

ಈಋಷಿಗಳೀಮಂತ್ರವೀಸಂ
ಭಾರವೀಪೌರಾಣಕಥೆ ಯೀ
ಭೂರಿಭೋಜನ ವೀಮಹೀಗೋರತ್ನಧನಧಾನ್ಯ ।
ಸಾರತರವೇದೋಕ್ತಮಾರ್ಗವಿ
ಚಾರವಿದ್ದುದು ಹೊಱಗೆ ಗೋಪೀ
ಜಾರಸತ್ಕೃತಿಯೊಳಗೆ ವಿಷವಿದನೞ್ದುದಿಲ್ಲೆಂದ ॥ ೧೯

ರಾಯ ನಿನಗಾವಿಂದು ದಿಟ ಸಿ
ದ್ಧಾಯವೆನು ನಾವ್ ಕೆತ್ತಿವಲ್ಲದೆ
ವಾಯುಜನ ಫಲುಗುಣನ ಬಿಲ್ಲಿನ ಬಲುಮೆಗಂಜಿದೆವೆ ।
ರಾಯ ಠಕ್ಕಿನ ನುಡಿಯ ಠೌಳಿಯ
ಮಾಯಕಾಱನ ತಂದು ಮನ್ನಿಸಿ
ರಾಯರಭಿಮಾನವ ವಿಭಾಡಿಸಿ ಕೊಂದೆ ನೀನೆಂದ ॥ ೨೦

ಧರ್ಮಮಯವೀಯಜ್ಞ ಸೀನೇ
ಧರ್ಮಸುತನೆಂದಿದ್ದೆವಿಲ್ಲಿ ವಿ
ಕರ್ಮವಾಯಿತಸೂಯವೇ ಶಿವನಾಣೆ ಜಗವಱಿಯೆ ।
ಧರ್ಮವೇ ಯುಪ್ರಾಪ್ತಕಾರ್ಯದ
ಕರ್ಮವೀನೃಪಸಿಕರ ಮೆಚ್ಚಲ
ಧರ್ಮಸುತನೆಂದಾಯ್ತು ನಿನ್ನಭಿಧಾನವಿಂದಿನಲಿ ॥ ೨೧

ಕೃಷ್ಣನನ್ನು ಸಂಬೋಧಿಸಿ ಶಿಶುಪಾಲನಾಡಿದ ದುರುಕ್ತಿಗಳು.

ಆಯಿತಿದು ಜಡ ಧರ್ಮಜನು ಗಾಂ
ಗೇಯ ಜಡನೀತಾರುಥಟ್ಟಿನ
ದಾಯವಱಿಯದೆ ನಿನ್ನ ಕರೆದರೆ ಕೃಷ್ಣ ಬೆಱತೆಯಲ ।
ರಾಯರತುನದ ನಡುವೆ ನೀನನು
ನಾಯಕವೊ ನೃಪಹಾರದಲಿ ಯನು
ನಾಯಕವೊ ನೀನಾವನೆಂದನು ಜಱದು ಮುರಹರನ ॥ ೨೧

ಈಋಷಿಗಳೇ ಬಣಗುಗಳು ಬಡ
ಹಾರುವರು ದಕ್ಷಿಣೆಸುಭೋಜನ
ಭೂರಿದಾನವೆ ಸಾಕು [1] ಮಾನ್ಯದ ವಾಸಿ ಪಟ್ಟದಲಿ ।
ಹೋಱುವವರಿವರಲ್ಲ ನೆರೆದೀ
ವೀರನೃಪರಭಿಮಾನಿಗಳು ನೆಱೆ
ಸೈರಿಸಿದೊಡದು ನಿನಗೆ ಸದರವೇ ಕೃಷ್ಣ ಹೇಱೆಂದ ॥ ೨೨

ಅಱಿಯದವರಾದರಿಸಿದೊಡೆ ನೀ
ನಱಿಯಬೇಡವೆ ನಿನ್ನ ಕುಂದಿನ
ಕೊಱತೆಗಳನಾರಱಿಯರೀಭೂಪಾಲಮಧ್ಯದಲಿ ।
ಕುಱುಬರೂರಲಿ ಗಾಜುಮಾಣಿಕ
ವಱಿಯದವರೊಳು ಕೃಷ್ಣ ಕಡು
ಬೆಱತೆಲಾ ನೆಱೆ ಮೆಱೆದೆಲಾ ನಿನ್ನಂತರವನೆಂದ ॥ ೨೪

ಕುಲದಲಧಿಕರು ರಾಜ್ಯದಲಿ ವೆ
ಗ್ಗಳರು ಭುಜಸತ್ವದಲಿ ಸೇನಾ
ಬಲದಲುತ್ತಮರಿವರ ಭಂಗಿಸಿ ನಿನಗೆ ಮನ್ನಣೆಯೆ ।
ಕುಲವು ಯದುಕುಲ ರಾಜ್ಯವೇ ಕಡ

1 ಊರವಾದರೆ, ಚ.

ಲೊಳಕುಜುವ ನಿನ್ನೋಟಗುಳಿತನ
ದಳವ ಮಾಗಧಕಾಲಯವನರು ಬಲ್ಲರವರೆಂದ ॥ ೩೫

ಜೀವನಾರವದೊಳಗೆ ಕಳಹಂ
ಸಾವಳಿಗೆ ರಮ್ಯವೆ ಜಪಾಕುಸು
ಮಾವಳಿಗಳಲಿ ಮಧುಕರನ ಮೋಹರಕೆ ಮನ್ನಣೆಯೆ ।
ಈ ವಿಕಾರದ ಯಜ್ಞದಲಿ ರಾ
ಜಾವಳಿಗೆ ಮನ್ನಣೆಯೆ ಶಿವ ಶಿವ
ನೀವು ಗೋಪೀಜಾರರಿಲ್ಲಿಗೆ ಶಿಷ್ಟರಹಿರೆಂದ ॥ ೩೬

ಜರಡುಮುಖ ವೀಮುಖಕೆ ಹೋಲುವ
ಧರಣಿಪತಿ ಯೀಮುಖಕೆ ಧರಣೀ
ಶ್ವರಗೆ ಪಾಸಟಿ ಭೀಷ್ಮನೀಮುಖ ನೃಪತಿ ಭೀಷ್ಮರಿಗೆ ।
ಸರಿಸವಾದನು ಕೃಷ್ಣನೀಮುಖ
ಧರಣಿಪತಿ ಭೀಷ್ಮಂಗೆ ಕೃಷ್ಣಗೆ
ಸರಿಯ ಕಾಣೆನು ನಿಮ್ಮೊಳೊಬ್ಬರಿಗೊಬ್ಬರೆಣೆಯೆಂದ ॥ ೩೭

ಶಿಶುಪಾಲನ ದುರುಕ್ತಿಗಳನ್ನು ಕೇಳಿ ಕೃತವರ್ಮಾದಿಗಳು ರೇಗುವಿಕೆ.

ಸೀಬುವನ ಹೆಡತಲೆಯೊಳಗೆ ತೆಗೆ
ನಾಲಿಗೆಯ ನೆಲೆ ಕುನ್ನಿಗಳಿರಿದ
ಕೇಳುವರೆ ಪತಿಸಿಂದೆ ಯಿದು ಪಾತಕಕೆ ಗುರುವಲ್ಲ ।
ಏಟೆನುತ ಕೃತವರ್ಮಸಾಂಬನೃ
ಪಾಲಮೊದಲಾದಖಿಳಯಾದವ
ಜಾಲವೆದ್ದುದು ಬಿಗಿದ ಬಿಲುಗಳ ಸೆಳೆದೊಡಾಯುಧದಿ ॥ ೩೮

ಕದಡಿತಾಯಾಸ್ಥಾನ ಕೋ ಯೆಂ
ದೊದಱು ಋಷಿಗಳ ನಾಲಿಗೆಗಳೊಣ
ಗಿದುವು ಹಲ್ಲಣಿಸಿದುವು ರಥಮಾತಂಗವಾಜಿಗಳು ।
ಕೆದಱಿತೀಟೆಯನೆನುತನೀತನ

ಸದೆದು ತೆಗೆ ಸುಂಟಿಗೆಯನೆನುತಲಿ
ಯದುನೃಪರು ಗಜಬಜಿಸೆ ಬಂದೆಡೆಹೊಕ್ಕನಾಭೀಷ್ಮ ॥ ೩೯

ಕೃಷ್ಣದೂಷಕರನ್ನು ಸಹದೇವನು ತಿರಸ್ಕರಿಸುವಿಕೆ,

ನಿಲಿಸಿದನು ಕಳಕಳವ ನೀಯದು
ಬಲವ ತೆಗೆದನು ಮತ್ತೆ ಮೌನದ
ಜಲಧಿಯಾಯ್ತಾಸ್ಥಾನವಿದಿರಲಿ ನಿಂದು ಸಹದೇವ ।
ಎಲೆ ಸುನೀಥ ವೃಥಾವಿರೋಧ
ಸ್ಖಲಿತನಾದೆ ಮುರಾರಿ ಮಾನ್ಯರ
ತಿಲಕನೀತನ ಪೂಜೆ ಯಾಗಕೆ ಕಳಶವಾಯ್ತೆಂದ ॥ ೪೦

ಧರಣಿಪತಿಯೇ ಸಕಲಧರ್ಮದ
ಪರಮಸೀಮೆ ಮುಕುಂದನೇ ಮಾ
ನ್ಯರಿಗೆ ಗುರು ವಂದ್ಯರಿಗೆ ವಂದ್ಯನು ದೈವಕಧಿದೈವ ।
ಸುರನದೀನಂದನನು ಸಾಕ್ಷಾ
ತ್ಪರಮಶಿವನೀಯಜ್ಞ ಲೋಕೋ
ತ್ತರದ ಮುಖವಿದು ನಿನ್ನ ಕುಮತಿಗೆ ಸಾಧ್ಯವಲ್ಲೆಂದ ॥ ೪೧

ನಿನ್ನನೆನ್ನನು ಚೈದ್ಯ ಕೃಷ್ಣನ
ಮನ್ನಣೆಗೆ ಸೆಣಸುವರಿಗಿದೆ ತೊಡ
ರೆನ್ನ ಕಾಲಲೆನುತ್ತ ಧರಣಿಯನೊದೆದನಂಘ್ರಿಯಲಿ ।
ಇನ್ನು ನೀನು ಸುಲೋಚನಾಂಧಕ
ನಿನ್ನೊಡನೆ ಫಲವೇನು ಕಲಹಕೆ
ಬನ್ನಿ ಮಿಡುಕುಳ್ಳವರೆನುತ ಗಜಱಿದನು ಸಹದೇವ ॥ ೪೨

ನುಡಿಯದದು ಮೌನಗ್ರಹದ ಹೆಡ
ಗುಡಿಯಲಿದ್ದುದು ರಾಜಕುಲವವ
ಗಡೆಯಿ [1] ನೆದ್ದನು ಸಿಂಹಪೀಠದಿ ನೋಡಿ ಕೆಲಬಲನ ।

---

1 ಗಡೆಯು, ಚ.

ಕಡೆಯ ಝುಣಝುಣರವ ಮಸಗಲವ
ನೊಡನೆ ಹೊಱವಂಟರು ನೃಪಾಲಕ
ನೊಡನೆ ಮುಳಿಚಿದರು ಹಿಡಿವಸಚಿವಪಸಾಯ್ತಮಂತ್ರಿಗಳ || ೪೩

ಶಿವಶಿವಾ ತಪ್ಪಾಯ್ತು ನಮ್ಮು
ತ್ಸವಕೆ ಬಂದವನಿವನ ಗುಣದೋ
ಷವನು ನಾವೀಕ್ಷಿಸುವುದನುಚಿತವೆಂದು ವಿನಯದಲಿ |
ಅವನಿಪತಿ ಬೆಂಬತ್ತಿ ಕದನಕೆ
ತವಕಿಸುವ ಶಿಶುಪಾಲನನು ಹಿಡಿ
ದವಚಿದನು ಮಧುರೋಕ್ತಿಯಲಿ ಮನ್ನಿಸಿದನುಚಿತದಲಿ || ೪೪

ಅಱಿಯರೇ ಮುನಿಮುಖ್ಯರೀತನ
ನುಱುವದೈವವಿದೆಂದು ನೀಕ
ಟ್ಬೈಳಿತಗಾಱನೆ ರಾಯರಿದೆಲಾ ಸಕಲಗುಣಯುತರು |
ಕಱುಬ [1] ತನದಲಿ ನೀನಕಟ ತೆಱ
ನಱಿಯದೆಂಬರೆ ಬಾರೆನುತ ಮುಂ
ಜೆಱಗ ಹಿಡಿದೆಳದವನ ತಂದನು ಭೂಪ ಜನಸಹಿತ || ೪೫

ಭೀಷ್ಮರು ಶಿಶುಪಾಲನನ್ನು ದೂಷಿಸಿ ಕೃಷ್ಣನನ್ನು ಸ್ತುತಿಸುವಿಕೆ.

ಎಲೆ ಮರುಳೆ ಭೂಪಾಲ ನೊರಜೆನ
ಕಳಕಳಕೆ ಕರಿ ಬೆಚ್ಚುವುದೆ ಮೆಂ
ಜಲಿಯ ಮಱಿ ಮುಡುಕಿದರೆ ಕಳಕಳಿಸುವುದೆ ಕಲಿಸಿಂಹ |
ಗಿಳಿಯ ಮುರಕಕೆ ಗಿಡುಗನಗಿದ
ವ್ವಳಿಸುವುದೆ ಹರಿಗಿವನು ಗಣ್ಯನೇ
ಗಳಹನಿವನೊಡನಾವುದನುನಯವೆಂದನಾಭೀಷ್ಮ || ೪೬

---

1 ಕುರುಡ, ಚ.

ಗುರುವೆ ಗುರುವೆನುವಖಿಳವಿದ್ಯಾ
ಪರಿಣತರ ಪರಿಣತನು ವೀರನು
ಧುರದ ವೀರನನಱಿವನಿಂತಿದು ಲೋಕವಿಖ್ಯಾತ ।
ಗರುವನಲ್ಲ ಸುನೀಥ ವಿದ್ಯಾ
ಪರಿಣತನು ತಾನಲ್ಲ ಘನಸಂ
ಗರದೊಳಿವನಾಳಲ್ಲ ಕೃಷ್ಣನನಱಿವನಿಂತೆಂದ ॥ ೪೭

ಅರಸನರಸನು ಕಾದಿ ಹಿಡಿದಾ
ದರಿಸಿ ಬಿಟ್ಟು ತದೀಯರಾಜ್ಯದೊ
ಳಿರಿಸಿದೊಡೆ ಗುರುವಾತನಾತಂಗಿದುವೆ ಶ್ರುತಿಸಿದ್ಧ ।
ಅರಸುಗಳನನಿಬರನು ಸೋಲಿಸಿ
ಮರಳಿ ರಾಜ್ಯದೊಳಿರಿಸನೇ ಮುರ
ಹರನು ಗುರುವಲ್ಲಾ ಮಹೀಶರಿಗೆಂದನಾಭೀಷ್ಮ ॥ ೪೮

ಮಗಧಸುತನೀಸಾಲ್ವಹಂಸನ
ಮಗನಿಶುಂಭನ ಸೂನು ನರಕನ
ಮಗನು ಪೌಂಡ್ರಕದಂತವಕ್ತ್ರನ ತನುಜರಿವರೆಲ್ಲ ।
ಹಗೆಯ ಮಾಡಿ ಮುರಾಂತಕನ ಕಾ
ಳಗದೊಳಲ್ಲರನಿಕ್ಕಿ ಪಟ್ಟವ
ಬಿಗಿಸಿ ಕೊಂಡವರಲ್ಲವೇ ಹೇಳೆಂದನಾ ಭೀಷ್ಮ ॥ ೪೯

ಜ್ಞಾನವೃದ್ಧರು ವಿಪ್ರರಲಿ ಸ
ನ್ಮಾನನೀಯರು ಶೌರ್ಯವೃದ್ಧರು
ಮಾನವೇಂದ್ರರೊಳಧಿಕವಿದು ಪೌರಾಣಸಿದ್ಧವಲೆ ।
ಜ್ಞಾನವೃದ್ಧನು ಕೃಷ್ಣನಾಹವ
ದೀನನೇ ಘನಶೌರ್ಯನೆಂಬುದ
ತಾನಱಿಯನೇ ಚೇದಿಪಾಲಕನೆಂದನಾಭೀಷ್ಮ ॥ ೫೦

ಏನನೆಂಬೆನು ಧರ್ಮತತ್ವವಿ
ಧಾನದಲಿ ಮುನಿಮುಖ್ಯರಿವರ

ಜ್ಞಾನಿಗಳ ಶಿಶುಪಾಲ ತತ್ತ್ವಜ್ಞಾನಪಂಡಿತನೆ ।
ಆನಿಶಾಟನು ಮೆಚ್ಚದಗ್ಗದ
ಭಾನುರಶ್ಮಿಯನಂಧಕಾರ
ಜ್ಞಾನನಿಷ್ಠರು ನಿಪುಣರೈ ಸಲೆ ಯೆಂದನಾಭೀಷ್ಮ ॥ ೫೧

ಈತ ಸಚರಾಚರದ ಗುರು ವಿ
ಖ್ಯಾತಮುತ್ವಿಜನೀತನಾಚಾ
ರ್ಯಾತಿಶಯನೀತನು ಮಹಾಪ್ರಿಯನೀತ ನೃಪನೀತ ।
ಸ್ನಾತಕವ್ರತಿಯೀತ ಯೀತನ
ಮಾತು ನಿನಗೆತ್ತಣದು ಸಲೆ ಖ
ದ್ಯೋತಕೆತ್ತಣ ಸೂರ್ಯಮಂಡಲವೆಂದನಾಭೀಷ್ಮ ॥ ೫೨

ಕರುಣಿಸೈ ಗಾಂಗೇಯ ಕೃಷ್ಣನ
ಚರಿತವನು ಶಿಶುಪಾಲಭೂಪನ
ಕರಣವೃತ್ತಿಯ ಕದಡು ಹಣಿಯಲಿ [1] ದೈವದೂರನಲೆ ।
ದುರುಳನಿವನ ದುರುಕ್ತಿಗಳ ಕೇ
ಳ್ದರಿಗೆ ಪ್ರಾಯಶ್ಚಿತ್ತವಿದು ವಿ
ಸ್ತರಿಸಬೇಹುದು ಸಕಲಜನಮತವೆಂದನಾಭೂಪ ॥ ೫೩

ಕೇಳು ಧರ್ಮಜ ಸಕಲಮುನಿಗಳು
ಕೇಳಿರೈ ನೆರೆದವನಿಪಾಲರು
ಕೇಳಿರೈ ನೆಱೆ ಕೇಳಿರೈ ಚಿತ್ತಾವಧಾನದಲಿ ।
ಶ್ರೀಲತಾಂಗಿಯ ವಲ್ಲಭನ ಶ್ರುತಿ
ಮೌಳಿಮಂಡಿತಪಾದಪೀಠನ
ಲೀಲೆಯನು ಚಿತ್ತೈಸಿ ಗದುಗಿನ ವೀರನಾರಣನ ೫೪

ಒಂಭತ್ತನೆಯ ಸಂಧಿ ಮುಗಿದುದು.

---

1 ತಿಳಿಯಲಿ, ಚ.

ಹತ್ತನೆಯ ಸಂಧಿ.

ಸೂಚನೆ

ದೇವ ದೇವನನುಪನಿಷತ್ಕಾಂ
ತಾವಳೀಕಮನೀಯನನು ರಾ
ಜೀವಪಿತನ ಪಿತನನಭಿವರ್ಣಿಸಿದನಾಭೀಷ್ಮ ||

ಭೀಷ್ಮರು ಕೃಷ್ಣಮಾಹಾತ್ಮ್ಯವನ್ನು ಹೇಳಲಾರಂಭಿಸುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ವಿರಚಿತಪದಯುಗಪ್ರ
ಕ್ಷಾಲನಾಚಮನೀಯನಾಗಿ ವಿಶುದ್ಧಭಾವದಲಿ |
ಶ್ರೀಲಲಿತತಲ್ಪದ ಯಶೋದಾ
ಬಾಲಕಂಗಭಿನಮಿಸಿ ನಿಮಿಷನಿ
ಮೀಲಿತಾಕ್ಷನು ಕಣ್ದೆಱೆದು ಮುನಿಜನಕೆ ಕೈಮುಗಿದು || ೧

ವರಋಷಿಗಳಾಜ್ಞೆಯಲಿ ವಿಶ್ವಂ
ಭರನ ವಿಷಯೀಕರಿಸಿ ರಾಜಾ
ಧ್ವರಸಮರ್ಥನ ಭವವಿನಾಶನ ಸುಪ್ರಯೋಜಕನ |
ಅಱಿವ ತೆಱದಿಂದೆನ್ನ ಮತಿ ಗೋ
ಚರಿಸುದುದ ಪೇಳುವೆನು ಕೃಷ್ಣನ
ಪರಮಲೀಲಾಲಲಿತಚರಿತವನೆಂದನಾಭೀಷ್ಮ || ೨

ಘನರಜೋಗುಣದಲ್ಲಿ ಚತುರಾ
ನನ ತಮೋಗುಣದಲ್ಲಿ ಶಂಕರ
ನೆನಿಸಿ ಸತ್ವಗುಣಾನುಗತಿಯಲಿ ವಿಷ್ಣುವೆಂದೆನಿಸಿ |

ಘನಜಗನ್ಮಯನಾಗಿ ಸರ್ವಾ
ತ್ಮನು ಮಹೇಶ್ವರನೆನಿಪನೀತನ
ನನಹನೀತನ ನಿಜವನಱಿವ ಮಹಾತ್ಮನಾರೆಂದ ॥ ೩

ಈತನವ್ಯಕ್ತನು ವಿಚಾರಿಸ
ಲೀತನಮಲವ್ಯಕ್ತಲಿಂಗನ
ಜಾತನವ್ಯಯನಪ್ರಮೇಯನಗವ್ಯನದ್ವಯನು ।
ಈತ ಚೈತನ್ಯಾತ್ಮ ನಿರ್ಗುಣ
ನೀತ ಗುಣಸಂಯೋಗಿ ಸರ್ವಗ
ನೀತ ಚಿನ್ಮಯನೀತನಾ ಪರಿಯೆಂದನಾಭೀಷ್ಮ ॥ ೪

ಜಲನಿಧಿಯ ಬುದ್ಬುದ ತರಂಗಾ
ವಳಿಗಳಾಜಲಧಿಯಲಿ ತೋಱುವ
ವಡಗುವೀಮ್ವೈಕುಂಠವಿಮಲಜ್ಞಾನ ಜಲಧಿಯಲಿ ।
ಹೊಳೆವುದಡಗುವುದು ವಿಶ್ವವೀತನ
ನುಱುಹಿ ತೋಱುವುದಿಲ್ಲ ಮಾಯಾ
ಲಲನೆ ಯಿಕ್ಕಿದ ಮದ್ದು ಜೀವರಿಗೆಂದನಾಭೀಷ್ಮ ॥ ೫

ಭ್ರಾಮಕದೊಳೀ ವಿಷಯಸೌಖ್ಯದ
ರಾಮಣೀಯಕದೊಳಗೆ ಮುಱುಗಿ ನಿ
ರಾಮಯನು ಪರತತ್ವಮಯನಚ್ಯುತನು ತಾನಾದ ।
ಈಮುಕುಂದನ ಮಱೆವ ಕರ್ಮವಿ
ರಾಮದಲಿ ಕುದಿವವರು ಮಾಯಾ
ಕಾಮಿನಿಯ ಕೈಮಸಕದಲಿ ಮರುಳಾಗದಿರರೆಂದ ॥ ೬

ಭೂತಜನನಸ್ಥಿತಿಗೆ ಕಾರಣ
ನೀತನೀತಂಗಿಲ್ಲ ಕಾರಣ
ನೀತ ಜಾಗ್ರತ್ಸ್ವಪ್ನಸುಪ್ತಿಗಳೆಂಬವಸ್ಥೆಗಳ ।

ಆತುರಿಯುದಾತುರಿಯು ತುರ್ಯಾ
ತೀತಲಕ್ಷಣನಿತ್ಯನಿರ್ಮಲ
ನೀತನಮಲಜ್ಞಪ್ತಿ [1] ಚಿನ್ಮಯನೆಂದನಾಭೀಷ್ಮ ॥ ೭

ಇರದೆ ತಿಲದಲಿ ತೈಲ ಕಾಷ್ಠದೊ
ಳಱಿವ ತಂದರೆ ಹುತವಹನನೇ
ನಱಿಯಬಾರದೆ ವಿಷ್ಣು ಚೈತನ್ಯಾತ್ಮನೆಂಬುದನು ।
ಹೊಱಗೊಳಗೆ ಸಂಸ್ಥೂಲಸೂಕ್ಷ್ಮಾ
ತ್ಕರದೊಳಗೆ ಹರಿಯುಂಟಿಯೆ ವಿಶ್ವವ
ಹೊಱಿವ ಹೊಂದಿಪರುಂಟೆ ಹೊರಬಿಗರೆಂದನಾಭೀಷ್ಮ ॥ ೮

ಹೂಹೆಗಳು ಹೊಯ್ದಾಡವೇ ನಿ
ರ್ವಾಹಸೂತ್ರದ ಕುಣಿಕೆಗಾಱಿನ
ಗಾಹಿನಲಿ ತಜ್ಜಗದ ಜೀವರ ಸುಕೃತದುಷ್ಕೃತವ ।
ಹೋಹರಿಕೆಯಲಿ ತಂದು ಭವದಲಿ
ಸೋಹಿ ಸುಟಿಸುವನೀಚರಾಚರ
ಜೋಹವಿದು ನಿಜಲೀಲೆಯಿ ಹರಿಗೆಂದನಾಭೀಷ್ಮ ॥ ೯

ಈತನಚ್ಯುತನಲ್ಲೆನಿಸಿ ವಿಪ
ರೀತಮಿಥ್ಯಾಜ್ಞಾನ ತೋಱದೊ
ಡೀತನಲಿ ತಪ್ಪೇನು ನಿಜಪರಮಾತ್ಮಭಾವನೆಗೆ [2] ।
ಭೀತನೊಬ್ಬನು ಕನಸಿನಲಿ ತ
ನ್ನಾತಲೆಯ ತಾನರಿದು ಪಿಡಿದುದ
ನೇತಱಿಂದಲಿ ಕಂಡನೈ ಶಿಶುಪಾಲ ಕೇಳೆಂದ ॥ ೧೦

ಭ್ರಮೆಯು ಭುಜಗನೊ ರಜ್ಜುವೋ ಜಂ
ಗಮವು ಕಲ್ಪಿತಪುರುಷನಾತ್ಮನೊ
ವಿಮಲಸಂವಿದ್ರೂಪನಾತ್ಮನೊ ಜೀವ ಪರಗುನಲಿ ।

---

[1] ವ್ಯಕ್ತಿ, ಚ. [2] ನೆನಿಸಿದೊಡೆ, ಕ. ಖ.

ಕಮಲನಾಭನೆ ನಿಜವೊ ವಿಶ್ವ
ಕ್ರಮವೆ ನಿಜವೊ ಚೈದ್ಯಭೂಪತಿ
ಕುಮತಿ ಕಪಿಗೇಕಮಲಮಾಣಿಕವೆಂದನಾಭೀಷ್ಮ ॥ ೧೧

ತೋಱುವೀಮಹದಾದಿಭೂತದೊ
ಳೋಱುಗುಡಿಸದೆ ನಿಂದ ಮೂವ
ತ್ತಾಱು ತತ್ವದೊಳೀತನೇ ಮಣಿಗಣದ ಗುಣದಂತೆ ।
ತೋಱುವೀತೋಱಿಕೆಯ ತುಷವನು
ತೂಱಿದರೆ ಮೋಕ್ಷ ವಿಶ್ವಮುಖದಲಿ [1]
ತೋಱಿ ತೋಱದೆ ಮಱೆವನೀಹರಿ ಯೆಂದನಾಭೀಷ್ಮ ॥ ೧೨

ಸ್ವೇದಜಾಂಡೋದ್ಭಿಜ್ಜರಾಯುಜ
ಭೇದವಾದ ಚತುರ್ವಿಧದ ಭೂ
ತೋದರನ ತದ್ಭೂತಮಯ ತದ್ಭೂತಭಾವನನ ।
ವಾದಕೊಳ್ಳದ ಬಹುಳವಸ್ತುವ
ನೀದುರಾತ್ಮಕನೆತ್ತ ಬಲ್ಲನು
ಬೀದಿಯಲಿ ಬಿದ್ದಿದೆಯೆ ಬೊಮ್ಮವಿದೆಂದನಾಭೀಷ್ಮ ॥ ೧೩

ನೆಳಲು ಜಲದಲಿ ನಡುಗಲಿನಮಂ
ಡಲಕೆ ಕಂಪವೆ ಧೂಮಶಿಖಿಯು
ಪ್ಪಳಿಸಿದೊಡೆ ಕಂದುವುದೆ ನಭ ಕೆಂಧೂಳಿಯೊಡೆಮುಱಿದು ।
ಸುೞಿದೊಡನಿಲನ ತೊಳವರೇ ನರ
ರೊಳಗೆ ನರರೂಪದಲಿ ಜನಿಸಿದೊ
ಡೊಳಗು ಡಿಳ್ಳವೆ ಪರಮಸುಖಸಿಧಿಗೆಂದನಾಭೀಷ್ಮ ॥ ೧೪

ಗುಣಮಯದ ಗರುವಾಯಿಯಲಿ ಜೇ
ವಣಿಗೆಗೊಂಬನು ಭೂತದಿಂದ್ರಿಯ
ಗಣದೊಡನೆ ನಿಜಪೌರುಷದಲೊದಗಿದ ಪವಾಡಿಗಳ ।

---

1 ತದುಪಹಿತದಲಿ, ಕ, ಖ.

ಗುಣವ ಝಾಡಿಸಿದೊಡೆ ಸಮಷ್ಟಿಯು
ಹಣಿದದಲಿ ಮುರಿದಿದಿರನಗಲಕೆ
ಕುಣಿವ ಚಾಪಲಬೊಮ್ಮ ಗಜವಿದನರಿವನಾರೆಂದ ॥ ೧೫

ಕೊಲೆಯು ಕವತೆಯು ಕನಸಿನಲಿ
ಕಳವಳಿಸಿದರೆ ದಿಟವೇ ಮನೋರಥ
ಫಲವನನುಭವಿಸಿದರೆ ಯನುಭವಸಿದ್ಧವೇ ತನಗೆ ।
ಹೊಳೆವ ಜಗದಲಿ ಹೊಳೆದು ತ
ನ್ನೊಳಗಡಗಿದು ತಾನುಗುಳಿದ ಬೊಮ್ಮಕೆ
ಹಳಿವು ಹೊರುವುದೆ ಸಿತ್ಯಶುದ್ಧನೊಳೆಂದನಾಭೀಷ್ಮ ॥ ೧೬

ನೋಟ ಸುತ್ತಲು ಬೇಹುದೇ ಹರಿ
ದಾಟವೆಗಲಕೆ ಬಳಕೆಯಲಿ ಮಾ
ತಾಟ ಸುಳಿವಿನೊಳಗ್ಗಳದ ಹಿಡಿಬಂದಿ ಹರಹಿನಲಿ ।
ಬೇಟದಲಿ ಮೂವಣ್ಣ ದಾಕೆಯು
ಕೂಟದಲಿ ಕುರುಹಾಗಿ ಮಿಗೆ ನಿ
ರ್ಲೋಟಿಸುವರೆನೆ ಸಿಜದಿಟ್ಟಬೊಮ್ಮವಿದೆಂದನಾಭೀಷ್ಮ ॥ ೧೭

ಭೂತಭವ್ಯಭವತ್ಪ್ರಧಾನ
ಖ್ಯಾತತತ್ವಪ್ರಕೃತಿಪೂರುಷ
ನೀತ ಸಚ್ಚಿಸ್ಮಾತ್ರಲಿಂಗನು ಪರಶಿವಾತ್ಮಕನು ।
ಸೋತು ನುಡಿ ಮನದೊಡನೆ ಮರಳಿದೊ
ಡಾತ ಸತ್ಯಜ್ಞಾನಮಯ ನಿ
ರ್ಧೂತಮಾಯಾತಿಮಿರನೀಹರಿ ಯೆಂದನಾಭೀಷ್ಮ ॥ ೧೮

ದೆಸೆ ಪರಿಚ್ಛೇದಿಸದ ನುಡಿ ಹವ
ಣಿಸದ ಕಲ್ಪಸಹಸ್ರಕೋಟಿಯೊ
ಳಸಮಸೆಯು ಮಾಡದ ಮಹತ್ವದೊಳುರುಮಹತ್ವದಲಿ ।

ಎಸೆವನಣುವಿಂಗಣುವೆನಿಸಿ ನಿ
ರ್ಮಿಸಿ ವಿಭಾಡಿಸಿ ಬರೆಸೆಟೆದು ಹೆ
ಚ್ಚಿಸಿ ಮುಱಿದನೀಜಗವನೀಹರಿ ಯೆಂದನಾಭೀಷ್ಮ ॥ ೧೯

ಯಜ್ಞದಧಿಪತಿ ಯೀತನೀತನು
ಯಜ್ಞಪುರುಷನು ಸ್ರುಕ್ಸ್ರುವಾದಿಯು
ಯಜ್ಞಸಾಧನವೀತನೀತನು ಮಂತ್ರಕಾಲಾತ್ಮ ।
ಯಜ್ಞವೀತನು ಕರ್ಮವೀತನು
ಯಜ್ಞದಲಿ ಯಜಮಾನನೀತನು
ಯಜ್ಞಫಲವೀದೇವಕೀಸುತನೆಂದನಾಭೀಷ್ಮ ॥ ೨೦

ಒಂದೆನಿಸಿ ತೋಱಸುವನೆರಡಱೊ
ಳೊಂದಿ ಮೆಱೆವನು ಮೂಱುನೆಲೆಯಲಿ
ನಿಂದು ನಾಲ್ಕನು ಬಳಸಿ ವಿಭುವಾಗೈದು ತಾಣದಲಿ ।
ಹಿಂದು ಮುಂದಿಂದೆಂಬ ಬಹುವಿಧ
ದಿಂದ ಮಾಯಾಗುಪ್ತನಾಗಿ ಮು
ಕುಂದ ತೋಱುವನೀತನಂಕವನಱಿವರಾರೆಂದ ॥ ೨೧

ದ್ವಿಜರು ಮುಖದಲಿ ಭೂಪರೀತನ
ಭುಜದಲಾದರು ನಿಖಿಳವೈಶ್ಯ
ಪ್ರಜೆ ಘನೋರುಗಳಿಂದ ಶೂದ್ರರು ಪಾದಪದ್ಮದಲಿ ।
ದ್ವಿಜಪತಿ ಸ್ವಾಂತದಲಿ ವರವಾ
ರಿಜಸಖನು ಕಂಣ್ಣಿನಲಿ ವದನಾಂ
ಬುಜದಲಿಂದ್ರಾದಿಗಳು ಜನಿಸಿದರೆಂದನಾಭೀಷ್ಮ ॥ ೨೨

ಗಗನ ವೀತನ ನಾಭಿ ದಶದಿ
ಕ್ಕುಗಳು ಕಿವಿ ಫಣಿಲೋಕ ವಿಮಳಾಂ
ಘ್ರಿಗಳು ಧ್ರುವನಿಂ ಮೇಲು ಭಾಗ ಮುರಾಂತಕನ ಮಕುಟ ।

ಗಗನಮಣಿ ಶಂಕರವಿರಿಂಚಾ
ದಿಗಳು ದೇವನ ರೋಮಕೂಪದೊ
ಳಗಣಿತಾಮರನಿಕರವಿಹುದಿದನರಿವರಾರೆಂದ ॥ ೨೩

ಪ್ರಳಯದಲಿ ಧರೆ ಕರಗುವುದು ಜಲ
ದೊಳಗೆ ತಜ್ಜಲವಡಗುವದು ಶಿಖಿ
ಯೊಳಗೆ ತತ್ಪಾವಕನು ಪವನದೊಳಾತನಭ್ರದಲಿ ।
ಬಳಿಕಹಂತತ್ವದಲಿ ಗಗನವೆ
ನಿಲುಗು ಹಂಮು ಮಹತ್ತಿನಲಿ ಮಹ
ದಟಿವು ಮಾಯೆಯೊಳಾಕೆಯಡಗುವಳೀತನಂಘ್ರಿಯಲಿ ॥ ೨೪

ಧರಣಿ ತಾನೈವತ್ತು ಕೋಟಿಯ
ಹರಹು ಭೂಮಿಗೆ ಹತ್ತುಮಡಿ ಖ
ರ್ಪರ ಕಟಾಹವದಕ್ಕೆ ದಶಗುಣ ದಶಗುಣೋತ್ತರದ ।
ಪರಿವಿಡಿಯಲುದಕಾಗ್ನಿ ಹರಿಪು
ಷ್ಕರವಹಂಮಹದಾದಿಸಪ್ತಾ
ವರಣವೀಬ್ರಹ್ಮಾಂಡವೀತನ ರೋಮರೋಮದಲಿ ॥ ೨೫

ದೇವನಂಗೋಪಾಂಗದಲಿ ವೇ
ದಾವಳಿಗಳುಚ್ಛ್ವಾಸದಲಿ ತೀ
ರ್ಥಾವಳಿಗಳಂಘ್ರಿದ್ವಯಾಂಬುಜದ ಮಕರಂದದಲಿ ।
ಪಾವನಕೆ ಪಾವನನು ಜೀವರ
ಜೀವನನು ಮೃತ್ಯುವಿಗೆ ಮೃತ್ಯುವ
ದಾವ ಲೆಕ್ಕದೊಳೀತನಿಹನೆಂದರಿವರಾರೆಂದ ॥ ೨೬

ವಿಶ್ವಶಿಲ್ಪದ ಕುಶಲಹಸ್ತನು
ವಿಶ್ವರಕ್ಷೆಯ ಮಂತ್ರವಾದಿಯು
ವಿಶ್ವಸಮಿಧೆಯೊಳಗ್ನಿಕಾರ್ಯದ ಬ್ರಹ್ಮಚಾರಿವಟು ।

ವಿಶ್ವನಾಟಕಸೂತ್ರಧಾರನು
ವಿಶ್ವವಿಷಯದಲೈಂದ್ರಜಾಲಿಕ
ವಿಶ್ವದಂತಸ್ಸ್ಯೂತಚೇತನನೀತ ನೋಡೆಂದ ॥ ೨೭

ಇರಲಿರಲು ಕಲ್ಪಾವಸಾನಕೆ
ಬಿರಿವುದೀಬ್ರಹ್ಮಾಂಡ ಬಹಿರಾ
ವರಣಜಲವೀಜಲದೊಳೊಂದಾಯ್ತೇಕರೂಪದಲಿ ।
ಹರಿ ವಿನೋದದಲೊಬ್ಬನೇ ಸಂ
ಚರಿಸುತಿರ್ದನು ಬಳಿಕ ಕಾಲಾಂ
ತರದೊಳಗೆ ಮಧುಕೈಟಭರು ಜನಿಸಿದರು ಕರ್ಣದಲಿ ॥ ೨೮

ಲೀಲೆಯಲಿ ಬಳಿಕವದಿರೊಡನೆ ವಿ
ಟಾಳಿಸಿತು ಮನ ಕಾದಿದರು ಬಲು
ಕಾಳಗವನವರಿತ್ತ ವರದಲಿ ಹಿಡಿದು ದಾನವರ ।
ಸೀಳಿ ಬಿಸುಟನು ಖಳರ ಮೇದ
ಸ್ಸಾಳಿ ಮುಳುಗಿತು ಜಲದೊಳದಱಿಂ
ಮೇಲು ಪೆಸರಾಯ್ತಿಳೆಗೆ ಮೇದಿನಿಯೆಂಬ ನಾಮದಲಿ ॥ ೨೯

ಆಮಧುವನಾಕೈಟಭನ ಮುಱಿ
ದೀಮಹಾತ್ಮಕನೊಡನೆ ವಾದಿಸು
ವೀಮರುಳನೇನೆಂಬೆನೈ ಶಿಶುಪಾಲಬಾಲಕನ ।
ಕಾಮರಿಪು ಕಲ್ಪಾಂತವಹ್ನಿ
ವ್ಯೋಮರೂಪನುದಾರಸುಗುಣಸ
ನಾಮ ಚಿನ್ಮಯನೀತನೀತನನಱಿವರಾರೆಂದ ॥ ೩೦

ಶ್ರುತಿಪುರಾಣಸಮಸ್ತಶಾಸ್ತ್ರ
ಸ್ಮೃತಿವಿಭಾಗಾರ್ಥಕೆ ವಸಿಷ್ಠನ
ಸುತನ ಸುತನಲಿ ವಿಮಲವೇದವ್ಯಾಸನಾಮದಲಿ ।

ವ್ರತಿಜನೋತ್ತಮ ಜನಿಸಿದನು ಯದು
ಪತಿ ಕಣಾ ತಾನೀತನೀದು
ರ್ಮತಿಗೆ ಗಮ್ಯನೆ ಗರುವದೈವದ ಗಾಢಗತಿಯೆಂದ ॥ ೩೧

ಮನುವಹಿವನಜ ಬಲ್ಲನೀಶ್ವರ
ನೆನೆವ ನಾರದಮುನಿಪ ವರ್ಣಿಪ
ಮನದಿ ಸನಕಸನತ್ಸುಜಾತಾದ್ಯರಿಗಿದೇ ಬೆಸನ ।
ಮುನಿಗಳಿಗೆ ಮುಕ್ತರಿಗೆ ಕರ್ಮದ
ಕಣಿಗಳಿಗೆ ಕೋವಿದರಿಗಿದೆ ಜೀ
ವನವಿದೇ ಗತಿ ಪರಮವೈಷ್ಣವತತ್ತ್ವವಿದೆ ಯೆಂದ ॥ ೩೨

ವೇದಕೀಸುಬ್ಬುಸ ವಿರಿಂಚಹ
ರಾದಿಗಳು ಕಿಗ್ಗಡಲಲಿರೆ ಸನ
ಕಾದಿಮುನಿಗಳು ತಡಿಯಲಿದ್ದರು ತೆರೆಯ ಹೊಯ್ಲಿನಲಿ ।
ವಾದಿಗಳ ದುಸ್ತರ್ಕ ನಶಿವುದು
ವಾದದಲಿ ದುಸ್ತರಮುರಾರಿಮ
ಹೋದಧಿಯನೀಬಣಗುದಾನವ ಭಂಗಿಸುವನೆಂದ ॥ ೩೩

ಆಕಟ ನಿರ್ಗುಣತತ್ತ್ವವಿದೆ ನಾ
ಟಕದ ಬಹುರೂಪಿನಲಿ ಪರಮಾ
ತ್ಮಕ ಪರಾನಂದೈಕರಸವಿದೆ ಮನೆಯ ಕೇಲಿನಲಿ ।
ಪ್ರಕಟಮಾಯಾಗುಪ್ತಪರಮಾ
ತ್ಮಕಮಹಾನಿಧಿ ಸಭೆಯೊಳಿರುತಿರೆ
ವಿಕಳಮತಿಗಳು ತರುಚು [1] ಗೆಡುವರು ಶಿವ ಶಿವಾ ಯೆಂದ ॥ ೩೪

ನಿರವಯವತತ್ತ್ವೈಕರಸವಿದೆ
ನರಮನೋಹರರೂಪಿನಲಿ ವ್ಯವ
ಹರಣಸಂಜ್ಞಾರಹಿತವಿದೆ ಕೃಷ್ಣಾಭಿಧಾನದಲಿ ।

---

[1] ಪೀಚು, ಚ.

ಭರಿತಬಹಳಬ್ರಹ್ಮವಿಲ್ಲಿಯೆ
ಧರಣಿಯಲಿ ಸಂಚರಿಸುತಿದೆ ಮುರ
ಹರನ ತತ್ವರಹಸ್ಯಮುದ್ರೆಯನರಿವರಾರೆಂದ ॥ ೩೫

ಏಕೆ ಕನ್ನಡಿ ಕುರುಡರಿಗೆ ತಾ
ನೇಕೆ ಸಾಳಗ ಶುದ್ಧಬಧಿರರಿ
ಗೇಕೆ ಮೂರ್ಖಸಮಾಜದಲಿ ಸಾಹಿತ್ಯಸನ್ನಾಹ ।
ಏಕೆ ಖಳರಿಗೆ ನಯವಿಧಾನ
ವ್ಯಾಕರಣ ತಾನೇಕೆ [1] ಘಥ ಲೋ
ಕೈಕಪಾತಕಗೆಂದು ನುಡಿದನು ಜಱಿದು ದಾನವನ ॥ ೩೬

ಹೊಗೞ ದಣಿಯವು ವೇದತತಿ ಕೈ
ಮುಗಿದು ತಣಿಯರು ಕಮಲಭವಭವ
ರೊಗುಹಿಗೆಯು ಮಾನಸಸಮಾಧಿಯ ಸಾರತತ್ವದಲಿ ।
ಬಗೆದು ತಣಿಯರು ಯೋಗಿಗಳು ಕೈ
ಮುಗುಚಿ ತಣಿಯರು ಕರ್ಮಿಗಳು ಮೂ
ಜಗದ ದೈವದ ದೈವ ಕೃಷ್ಣನ ಬೈವಸಿವನೆಂದ ॥ ೩೭

ಈತ ಕಾಣಿರೆ ಘನಚರಾಚರ
ಚೇತನತ್ವದ ಬಹಳ [2] ಜೀವ
ವ್ರಾತವನು ತುಂಬಿದನು ಹಡಗಿನೊಳೌಕಿ ಬಾಲ್ಯದಲಿ ।
ಆತತಮನೆಂಬಸುರನನು ಕಿಱು
ಘಾತಿಯಿಂದವೆ ಮಡುಹಿ ವೇದವ
ನೀತ ತಂದನು ಮತ್ಸ್ಯರೂಪಿನೊಳೆಂದನಾಭೀಷ್ಮ ॥ ೩೮

ಖೂಳನಾಯ್ಗಳು ಬಲ್ಲರೇ ಶಿಶು
ಪಾಲಕಾದಿಕುಠಾರನೀಗೋ
ಪಾಲ ಕಾಣಿರೆ ಕೂರ್ಮರೂಪವ ಧರಿಸಿ ಮೇದಿನಿಯ ।

---

1 ಪಾಂಡಿತ್ಯ, ಚ. 2 ವಿಹಿತ, ಚ.

ಸಾಲ ಹೆಡೆಯಲಿ ಪೊತ್ತ ಪನ್ನಗ
ಪಾಲಕನನಾವುಂದರದ ಕಡೆ
ಗೋಲನಾಂತ ಮಹಾತ್ಮನೀತನನಱಿವರಾರೆಂದ ॥ ೩೯

ಇವನ ಹವಣಿಯು ಮುನ್ನ ಕೃತಯುಗ
ದವರೊಳದಟ ಹಿರಣ್ಯಲೋಚನ
ನವನಿಯನು ಕದ್ದೋಡಿದನು ಹೊಕ್ಕನು ರಸಾತಳವ ।
ಅವನ ಬೆಂಬತ್ತಿದನು ಯಜ್ಞ
ಪ್ರವರದೇಹನು ವೇದಮಯ ನೀ
ಭವವಿಮೋಹನು ಘನವರಾಹನು ಕೃಷ್ಣ ನೋಡೆಂದ ॥ ೪೦

ತೂಳಿದನು ದಂಡೆಯಲಿ ದೈತ್ಯನ
ಸೀಳಿದನು ದಿಕ್ಕರಿಫಣೀಂದ್ರರ
ಮೇಲೆ ಜಗವನು ಹರಹಿದನು [1] ಸಂತೈಸಿದನು ಜಗವ ।
ಹೇಳಲಜರುದ್ರಾದಿದೇವರ [2]
ತಾಳಿಗೆಗಳೊಣಗಿದುವು ಭಂಗಿ ಚ
ಡಾಳಿಸಿತಲಾ ಚೈದ್ಯಭೂಪತಿಗೆಂದನಾಭೀಷ್ಮ ॥ ೪೧

ಆಹಿರಣ್ಯಾಕ್ಷನ ಸಹೋದರ
ನೀಹರಿಯನವಗಡಿಸಿ ದೈವ
ದ್ರೋಹಿ ಬಹುವಿಧವ್ಯಥೆಗಳಲಿ ಬೇಸಱಿಸಿದನು ಮಗನ ।
ಆಹವದೊಳಚ್ಯುತ ಮುಕುಂದ ಮ
ಹಾಹಿತಲ್ಪ ಮಹೇಂದ್ರವಂದ್ಯ
ತ್ರಾಹಿ ಯೆಂದನವರತ ಮೊರಱಿದನಂದು ಪ್ರಹ್ಲಾದ ॥ ೪೨

ಕಾದುದೀತನ ನಾಮವಾ ಪ್ರ
ಹ್ಲಾದನಾಸಱು ಬೇಸಱನು ಬಿಟ
ಕೀದಯಾಬ್ಧಿಗೆ ದನುಜಪತಿ ದಿಟ್ಟಿಸಿದ ಕಂಭದಲಿ ।

---

1 ಧರಣಿಯ ನಿಲಿಸಿದನು, ಚ. 2 ಮುರೇಂದ್ರರ, ಚ.

ಆದುದಾವಿರ್ಭಾವ ಸಿಡಿಲಿನ
ಸೋದರದ ಕಣ್ಣುಗಳ ಭಾಳದ
ಬೀದಿಗಿಚ್ಚಿನ ರೌದ್ರದಲಿ ನರಸಿಂಹಮಯವಾದ ॥ ೪೩

ಉಗುರಲಸುರನ ಕರುಳದಿಂಡೆಯ
ನುಗಿದು ಕೊರಳಲಿ ಹಾಯ್ಕಿ ದೈತ್ಯನ
ಮಗನ ಪತಿಕರಿಸಿದನು ತತ್ಕ್ರೋಧಾಗ್ನಿ ಪಲ್ಲವಿಸೆ ।
ಭುಗಿಭುಗಿಲು ಭುಗಿಲೆಂದು ಕರ್ಬೊಗೆ
ನೆಗೆಯಲುರಿ ಹೊರೆದಬುಜಜಾಂಡವ
ಬಗರೊಗೆಯೆ ಭೇದಿಸಿದುದೀತನ ಕೆಣಕಬೇಡೆಂದ ॥ ೪೪

ತ್ರೇತೆಯಲಿ ಬಲಿರಾಜ್ಯ ಭುವನ
ಖ್ಯಾತವಾಯ್ತು ತದಶ್ವಮೇಧದೊ
ಳೀತ ವಾಮನನಾಗಿ ಯಾಚಿಸಿದನು ಪದತ್ರಯದ ।
ಭೂತಳವನಲ್ಲಿಂದ ಬಳಿಕ
ಪ್ರೀತಿಯಲಿ ಬಲಿನೃಪತಿಹಸ್ತಾ[1]
ಧೌತಚರಣದೊಳಳೆಯಲಾದುದು ಧರಣಿ ಪದಯುಗಕೆ ॥ ೪೫

ನೆರೆಯದಿರೆ ನೆಲ ನೆಗಹಿದಂಘ್ರಿಗೆ
ಮುಱಿದುದಬುಜಭವಾಂಡ ಖರ್ಪರ
ದೆಱತೆ ಬಹಿರಾವರಣಜಲ ಗಂಗಾಭಿಧಾನದಲಿ ।
ಎಱಗಿತೀಗೋವಿಂದನಾರೆಂ
ದಱಿದಿಪ್ಪೈ ಹರಿಯೊಡನೆ ಜಂಬುಕ
ನಱಿಚಿದೊಡೆ ನಾನೇನ ಹೇೞುವೆನೆಂದನಾಭೀಷ್ಮ ॥ ೪೬

ರಾಯ ಕೇಳೈ ವಿಮಲದತ್ತಾ
ತ್ರೇಯವೆಸರಲಿ ಧರ್ಮವನು ಪೂ
ರಾಯದಲಿ ಪಲ್ಲವಿಸಿದನು ಹೈಹಯನ ರಾಜ್ಯದಲಿ ।

---

1 ಕಮಲಜಕಟಾಹೋದ್ಭೂತ. ಕ. ಖ. ಚ.

ಬಾಯಬಡಕರು ಬಗುಳ್ತಿದೊಡೆ ಹರಿ
ಯಾಯಿತಕೆ ಪಾಸಟಿಯೆ ಸಿಗವುದ
ಬಾಯ ಬೀಯಗನೀಮುಕುಂದನನಱಿವರಾರೆಂದ ‖ ೪೭

ಮಿಡುಕಿದರೆ ರಾವಣನ ಸೆಱೆಯಲಿ
ಕೆಡಹಿದನಲಾ ಕಾರ್ತವೀರ್ಯ್ಯನು
ಕಡುಹನಾನುವ ದಿಟ್ಟರುಂಟೇ ದೇವದೈತ್ಯರಲಿ ।
ತೊಡಕಿದರೆ ಬಳಿಕಾನೃಪನ ತೋ
ಳಡವಿದಱಿದು ಮಹೀಶವಂಶವ
ತಡೆಗಡಿದನೀಕೊಡಲಿಕಾಱನ ತೋಟಿ ಬೇಡೆಂದ ‖ ೪೮

ಖರನ ತಿಸಿರನ ದೂಷಣಾದ್ಯರ
ಶಿರವ ಚೆಂಡಾಡಿದನು ಘನಸಾ
ಗರಕೆ ಕಟ್ಟಿದ ಕಟ್ಟೆಯಿದಲಾ ಕಾಣದೇ ಲೋಕ ।
ಹರಿಬವೋ ಮೇಣ್ ಪೌರುಷವೊ ಮ
ತ್ಸರವೊ ಮೇಣ್ಸ್ಮರಾಂಕವೊ ಹುಲು
ವೊಱಡಿ ಸೆಣಸುವುದೆ ಸುರಾದ್ರಿಯೊಳೆಂದನಾಭೀಷ್ಮ ‖ ೪೯

ಆವುದಂತರ ಸಿಮೆಗೆ ಹಿಂದಣ
ರಾವಣನೊಳವಗಡಿಸಲಾತನ
ಮಾವನನು ಮುಱಿದವನ ತಂಗಿಯ ಮುಖವ ಭಂಗಿಸಿದ ।
ದೇವದಲ್ಲಣನಿಂದ್ರವಿಜಯ ಸು
ರಾವಳಿಯ ದೆಸೆಪಟರೆಸಿಪ ದೈ
ತ್ಯಾವಳಿಯ ಕಡಿಖಂಡದೊಟ್ಟಲಿನಾತ[1] ನೋಡೆಂದ ‖ ೫೦

ಹರಗಿರಿಯ ಮಾಟೆತ್ತಿದುಬ್ಬಟೆ
ಯರಸಲಾದಶವದನನಾತನ
ಶಿರದುವಾರ[2] ವಸಿಡಿದು ದಣಿಸನೇ ದೆಸೆಯ ದೇಪಿಯರ ।

1 ರಾವ., ಚ.　　2 ಶರದಪಾರ, ಚ.

ಬರಡನಿವನೀದೈವದೊಡನು
ಬ್ಬರಿಸಿದರೆ ತಮ್ಮಿಬ್ಬರಭ್ಯಂ
ತರವನಿವರಱಿಯರೆ ಮುನೀಂದ್ರರು ಶಿವಶಿವಾ ಯೆಂದ ॥ ೫೧

ಹಿಂದೆ ಕೃತಯುಗಸಮಯದಲಿ ಸುರ
ವೃಂದದೊಡನಸುರರಿಗೆ ಕೊಂಡೆಯ
ದಿಂದ ಮಸೆಮಸೆದಂಕವಾದುದು ಕಳನ ಕಾಳಗಕೆ ।
ಬಂದುದಾ ತೆತ್ತೀಸಕೋಟಿಗ
ಳೊಂದು ದೆಸೆ ಜಂಭಾದಿದಾನವ
ರೊಂದು ದೆಸೆ ಹೊಯ್ದಾಡಿತೇನೆಂಬೆನು ಮಹಾದ್ಭುತವ ॥ ೫೨

ಅವರೊಳಗ್ಗದ ಕಾಲನೇಮಿ
ಪ್ರವರನಮರವಿಭಾಡ ವರದಾ
ನವಶಿರೋಮಣಿ ದಿವಿಜನಾಯಕಶರಭಭೇರುಂಡ ।
ಬವರದಲಿ ಶಕ್ರಾಗ್ನಿಯಮಶಶಿ
ರವಿಕುಬೇರಸಮೀರಣಾದ್ಯರ
ಸವಱಿ ಸಪ್ತಾಂಗವನು ಕೊಂಡನು ಮೇಘವಾಹನನ ॥ ೫೩

ರಣದೊಳೋಡಿದ ಸುರನಿಕರ ಘ
ಲ್ಲಣೆಯನಿಕ್ಕಿತು ಹರಿಗೆ ಕರೆ ಪ
ಲ್ಲಣಿಸು ಗರುಡನನೆನುತ ಹೊಱವಂಟನು ಮುರಧ್ವಂಸಿ ।
ಕೆಣಕಿದನು ದಾನವನನಾಗಳ
ಹಣಿದವನ ಹೊಯ್ದುಮಳಚಕ್ರದ
ಗೊಣೆಯುದಲಿ ಮೆಱೆಸಿದನು ತಲೆಯನು ದಿವಿಜನಗರಿಯಲಿ ॥ ೫೪

ಆಮಹಾಸುರಕಾಲನೇಮಿಯ
ನಾಮನೀಕಾಲದಲಿ ಯಾದವ
ಭೂಮಿಯಲಿ ಜನಿಸಿದನಲಾ ಕಂಸಾಭಿಧಾನದಲಿ ।

ಈಮರುಳು ಹವಣೇ ತದೀಯ
ಸ್ತೋಮ ಧೇನುಕಕೇಶಿವತ್ಸತೃ
ಣಾಮಯರು ಹಲರಿಪರು ದುಷ್ಪರಿವಾರ ಕಂಸನಲಿ ॥ ೫೫

ಸೇದಿದನು ಪೂತನೆಯಸುವನವ
ಳಾದರಿಸಿ ಮೊಲೆವಾಲನೂಡಿಸೆ
ಪಾದತಳ ಸೋಂಕಿನಲಿ ತೊಟ್ಟಲ ಭಂಡಿ ನುಗ್ಗಾಯ್ತು ।
ಸೇದಿ ಕಟ್ಟಿದ್ಗೊರಳನೆಳದರೆ
ಬೀದಿಯಲಿ ಮರ ಮುಱಿದುದೀಕಱು
ಗಾದವನ ಕಯ್ಯಿಂದಲೞಿದುದು ಕಂಸಪರಿವಾರ ॥ ೫೬

* ಆದುರುಳಸರ್ಪನ ವಿಭಾಡಿಸಿ
ಕಾದನಾಗೋವುಗಳ ನಿಂದ್ರನ
ಬಾಧೆಯನು ಪರಿಹರಿಸಿ ಮಿಗೆ ತಾ ಕಾಯ್ದ ಗೋಕುಲವ ।
ಭೂಧರವ ನೆಱೆ ಕೊಡೆಯ ತೆಱದವೊ
ಲಾದರಿಸಿದನು ಬೆರಳ ಕೊನೆಯ
ಲ್ಲಾದಮೊತ್ತಿದನೇೞುದಿನಪರಿಯಂತ ಕೇಳಂದ ॥ ೫೭

ಬೀದಿಯಲಿ ಜನ ನೋಡೆ ರಜಕನ
ಮೋದಿ ವಸ್ತ್ರವ ಕಳದು ಕೊಂಡನು
ಮೋದದಿಂದ ಸುಗಂಧವನು ತಂದಿತ್ತ ಕುಬುಜೆಯನು ।
ಆದರಿಸಿ ಮನ್ನಿಸಿ ಸುಧಾಮನ
ಕಾದು ಕುಸುಮವ ಕೊಂಡನೀಕಮ
ಲೋದರನ ಸಾಹಸವ ಸತ್ವವನಱಿವರಾರೆಂದ * ॥ ೫೮

ಕೇಶಿ ಧೇನುಕ ವತ್ಸ ಲಂಬ ಬ
ಕಾಸುರ ತೃಣಾವರ್ತನಘನಂ
ಬಾಸಮರ್ಥರ ಸೀಱಿ ಬಿಸುಟನು ಬಾಲಕೇಳಿಯಲಿ ।

---

* ಈ ಯೆರಡು ಪದ್ಯಗಳು ಕೆಲವು ಪುಸ್ತಕಗಳಲ್ಲಿಲ್ಲ.

ಘಾಸಿಯಾದುದು ದಂತಿ ಮಲ್ಲರ
ದೇಸುಘನ ಮಾವನನು ಮರ್ದಿಸಿ
ಮೀಸಲೞಿಯದ ದಿವಿಜಕನ್ನೆಯರೊಡನೆ ಜೋಡಿಸಿದ ॥ ೫೯

ಮುರನ ನರಕನ ಹಂಸಡಿಬಿಕರ
ವರಸೃಗಾಲನ ದಂತವಕ್ರನ
ಮುರುಳಪೌಂಡ್ರಕಪಂಚಜನಶುಂಭನ ನಿಶುಂಭನನು ।
ಹರಿ ಹಯಗ್ರೀವಕನ ಸಾಲ್ವನ
ನೊಱಸಿದನಲಾ ನಿನ್ನ ಪಾಡಿನ
ಮುರುಳರೇ ದೈತ್ಯೇಂದ್ರರೀತನ ಕೆಣಕಿದವರೆಂದ ॥ ೬೦

ಇವನ ಹವಣೇ ತ್ರಿಪುರಹತದಾ
ನವರು ಕುಂಭನಿಕುಂಭವೆಸರಿನ
ಲವನಿಯಲಿ ಜನಿಸಿದರು ನಭದಲಿ ರಚಿಸಿದರು ಪುರವ ।
ಅವದಿರು ಜೀಯಾಳಿದರು ನಿರ್ಜರ
ನಿವಹವನು ಬೞಿಕವರನೊಂದೇ
ಬವರದಲಿ ಕೆಡಹಿದನು ಕೃಷ್ಣನನಱಿವರಾರೆಂದ ॥ ೬೧

ತೋಳಸಾವಿರವಮರಪತಿ ತೆರೆ
ವಾಳಿನೊಕ್ಕಲು ಕಂತುಕದ ವೈ
ಹಾಳಿ ಪಾತಾಳದಲಿ ಸಪ್ತದ್ವೀಪ ಮನೆ ತನಗೆ ।
ಶೂಲಿ ಬಾಗಿಲ ಕಾಯ್ವನೀಸು ಚ
ಡಾಳಿಸಿದ ಸಿರಿಯಾರಿಗಾತನ
ತೋಳಡವಿಯನು ನಿನ್ನ ತಱಿದನು ಕೃಷ್ಣನೋಡೆಂದ ॥ ೬೨

ಆಯುಗದಲಾಯುಗದಲನಿಬರು
ಬೀಯವಾದರು ದೈತ್ಯದಾನವ
ರೀಯುಗದಲೆನಿತಸುರರನಿಬರು ದುಷ್ಟದಾನವರು ।

ರಾಯುರನಿಬರು ದಿವಿಜರಾಯನ
ಲಾಯುವಲಿ ಲಂಬಿಸಿದರಾತಱು [1]
ವಾಯು [2] ನಿನಗೀಗಲೆ ವಿಪತ್ತಿಯುಪುದೆಂದನಾಭೀಷ್ಮ ॥ ೬೩

ಇಂಗಿತದಲಱಿವುದು ಮಹಾತ್ಮರಿ
ಗಂಗವಿದು ಮಧ್ಯಮರು ಕರ್ಣಪ
ಥಂಗಳಲಿ ಗೋಚರಿಸಲಱಿವುದು ಲೋಕವೃತ್ತಿಯಿದು ।
ಕಂಗಳಲಿ ಕಂಡರಿವರಧಮರು
ಕಂಗಳಲಿ ಕಿವಿಗಳಲಿ ಮೇಣ್ ಹರಿ
ಯಿಂಗಿತವನಱಿಯದ ಜಡಾತ್ಮನು ಚೈದ್ಯನಿವನೆಂದ ॥ ೬೪

ಭೀಷ್ಮರು ಹೇಳಿದ ಕೃಷ್ಣಮಾಹಾತ್ಮ್ಯವನ್ನು ಸಹದೇವನು
ಅಭಿನಂದಿಸುವಿಕೆ.

ಎಲೆ ಪಿತಾಮಹ ನೀವು ನಿಗಮ
ಸ್ಥಳರಹಸ್ಯವನುಪನಿಷತ್ಸಂ
ಕುಳವಚೋಭಿಪ್ರಾಯುಪೀಯೂಷವನು ಬೀಱಿದರೆ ।
ಖಳರಿಗತಿದರ್ಪಜ್ವರಪ್ರ
ಸ್ಖಲಿತರಿಗೆ ಸೊಗಸುವುದೆ ಬೆಳಂದಿಂ
ಗಳು ವಿಯೋಗಿಗೆ ವಿಷಮವೆಂದನು ನಗುತ ಸಹದೇವ ॥ ೬೫

ಸಹದೇವನು ಕೃಷ್ಣನೇ ಗುರುದೈವವೆಂದು ಖಂಡಿತವಾಗಿ ಹೇಳುವಿಕೆ.

ಕೇಳಿರೈ ನೆರೆದಖಿಳಪೃಥ್ವೀ
ಪಾಲರಿಗೆ ಕೈಮುಗಿದೆನೀಗೋ
ಪಾಲನೆಮಗಾಚಾರ್ಯನೆಮ್ಮಯ ತಂದೆ ಗುರುದೈವ ।
ಲಾಲಿಸಿದೆವರ್ಚಿಸಿದೆವೀತನ
ಮೇಲೆ ಮುಳಿಸುಂಟಾದೊಡೆನ್ನೊಡ
ನೇಬಲಾತನ ಗಂಡನೆಂದೊದೆದನು ಮಹೀತಳವ ॥ ೬೬

---

1 ಕಱು, ಕ. ಖ. 2 ಪಾಯಿ, ಕ. ಖ.

ಚೆಲ್ಲಿದುವು ಸಹದೇವಶಿರದಲಿ
ಮಲ್ಲಿಗೆಯ ಮಗ್ಗೆಗಳ ಮಳೆ ನಭ
ದಲ್ಲಿ ಧ್ವನಿಯಾಯ್ತುಹುದಲೈ ಸಹದೇವ ಲೇಸೆನುತ ।
ಭುಲ್ಲವಿಸಿದರು ಋಷಿಗಳ ಪ್ರತಿ
ಮಲ್ಲದೈವದ ನೆಲೆಯನರಿಯದ
ಖುಲ್ಲಭೂಪರು ಮಸಗಿದರು ಗುಜುಗುಜಿನ ಗಾಢದಲಿ ॥ ೬೭

ಹತ್ತನೆಯ ಸಂಧಿ ಮುಗಿದುದು.

ಹನ್ನೊಂದನೆಯ ಸಂಧಿ.

ಸೂಚನೆ

ಅಗ್ರಪೂಜಾವ್ಯಾಜಮುಖದಲಿ
ವಿಗ್ರಹದ ಶಿಶುಪಾಲಶಿರ ಗಗ
ನಾಗ್ರದಲಿ ಕುಣಿದಾಡಲೆಚ್ಚನು ದಾನವಧ್ವಂಸಿ [1] ॥

ಸಹದೇವನ ವಚನವನ್ನು ಕೇಳಿ ರಾಜರ ಅಭಿಪ್ರಾಯ ವಿಶೇಷ

ಕೇಳು ಜನಮೇಜಯಧರಿತ್ರೀ
ಪಾಲ ಸಹದೇವನ ವಚೋಗ್ರ
ವ್ಯಾಳ ವಿಷವಡೆಯಲ್ಲಿ ಸಿಲುಕಿತು ಮನ ಮಹೀಶ್ವರರ ।
ಸೂಳು ನೆನಹಿನ ಸುಚಿ ಮನದ ಸಮ
ಪಾಳಿಕೋಪದಲಚಿದಮೌನದ
ಮೇಲುಬುದ್ಧಿಯ ಜೋಡಿ ಬೇಱೊಂದಾಯ್ತು ಭಾವದಲಿ ॥ ೧

1 ಲೆಸೆದನು ವೀರನಾರಯಣ, ಚ.

ಕಿವಿವಳೆಯ ವೋಲೆಗಳ ಮುಷ್ಟಿಯ
ಬವರಿಗಳ ಕಡೆಗಣ್ಣ ಸನ್ನೆಯ
ಸವಡಿಗೈಗಳ ನಂಬುಗೆಯ ಮನ ಮನದ ಬೆಸುಗೆಗಳ ।
ಅವಸರದ ಮೈತ್ರಿಗಳ ಮಂತ್ರ
ಪ್ರವರವಚನೋಪೇಕ್ಷೆಗಳ ರಣ
ತವಕದಲಿ ಕಳವಳಿಸುತಿರ್ದುದು ಕೂಡೆ ನೃಪಕಟಕ ॥ ೨

ಪರಿಣತರ ನುಡಿನುಡಿಗೆ ಕಿವಿಯೊ
ಕರಿಸಿದುವು ದುಱುದುಂಬಿಗಳ ಬಾ
ಹಿರದ ನುಡಿಗಳನಡಿಗಡಿಗೆ ಕುಡಿಕುಡಿದು ತೇಗಿದುವು ।
ಕರೆಸಿದರು ಖೂಳರನು ನೀತಿಯ
ಗರುವರನು ನೂಕಿದರು ರಾಯನ
ಪರಮಯಾಗವನೞಿಯಲನುವಾದತ್ತು ನೃಪನಿಕರ ॥ ೩

ಕುಪಿತರಾದ ಅರಸರನ್ನು ಕುರಿತು ಶಿಶುಪಾಲನ ವಚನ

ನೀವು ಪರಿಯಂತೇಕೆ ನಿಮ್ಮವ
ರಾವಲೇ ನಿಮ್ಮಾಳು ಕುದುರೆಗೆ
ನಾವಲೇ ದಳಪತಿಗಳಿವದಿರ ಯಜ್ಞಮಂಟಪವ ।
ಆವಬೇಗದಲುರುಹುವೆನೊ ಚಿ
ತ್ತಾವಧಾನವ ಮಾಡಿ ಯೆಂದು ನೃ
ಪಾವಳಿಯ ಸಂತೈಸಿದನು ಶಿಶುಪಾಲ ವಿನಯದಲಿ [1] ॥ ೪

ಧರಣಿಪರ ಸಂಜ್ಞೆಯಲಿ ಬಲ ಸಂ
ವರಿಸಿತಾಚೆಯಲಿತ್ತ ಸಾತ್ಯಕಿ
ನರವೃಕೋದರನಕುಲಧೃಷ್ಟದ್ಯುಮ್ನ ವೊದಲಾದ ।

---

1 ಶಿಶುಪಾಲ ಸಂತೈಸಿದನು ಸಾಮದಲಿ, ಚ.

ಧರ್ಮರಾಯನು ಭೀಷ್ಮರಿಂದೊಡಗೂಡಿ ಆಲೋಚಿಸುವಿಕೆ.

ಕರಿತುರಗರಥಪತ್ತಿಗಳ ಸಂ
ವರಣೆ ತಳಿತುದ ಕಂಡು ಮೂಗಿನ
ಬೆರಳಬೆಱಗಿನೊಳೂಲಿದು ಭೀಷ್ಮಂಗರಸನಿಂತೆಂದ ॥ ೫

ಈಸು ಪೌರುಷ ದೈವಘಟನೆಯೊ
ಳೀಸು ಪರಿಯಂತಾಯ್ತು ಯಜ್ಞವು
ಮಿೂಸಲಳಿಯದೆ ನಡೆದುದಿನ್ನಿಗ ನಿಮ್ಮ ಕರುಣದಲಿ ।
ಈಸಮಸ್ತನೃಪಾಲಬಲವಾ
ರಾಶಿ ಮೇರೆಯನೊದೆವುತಿದೆ ನಿಮ
ಗೇಸುಭಾರವಿದೆಂದು ಬಿನ್ನೈಸಿದನು ಭೀಷ್ಮಂಗೆ [1] ॥ ೬

ಕಾದುವರೆ ನಮ್ಮುತ್ಸವಕೆ ನೆರ
ವಾದವರು ಸೈರಿಸುವುದಗ್ಗದ
ಯಾದವೇಂದ್ರನ ನಿಂದೆ ಮೇಲಧ್ವರವಿಸಂಘಟನ ।
ಈದುರಂತದ ಚಿಂತೆಯಲಿ ಬೇ
ಳಾದುದೆನ್ನಯ ಚಿತ್ತವದ್ದೆನು
ಖೇದಪಂಕದೊಳೆನ್ನನುದ್ಧರಿಸೆಂದನಾಭೂಪ ॥ ೭

ಧರ್ಮರಾಯನಿಗೆ ಭೀಷ್ಮರ ಅಭಯದಾನ.

ಅಂಜದಿರು ಭಯಬೇಡ ನರರಿಗೆ
ನಂಜು ಪಥ್ಯವೆ ಗಿಳಿಯ ಮರಿಗಳು
ಮಂಜರನ ಮೇಲ್ವಾಯ್ದು ಬದುಕುವುವೇ ಮಹೀಪತಿಯೆ ।
ಮಂಜು ಮಧ್ಯಾಹ್ನದಲಿ ದಿನಪನ
ನಂಜಿಸುವುದೇ ಕುಪಿತಸಿಂಹವ
ನಂಜಿಸುವುವೇ ನಾಯ್ಗಳೆಂದನು ಭೂಪತಿಗೆ ಭೀಷ್ಮ ॥ ೮

1 ನುಡಿದನು ಧರ್ಮನಂದನನು, ಖ.

ಬೊಗಳುವಿನಿಬರು ಹರಿಯು ಬಡಿಹೋ
ಱಿಗಳಲಾ ಜಗವೆಱಿಯದೇ ಜ
ಕ್ಕುಗರ ಜೋಡಿಯು ಜಂಜಡಕೆ ನೀ ಜಱುಗಿದ್ದೈ ಜನಪ ।
ಉಗಿವನಿನಿಬರ ಜೀವವನು ಜೊ
ತ್ತಗೆಯುನೀಶಿಶುಪಾಲನಾಯುವ
ತೆಗೆದು ಕಟ್ಟುವನಸುರಮರ್ದನನೆಂದನಾಭೀಷ್ಮ ॥ ೯

ಜಗವ ಹೂಡುವ ಹೊರೆವ ಬಲುಗೈ
ಯುಗಧರಂಗೀನೃಪರ ಕುಱಿವಿಂ
ಡುಗಳ ಕುಂಮುಱಿಗಡಿತಕಾವುದು ಬೇಕು ಭುಜಸತ್ವ ।
ಬಗೆವುದೇ ಬಲುಗಡಲು ಮಂಜಿನ
ಮುಗಿಲ ಮಳೆಯನು ಚೈದ್ಯಭೂಪನ
ಜಗದ ಭಂಡನನೀಜನಾರ್ದನ ಗಣಿಸುವನೆ ಯೆಂದ ॥ ೧೦

ಭೀಷ್ಮನನ್ನು ಕುರಿತು ಶಿಶುಪಾಲನ ನಿಂದೆ.

ಎಲೆ ನಪುಂಸಕ ಭೀಷ್ಮ ಸುಡು ಬೈ
ಗಳಿನ ಭಂಡನು ನೀನಲಾ ಗೋ
ಕುಲದ ಗರುವನ ಗುಣವ ನಾರಿಸಿ [1] ಕೊಂಡೆ ಬೇಸಱದೆ ।
ಹಱುವಿನಲಿ ಹೆಮ್ಮೆಯನು ಕುಂದಿನ
ಕುಲದಲಗ್ಗಳಿಕೆಯನು ತಮದಲಿ
ಬೆಳಗ ಬಣ್ಣಿಸುತಿಹೆ ನಿರಂತರವೆಂದನಾಚೈದ್ಯ ॥ ೧೧

ಅವಗುಣದೊಳುದ್ಭಾವಿಸುವೆ ಗುಣ
ನಿವಹವನು ರಾಜಾಧಮರು ಯಾ
ದವರು ಪೂಜಾರ್ಹರಲೆ ಸುಡು ಸುಡು ನಿನ್ನ ನಾಲಿಗೆಯ ।
ಸವಿನುಡಿಯು ದುರ್ವ್ಯಸನಿ ತೊಂಡಿನ
ತವರುಮನೆ ಬಾಹಿರರಿಗಾಶ್ರಯ
ಭವನ ಖಳರಧಿದೈವ ಭೀಷ್ಮನ ಕೊಲುವರಿಲ್ಲೆಂದ ॥ ೧೨

---

1 ಕಂಡಿದು, ಚ.

ಶಿಶುಪಾಲನು ಮಾಡಿದ ಕೃಷ್ಣನಿಂದೆ.

ಇವನು ಗಡ ಚಿಕ್ಕಂದು ಮೊಲೆಗೊ
ಟ್ಟವಳ ಹಿಂಡಿದ ಗಂಡ್ರು ಭಂಡಿಯು
ಜವಳಿಗಾಲಲಿ ಮುಱಿದನೇ ಮಾಯಾಸಮರ್ಥನಲ ॥
ಸವಡಿಮರ ನೆಗ್ಗಿದುವು ಗಡ ನೈ
ಯುವೆಚಿದೊಡೆ ಬಲುಗತ್ತಿ ಗೂಳಿಯ
ನಿವ ವಿಭಾಡಿಸಿದನೆ ಮಹಾದ್ಭುತವೆಂದನಾಚೈದ್ಯ ॥ ೧೩

ಪಕ್ಕಿ ಹರಿಣನ ತಱಿದ ಗಡ ಕೈ
ಯಿಕ್ಕಿದೊಡೆ ಕಡುಗುದುರೆಯನು ನೆಲ
ಕಿಕ್ಕಿದನೆ ನೆಱಿ ಹೇಳು ಹೇಳಾ ಕೃಷ್ಣನಾಳ್ತನವ ।
ಪೊಕ್ಕು ಹೆಬ್ಬಾವಿನ ಬಸುಱ ಸೀ
ೞಿಕ್ಕಿದನೆ ಯಾದವನ ಪಾರುಷ
ವಕ್ಕಜವಲಾ ಭೀಷ್ಮ ತೂಪಿಱಿ ಯೆಂದನಾ ಚೈದ್ಯ ॥ ೧೪

ಗಾಳಿಯನು ಘಲ್ಲಿಸಿದ. ಕಱುವಿನ
ಕಾಲ ಹಿಡಿದೊಗೆದನು ಗಡುರಗನ
ಮೇಲೆ ಕುಣಿದಾಡಿದನು ಗಡ ಹಾವಡಿಗವಿದ್ಯೆಯಲಿ ।
ಖೂಳ ಗೊಲ್ಲರ ಪಳ್ಳಿಯಲಿ ಕ
ಟ್ಟಾಳಲಾ ಬಟಿಕೇನು ಪೃಥ್ವೀ
ಪಾಲರೀತಗೆ ಸರಿಯೆ ದಿಟ ದಿಟವೆಂದನಾಚೈದ್ಯ ॥ ೧೫

ಏೞುದಿನಪರಿಯಂತ ಮೊಱಡಿಯ
ಮೇಲುಗೊಡೆಯನು ಹಿಡಿದು ಬಲುಮೞೆ
ಗಾಲವನು ಮಾಣಿಸಿದ ಗಡ ಹರ ಹರ ವಿಶೇಷವಲ ।
ಹೇಳುಹೇಳಿಂದ್ರಂಗೆ ಬಡಿಸಿದ [1]

---

1 ಮಾಡಿದ, ಚ.

ಕೂಟಿರಾಶಿಯನೊಬ್ಬನೇ ಕೈ
ಮೇಳವಿಸಿದನೆ ಕಂದನಾಣೆ ವಿಚಿತ್ರವಾಯ್ತೆಂದ ॥ ೧೬

ಅಗಸನನು ಕೆಡೆತಿವಿದು ಕಂಸನ
ವಸನವೆಲ್ಲವನುಗಿದ[1] ಗಡ ಮಾ
ಣಿಸಿದನೇ ದಿಟ ಮಾಲೆಗಾತಿಯ ಮೈಯ್ಯ ಮೂಹೊರಡ ।
ಮಸಗಿ ಬೀಸುವ ಕಂಸನಾನೆಯ
ನಸುಬಡಿದ ಗಡ ಮಲ್ಲರನು ಮ
ರ್ದಿಸಿದನೇ ಡೊಳ್ಳಾಸದಲಿ ಡಾವರಿಗನಹನೆಂದ ॥ ೧೭

ಆದೊಡಿವನನು ತುತಿಸುವೊಡೆ ಪೋ
ಲಾದಕಷ್ಟವನೇನ ಹೇಳುವೆ
ನೀದುರಾತ್ಮನು ಸಾಕಿದೊಡೆಯನ ನಿಱಿದಸಬಳವಲೆ ।
ಸೋದರಿಯಲಾ ಕೃಷ್ಣನವ್ವೆ ವಿ
ವಾದವೇ ಸಾಕಿದನಲಾ ಕೈ
ಗಾದನೇ ಕಂಸಂಗೆ ಮುಳಿವುದಿದಾವ ಗುಣವೆಂದ ॥ ೧೮

ಆದರಿಸಿ ಬಣ್ಣಿಸಿದೆ ನಾಚದೆ
ಯಾದವನ ಪೌರುಷಪರಾಕ್ರಮ
ವಾದಿಯಾದವಿಶೇಷಗುಣವಿಸ್ತಾರವೈಭವವ ।
ಆದೊಡಾಗೋವಳರ ಹೆಂಡಿರ
ಹಾದರದ ಹೆಕ್ಕಳವ ಬಣ್ಣಿಸ
ಲಾದುದೇ ನಿನಗಕಟ ನಾಚಿಕೆ ಯೆಂದನಾಚೈದ್ಯ ॥ ೧೯

ಓಡಿ ಕೊಲಿಸಿದ ಕಾಲಯವನನು
ಮೂಡಿದವೆ ಹುಲುಕಲುಗಳಕಟಾ
ಯೋಡುಕುಳಿ ಹೋದಲ್ಲಿ ಮಗಧನ ರಾಜಕಾರ್ಯದಲಿ ।

---

1 ನೆಳೆದ, ಚ.

ಆಡಲಱಿಯೆ ವಿಜಾತಿರತ್ನದ
ಜೋಡಿಗಳ ಹಱಿವಾತನೇ ಹರಿ
ತೋಡಿ ಬಡಿಸುವೆ ಕಿವಿಗಳೋಚಕವೆಂದನಾಚೈದ್ಯ [1] ॥ ೨೦

ಕಪಟದಲಿ ಭೀಮಾರ್ಜುನರು ಸಹಿ
ತುಪಚಿತದ್ವಿಜವೇಷದಲಿ ನಿ
ಷ್ಕಪಟಮಗಧನ ಮನೆಯನದ್ವಾರದಲಿ ಹೊಕ್ಕರು ।
ಕೃಪಣರಿವದಿರು ವಿಪ್ರವೇಷದ
ಲುಪಶದರು ಕಾದಿದರು ಭೀಷ್ಮಗೆ
ಜಪವಲಾ ಕಂಸಾರಿ ಮಾಡಿದ ಕಷ್ಟಕೃತಿಯೆಂದ ॥ ೨೧

ಬೆಱತನಗ್ಗದ ಮಾಗಧೇಂದ್ರನ
ಮುಱಿದ ಮುಱುಕಕೆ ಭೀಮನಾತನ
ಸೆಱೆಯ ಮನೆಯಲಿ ಸಿಕ್ಕಿದವನೀಪಾಲಪಙ್ಕ್ತಿಗಳ ।
ಸೆಱೆಯನಿವ ಬಿಡಿಸಿದನು ಗಡ ಬೊ
ಬ್ಬಿಱಿವ ಪೌರುಷವೇಕೆ ಕಡೆಯಲಿ
ಕಱುಬುವವರಾವೈ ಸಲೇ ನಿನಗೆಂದನಾಚೈದ್ಯ ॥ ೨೨

ಭೀಮನ ಕೋಪ.

ಕೇಳಿ ಕಿಡಿಗೆದಱಿದನು ತನುರೋ
ಮಾಳಿ ತಳಿತುವು ರೋಷವಹ್ನಿ
ಜ್ವಾಲೆ ಝಳಪಿಸೆ ಜಡಿದುವರುಣಚ್ಛವಿಯಲಕ್ಷಿಗಳು ।
ಸೂಱುರಿಯ ನಿಡುಸುಯ್ಲ ಕರ್ಬೊಗೆ
* ಯಾಲಿಯಲಿ ಮುಕ್ತಾಳಿ ಕಂದಿತು
ಮೇಲೆ ಬಲುಖತಿಯ ಮೊನೆಯಲಿ ಮಸಗಿದನು ಭೀಮ * ॥ ೨೩

---

1 ವಾಯ್ತು ತೆಗೆಯೆಂದ, ಚ.

* ಜಾಳಿಗೆಯಲೇಕಾವಳಿಯ ಮು
ಕ್ತಾಳಿ ಕಂದಿತು ಖತಿಯ ಮೊನೆಯಲಿ ಮಸಗಿದನು ಭೀಮ * ।

ಸೆಱಗ ಸಂವರಿಸಿದನು ಮುಕುಟವ
ನುರಗದಂತಿರೆ ಮುಱುಹಿ ಸಚಿವಂ
ಗಱುಹಿದನು ಸನ್ನೆಯಲಿ ಸಮರಕೆ ಚಾಪಮಾರ್ಗಣವ |
ಹೊಱಗೆ ಸಂವರಿಸಿರಲಿ [1] ದಳ ಕೈ
ಮೆಱೆಯು ಬೇಡ ಸುನೀತನನು ನಾವ್
ತಱುಬಿ ನಿಂದಾಕ್ಷಣದೊಳೊದಗುವುದೆಂದು ಸೂಚಿಸಿದ || ೨೪

ಶಿಶುಪಾಲನ ನಿಂದೆಯಿಂದ ಯಾದವರ ಯುದ್ಧಸನ್ನಾಹ.

ಪವನತನಯನ ಖತಿಯು ಜೋಡಿಯು [2]
ಹವಣ ಕಂಡರು ಮಸಗಿತೀಯಾ
ದವರ ಪಡೆಯಲಿ ಸಾಂಬ ಸಾತ್ಯಕಿ ರಾಮ ಕೃತವರ್ಮ |
ತವತವಗೆ ಪಾಂಚಾಲಕೈಕಯ
ನಿವಹ ಪಾಂಡವಸುತರು ಮೊದಲಾ
ದವಗಡೆಯರನುವಾಗೆ ಗಜಬಜವಾಯ್ತು ನಿಮಿಷದಲಿ || ೨೫

ಭೀಷ್ಮರಿಂದ ಯಾದವರ ಉಪಶಮನ.

ಸೆಳೆದೊಡಾಯುಧವುತ್ತರೀಯವ
ನಿಱುಹಿ ಮುಂಗೈಯಲಿ ವೃಕೋದರ
ಮೊಳಗುವನಿವನ ಕಂಡು ಧಿಮ್ಮನೆ ಭೀಷ್ಮ ನಡಹಾಯ್ದು |
ಸೆಳೆದುಕೊಂಡನು ಖಡುಗವನು ಭುಜ
ವಳಯದಿಂದವಚಿದನು ತೋಟಿಯ
ತೊಳಸುಗಱ ಹೊಯ್ಹೊಯ್ಯೆನುತ ಗರ್ಜಿಸಿದನಾಭೀಷ್ಮ || ೨೬

ನರಹದಿರಿ ಚತುರಬ್ಧಿವಳಯದ
ಧರಣಿಪಾಲಸಮುದ್ರವನು ಕಾ
ಹುರವ ಮಾಡಿದರಕಟ ಕೆಡದೇ ರಾಜಸೂಯಮುಖ |

1 ಹಲ್ಲಿಳಿಸಿರಲಿ, ಡ. 2 ಮುನಿದ ಖಾತಿಯು, ಡ.

ಧರಧುರದ ದುರ್ವ್ಯಸನಿಗಳ ನಿ
ಟ್ಟೊರಸಿ ತೆಗೆ ನಿನ್ನವರನೆನುತು
ಬ್ಬರವ ಮಾಣಿಸಿ ಹೂಣಿಗರ ಹೊಯ್ಸಿದನು ಕಲಿಭೀಷ್ಮ ॥ ೨೭

ಶಿಶುಪಾಲನ ಕ್ರೋಧೋಕ್ತಿ.

ಬಿಡುಬಿಡೆಲೆ ಗಾಂಗೇಯ ಭೀಮನ
ಕೆಡಹಿ ಪೂರ್ಣಾಹುತಿಯನಗ್ನಿಗೆ
ಬಡಿಸಿ ಕೊಡುವೆನು ಸ್ವಾಮಿದ್ರೋಹನ ಕರುಳುದಂಡೆಗಳ ।
ಮುಡಿಸುವೆನು ಜಯಸಿರಿಗೆ ನೋಡೆ
ನ್ನೊಡನೆ ಮೇಳವೆ ದಕ್ಷಯಜ್ಞದ
ಮೃಡನ ಮಱಿಸುವೆನೆನುತಲವ ಬೊಬ್ಬಿಱಿದು ಗರ್ಜಿಸಿದ ॥ ೨೮

ಶಿಶುಪಾಲನ ಸಂಹಾರಕ್ಕಾಗಿ ಭೀಮನ ಪ್ರಯತ್ನ.

ಬಿಡು ಬಿಡಕಟಾ ಭೀಷ್ಮ ದರ್ಪದ
ಕಡು ಜರಿದ ಕಳಕಳದ ಕುನ್ನಿಗೆ
ಕುಡಿಸುವೆನು ದಿವ್ಯಾಸ್ತ್ರವಿಶಿಖವಿಶೇಷದೌಷಧಿಯ ।
ತಡೆದು ತನ್ನನು ರಾಜಕಾರ್ಯವ
ಕೆಡಿಸಿದೆ ಯೆಲಾ ದಕ್ಷಯಜ್ಞದ
ಮೃಡನ ಮುಱುಕವ ಕಾಂಬೆನೆನುತೊಡೆಮುಱುಚಿದನು ಭೀಮ ॥

ಮತ್ತೆ ಹಿಡಿದನು ಪವನಜನ ಬಾ
ಗೊತ್ತಿದನು ಮರಳೇ ಸುರೌಘದ
ತುತ್ತುಗಂಟಲಲಿಟವುದೇ ಗಜಬಜವ ಮಾಡಿದರೆ ।
ತೆತ್ತಿಗನು ಹರಿ ಯಜ್ಞರಿಪುಗಳ
ಮೃತ್ಯುವಱಿಯೊ ಸೀನು ಮೊಱುವು
ದುತ್ತುಮಿಕೆಯಲ್ಲೆನುತ ಮಿಗೆ ಗಜಱಿದನು ಕಲಿಭೀಷ್ಮ [1] ॥ ೩೦

1 ಶಿಳುಹಿದನು ಪವನಜನ, ಡ.

ಭೀಷ್ಮರು ಶಿಶುಪಾಲನ ಪೂರ್ವವೃತ್ತವನ್ನು ಹೇಳಿ ಭೀಮನನ್ನು ತಡೆದುದು.

ಇವನ ಕೊಲುವೆನು ವಿಕ್ಕಭೂಪತಿ
ನಿವಹವನು ಮನ್ನಿಸುವೆನೆನೆ ನೀ
ನವನ ಕೊಲುವುದಸಾಧ್ಯವೀತನ ನಿಜವನಱಿಯೆ ಯಲ ।
ಇವ ಹಿರಣ್ಯಾಕ್ಷನು ಕಣಾ ಮೆಱು
ಭವದೊಳಗೆ ದಶವದನನಿವ ಸಂ
ಭವಿಸಿದನು ಶಿಶುಪಾಲವೆಸರಲಿ ಭೀಮ ಕೇಳೆಂದ ॥ ೩೧

ಜನಿಸಿದಾಗಳ ಭಾಳದಲಿ ಲೋ
ಚನ ಚತುರ್ಭುಜನಾದನದ್ಭುತ
ನಿನದದಲಿ ನೆಲ ಬಿರಿಯಲೊದಱಿದನಂದು ಬಾಲ್ಯದಲಿ ।
ತನತನಗೆ ಜನ ಬೆದಱಿತೀತನ
ಮನೆಗೆ ನಾರದ ಬಂದೊಡೀತನ
ಜನನಿ ಬಿನ್ನಹಮಾಡಿದಳು ಶಿಶುಪಾಲಸಂಗತಿಯ ॥ ೩೨

ಆತನೆಂದನು ತಾಯೆ ಶಿಶು ವಿ
ಖ್ಯಾತನಹ ನೀನಾರ ಹಸ್ತದೊ
ಳೀತನನು ಕೊಟ್ಟಾಗ ಭುಜಯುಗವಕ್ಷಿಯಡಗಿದರೆ ।
ಆತನೀತಗೆ ಮೃತ್ಯುವಿದು ಸಂ
ಭೂತನಿಶ್ಚಯವೆಂದು ಶಿಶುವಿನ
ಮಾತೆಯನು ಸಂತೈಸಿ ನಾರದನಡಱಿದನು ನಭವ ॥ ೩೩

ಇವನ ಕಾಣಲು ಬಂದರವನಿಪ
ರವರವರ ಕೈಗಳಲಿ ತಾಯ್ತಂ
ದಿವನನಿತ್ತಳು ಮಾಣವಿವನಧಿಕಾಕ್ಷಿಬಾಹುಗಳು ।
ಇವನ ತಾಯ್ತಮ್ಮತ್ತೆ ಯೆಂದು
ತ್ಸವದಲೀ ಮುರವೈರಿ ಬರಲಂ
ದಿವನ ತಂದಿವನವ್ವೆ ಕೊಟ್ಟಳು ಹರಿಯ ಹಸ್ತದಲಿ ॥ ೩೪

ಆಗಳವನಧಿಕಾಕ್ಷಿಬಾಹುವು
ನೀಗಿತೊಡನಿವನವ್ವೆ ಕಂಡು
ಬೇಗದಲಿ ಕಮಲಾಕ್ಷನಂಘ್ರಿಯೊಳೆಱಗಿ ಕೈಮುಗಿದು ||
ಮೇಗರೆಯ ಮಾತಲ್ಲ ಬಾಲಕ
ನಾಗು ಹೋಗಿನ ಕೊಱತೆ ನಿನ್ನನು[1]
ತಾಗುವುದು ನೀ ಸೈರಿಸೆಂದಭಯವನು ಬೇಡಿದಳು || ೨೫

ಸೈರಿಸುವೆನಪರಾಧಶತವ ಕು
ಮಾರಕನ ತಾ ಕೊಲ್ಲೆನೆಂದೀ
ಶೌರಿ ಭಾಷೆಯ ಮಾಡಿ ಹಿಂಗಿದನಿವನ ತಾಯೊಡನೆ |
ಆರಿವನ ಮರಣಕ್ಕೆ ಮೊದಲು ಮು
ರಾರಿಯೋ ನೀನೋ ವಿಚಾರಿಸು
ವೀರ ಮಾರುತಿ ಯೆನಲು ಕೇಳಿದನಂದು ಶಿಶುಪಾಲ || ೨೬

ಭೀಷ್ಮರು ಹೇಳಿದ ಚರಿತ್ರೆಯಿಂದ ಕುಪಿತನಾಗಿ ಶಿಶುಪಾಲನು
ಭೀಷ್ಮರನ್ನು ನಿಂದಿಸುವಿಕೆ.

ಎಲವೊ ಗೋಪಕುಮಾರನೆನ್ನನು
ಕೊಲುವನೇ ತಾನಿವನ ಕೈಯ್ಯಲಿ
ಉಳಿವವನೆ ಶಿವ ಶಿವ ವಿಕಾರಿಯನೇನ ಮಾಡುವೆನು |
ಗಳಹ ಭೀಷ್ಮ ವೃಕೋದರನು ಮೈ
ವಳಿಯ ಭಟ್ಟನೊ ನೀನು ಮೇಣ್ಗೋ
ವಳರ ಹಳ್ಳಿಯ ಭಟನೊ ಹೇಳೆಂದನಾಚೈದ್ಯ || ೨೭

ಈಕುರುಕ್ಷಿತಿಪಾಲರಲಿ ನೀ
ನಾಕೆವಾಳನು ಗಡ ವಯಃಪರಿ
ಪಾಕವುಳ್ಳವನೀಸುಕಾಲದಲೋದಿದುಚಿತವಿದೆ |

---

1 ನಾಗಹೋಗದು ನಿನ್ನ ಕೈಯಲಿ, ಕ. ಖ.

ಕಾಕನುಡಿ ಕೊಂಡಾಡಿ ಗೊಲ್ಲರ
ಗೋಕುಲದ ಗೋಪಪ್ರಸಂಗ
ವ್ಯಾಕರಣಪಾಂಡಿತ್ಯ ಮೆಱೆದುದು ಭೀಷ್ಮ ನಿನಗೆಂದ ॥ ೩೮

ಇದು ಮಹಾಮಖವಿಲ್ಲಿ ಪೂಜ್ಯನು
ಯದುಗಳರಸನು ಭಟ್ಟನಿಲ್ಲಿಗೆ
ನದಿಯ ಮಗನಿಲ್ಲಿಗೆ ಸದಸ್ಯರು ನಾರದಾದಿಗಳು ।
ಹುದಿದ ಮರುಭೂಮಿಯಲಿ ಮಾನ್ಯನು
ಬಧಿರಸಿಲ್ಲಿಗೆ ಗೂಬೆ ಕೋಗಿಲೆ
ಮುದಿನರಿಗಳಿಲ್ಲಿಗೆ ಸಭಾಸದರೆಂದನಾಚೈದ್ಯ ॥ ೩೯

ನೀನಲಾ ಧರ್ಮಜ್ಞ ನಂದಾ
ಮಾನಿನಿಯರ ವಿವಾಹದಲಿ ನೀ
ನೇನ ಮಾಡಿದೆ ಜೇಸಱಿಸಿ ಬೞಲಿಸಿದೆ ಬಾಲಿಕೆಯ ।
ಏನ ಹೇೞುವೆನೊಂದು ಹಂಸನು
ಮಾನಸದ ತೀರದಲಿ ಪಕ್ಷಿವಿ
ತಾನದಲಿ ಧರ್ಮಜ್ಞನಾಯ್ತು ಹಂಸ ನೀನೆಂದ ॥ ೪೦

ನುಡಿಗಳಲಿ ಸದ್ಧರ್ಮಸಂಗತಿ
ನಡವಳಿಯಲನ್ಯಾಯವೆಂದೇ
ಕೆಡಿಹಿದುವು ಹಂಸೆಯನು ನಾನಾವಿಹಗಸಂದೋಹ ।
ನುಡಿವುದಲ್ಲದೆ ಮೇಣು ನಯವಲಿ
ನಡೆದುದಿಲ್ಲಲೆ ಭೀಷ್ಮ ನಿನ್ನನು
ಕಡಿದು ಭೂತಕೆ ಬಡಿಸಿದರೆ ಕೃತಕೃತ್ಯನಹೆನೆಂದ ॥ ೪೧

ಕಳದಕಾಲದ ವೃದ್ಧ [1] ಮೇಲ
ಗ್ಗಳದ ನಿಯತವ್ರತಿ ಶ್ರುತಿಸ್ಮೃ
ತಿಗಳಲಿ ಪರಿಣತನೆಂಬೆ ಕಡೆಯಲಿ ಗೋಪನಂದನನ ।

1 ಎಲವೊ ವೃದ್ಧನು ನೀನು, ಕ, ಖ.

ಬಳವಿಗೆಯು ಮಾಡಿದೆ ಮಹೀಮಂ
ಡಲದ ರಾಯರನಕಟ ಲಜ್ಜಾ
ಕುಳರ ಮಾಡಿದೆ ಭಂಡ ಘಡ ಹೋಗೆಂದನಾಚೈದ್ಯ ॥ ೪೨

ಪರಗುಣಸ್ತುತಿನಿಂದೆಗಳು ಹಿರಿ
ಯರಿಗೆ ಸಾಮ್ಯವೆ ನಿನ್ನ ಜಿಹ್ವೆಗೆ
ಪರಗುಣಸ್ತವದಿಂದ ಮೋಕ್ಷ ಕಂಡೂತಿ ಪರುವಹುದೇ ।
ಹಿರಿಯರಿದೆಲಾ ಕಣ್ವ ಕಪಿಲಾಂ
ಗಿರಸಜೈಮಿನಿಯಾಜ್ಞವಲ್ಕ್ಯರು
ವೆಱಸೆ ಲೋಕದೊಳಧಿಕರೆಲಾ ಭೀಷ್ಮ ಕೇಳೆಂದ ॥ ೪೩

ನಾವು ಮೊದಲಲಿ ನಿಮ್ಮೊಳಗೆ ಕುಂ
ದಾವುದೇತಕೆ ಹೊಗೞೆ ಯಿವರಲ
ದಾವ ಕೊಱತೆ ಯುಧಿಷ್ಠಿರನ ನೀನೇಕುಪೇಕ್ಷಿಸಿದೆ ।
ಈವೃಕೋದರಪಾರ್ಥರನು ಸಹ
ದೇವನಕುಳರನೇಕೆ ಹೊಗೞೆ ಯು
ದಾವಗುಣನಿಧಿಯೆಂದು ಕೃಷ್ಣನ ಬಣ್ಣಿಸಿದೆ ಯೆಂದ ॥ ೪೪

ಗರುವನಲ್ಲಾ ಕೌರವೇಶ್ವರ
ನರಸಲಾ ಬಾಹ್ಲಿಕನು ರಾಯರ
ಗುರುವಲಾ ಕೊಂಡಾಡಲಾಗದೇ ಚಾಪಧೂರ್ಜಟಿಯು ।
ಗುರುಸುತನು ಸಾಮಾನ್ಯನೇ ಸಂ
ಗರಭಯಂಕರನಲ್ಲವೇ ವಿ
ಸ್ತರಿಸಲಾಗದೆ ನಿನ್ನ ಕೃಷ್ಣನ ಹವಣೆ ಯುವರೆಂದ ॥ ೪೫

ಕವಚಕುಂಡಲಸಹಿತ ತಾನುದು
ಭವಿಸನೇ ಶೌರ್ಯಾದಿಗುಣದಲಿ
ಭುವನದಲಿ ಭಾರಾಂಕವೀರರು ಸರಿಯೆ ಕರ್ಣಂಗೆ ।

ಇವನನೇಕಗ್ಗಳಿಸೆ ಭೂರಿ
ಶ್ರವಣ ಹೊಗಳೆ ಜಯದ್ರಥನು ನಿ
ನ್ನವನ ಹವಣೇ ಶಲ್ಯ ಮುನಿಯನೆ ನಿನಗೆ ಹೇಳೆಂದ || ೪೬

ಕುಲದಲಧಿಕರು ಶೌರ್ಯದಲಿ ವೆ
ಗ್ಗಳರು ಶೀಲದಲುನ್ನತರು ನಿ
ರ್ಮ್ಮಲಿನರಾಚಾರದಲಿ ಕೋವಿದರಖಿಲಕಳೆಗಳಲಿ |
ಇಳೆಯವಲ್ಲಭರಿನಿಬರನು ನೀ
* ಕಳೆದು ಕಿಲ್ಬಿಷಿಯೆನಿಪ ಹರಿಗೇ
ಕೊಲಿದೆ ಗಡ ಗರುವಾಯ್ತು ಗುಣ ನಿನಗೆಂದನಾಚೈದ್ಯ * || ೪೭

ಘನನಲಾ ಭಗದತ್ತಕಾಂಭೋ
ಜನು ಪದಸ್ಥನಲಾ ವಿರಾಟನ
ತನುಜನೀಪಾಂಚಾಲಕೈಕಯರೀಮಹೀಭುಜರು |
ವಿನುತರಲ್ಲಾ ದಂತವಕ್ರನು
ನಿನಗೆ ಕಿಱುಕುಳನೇ ಜರಾಸಂ
ಧನ ಸುತನ ನೀನೇಕೆ ಬಣ್ಣಿಸೆ ಭೀಷ್ಮ ಹೇಳೆಂದ || ೪೮

ದ್ರುಮನ ಕಿಂಪುರುಷಾಧಿಪನ ವಿ
ಕ್ರಮವ ಬಣ್ಣಿಸಲಾಗದೇ ಭೂ
ರಮಣರಿದೆಲಾ ಮಾಳವಾಂಗಕಳಿಂಗಕೋಸಲರು |
ವಿಮಳರಿನಿಬರನುೞಿದು ಕೃಷ್ಣ
ಭ್ರಮೆ ಹಿಡಿದುದೈ ಸಿನಗೆ ನಿನ್ನ
ಕ್ರಮದ ಭಣಿತಿಯು ಕರ್ಮಬೀಜವನಱಿಯೆ ನಾನೆಂದ || ೪೯

---

* ಕಳೆದು ಕಡು ನೆಱೆ ಹೂತವನವನು
ಹೞಿದು ಹಾವಿಂಗೆಱಗುವವೊಲಾಯ್ತೆಂದನಾಚೈದ್ಯ | ಚ. ಡ *

ಭೀಷ್ಮರ ಮೇಲೆ ಸರ್ವರಾಜರ ಕೋಪ.

ಕುಮತಿ ಕೇಳ್ ಹೆಬ್ಬುಲಿಯು ವನದಲಿ
ರಮಿಸುವುದೆ ಕಳಹಂಸೆ ಮಾಯಾ
ಭ್ರಮಿತರಲಿ ಯೋಚಿಸುವನೇ ವರಯೋಗಿ ನಿಜಪದವ |
ಸಮರಪಟು ಭುಜದರ್ಪಪಿತ್ತ
ಭ್ರಮ ವಿಸಂಸ್ಥುಳಚಪಳಚಿತ್ತ
ಸ್ಥಿಮಿತಭೂಪರ ಬಗೆವನೇ ತಾನೆಂದನಾಭೀಷ್ಮ || ೫೦

ಖತಿಯು ಹಿಡಿದುದು ಸಕಲರಾಜ
ಪ್ರತತಿಗಳು ದುರ್ಮಾರ್ಗ ಮಾನ
ವ್ಯತಿಕರದೊಳುಬ್ಬಿದರನಿಬರು ಜಲಧಿಘೋಷದಲಿ |
ಕ್ರತುವ ಜಲದಲಿ ಕದಡಿ ಗಂಗಾ
ಸುತನ ಹೊಯ್ ಕಟವಾಯ ಕೊಯ್ ನಿ
ಶ್ಚಿತಘಟಾಗ್ನಿಯೊಳವನ ಸುಡಿ ಯೆಂದುದು ನೃಪಸ್ತೋಮ || ೫೧

ಕೃಷ್ಣೋತ್ಕರ್ಷವನ್ನು ನಿರ್ಭಯವಾಗಿ ಭೀಷ್ಮರು ಸ್ಥಾಪಿಸುವಿಕೆ.

ಬಱಿಯ ಮಾತನೆ ಮೆಱೆದು ಕಾರ್ಯದಿ
ಕೊಱತೆ ಯಾದರೆ ನಾಯಿಗಳಿರಲಿದ
ತೆಱನಹುದಲೇ ತೋಱಿರೈ ನೆಱೆ ನಿಮ್ಮ ಕೈಗುಣವ [1] |
ಇಱಿದು ನೀವ್ ಕೊಲಲಾರದಿದ್ದೊಡೆ
ನೆಱೆ ಘಟಾಗ್ನಿಯೊಳುರುಪದಿದ್ದೊಡೆ
ಕೆಱಹು ನಿಮ್ಮಯ ಬಾಯಲೆಂದನು ಭೂಪರಿಗೆ ಭೀಷ್ಮ || ೫೨

ನೆರೆದ ನರಿಗಳ ಮಧ್ಯದಲಿ ಕೇ
ಸರಿಯ ಮನ್ನಿಸುವಂತೆ ಕೃಷ್ಣನ
ಚರಣವನು ಪೂಜಿಸಿದೆವರ್ಘ್ಯರುಹನು ಮುರವೈರಿ |

---

1 ನೀವ್ ನಿಮ್ಮ ಪೌರುಷವ, ಚ.

ಬಱಡುಗಳು ನೀವೀಜನಾರ್ದನ
ನೊರೆಗೆ ಬಹಿರೇ ಪ್ರತಿಯೆನಿಸಿ ನರ
ಹರಿಗೆ ಸರಿಯೇ ಹೋಗಿ ಯೆಂದನು ಭೂಪರಿಗೆ ಭೀಷ್ಮ || ೫೩

ಅಣಕಿಸುವರೆನ್ನೊಡನೆ ಹಿರಿಯು
ಬ್ಬಣವ ತೆಗೆಯಲಿ ಯೀಮುರಾರಿಯು
ಕೆಣಕಲಾಪರೆ ಕರೆದು ತೋಱಿ ವೃಥಾಭಿಮಾನದಲಿ |
ಹಣುಗಿ ಬಾಯ್ಬಿಡಿದೇನಹುದು ಕೃ
ಗುಣವ ತೋಱಿರಿ ಸಾವಿರೊಳ್ಳಗೆ
ಮಣಿವನೇ ವಿಹಗೇಂದ್ರನೆಂದನು ಭೂಪರಿಗೆ ಭೀಷ್ಮ || ೫೪

ಶಿಶುಪಾಲನ ದುರುಕ್ತಿಗಳು.

ಶಿವ ಶಿವಾ ಮುದಿಗೂಗೆ ಮೆಚ್ಚದು
ರವಿಯ ನೆಲವೋ ಭೀಷ್ಮ ನಿಲು ಮಾ
ಧವನ ಮರ್ದಿಸಿ ನಿನಗೆ ಜೋಡಿಸುವೆನು ಮಹಾನಲನ |
ಯುವತಿಯರು ಹಾರುವರು ಹುಲುಪಾಂ
ಡವರು ಪತಿಕರಿಸಿದರೆ ನೀನಿಂ
ದೆವಗೆ ಮಾನ್ಯನೆ ಕೃಷ್ಣ ಸಿಂಹಾಸನವನಿಱಿಯೆಂದ || ೫೫

ನಿನಗೆ ಮೊದಲೊಳು ದಿವ್ಯವಿಶಿಖದ [1]
ಮೊನೆಯೊಳರ್ಚಿಸಿ ಬಱಿಕ ಭೀಷ್ಮನ
ಘನಘಟಾನಲಕುಂಡದೊಳ್ ಸ್ವಾಹಾಸ್ವಧಾಹುತಿಯ |
ಅನುಕರಿಸಿ ಬಱಿಕಿನಲಿ ಕುಂತೀ
ತನಯರೈವರ ರಕುತಘೃತದಲಿ
ವಿನುತರೋಷಾಧ್ವರವ [2] ರಚಿಸುವೆನೆಂದನಾಚೈದ್ಯ || ೫೬

ಎಂದು ಚಾಪವ ತರಿಸಿ ಚಪ್ಪರ
ದಿಂದ ಹೊಱವಂಟವನಿಪಾಲಕ

---

1 ಹೊಱವಂಟ, ಚ.　　2 ನಿಶಿತ, ಚ.

ವೃಂದವನು ಕೈವೀಸಿದನು ಕರೆ ಗೋಕುಲೇಶ್ವರನ |
ಇಂದಲೇ ರಿಪುರುಧಿರಪಾನಾ
ನಂದಕೃತಮದಶಾಕಿನೀಸ್ವ
ಚ್ಛಂದಲೀಲಾನೃತ್ಯದರ್ಶನ [1] ವೆಂದನಾಚೈದ್ಯ || ೫೭

ಡಾವರಿಸಿದುದು ವಿವಿಧವಾದ್ಯವಿ
ರಾವವಬುಜೋದ್ಭವನ ಭವನವ
ನಾವಿಗಡಭಟಕಟಕವಿದ್ದುದು ಬಲಿದರೋಷದಲಿ |
ಗೋವಳನ ಬರಹೇಳು ಧರೆಯುಲಿ
ದೇವ ಗಡ ಬರಹೇಳು ತೋಳಾ
ಕಾವವರ ತಾ ಕೊಲುವೆನೆಂದೊದಱಿದನು ಕಲಿಚೈದ್ಯ || ೫೮

ಆಗ ಯಾದವರ ಯುದ್ಧಸನ್ನಾಹ.

ಹಲ್ಲಣಿಸಿದುದು ಯಾದವರ ಪಡೆ
ಘಲ್ಲಣೆಯು ಗರ್ಜನೆಯು ಘೋಷದ
ಭುಲ್ಲವಣೆ ಗಂಭೀರಭೇರಿಯು ಬಹಳರಭಸವಲಿ |
ನಿಲ್ಲದಿಳೆ ಪದಹತಿಗೆನಲು ಬಲ
ವೆಲ್ಲ ಭೀಮನ ಸನ್ನೆಯುಲಿ ರಣ
ಮಲ್ಲರೊದಗಿತು ಹೊಱಗೆ ನೃಪಮೋಹರದ ಬಾಹೆಯುಲಿ || ೫೯

ಮಿನುಗುದುಟಿಗಳ ವಿಕಲಮಂತ್ರದ
ಬಿನುಗುಗಳ ಕೈಯ್ಯಾಹುತಿಗೆ ಕರ
ದನಿಮಿಷರ ಪಲ್ಲಟದ ವಿಚಲಿತಸೂಕ್ತಿಮಯುನಿನದ [2] |
ತನಿಭಯದ ತರಳಾಕ್ಷಿಗಳ ದು
ರ್ಮನದ ಮೋಡಿಯು ಮೊಗದ ಬೆರಳಿನ
ಮುನಿಗಳಿದ್ದುದು ಹೊತ್ತುಬೆಱಗಿನ ಬಿಗಿದ ದುಗುಡದಲಿ || ೬೦

---

1 ವಸರ, ಚ.

2 ಧನಿಮಿಷರ ಪಲ್ಲಟದ ವಿಚಲಿತಸೂಕ್ತಿಮಯುನಿನದ, ಚ.

ಕೃಷ್ಣನು ಅಭಯವನ್ನು ಹೇಳುತ್ತಾ ಯುದ್ಧಕ್ಕೆ ಬಂದುದು.

ಮುನಿಗಳಂಜದಿರಂಜದಿರಿ ಪರಿ
ಜನಕೆ ಗಜಬಜ ಬೇಡ ಯಾದವ
ಜನಪರುರುವಣೆ ನಿಲಲಿ ಸೈರಿಸಿ ಪಾಂಡುಸುತರೆನುತ ।
ಮೊನೆನಗೆಯ ಸಿರಿಮೊಗದ ನೆಗಹಿದ
ಜನದಭಯಹಸ್ತಾಂಬುಜದ ಹರಿ
ವಿನುತಸಿಂಹಾಸನವನಿಳಿದಾ ಧುರಕೆ ನಡೆತಂದ ॥ ೬೧

ನಾರದಾದಿಗಳನ್ನು ಕುರಿತು ಕೃಷ್ಣನ ವಾಕ್ಯ.

ಹಿಂದೆ ಯೀಶಿಶುಪಾಲಕನ ತಾಯ್
ಬಂದು ಮಗನಪರಾಧಶತದಲಿ
ಕೊಂದಲಾಗದು ಚಿತ್ತವೆಂದಳು ನಮ್ಮನನುಸರಿಸಿ ।
ಇಂದು ಖತಿಯಿಲ್ಲೆಮಗೆ ಸೈರಿಸ
ಬಂದುದಿಲ್ಲೆಮಗೆರಡುತಪ್ಪಿನೊ
ಳೆಂದು ಮುರಹರ ನಗುತ ನುಡಿದನು ನಾರದಾದ್ಯರಿಗೆ ॥ ೬೨

ಈಮಹಾಯಜ್ಞವನು ಕೆಡಿಸುವ
ನೀಮಹೀಶನ ಮುಱಿವೆನೆಂದನು
ವೈಮನಸ್ಯವ ಬಗೆದು ಮೊನೆಮಾಡಿದನು ನುಡಿಯೆರಡ ।
ತಾಮಸನ ತಱಿದಖಿಳಭೂತ
ಸ್ತೋಮತುಷ್ಟಿಯ ಕೀರ್ತಿ ಫಲಿಸಲಿ
ಯೀಮಹಾಶರಕೆನುತ ಕೊಂಡನು ದಿವ್ಯಮಾರ್ಗಣವ ॥ ೬೩

ಶಿಶುಪಾಲನನ್ನು ಕುರಿತು ಕೃಷ್ಣನ ವಾಕ್ಯ.

ಖಳ ದುರಾತ್ಮಕ ಯಗ್ರಪೂಜೆಗೆ
ಬಱಲಿಸಿದೆ ನಮ್ಮನು ಮಹಾದೇ
ವಿಳಯ ವಲ್ಲಭರೆಲ್ಲ ಕೇಳಲು ಬೈದೆ ನೂಱೊಂದ ।
ಅಱಲಿ ನುಡಿದೆನು ನಿಮ್ಮ ತಾಯ್ ಕೊಲ
ಲೆಳಸಬೇಡೆನೆ ಸೈರಿಸಿದೆವಿ
ನ್ನುಱಹಿಕೊಂಬರ ಕರೆ ನೃಪಾಲರೊಳಾವಿಕಾರಿಗಳ ॥ ೬೪

ಝುಂಕೆ ಮಿಗೆ ಹೊಱಮಂಟುದೆಡಬಲ
ಮಂಕದಲಿ ಯದುಸೇನೆ ಪಾಂಡವ
ರಂಕೆಯಲಿ ದಳ ಜೋಡಿಸಿತು ಝಳಪಿಸುವ ಕೈದುಗಳ ।
ಮುಂಕುಡಿಯ ಮೋಹರದ ದಳ ನಿ
ಶ್ಶಂಕೆಯಲಿ ಜೋಡಿಸಿತು ಭೂಪರ
ಬಿಂಕ ಮುಱಿದುದು ಭೀತಿ ಬಲಿದುದು ಹುದುಗಿತಾಟೋಪ ॥ ೬೫

ದುರ್ಯೋಧನಾದಿಗಳ ಉಪೇಕ್ಷೆ.

ತೊಲಗಿದನು ಕುರುರಾಯ ಪಾಂಡವ
ರೊಳಗೆ ತಪ್ಪಿಲ್ಲೆನುತ ಕುರುಕುಲ
ತಿಲಕನಾವೆಡೆ ಯೆನುತ ಬೞಿವಿಡಿದರು ನೃಪಾಲಕರು ।
ಕಲಿಜಯದ್ರಥಮಾದ್ರಪತಿಸೌ
ಬಲಕಳಿಂಗಕರೂಷ ನೃಪಕೋ
ಸಲರು ತಿರುಗಿತು ಬೇಱೆ ಭಗದತ್ತಾದಿಗಳು ಸಹಿತ ॥ ೬೬

ರಾಜರ ಮೇಲೆ ಶಿಶುಪಾಲನ ಕೋಪ.

ಚೆಲ್ಲಿತೀ ನೃಪಯೂಥ ಜಾಱಲಿ
ಮೊಳ್ಳೆಗಳು [1] ಜಲಜಾಕ್ಷನಪ್ರತಿ
ಮಲ್ಲ ತಾನೇ ಸಾಕೆನುತ ಹೋಱುವೆನು ಕೆಲಬಲನ ।
* ಖುಲ್ಲರಾಯರು ನಿಲಲಿ ಗೋಪರ
ಹಳ್ಳಿಕಾಱನ ಕೂಡೆ ಬಿರಿದಿನ
ಕಲ್ಲಿಗಳ ತಮ್ಮದೆಯೊಳೊತ್ತಲಿ ಯೆಂದನಾಚೈದ್ಯ * ॥ ೬೭

---

[1] ಜಳ್ಳುಗಳು, ಚ.

* ಹಳ್ಳಿಗರ ಹಂಗೇಕೆ ಹೋಗಲಿ
ಗೊಲ್ಲರಧಿದೇವತೆಯ ಕಾಡುಱಿ
ಬಿಲ್ಲಿಗಳು ತಮ್ಮದೆಯನೊತ್ತಲಿ ಯೆಂದನಾ ಚೈದ್ಯ ॥ ಚ. *

ಕೃಷ್ಣಶಿಶುಪಾಲರ ಯುದ್ಧ.

ಎನುತ ಖಳನಿದಿರಾಗಿ ಮಧುಸೂ
ದನನ ಹಳಚಿದನಸುರರಿಪುವಿನ
ಪೊನೆಗಣೆಯುಲವ ಮುಳುಗಿದನು ಘಟಿಕಾಮುಹೂರ್ತದಲಿ |
ದನುಜವೈರಿಯು ಮುಸುಕಿದನು ತನ
ತನಗೆ ನೋಟಕವಾಯ್ತು ಭೂಪತಿ
ಜನ ಸುನೀಥಮುರಾರಿಗಳ ಕೌತೂಹಲಾಹವಕೆ ‖ ೬೮

ಬಿಡುವ ತೊಡಚುವ ಸಂಧಿಸುವ ಜೇ
ವಡೆದು ಹೂಡುವ ತಾಗಿಸುವ ಹಿಡಿ
ಕಿಡುವ ಹರಿಸುವ ಬೆಸುವ ಭೇದಿಸುವಸಮಕೌಶಲವ [1] |
ನುಡಿವ ಕವಿಯಾರೈ ಬಱಿಯ ಬಾಯ್
ಬಡಿಕನೇ ಶಿಶುಪಾಲನೀಪರಿ
ನಡಸುತಿರ್ದನು ಹರಿಯೊಡನೆ ಸಮಬೆಸನಬಿಂಕದಲಿ ‖ ೬೯

ಸೋತನೈ ಹರಿ ಯೆಂದು ಚೈದ್ಯನ
ಮಾತುಗಳು ಬಣ್ಣಿ ಸಿದರೀಸಿ
ಭೀರ್ತದಲಿ ಯದುನಿಕರವಿದ್ದುದು ಹರುಷಕೇಳಿಯಲಿ |
ಈತ ರಾವಣ ಮುನ್ನ ಭುವನ
ಖ್ಯಾತನೆಂದಮರರು ವಿಮಾನ
ವ್ರಾತದಲಿ ನೆಱೆ ನೋಡುತಿರ್ದರು ಸಮರ ವೈಭವವ [2] ‖ ೭೦

ಆಗ ನಾನಾವಿಧ ಉತ್ಪಾತಗಳು.

ಧರಣಿಪತಿ ಕೇಳ್ ಕೃಷ್ಣ ಶಿಶುಪಾ
ಲರ ಮಹಾಸಂಗ್ರಾಮಮಧ್ಯದೊ
ಳುರಿದುದಿಳೆ ಹೊಗೆದುದು ದಿಶಾವಳಿ ಧೂಮಕೇತುಗಳು |
ತರಣಿಮಂಡಲಮಾಲೆಗಳು ವಿ

---

1 ಚಾಪಳವ, ಕ. ಖ.　　2 ಸಂಭ್ರಮವ, ಚ.

ಸ್ಫುರಿಸಿತಾಕಾಶದಲಪರ್ವದ
ಲುರುವಣಿಸಿದನು ರಾಹು ಚಂದ್ರಾದಿತ್ಯಮಂಡಲವ ॥ ೨೧

ನಡುಗಿತವನಿಯಕಾಲವಲಿ ಬರ
ಸಿಡಿಲು ಸುರಿದುದು ಹಗಲು ತಾರೆಗ
ಳಡಿದುವಭ್ರದಲಿಳೆಗೆ ಸುರಿದುದು ರುಧಿರಮಯಧಾರೆ ।
ಮಿಡುಕಿದುವು ಪ್ರತಿಮೆಗಳು ಶಿಖರದ
ಲುಡಿದು ಬಿದ್ದವು ಕಲಶಹೆಮ್ಮರ
ನಡಿಗಡಿಗೆ ಕಾರಿದುವು ರುಧಿರವನರಸ ಕೇಳೆಂದ ॥ ೨೨

ನೆಳಲು ಸುತ್ತಲು ಸುರಿದು ದಿನಮಂ
ಡಲಕೆ ಕಾಳಿಕೆಯಾಯ್ತು ಫಲದಲಿ
ಫಲದ ಬೆಳವಿಗೆ ಹೂವಿನಲಿ ಹೂವಾಯ್ತು ತರುಗಳಲಿ ।
ತಳಿತಮರನೊಣಗಿದುವು ಕಾಷ್ಠಾ
ವಳಿಗಳುರಿ ತಳಿತುವು ತಟಾಕದ
ಸಲಿಲ ವುಕ್ಕಿತು ಪಾಂಡುಪುತ್ರರ ಪುರದ ವಳಯದಲಿ ॥ ೨೩

ಆಗ ಧರ್ಮರಾಯನು ಉತ್ಪಾತ ಶಾಂತಿಯನ್ನು ಕೇಳುವಿಕೆ.

ಬೆದರಿದನು ಯಮಸೂನು ಮಿಗೆ ನಡು
ಗಿದನು ಭಯದಲಿ ನಾರದನ ಕೇ
ಳಿದನಿದೇನೈ ಪ್ರಕೃತಿವಿಕೃತಿಯ ಸಕಲಚೇಷ್ಟೆಗಳು ।
ಇದು ಕಣಾ ಚೈದ್ಯಾದಿಗಳ ವಧೆ
ಗುದುಭವಿಸಿದುದಲೇ ಮುರಾರಿಯೊ
ಳುದಯಿಸುವುವುತ್ಪಾತ ಚೇಷ್ಟೆಗಳೆಂದನಾಮುನಿಪ ॥ ೨೪

ಈನೆಗರಿದುತ್ಪಾತಶಾಂತಿವಿ
ಧಾನವೇನೆನೆ ಕೃಷ್ಣಚೇಷ್ಟೆಯ
ಹಾನಿ ವೃದ್ಧಿ ವಿನಾಶವಭ್ಯುದಯ ಪ್ರಪಂಚದಲಿ ।

ಮೌನನಿಧಿಯೋ ವೇದಸೂಕ್ತವಿ
ಧಾನದಲಿ ಪರಿಹಾರ ವಿಷ್ವ
ಕ್ಸೇನಮಯಮೀಲೋಕಯಾತ್ರೆಗಳೆಂದನಾಮುನಿಪ ॥ ೭೫

ಆಹರಿಯೆ ನಿಮಗಿಂದು ಜೀವ
ಸ್ನೇಹಿತನು ನಿಮಗಾವ ಚಿಂತೆ ವಿ
ಮೋಹಚೇಷ್ಟೆಗಳವನ ವಧೆಗೋ ಬಲ್ಲರಾರಿದನು ।
ಊಹಿಸಲು ಬೇಕೆಂದು ಮುನಿಪತಿ
ಗಾಹಿನಲಿ ತಿಳುಹಿದನು ಘನಸ
ನ್ನಾಹರೆಚ್ಚಾಡಿದರು ಶಿಶುಪಾಲಕಮುರಾಂತಕರು ॥ ೭೬

ಕಾದಿದರು ವಿವಿಧಾಸ್ತ್ರವಿದ್ಯಾ
ಭೇದದಲಿ ರಥಭಂಗಚಾಪವಿ
ಭೇದಶಸ್ತ್ರೌಘಸಂಹರಣ ಪ್ರಪಂಚದಲಿ ।
ಆದುರಾತ್ಮನ ನಿಲಿಸಿ ನಿಮಿಷದೊ
ಳಾದಯಾಂಬುಧಿ ತುಡುಕಿದನು ತ್ರೈ
ವೇದಮಯಮೂರ್ತಿತ್ರಯಾತ್ಮ ಮಹಾಸುದರ್ಶನವ ॥ ೭೭

ಶಿಶುಪಾಲ ಸಂಹಾರ.

ಬೆಸಸಿದನು ಚಕ್ರವನು ಧಾರಾ
ವಿಸರಧೂತಪರಿಸ್ಫುಲಿಂಗ
ಪ್ರಸರತೇಜಃಕಣಪರಿಷ್ಕೃತನವ್ಯಶತಭಾನು ।
ದೆಸೆದೆಸೆಯ ದುವ್ವಾಳಿಸುವ ಬೆಳ
ಗೆಸೆಯೆ ಬಂದು ಸುನೀಥಕಂಠದ
ಬೆಸುಗೆ ಬಿಡಲೆಱಗಿದುದು ಹಾಯ್ದುದು ತಲೆ ನಭಸ್ಥಳಕೆ ॥ ೭೮

ಪರಿಗೊರಳ ಚೌಧಾರೆಯಲಿ ಧುರು
ಧುರಿಸಿ ನೂಕಿತು ರಕುತವದಱೊಳು

ಮಿಱುಪತೇಜಃಪುಂಜ ವುಕ್ಕಿತು ಹೊದಱ ಹೊಳಹಿನಲಿ |
ತುಱುಗುವೆಳಗಿನ ಜೋಕೆಯಲಿ ಜಗ
ವೆಱಿಯೆ ಬಂದು ಮುರಾರಿಯಂಘ್ರಿಯೊ
ಳೆಱಗಿ ನಿಂದುದು ನಿಜನೆಲೆಗೆ ವಿಜಯಾಭಿಧಾನದಲಿ || ೭೯

ಆಗ ಜನಗಳ ಮಾತುಗಳು.

ತಗ್ಗಿದುದು ಕಳಕಳ ವಿಷಾದದ
ಸುಗ್ಗಿ ಬೀತುದು ರಾಯರೀಚಕೆಯು
ಮಗ್ಗುಲಲಿ ಮೇಳೈಸಿ ಮೆಱೆದರು ಮಿತ್ರ ಬಾಂಧವರು [1] |
ನೆಗ್ಗಿದುವು ನೆನಹವನ ಸಖಿಗಳು
ಮುಗ್ಗಿದರು ಹುರಡಿನ ವಿಘಾತಿಯು
ಲಗ್ಗಿಗರು ಹಣುಗಿದರು ಶಿಶುಪಾಲಾವಸಾನದಲಿ || ೮೦

ಈಸು ಹಿರಿದಲ್ಲೆಂದು ಕೆಲಬರು
ಲೇಸುಮಾಡಿದನಸುರರಿಪುವಿದ
ನೀಸುಬಾಹಿರನೆಂದಱಿಯೆವಾವೆಂದು ಕೆಲಕೆಲರು |
ಐಸಲೇ ಕೃಷ್ಣಂಗೆ ಮುನಿದವ
ರೇಸು ದಿನ ಬದುಕುವರು ಲೇಸಾ
ಯ್ತೊ ಸುನೀಥಂಗೆಂದು ನಗುತಿರ್ದುದು ನೃಪಸ್ತೋಮ || ೮೧

ಆಱುಕೋಟಿರಥೌಘ ಮೂವ
ತ್ತಾಱುಕೋಟಿ ಗಜಂಗಳಪ್ಪ
ತ್ತಾಱುಕೋಟಿತುರಂಗವೈದಕ್ಷೋಹಿಣೀ ಸೇನೆ |
ಕೋಱಡಾಡೆಯು ನಿಱಿಯದೇಹದ
ವೀರದಾನವರಸುವ ನಿಮಿಷಕೆ
ಕಾಱಿದರು ಕರುಣಾಳು ದೇವನಚಕ್ರದೂಷ್ಮೆಯಲಿ || ೮೨

1 ಮೈತ್ರಿಯಲಿ, ಕ. ಖ.

ಬಿದ್ದ ರೈಸಾವಿರಮಹಾರಥ
ರದ್ದ ತರುಣಜಲೌಘ ಸೇನೆಯ
ಕದ್ದ ನಂತಕನಸುರವೈರಿಯ ಕರುಣದೂರರನು |
ಹದ್ದು ನರಿ ವಾಯಸಸಮೂಹಕೆ
ಬಿದ್ದಿನೂಟಗಳಾಯ್ತು ಯಜ್ಞವ
ಹೊದ್ದ ಹೊಱಬಾಹೆಯಲಿ ಕಾದಿಹ ಭೂತಸಂತತಿಗೆ || ೮೩

ಕೃಷ್ಣನು ಶಿಶುಪಾಲಪುತ್ರರನ್ನು ಅನುಗ್ರಹಿಸಿದುದು.

ಗೋಳಿಡುತ ಬಂದೆಱಗಿದರು ಶಿಶು
ಪಾಲತನುಜರು ಕೃಷ್ಣನಂಘ್ರಿಗೆ
ಲಾಲಿಸಿದನನಿಬರನು ಸಂತೈಸಿದನು ಕರುಣದಲಿ |
ಮೇಲುಪೋಗಿನ ವಿಧಿವಿಹಿತಕ
ರ್ಮಾಳಿಗಳ ಮಾಡ್ವಿವನ ಮಗಗೆ ಕೃ
ಪಾಳುಪಟ್ಟದ ಸೇಸೆದಳೆದನು ವೀರನಾರಯಣ || ೮೪

ಹನ್ನೊಂದನೆಯ ಸಂಧಿ ಮುಗಿದುದು.

ಹನ್ನೆರಡನೆಯ ಸಂಧಿ.

ಸೂಚನೆ.

ರಾಜಸೂಯಕ್ರತುಸಮಾಪ್ತಿಯೊ
ಳಾಜನಾರ್ದನಮುಖ್ಯರನು ಯಮ
ರಾಜಸುತ ಕಳುಹಿದನು ಪೊಕ್ಕರು ತಮ್ಮ ನಗರಿಗಳ ||

ಯಾಗನಡೆದ ಕ್ರಮ.

ಕೇಳು ಜನಮೇಜಯ ಧರಿತ್ರೀ
ಪಾಲ ರಣಗಜಬಜದ ಸ್ತೋಮ

ಸ್ತೋಟಿ ತಗ್ಗಿತು ಪಜ್ಞೆ ಗಟ್ಟಿತು ಮತ್ತೆ ನೃಪನಿಕರ ।
ಮೇಲಣಂತರ್ವೇದಿಗಳ ಮುನಿ
ಪಾಳಿಮಂತ್ರಾಹುತಿಗೆ ಕವಿವುರಿ
ನಾಲಿಗೆಯ ಲಾವಣಿಗೆ ತಳಿತುವು [1] ಹವ್ಯವಾಹನನ ॥ ೧

ತಳಿತು ತಿವಿದಾಡಿದುವು ಮುಱಿದೊಡೆ
ಗಲಸಿದುವು ಹೊಗೆ ಸುತ್ತಿ ಸಿಮಿಸಿಮಿ
ಮೊಱಗಿ ಹೊಡಱಿ [2] ದ್ದುವು ಸಗಾಡದೊಳುಬ್ಬಿ ಭುಗಿಭುಗಿಸಿ ।
ಸುಟಿಸುಟಿದು ಛೋರೆಂದು ಚಿಗಿದ
ಪ್ಪಳಿಸಿದುವು ಘೃತಧಾರೆಗಳಿಗು
ಚ್ಚಳಿಸಿದುವು ಹರುಹಿನಲಿ ನಾಲಿಗೆ ಹವ್ಯವಾಹನನ ॥ ೨

ಅವಭೃಥಾದಿಗಳು.

ಶ್ರುತಿವಿಧಾನದಲಮಳಪೂರ್ಣಾ
ಹುತಿಯು ಪಾರಾಯಣದ ನಿಗಮ
ಪ್ರತತಿಗಳ ಪರಿಪೂರ್ಣಪರಿಮಳಮಯದಿಶಾವಳಿಯು ।
ಕ್ರತುಸಮಾಪ್ತಿಯೊಳವಭೃಥದ ಭೂ
ಪತಿಯು ವಿಮಳಸ್ನಾನಪುಣ್ಯೋ
ಚಿತದಲೋಕುಳಿಯಾಡಿ ದಣಿದುದು ಲೋಕ ಸುರನರರ ॥ ೩

ಅಲ್ಲಿ ನಡೆದ ಬ್ರಾಹ್ಮಣಭೋಜನಕ್ರಮ.

ಅರಸ ಚಿತ್ತೈಸೊಂದುಲಕ್ಷದ
ಧರಣಿಯಮರರ ಭೋಜನಾಂತಕೆ
ಮೊಱೆವುದೊಂದೇ ಭಾರಿ ಶಂಖಧ್ವನಿ ಛಡಾಳವಲಿ ।
ಪರುಠವಣೆ ಯಿದು ರಾಜಸೂಯಾ
ಧ್ವರದ ಪರ್ಯವಸಾನಪರಿಯಂ
ತರದೊಳೋರಂದದಲಿ ಹಗಲಿರುಳೂದಿತನವರತ ॥ ೪

---

[1] ದಣಿದುದು, ಡ. [2] ಸಿಗುಱಿ, ಡ.

ಏಸುಲಕ್ಷವದೇಸು ಕೋಟಿಯು
ದೇಸು ನಿರ್ಬುದವೇಸು ಖರ್ವವ
ದೇಸು ಪದ್ಮವೊ ದ್ವಿಜರ ಗಣನೆಯನಱಿವರಾರದನು |
ಏಸು ಭಕ್ಷ್ಯೋದನದ ಪರ್ವತ
ರಾಶಿ ದಧಿಘೃತದುಗ್ಧಮಧುವಾ
ರಾಸಿಯೊಡ್ಡಣೆ ಮೆಱೆದುದಿಂದ್ರಪ್ರಸ್ಥನಗರಿಯಲಿ || ೫

ಓಗರದ ರಾಸಿಗಳ ಗಿರಿ ಕಂ
ಡಾಗಳಂತಿರೆ ಮರಳಿ ಕಾಣರು
ಸಾಗರದವೊಲು ದಧಿಘೃತಾದಿಮಹಾಪ್ರವಾಹಚಯ |
ಆಗಳಂತಿರೆ ಬತ್ತುವುವು ನಿಮಿ
ಷಾಗಮಕೆ ತುಂಬುವುವು ಯಮಜನ
ಯಾಗಲಕ್ಷ್ಮಿಯನಲ್ಪಮತಿ ಬಣ್ಣಿಸುವೊಡರಿದೆಂದ || ೬

ಧರ್ಮರಾಯನು ಋಷಿಗಳನ್ನು ಅಭಿನಂದಿಸುವಿಕೆ.

ಅರಸ ಮೆಯ್ಯಿಕ್ಕಿದನು ಮುನಿಗಳ
ವರಸಮಾಜಕೆ ನಿಮ್ಮ ಕೃಪೆಯಲಿ
ಧರಣಿಪಾಧ್ವರಸಿದ್ಧಿಯಾಯ್ತು ನಿರಂತರಾಯುವಲಿ |
ಕರುಣ ನಿಮ್ಮದು ನಿಮ್ಮ ಮಿಗೆ ಸ
ತ್ಕರಿಸಲಱಿಯೆನು ಹೆಚ್ಚುಕುಂದಿನ
ಹುರುಳನೀಕ್ಷಿಸಲಾಗದೆಂದನು ಮತ್ತೆ ಕೈಮುಗಿದು || ೭

ಋಷಿಗಳು ಬಹುಮಾನಿತರಾಗಿ ತಂತಮ್ಮಾಶ್ರಮಕ್ಕೆ ತೆರಳಿದುದು.

ಮನ್ನಿಸಿದನವರುಗಳನುಡುಗೊಱೆ
ಹೊನ್ನ ವಿವಿಧಾಭರಣಪಶುಗಳ
ಲುನ್ನತಾಶೀರ್ವಾದರಚನೆಯಲವನಿಪನ ಹರಸಿ |
ಸನ್ನುತರು ತಮ್ಮಾಶ್ರಮಕೆ ಸಂ

ಪನ್ನಸತ್ವರು ಮರಳಿದರು ಪ್ರತಿ
ಪನ್ನಸತ್ರ್ಯ [1] ವಿಳಾಸನೊಪ್ಪಿದನಿಂದ್ರವಿಭವದಲಿ ॥ ೮

ರಾಜವರ್ಗವು ಬಹುಮಾನಿತವಾಗಿ ಪ್ರಯಾಣ ಮಾಡಿದುದು.

ರಾಜವರ್ಗವನವರವರ ನಿಜ
ತೇಜಮಾನ್ಯೋಚಿತದಿ ಗಜರಥ
ವಾಜಿವಿವಿಧಾಭರಣವಸನವಧೂಕದಂಬದಲಿ ।
ಆಜಗತ್ಪತಿ ಮುಟ್ಟಿಯೆ ಪಾರ್ಥಿವ
ರಾಜಿಯನು ಮನ್ನಿಸಿ ಯುಧಿಷ್ಠಿರ
ರಾಜನನುಜರ ಕೂಡಿ ಕಳುಹಿಸಿದನು ಮಹೀಶ್ವರರ ॥ ೯

ಫಲುಗುಣನು ಧೃತರಾಷ್ಟ್ರಭೀಷ್ಮರ
ಕಳುಹಿದನು ಗುರು ಗುರುತನೂಜರ
ಬಟ್ಟಿಯೊಳ ನಿಲಜ ಬಂದನಾಕೃಪನೊಡನೆ ಸಹದೇವ ।
ಬಟ್ಟಿಯಲೈದಿದ ನಕುಲನಾಸಾ
ಬಲನ ಸೈಂಧವಶಲ್ಯರನು ಕೋ
ಸಲವಿರಾಟದ್ರುಪದಭಗದತ್ತಾದಿಭೂಪತಿಯು ॥ ೧೦

ಅರಸ ಕೇಳೈ ಪಾಂಡ್ಯಭೂಮೀ
ಶ್ವರಕಳಿಂಗಪ್ರಮುಖತೆಂಕಣ
ಧರಣಿಪರ ಬಟ್ಟಿಯಲಿ ಘಟೋತ್ಕಚಯೋಜನಾಂತರವ ।
ವರಕುಮಾರರು ನಿಖಿಳಪೃಥ್ವೀ
ಶ್ವರರನವರವರುಚಿತದಲಿ ಸ
ತ್ಕರಿಸಿ ಮರಳಿಯೆ ಬಂದರಿಂದ್ರಪ್ರಸ್ಥಪುರವರಕೆ ॥ ೧೧

ಪಾಂಡವರನ್ನು ಕುರಿತು ಯಾಗಸಿದ್ಧಿಯಾಯಿತೆ ಎಂದು ಶ್ರೀಕೃಷ್ಣನ ಪ್ರಶ್ನೆ.

ಕರೆಸಿದನು ಹರಿ ಪಾಂಡುಪುತ್ರರ
ನರಸಿಸಹಿತೇಕಾಂತಭವನದೊ

---

1 ಯಜ್ಞ, ಡ.

ಳುರುತರಪ್ರೇಮೈಕರಸಸಂಸಿಕ್ತವಚನದಲಿ ।
ಭರಿತವಾಯಿತೆ ರಾಜಸೂಯಾ
ಧ್ವರಸದಾಹುತಿತೃಪ್ತ್ಯಮಾಣಾ
ಮರವಮಹೀಶ್ವರವಿಭವವಿಲಸಿತಪಾಂಡುಪದವೆಂದ ॥ ೧೦

ದೇವನಂಘ್ರಿಯು ಮುಸುಕಿದುವು ಮಕು
ಟಾವಳಿಗಳವರ ಸತಿಯು ಸಂ
ಭಾವನೆಯು ಮಧುರೋಕ್ತಿರಸದಲಿ ನಗುತ ಮನ್ನಿಸಿದ ।
* ಓವಿದನು ಮುರವೈರಿ ಕಾರು
ಣ್ಯಾವಲೋಕನದಿಂದ ನಿನ್ನವ
ರಾವಭವದಲಿ ಭಜಿಸಿದರೊ ಬೇಸಱದೆ ಹರಿಪದವ * ॥ ೧೨

ಧರ್ಮರಾಯನು ಶ್ರೀಕೃಷ್ಣನ ಪದದ ಮೇಲೆ ಬಿದ್ದು ಸ್ತುತಿಸುವಿಕೆ.

ದೇವ ನಿಮ್ಮಡಿಯಂಘ್ರಿಕಮಲವ
ನಾವ ನೆನೆವನವಂಗೆ ತುಸವ
ಲ್ಲಾ ವಿರಿಂಚಾದ್ಯಮರಪದವಿದು ನಿಗಮಸಿದ್ಧವಲೈ ।
ನಾವು ಸಾಕ್ಷಾದ್ಯಜ್ಞಪೂರ್ತಿ [1] ಸು
ಧಾವಸೇಚನಧೂತಕಿಲ್ಬಿಷ
ಭಾವರರಿದೇ [2] ಬೊಪ್ಪನವರಿಗೆ ಶಕ್ರಪದವೆಂದ ॥ ೧೪

ಮಸಗಿದರೆ ಮಾಗಧನು ಯಜ್ಞವ
ನುಸುರಲೀವನೆ ಚೈದ್ಯ ಮುನಿದು
ಬ್ಬಸವ ಮಾಡಿದೊಡೆಮ್ಮ ಕೈಯ್ಯಲಿ ಹರಿವ ಹೆಕ್ಕಳವೆ ।

---

[1] ದಮಳಮೂರ್ತಿ, ಕ. ಖ. ಚ. [2] ರಾವುದರಿದೈ, ಕ. ಖ. ಚ.

* ಕೋವಿದನ ನಿಜಭಕ್ತಿಪೀಯೂ
ಷಾವಸೇಚನದಿಂದಲವರಿ
ನ್ನಾವ ಭಾವದಿ ಭಜಿಸಿದರೊ ಬೇಸಱದೆ ಹರಿಪದವ, ಡ.

ಶಿಶು ಪ್ರೊಱಲಿದರೆ ಕಂಬದಲಿ ತೋ
ಱಿಸಿದ ಕರುಣಾಜಲಧಿಯೇ ಪಾ
ಲಿಸಿವೆಲಾ ಪಾಂಡವರನೆಂದನು ಹೊರೞಿ ಚರಣದಲಿ ॥ ೧೫

ಶ್ರೀಕೃಷ್ಣನು ಸಂತೋಷದಿಂದ ಧರ್ಮರಾಯನನ್ನು ನೋಡಿ ಆಲಿಂಗಿಸುವಿಕೆ.

ಏಳೆನುತ ತೆಗೆದಪ್ಪಿದನು ಕರು
ಣಾಳು ಪರಿತೋಷಾಶ್ರುಪೂರ್ಣವಿ
ಶಾಲಲೋಚನ ನೋಡಿದನು ತನ್ನವರನೊಲವಿನಲಿ ।

ದ್ರೌಪದಿಗೆ ಶ್ರೀಕೃಷ್ಣನ ಉಪದೇಶ.

ಬಾಲಕಿಯೆ ಬಾ ತಂಗಿ ಬಾ ನೀ
ಲಾಳಕಿಯೆ ಬಾರೆನುತ ಮಿಗೆ ಪಾಂ
ಚಾಲಿಯನು ಕರೆದಸುರರಿಪು ಮನ್ನಿಸಿದನುಚಿತದಲಿ ॥ ೧೬

ನಂಬದಿರು ಸಿರಿಯನು ಪತಿವ್ರತೆ
ಯೆಂಬರಿಗೆ ನೀ ಗುರು ವಿಷಾದವಿ
ಡಂಬಹರುಷಂಗಳಲಿ ನೀನಿಹುದೇಕಚಿತ್ತದಲಿ ।
ತುಂಬುವುದು ಒತ್ತುವುದು ರಾಜ್ಯದ
ಡೊಂಟುದಧಿ [1] ಮೋಖಲೆಯು ಹರುಷಾ
ಡಂಬರವಿದೆಂದಸುರರಿಪು ಸೂಚಿಸಿದನಂಗನೆಗೆ ॥ ೧೭

ವಿಷವ ಗೆಲಿದಿರಿ ಹಿಂದೆ ಕಿಚ್ಚಿನ
ದೆಸೆಯುಲುೞಿದಿರಿ ದಾಯಿಗಳು ದು
ರ್ವ್ಯಸನಿಗಳು ದುಸ್ಸಹವು ನಿಮ್ಮಭ್ಯುದಯವಹಿತರಿಗೆ ।
ವಿಷಮವಿದುವೇ ದ್ಯೂತವ್ಯಗಯಾ
ವ್ಯಸನ ಪಾರ್ಥಿವಜಾತಿಗಿದು ದು
ರ್ವ್ಯಸನವಿದಱಲಿ ನೆಗ್ಗಿದರು ನಳದಶರಥಾದಿಗಳು ॥ ೧೮

1 ಡೊಂಬು ಹ್ರ, ಕ. ಕ. ಚ.

ಸೋತು ನಡೆವುದು ಹಿರಿಯರಲಿ ಸಂ
ಪ್ರೀತಿಯನು ಸುಜನರಲಿ ನಿರ್ಮಳ
ನೀತಿಯನು ಪರಿವಾರಪುರಜನ ನಾಡುಬೀಡಿನಲಿ ।
ಖ್ಯಾತಿಯನು ಧರ್ಮದಲಿ ವೈರಿ
ವ್ರಾತದಲಿ ಪೌರುಷವ ನಿಖಿಳ
ಜ್ಞಾತಿಯೊಳಗೆಚ್ಚರಿನೊಳಿಹುದೆಂದಸುರರಿಪು ನುಡಿದ ॥ ೧೯

ಎಂದು ಬುದ್ಧಿಯ ಹೇಳಿ ಪಾರ್ಥನ
ನಂದನನ ಕರೆಸಿದನು ತಾಯ್ನುಹಿ
ತೆಂದನವರಿಗೆ ನಯದಲುಚಿತಪ್ರೀತಿವಚನದಲಿ ।
ಎಂದು ಕುಂತಿಗೆ ಸಾಖಿ ನಯನುಡಿ
ಯಿಂದ ವಿನಯವ ಮಾಡಿ ಪಾಂಡುವ
ನಂದನರ ಮನ್ನಿಸಿದನತಿಕಾರುಣ್ಯಭಾವದಲಿ ॥ ೨೦

ಯಾದವರು ಪಾಂಡವರು ತನ್ನವ
ರಾದರಿದು ನೀ ಕುಟುಂಬವೀಮಹ
ದಾದಿಸೃಷ್ಟಿಗದಾವ [1] ರಕ್ಷೆ ಕುಟುಂಬವಾರಿದಕೆ ।
ಆದರಿಸಿದನು ಕೆಲಬರನು ಹೊಱ
ಗಾದವರು ಕೆಲರಾಯ್ತು ಹರಿಮಾ
ಯಾದುರಾಗ್ರಹವೃತ್ತಿ ಯಿಾಹವಣೆಂದನಾಮುನಿಪ ॥ ೨೧

ದ್ವಾರಕೆಗೆ ಶ್ರೀಕೃಷ್ಣನ ಪ್ರಯಾಣ.

ಆಶುಭಗ್ರಹದುದಯದಲಿ ತಿಥಿ
ರಾಶಿನಕ್ಷತ್ರಾದಿಪುಣ್ಯೋ
ದ್ಭಾಸಮಾನಮುಹೂರ್ತದಲಿ ಸುಸ್ವರವಿಳಾಸದಲಿ ।

---

1 ವಿಧಾನ, ಕ. ಖ.

ಭೂಸುರಾಶೀರ್ವಾದದಲಿ ಲ
ಕ್ಷ್ಮೀಶ ಪಯಣವ ಮಾಡಿದನು ಕ
ಟ್ಟಾಸುರದಲೊದಱಿದುವು ಘನಗಂಭೀರಭೇರಿಗಳು ॥ ೨೨

ದೇಶದಲಿ ಕಾಲದಲಿ ದೆಸೆಯಲಿ
ರಾಶಿಯಲಿ ತಾರಾಗ್ರಹಾದಿಗ
ಳ್ಯಸರಲಿ ತಾ ತನ್ನ ಚೇಷ್ಟೆಗಳವರ ವರ್ತನಕೆ ।
ಈಸು ಮಹಿಮೆಯು ಮೆಱಿಸಿ ಲೋಕವಿ
ಳಾಸಚೇಷ್ಟೆಯನನುಕರಿಸಿ ನರ
ವೇಷವನು ನಟಿಸಿದನು ಹರಿ ಹೂಣಿದ ನಿಜೋನ್ನತಿಯು ॥ ೨೩

ಬಲ ವಿಡೂರಥ ಸಾಂಬ ಸಾತ್ಯಕಿ
ದಳಪತಿಪ್ರದ್ಯುಮ್ನ ಯಾದವ
ಕುಲಸಚಿವನಕ್ರೂರನುದ್ಧವಚಾರುಕೃತವರ್ಮ ।
ಚಲಪತಾಕೆಯು ರಥನಿಕರದ [1]
ಗ್ಗಳೆಯ ಗಜವಾಜಿಗಳ ಸಂದಣಿ
ಯೊಳಗೆ ನಡೆದರು ಕೃಷ್ಣರಾಯನ ರಥದ ಬಱಿಸಿನಲಿ ॥ ೨೪

ಕೃಷ್ಣವಿರಹದಿಂದ ಧರ್ಮರಾಯನ ದುಃಖ.

ಅನುಜತನುಜರು ಸಹಿತ ಕುಂತೀ
ತನಯ ದೂರಕೆ ಕಳುಹಿ ಮರಳಿಯೆ
ಮನೆಗೆ ಬಂದನು ಕೃಷ್ಣವಿರಹವಿಷಾದಖೇದದಲಿ ।
ಮುನಿಪವೇದವ್ಯಾಸಧೌಮ್ಯರ
ನನುಕರಿಸಿ ದಾಹಿಸುವ ದುಗಡವ
ನನಿತುವನು ಬಿನ್ನವಿಸಿದನು ಮಿಡಿಮಿಡಿದು ಕಂಬನಿಯ ॥ ೨೫

ಅಸುರರಿಪು ಕೃಪೆಯಿಂದ ನಿರ್ವಾ
ಹಿಸಿದನೀಯಜ್ಞವನು ಪೂರ್ವದ

---

1 ನಿಖಿಳರಥದ, ಡ.

ವಸುಮತೀಶರ ಪಾಡಿಗೆಣೆಯೆನಲೆನ್ನ ಪತಿಕರಿಸಿ ।
ಬಿಸುಟು ಬಿಜಯಂಗೈದನೀವು
ಬ್ಬಸವನಾರಿಗೆ ಹೇಳುವೆನು ಹಿಂ
ದೆಸೆವ ಗೋಕುಲವಾಯ್ತು ಪುರವಿದು ಕೃಷ್ಣವಿರಹದಲಿ ॥ ೨೬

ಅರಸ ಕೇಳೈ ದೈತ್ಯದಾನವ
ರುರುವಣೆಯ ಯದುನಾಯಕರು ಸಿ
ಸ್ತರಿಸಲಱಿಯರು ಕೃಷ್ಣ ನಿಲ್ಲದೆ ಭೀತಿ ದ್ವಾರಕೆಗೆ ।
ಕರುಣ ನಿಮ್ಮಲಿ ಕಿಱಿದೆ ನಿಮ್ಮೊಳ
ಗೆಱಕವಿಲ್ಲವೆ ಚಿಂತೆ ಸಾಕಂ
ತಿರಲಿ ಯೆಂದವನೀಶನನು ಸಂತೈಸಿದನು ಮುನಿಪ ॥ ೨೭

ಆಮುಕುಂದನ ನೆನಹು ನಮಗೆ ನಿ
ರಾಮಯವು ನೀವಿರಲು ಚಿಂತಾ
ವೈಮನಸ್ಯದ ವೇಡೆ ಮುಱಿವುದು ಸಾಕದಂತಿರಲಿ ।
ಈಮಹೋತ್ಪಾತಪ್ರಬಂಧವಿ
ರಾಮಕರ್ಮವ ಬೆಸಸಿ ಯೆನೆ ನಗು
ತಾಮುನೀಶ್ವರ ನುಡಿದನವನೀಪತಿಶಿರೋಮಣಿಗೆ ॥ ೨೮

ಧರ್ಮರಾಯನಿಗೆ ವ್ಯಾಸರ ಉಪದೇಶ.

ಇದು ಕಣಾ ಕುರುರಾಜವಂಶಾ
ಭ್ಯುದಯವಿಗ್ರಹಪೂರ್ವಸೂಚನೆ [1]
ಯಿದು ಸುಯೋಧನನೃಪನ ಕತಿಸಯಕಾಲಸುಖಬೀಜ ।
ಇದು ಸಮಸ್ತಕ್ಷತ್ರಕುಲವಾ
ರಿದಘಟೋತ್ಪಾತದ [2] ಸಮೀರಣ
ವಿದಱ ಫಲ ನಿಮಗಹ [3] ಜಯಾವಹವೆಂದನಾಮುನಿಪ ॥ ೨೯

1 ಸೂಚಕ, ಚ. 2 ಚ್ಚಾಟನ, ಚ. 3 ಗಪ, ಚ

ಅಱಿದಿಹುದು ವೇದೋಕ್ತಮಾರ್ಗವ
ಮೆಱೆಯದಿರು ನೀನಾಪ್ತವಚನವ
ಹೊಱಗೆ ನಿನ್ನದು ನಿನ್ನ ಹೊದ್ದದು ಕಲುಷಕಲಿಮಲವು ।
ಕಱುಬರೀಕಾರವರು ಮಱವಿದು
ಮೆಱೆದುದದ್ಭುತವಾಗಿ ನಿಮ್ಮನು
ಮುಱಿದೊಡಲ್ಲದೆ ನಿಮ್ಮವರು [1] ಸೈರಿಸುವರಲ್ಲೆಂದ ॥ ೩೦

ನುಡಿಯದಿರಸತ್ಯವನು ರಾಜ್ಯವ
ಬಿಡು ವಿಭಾಡಿಸಿ ನಿನ್ನ ವಧುವಿನ
ಮುಡಿಗೆ ಹಾಯ್ದರೆ ನೀನಧರ್ಮದ ತಡಿಯ ತುಡುಕದಿರು [2] ।
ಒಡಲುಗೂಡಿ ಸಮಸ್ತವಸ್ತುವ [3]
ಬಿಡುವು [4] ದಗ್ಗದ ಮೋಕ್ಷಲಕ್ಷ್ಮಿಯ
ಮುಡಿಗೆ ಹಾಯ್ವೊಡೆ ಸತ್ಯವೊಂದನೆ ನಂಬು ನೀನೆಂದ ॥ ೩೧

ಇದುವೆ ರೇಖಾಮಾತ್ರ ಸರ್ವಾಂ
ಗದಲಿ ನಿನ್ನನು ಮೆಱೆಯದಿರು ಕೊಂ
ಕಿದರೆ ಕರುಣಾಜಲಧಿ ಜಯಿಸಲಿಕುಂಟು ಹರಿ ನಿಮಗೆ ।
ಬೆದಱದಿರು ವಿಗಡಿಸುವ ವಿಷಯಾ
ಸ್ಪದದೊಳೆಂದು ಮುನೀಂದ್ರನೈವರು
ಸುದತಿಸಹಿತನಿಬರಿಗೆ ಬುದ್ಧಿಯ ಹೇಳಿದನು ಬಳಿಕ [5] ॥ ೩೨

ಅಜ್ಞರವದಿರು ನೀವು ನೆಱೆ ಸ
ರ್ವಜ್ಞರವದಿರಧರ್ಮನಿಪ್ಪರು
ಯಜ್ಞದೀಕ್ಷಿತರಿಂದು ನೀವು ಸಮಸ್ತಜಗವೆಱೆಯೆ ।

1 ಕಂಡುನೆಱೆ. ಡ. 2 ನಾಱದಿರು, ಚ. 3 ಧನವಿದು, ಚ.
4 ಕೆಡುವು, ಟ. 5 ಹೊಱವಂಟು, ಚ. ಚ.

ಅಜ್ಞರರಿಗಳು ನಿಪ್ಪುಣರಿಗೆ ವರ
ಯಾಜ್ಞಿಕರಿಗಾಚಾರಹೀನರ
ಭಿಜ್ಞಮತವಿದು ತಪ್ಪದೆಂದನು ಮುನಿ ನೃಪಾಲಂಗೆ ‖ ೩೩

ವ್ಯಾಸರು ಬದರಿಗೆ ಹೊರಟ ಬಳಿಕ ಉಳಿದ ಜನಗಳನ್ನು ಕಳುಹಿಸಿದುದು.

ಮುನಿಪ ಕಳುಹಿಸಿಕೊಂಡು ಬದರೀ
ವನಕೆ ತಿರುಗಿದನತ್ತಲಿತ್ತಲು
ಜನಪ ಬಂದನು ಬಳಿಕ ಮಯನಿರ್ಮಿತಮಹಾಸಭೆಗೆ ।
ಮುನಿಗಳುಳಿದವರನು ಮಹೀಸುರ
ಜನಸಹಿತ ಭೂಪಾಲಶೇಷವ
ನನಿತುವನು ಬೀಳ್ಕೊಟ್ಟನಂದುಚಿತದಲಿ ಭೂಪಾಲ [1] ‖ ೩೪

ಅರಸ ಕೇಳ್ಕೌರವೇಂದ್ರನ
ಕರೆಸಿದನು ದುಶ್ಶಾಸನಾದಿಕ
ದುರುಳದುಸ್ಸಹಶತಕಸಹಿತಾಸಭೆಗೆ ನಡೆತಂದು ।
ಪರಿಭವಕೆ ಗುಱಿಯಾಗಿ ಹಾಸ್ಯದ
ಹರಹಿನಲಿ ಹಟವಾಗಿ ಪಾಂಡವ
ರರಸನನು ಬೀಳ್ಕೊಂಡು ಹಸ್ತಿನಪುರಕೆ ನಡೆತಂದ ‖ ೩೫

ಭೂಮಿಲಂಬದ ನಿಖಿಳಭೂಪ
ಸ್ತೋಮಸಹಿತ ಸುಯೋಧನನು ಹೃ
ತ್ತಾಮಸದ ಚಾವಡಿಯ ರೂಢಿಯ ರೋಷಪಾವಕದ ।
ಧೂಮಮುಖನೈತಂದು ಗಜಪುರ
ಸೀಮೆಯಲಿ ಪಾಳೆಯವ ಬಿಡಿಸಿದ
ವೈಮನಸ್ಯದಲಿರುಳು ಹೊಕ್ಕನು ಹಸ್ತಿನಾಪುರವ ‖ ೩೬

ಹನ್ನೆರಡನೆಯ ಸಂಧಿ ಮುಗಿದುದು.

---

1 ನನುನಯದಿ ಮಿಗೆ ಸತ್ಕರಿಸಿ ಬೀಳ್ಕೊಟ್ಟನುಚಿತದಲಿ, ಚ.

ಪದಿಮೂರನೆಯ ಸಂಧಿ.

ಸೂಚನೆ.

ಕಾಲಪಾಶಾಕರ್ಷದಲಿ ಭೂ
ಪಾಲನಿಂದ್ರಪ್ರಸ್ಥನಗರಿಯ
ಬೀಳುಕೊಂಡನು ಬಂದು ಹೊಕ್ಕನು ಹಸ್ತಿನಾಪುರವ ||

ದುರ್ಯೋಧನನು ಅಸೂಯೆಯಿಂದ ದುಃಖದಿಂದಿರುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಕೌರವರಾಯನಿತ್ತಲು
ಮೇಲುಮುಸುಕಿನ ಹೊತ್ತ ದುಗುಡದ ಹೊಗರ ಹೊಗೆಮುಖದ |
ತಾಳುಗೆಯ ನಿದ್ರಾವದ ಮತ್ಸರ
ದೇಳಿಗೆಯಲಿಕ್ಕಡಿಯ ಮನದ ನೃ
ಪಾಲ ಹೊಕ್ಕನು ನಡುವಿರುಳು ನಿಜರಾಜಮಂದಿರವ || ೧

* ಆರತಿಯ ಗಣಿಕೆಯರ ಪಾಯುವ
ಧಾರು ಸೂಟಾಯತರ ಸುಟಿವು
ಪ್ಪಾರತಿಯ ದಾದಿಯರ ಮಂಗಳವಚನದ್ವೈದೆಯರ |
ದೂರದಲಿ ನಿಲಿಸಿದನು ಭಂಗದ
ಭಾರಣೆಯ ಬಿಸುಸುಯ್ಲ ಸೂಜಿಯ
ಸ್ಫೈರಣೆಯ ಸೀವಟದ ಸಿರಿಮಂಚದಲಿ ಪವಡಿಸಿದ || ೨

---

* ಆರತಿಯ ಗಣಿಕೆಯರ ಸುಟಿವು
ಪ್ಪಾರತಿಯ ದಾದಿಯರ ಪಾಯುವ
ಧಾರು ಸೂಟಾಯತರ ಮಂಗಳವಚನದ್ವೈದೆಯರ, ಚ. ಟ. ||

ಆಗ ಸರ್ವವಿಷಯದಲ್ಲಿಯೂ ದುರ್ಯೋಧನನ ಜಿಹಾಸೆ.

ಭಾನುಮತಿ ಬರೆ ಮುಱಿದ ಮುಸುಕಿನ
ಮೌನಿ ನೂಕಿದನಿರುಳನುದಯಾ
ನೂನಮಂಗಳಪಟಹ [1] ಶಂಖಧ್ವನಿಯ ಮೊಳಗಿಸಿದ ।
ಭಾನುವಿಂಗರ್ಘ್ಯಾದಿಕೃತ್ಯವ
ನೇನುವನು ಮನ್ನಿಸದೆ ಚಿತ್ತದೊ
ಳೇನ ನೆನೆದನೊ ಭೂಪನಿದ್ದನು ಖತಿಯ ಭಾರದಲಿ ॥ ೩

ಬೇಟೆ ನಿಂದುದು ಗಜತುರಗದೇ
ಜೂಟ ಮೊಳಗಿತು ಕೇಳಿಮೇಳದ
ತೋಟಿಯುಲ್ಲಿಯದಲ್ಲಿ ಕವಡಿಕೆ ನೆತ್ತಮೊದಲಾದ ।
ನಾಟಕದ ಮೊಗರಂಬವೆನಿಪ ಕ
ವಾಟ ತೆಗೆಯದು ಹೊತ್ತುಸೂಯದ
ಕೋಟಲೆಯ ಕಡುಹೂಟ ಕವರಿತು ನೃಪನ ತನುಮನವ ॥ ೪

ದ್ರೋಣಭೀಷ್ಮಾದಿಗಳು ಸಮಯಾವ
ಕಾಣರುಚಿದಪಸಾಯಿತಸಚಿವ
ಶ್ರೇಣಿ ಬಾಗಿಲ ಹೊಱಗೆ ನಿಂದುದು ಮತ್ತೆ ಮನೆಗಳಲಿ ।
ಕಾಣದೊ [2] ಳಪ್ಪೈಕದ ಸುವೇಣಿಯ
ರಾಣಿಯರ ದುರ್ವನದ ಬೆಳಸಿನ
ಕೇಣಿಯನು ಕೈಕೊಂಡನೊಬ್ಬನೆ ಕೌರವರ ರಾಯ ॥ ೫

ಆಗ ಜನಗಳ ಸ್ವಚ್ಛಂದಾಚರಣೆ.

ಸಮಯವಿಲ್ಲೋರಂತೆ ಮೌನ
ಭ್ರಮದ ಬಿಗುಹಿನ ಕೇರಿಕೇರಿಯ
ಕುಮತಿಗಳ ಗುಜುಗುಜಿನ ಗುಪ್ತದ [3] ಮುಸುಕುಕೈದುಗಳ ।

---

1 ರಭಸ, ಕ, ಖ. 2 ಕಾಣೆನೊ, ಚ ಟ. 3 ವಾರ್ತೆಯ, ಕ, ಖ,

ತಮತಮಗೆ ಬಿರುದುಗಳ ಗಣಿಕಾ
ರಮಣವೈರದ ಹೆಚ್ಚು ಕುಂದಿನ
ಸಮರಭಟರಿಱಿದಾಡಿದರು ನಿರ್ನಾಮಭಾವದಲಿ ॥ ೬

ದುರ್ಯೋಧನನ ವಿಷಯದಲ್ಲಿ ಜನರ ನಾನಾವಿಧ ಊಹೆ.

ಪ್ರಾಣಶೋಷಿತನೆಂದು ಕೆಲಬರು
ಕಾಣೆವರಸನನೆಂದು ಕೆಲರ
ಕ್ಷೀಣರೋಗಿತನೆಂದು ಕೆಲರು ವಿಷಪ್ರಯೋಗದಲಿ ।
ಸ್ತ್ರೀಪ್ರಣಚೇಷ್ಟಿತನೆಂದು ಕೆಲಬರು
ಜಾಣರೂಹೆಯ ಜನದ ನೆನೆಹಿನ
ಸಾಣೆಯಲಿ ಸವೆಯಿತ್ತು ಕೌರವನೃಪನ ನಿರ್ದೇಶ ॥ ೭

ದೇಶ ಅರಾಜಕವಾಯಿತೆಂದು ಭೀಷ್ಮಾದಿಗಳಿರಲು
ಶಕುನಿಯ ಆಗಮನ.

ಅಕಟ ಕೌರವರಾಯ ರಾಜ
ನ್ಯಕಶಿರೋಮಣಿ ಯಿರಲು ಧರೆ ರಾ
ಜಕವಿಹೀನ ವಿಡಂಬವಾಯ್ತೋ ಶಿವ ಶಿವಾ ಯೆನುತ ।
ಸಕಲಜನ ಭೀಷ್ಮಾದಿ [1] ಮಂತ್ರಿ
ಪ್ರಕರ ಚಿಂತಾಂಬುಧಿಯೊಳದ್ದಿರೆ
ಶಕುನಿ ಬಂದನು ಕೌರವೇಂದ್ರನ ರಾಜಮಂದಿರಕೆ ॥ ೮

ಕರೆದು ಬಾಗಿಲವರ್ಗೆ ತನ್ನಯ
ಬರವನಱುಹಿದೊಡವರು ರಾಯನ
ಹೊರೆಗೆ ಬಂದರು ನುಡಿದರಂಗೈತಳದ ಬಾಯ್ಗಳಲಿ ।
ಅರಸ ಬಿನ್ನಹ ಮಾವದೇವರು
ದರುಶನಾರ್ಥಿಗಳೆನಲು ಮನದಲಿ
ಕುರುನೃಪತಿ ಚಿಂತಿಸುತ ಬರಹೇಳೆಂದು ನೇಮಿಸಿದ ॥ ೯

---

1 ದಳನಾಯಕರು, ಚ ಟ.

ಶಕುನಿಯು ಈ ಅವಸ್ಥೆಗೆ ಕಾರಣವೇನೆಂದು ದುರ್ಯೋಧನನನ್ನು ಕೇಳುವಿಕೆ.

ಹೊಕ್ಕನೀತನು ಕೌರವೇಂದ್ರನ
ನೆಕ್ಕಟಿಯಲಿರೆ ಕಂಡು ನುಡಿಸಿದ
ನಕ್ಕಜದ ರುಜೆ ಯೇನು ಮಾನಸವೋ ಶರೀರಜವೊ ।
ಮುಕ್ಕುಳಿಸಿ ಕೊಂಡಿರದಿರಾರಿಗೆ
ಸಿಕ್ಕಿದೆಯೊ ಸೀಮಂತಿನಿಯರಿಗೆ
ಮಕ್ಕಳಾಟಿಕೆ ಬೇಡ ನುಡಿ ಧೃತರಾಷ್ಟ್ರನಾಣೆಂದ ॥ ೧೦

ಮಾವ ನೀವ್ ಮರುಳಾದಿರೇ ಯೆನ
ಗಾವ ರುಜೆ ಯಿಲ್ಲಂಗನೆಯರುಪ
ಜೀವಿಯೇ ತಾನಱಿಯಿರೇ ನೀವೀಸುಕಾಲದಲಿ ।
ನೋವು ಬೇಱಿಲ್ಲೆನಗೆ ನಿಳಯಕೆ
ನೀವು ಬಿಜಯಂಗೈವುದಂತ
ರ್ಭಾವವಹ್ನಿಯನೇಕೆ ಬೆದಕುವಿರೆಂದನಾಭೂಪ ॥ ೧೧

ಏನು ನಿನ್ನಂತಸ್ಥಹೃದಯಕೃ
ಶಾನುಸಂಭವವೇಕೆ ನುಡಿ ದು
ಮ್ಮಾನ ಬೇಡೆನ್ನಾಣೆನುತ ಸಂತೈಸಿದನು ನೃಪನ ।

ಶಕುನಿ ದುರ್ಯೋಧನರ ಸಂವಾದ.

ಏನು ಭಯಬೇಡಿನ್ನೆನಲು ಯಮ
ಸೂನುವೈಭವವಹ್ನಿದಗ್ಧ ಮ
ನೋನುಭಾವವನೇಕೆ ನುಡಿಸುವಿರೆಂದನಾಭೂಪ ॥ ೧೨

ಹೇೞು ಹೇೞೇನೇನು ಪಾಂಡುನೃ
ಪಾಲಪುತ್ರರ ವಿಭವವಹ್ನಿ
ಜ್ವಾಲೆಯಲಿ ಮನ ಬೆಂದುದೇ ಶಿವ ಶಿವ ವಿಚಿತ್ರವಲ ।

ಪಾಲಕನು ಧರ್ಮಜನು ಮಿಗೆ ಕ
ಟ್ಟಾಳುಗಳ್ ಭೀಮಾರ್ಜುನರು ಬೆ
ಳ್ಳಾಳಹಬ್ಬುಗೆಯುವರ ಸಿರಿ ಕೇಳೆಂದನಾಶಕುನಿ[1] ‖ ೧೩

ಪುರದ ಸಿರಿಯನು ಯಾಗದೊದವನು
ಹರಿಯ ಕರುಣೋದಯವನಾಸೋ
ದರರ ದರ್ಪದೊಳಸೆವ ಯಮಸುತನಖಿಳವೈಭವವ ।
ವರಸಭಾಮಂಟಪದಿ ನೆರೆದಿ
ದ್ದರಸುಮಕ್ಕಳ ವಾರವಧುಗಳ
ಪರಮಹರ್ಷವ ಕಂಡು ನೊಂದೆನು ಮಾವ ಕೇಳೆಂದ ‖ ೧೪

ನಿನ್ನ ನಡತೆ ಯುಕ್ತವಲ್ಲೆಂದು ಶಕುನಿಯು ಹೇಳಲಾಗಿ
ದುರ್ಯೋಧನನ ಪತನ.

ಅವರು ಪಿತ್ರಾರ್ಜಿತದ ರಾಜ್ಯ
ಪ್ರವರಪಾತ್ರರು ನಿನ್ನ ಸೂಯೆಯು
ಕವಲುಮನದ ಕುಠಾರಬುದ್ಧಿಯು ಕಲುಷಭಾವನೆಯು ।
ವಿವರಣವನವರೆತ್ತ ಬಲ್ಲರು
ಶಿವ ಶಿವಾ ಭುವನೈಕಮಾನ್ಯರ
ನವಗಡಿಸಲಂಗೈಸಿದೈ ಮಾಣೆಂದನಾಶಕುನಿ ‖ ೧೫

ಲೇಸು ಬಿಜಯಂಗೈಯಿ ನೀವೆ
ನ್ನಾಶಯಾಗ್ನಿ[2] ಯನೇಕೆ ಕೆಣಕುವಿ
ರಾಸುರವಿದೇಕೆನ್ನೊಡನೆ ಸೈರಿಸುವುದುಪಹತಿಯು ।
ಈಸು ನುಡಿವರೆ ಮಾವ ಯೆನುತ ಮ
ಹೀಶ ಕಂಬನಿದುಂಬಿ ನೆನಹಿನ
ಬೇಸಱಿಕೆ ಬಿಸುಸುಯ್ದು ಧೊಪ್ಪನೆ ಕೆಡೆದನವನಿಯಲಿ ‖ ೧೬

---

1 ಯ್ಯಸಲೇ ಪಾಂಡವರ ಸಿರಿಯೆಂದ, ಚ. 2 ಸಹಾ, ಕ. ಖ ಜ.

ಆಗ ಅವನನ್ನು ಎತ್ತಿ ಸಮಾಧಾನ ಪಡಿಸುವಿಕೆ.

ಎತ್ತಿದನು ಕಣ್ಣೆವೆಯ ಕಿಱು[1] ವನಿ
ಮುತ್ತುಗಳ ಕೇವಣಿಯ ಶಕುನಿ ನೃ
ಪೋತ್ತಮನೆ ಬಾ ಕಂದ ಬಾ ಯೆನುತಪ್ಪಿ ಕುಳ್ಳಿರಿಸಿ[2] ।
ಕಿತ್ತು ಬಿಸುಡುವೆನಹಿತರನು ನಿನ
ಗಿತ್ತೆನಿಂದ್ರಪ್ರಸ್ಥಪುರವನು
ಹೆತ್ತ ತಾಯ್ ಗಾಂಧಾರಿ ಸಂತಸಬಡಲಿ ಬೞಿಕೆಂದ ॥ ೧೭

ಮಾವ ಕೇಳತಿಬಲರು ಫಲುಗುಣ
ಪಾವಮಾನಿಗಳೈವರವದಿರ
ಜೀವಸಖ ಗೋವಿಂದನನಿಬರ ಗೆಲವು ಗೋಚರವೆ ।
ಸಾವುದಲ್ಲದೆ ಬೇಱೆ ತನಗಿ
ನ್ನಾವಪರಿಯಲಿ ಸಮತೆ ಸೇರದು
ಜೀವಿತವ್ಯವನಮರನಿಕರದೊಳರಸಿ ಕೊಳ್ಳೆಂದ ॥ ೧೮

ಅವರನ್ನು ಜೂಜಿನಲ್ಲಿ ಗೆದ್ದು ಸರ್ವಸಂಪತ್ತನ್ನು ನಿನಗೆ ಕೊಡಿಸುವ
ನೆಂದು ಶಕುನಿಯು ಪ್ರತಿಜ್ಞೆ.

ಗೆಲುವೆ ತಾನಂಜದಿರು ಪಾಂಡವ
ರಳವಳವ ತಾನಱಿವೆ ನೃಪನ
ಗಳದ ಧರ್ಮಜ್ಞನು ವಿಶೇಷದ್ಯೂತಲೋಲುಪನು ।
ಗೆಲುವ ಮೋಡಿಯನಱಿಯನಾತನ
ನೆಲೆಯ ಬಲ್ಲೆನು ಜೂಜುಗಾಱಱ
ಕುಲಶಿರೋಮಣಿ ತಾನೆ ಯೆಂದನು ಶಕುನಿ ಕೌರವಗೆ[3] ॥ ೧೯

ಕಪಟವನು ನೆಱೆ ಮಾಡಿ ಜೂಜಿನೊ
ಳುಪರಿಕಾರ್ಯವ ಜಯಿಸಿ ಕೊಡುವೆನು
ನಿಪುಣರೆನ್ನಂದದಲಿ ಭುವನದೊಳಿಲ್ಲ ಕೈತವದ ।

---

1 ತಿರು, ಚ.　　2 ಕೌರವನ, ಚ. ಟ.
3 ಕುರುಪತಿಗೆ, ಕ. ಖ. ಡ.

ಅಪದೆಸೆಗೆ [1] ಭಯಗೊಳ್ಳದಿರು ನಿ
ಷ್ಕೃಪೆಯಲಿರು ಗುರುಭೀಷ್ಮವಿದುರಾ [2]
ದ್ಯಪಶದರ ಕೈಕೊಳ್ಳದಿರು ನೀನೆಂದನಾಶಕುನಿ ॥ ೨೦

ಎನ್ನ ಬಹುಮಾನಾವಮಾನವು
ನಿನ್ನದೈ ಸಲೆ ಮಾವ ನೀ ಸಂ
ಪನ್ನಕೃತ್ರಿಮವಿದ್ಯನಾದರೆ ರಚಿಸು [3] ಸಾಕಿದನು ।

ಇದನ್ನು ಧೃತರಾಷ್ಟ್ರನಿಗೆ ಹೇಳೆಂದು ಶಕುನಿಯ ಹೇಳಿಕೆ.

ಅನ್ನಿಗರಿಗುಸುರದಿರು ನಮ್ಮವ
ರೆನ್ನದಿರು ವಿದುರಾದಿಗಳನುಪ
ಪನ್ನಮಂತ್ರವನಱುಹು ಭೂಪಂಗೆಂದನಾಭೂಪ ॥ ೨೧

ನೀನಱುಹು ನಿಮ್ಮಯ್ಯ ಮತಿಗೊ
ಟ್ಟಾನರೇಂದ್ರನ ಕರೆಸಿ ಕೊಟ್ಟರೆ
ಮಾನಸಿದ್ಧಿಯೆ ಸಕಲ ಧರೆಯನು ಸೇರಿಸುವೆ ನಿನಗೆ ।

ನೀನೇ ಹೇಳೆಂದು ದುರ್ಯೋಧನನ ಉತ್ತರ.

ನೀನೆ ಹೋಗೀ ಯೆನ್ನ ಕಷ್ಟ ದು
ಮ್ಮಾನವನು ಭೂಪಂಗೆ ನುಡಿದರೆ
ತಾನೆ ಕರೆಸುವನಱುಹುವೆನು ಜನಕಂಗೆ ನಿಜಮತವ [4] ॥ ೨೨

ಶಕುನಿಯು ಬಂದು ದುರ್ಯೋಧನನ ವಿಷಯವನ್ನು ಹೇಳುವಿಕೆ.

ಅಹುದು ಬಳಿಕೇನೆನುತ ಬಂದನು
ಕುಹಕಮತಿ ಧೃತರಾಷ್ಟ್ರನರಮನೆ
ಗಿಹಸಮಯದಲಿ ಹೊಕ್ಕನಂದೇಕಾಂತ ಭವನದಲಿ ।

---

1 ಜಡಿಕೆ, ಕ ಖ. ಹ
2 ಮೊದಲಾದ, ಕ. ಖ.
3 ತೊಡಕು, ಚ. ಪ.
4 ಬಳಿಕೆಂದನಾನೃಪತಿ, ಕ ಖ.

ಬಹಳಖೇದವ್ಯಸನದಲಿ ದು
ಸ್ಸಹಮನೋವ್ಯಥೆಯಲಿ ಕುಮಾರಕ
ನಿಹುದನಱಿಯಿರೆ ಭಾವ ಯೆಂದನು ಬಳಿಕ ಖಳ [1] ಶಕುನಿ ||೧೩

ಏನು ಶಕುನಿ ಮಗಂಗೆ ದುಗುಡವ
ದೇನು ಕಾರಣವಾರ ದೆಸೆಯಿಂ
ದೇನಸಾಧ್ಯವದೇನು ಭಯ ಮೇಣಾವುದಭಿಲಷಿತ ।
ಏನುವನು ವಂಚಿಸದೆ ಹೇಳೆಂ
ನಾನೆಗೇಕ್ಕೆ ಮೆಱುಕವೆನೆ ನಿಜ
ಸೂನುವನು ನೀ ಕರೆಸಿ ಬೆಸಗೊಳ್ಳೆಂದನಾಶಕುನಿ || ೧೪

ಶಕುನಿಯ ಹೇಳಿಕೆಯಂತೆ ದುರ್ಯೋಧನನನ್ನು ಕರೆಸುವಿಕೆ.

ಕರೆಸಿದನು ದುರ್ಯೋಧನನನಾ
ದರಿಸಿ ಕಟ್ಟೇಕಾಂತದಲಿ ಮೂ
ವರು ವಿಚಾರಿಸಿದರು ನಿಜಾನ್ವಯಮೂಲನಾಶನವ ।
ಭರತಕುಲನಿರ್ವಾಹಕನೆ ಬಾ
ಕುರುನೃಪಾನ್ವಯದಿನಪ ಬಾ ಯೆ
ನ್ನರಸ ಬಾ ಯೆನ್ನಾನೆ ಬಾ ಯೆಂದಪ್ಪಿದನು ಮಗನ || ೧೫

ದುಃಖಕ್ಕೆ ಕಾರಣವೇನೆಂದು ತಂದೆಯ ಪ್ರಶ್ನೆ.

ದುಗುಡವೇಕ್ಕೆ ಮಗನೆ ಹಿರಿಯೋ
ಲಗವನೀಯೆ ಗಡೇಕೆ ವೈಹಾ
ಳಿಗಳ ಬೇಟೆಗಳವನಿಪಾಲವಿನೋದಕೇಳಿಗಳ ।
ಬಗೆಯೆ ಗಡ ಬಾಂಧವರ ಸಚಿವರ
ಹೊಗಿಸೆ ಗಡ ನಿನ್ನರಮನೆಯನೀ
ಹಗಲು ನಿನಗೇಕಾಯ್ತು ಕತ್ತಲೆ ಯೆಂದನಂಧನೃಪ [2] || ೧೬

1 ನೀವೆನುತ ಬಿಸುಸುಯ್ದನಾ, ಚ.　　2 ದು ಬೆಸಗೊಂಡ, ಕ. ಖ.

ಹೇಳಲಮ್ಮೆನು ನೀವು ಧರ್ಮದ
ಕೂಟಿಯಲಿ ಸಿಲುಕಿದವರೆನ್ನನು
ಖೂಳನೆಂಬಿರಿ ಕಷ್ಟನೆಂಬಿರಸೂಯನೆಂಬಿರಲೆ ।
ಸಾಲಭಂಜಿಕೆಯಾಯ್ತು ತನ್ನಯ [1]
ಬಾಳಿಕೆಯು ಬೇಳಂಬವೇತಕೆ
ಕೇಳುವಿರಿ ನೀವೆನುತ ಸುಯ್ದನು ತುಂಬಿ ಕಂಬನಿಯ ॥ ೨೭

ಮುನಿಚರಿತ್ರರು ನೀವು ರಾಜಸ
ತನದ ಮದದಲಿ ಲೋಕಯಾತ್ರೆಯ
ನನುಸರಿಸುವುವರಾವು ನೀವೇ ಭೋಗನಿಸ್ಪೃಹರು ।
ಅನುದಿವಸ ರಾಗಿಗಳು ನಾವೆ
ಮ್ಮನುಮತವ ಪಾಲಿಸುವೆರಾರೆಂ
ದೆನುತ ಸುಯ್ದನು ಮರುಗಿ ಬೈದನು ತನ್ನ ದುಷ್ಕೃತವ ॥ ೨೮

ಈಸು ಕಳವಳವೇನು ಚಿತ್ತದ
ಬೈಸಿಕೆಗೆ ಡೊಳ್ಳಾಸವೇಕೆ ವಿ
ಳಾಸಕೂಣೆಯುವೇನು ಹೇಳಾ ನೆನಹಿನಭಿರುಚಿಯ ।
ವಾಸಿಗಳ ಪರಿವಿಡಿಯ [2] ನೆನ್ನಲಿ
ಸೂಸಬಾರದೆ ನಿನ್ನ ಹರುಷಕೆ
ಪೈಸರವದೇನೆಂದು ಬೆಸಗೊಂಡನು ಸುಯೋಧನನ ॥ ೨೯

ಪಾಂಡವರ ವೈಭವವೆ ಕಾರಣವೆಂದು ಹೇಳಿ ವೈಭವವನ್ನು ಹೇಳಿದುದು.

ಏನನೆಂಬೆನು ಬೊಪ್ಪ ಕುಂತೀ
ಸೂನುಗಳ ಸಾಮರ್ಥ್ಯಪಣವನು
ದಾನವಾರಿಯ ಹಾಸುಹೊಕ್ಕಿನ ಸೌಖ್ಯಸಂಗತಿಯ ।

---

1 ನಮ್ಮಯ, ಖ. 2 ಪೈಸರವ, ಕ.

ತಾ ನಪುಂಸಕನಾದ ಪರಿಯನ
ದೇನ ವಿಸ್ತರಿಸುವೆನು ಲಜ್ಜಾ
ಮಾನಿನಿಗೆ ತನ್ನೊಕ್ಕತನವಿಂದಳಿದು ಹೋಯ್ತೆಂದ ॥ ೩೦

ನೆಗೆದ ಬುಗುಟಿದೆ ಹಣೆಯಲವರೋ
ಲಗದ ಸಭೆಯಲಿ ನೆನದ ಸೀಱೆಯ
ತೆಗೆಸಿ ಕೊಟ್ಟರು ತಂದು [1] ಮಡಿವರ್ಗದ ನವಾಂಬರವ ।
ಬೆಗಡುಗೊಳಿಸಿದರೆನ್ನ ನವರೋ
ಲಗದ ಗಣಿಕೆಯರವರ ಸೂಳಿನ
ನಗೆಯ ನೆನೆನೆನೆದೆನ್ನ ಮನ ಜರ್ಝರಿತವಾಯ್ತೆಂದ ॥ ೩೧

ಇದಕೆ ಕಾರಣವೇನು ಹಣೆ ನೊಂ
ದುದಕದೇನು ನಿಮಿತ್ತವೆನಲಾ
ಸದನದಲಿ ಮಯನಿತ್ತ ಸಭೆಯನು ದೇವರಱಿಯಿರಲೆ ।
ಮುದದಿನಾಧರ್ಮಜನು ಘನಸಂ
ಪದದಲೋಲಗವಿತ್ತನಾದಾ
ಪದಿ ನಿಜಾನುಜಮಂತ್ರಿಸಚಿವಪಸಾಯಿತರು ಸಹಿತ ॥ ೩೨

ಆಮಹಾಸಭೆ ದೇವನಿರ್ಮಿತ
ರಾಮಣೀಯಕವಿವಿಧರತ್ನ
ಸ್ತೋಮತೇಜಃಪುಂಜರಂಜಿತ ನಯನವೀಧಿ [2] ಯಲಿ ।
ಸಾಮದಲಿ ನಮ್ಮನು ಯುಧಿಷ್ಠಿರ
ಭೂಮಿಪತಿ ಕರೆಸಿದನು ತನ್ನ
ಧಾಮವಿಭವವನೆನಗೆ ತೋಱಲು ತತ್ಸಭಾಸ್ಥಳಕೆ ॥ ೩೩

ಹರಹಿನಲಿ ಹಿರಿದಾಯ್ತು ಕೆಂದಾ
ವರೆಯ ಬನ ಬೇಱೊಂದುತಾವಿನ
ಲುರುವಣೆಯ ಬೆಳುದಿಂಗಳೌಕಿದುದೊಂದುತಾಣದಲಿ ।

---

1 ತಮ್ಮ, ಕ. ಖ.   2 ರಶ್ಮಿ, ಕ. ಖ.

ಹರಿವ ಯಮುನಾನದಿಯನಲ್ಲಿಗೆ
ಕರೆಸಿದವರಾರೆನಲು ಮಣಿಬಂ
ಧುರದ ಬೆಳಗಿನ ಲಹರಿ ಮುಱಿದುದು ತನ್ನ ಜಾಣುಮೆಯ ॥ ೨೪

ಹೊಕ್ಕ ಸಾಲಲಿ ಹೊಳೆವ ಮಣಿರುಚಿ
ಮುಕ್ಕುಳಿಸಿದುವು ಕಂಗಳನು ನಡೆ
ದಿಕ್ಕಲನ ನೋಡಿದರೆ ಮುಱಿದೊಳಸರಿದುವಾಲಿಗಳು ।
ಉಕ್ಕುವಮಲಚ್ಛವಿಗಳಲಿ ಮನ
ಸಿಕ್ಕಿ ಹೊಳಬಟ್ಟದುದು ವಿವೇಕವ
ಡೊಕ್ಕರಿಸಿ ಕೆಡಹಿದುವು ಬಹುವಿಧರತ್ನಕಾಂತಿಗಳು ॥ ೨೫

ಹಿಡಿದುವೆನ್ನೊಹೆಯನು ಮಣಿರುಚಿ
ಯೆಡತರದೊಳಿಕ್ಕಿದುವು ಭಿತ್ತಿಯ
ಬಿಡೆಯದಲಿ ಝಳಪಿಸುವ ನೀಲದ ಮಣಿಯ ಲಹರಿಯಲಿ ।
ತಡಿಯ [1] ಕಾಣೆನು ತಳಿತಕಾಂತಿಯ
ಕಡಲ ವಿಮಲಸ್ಫಟಿಕಜಲದಲಿ
ಮಿಡುಕಲಂಜಿದುವಂಘ್ರಿಗಳು ನರನಾಥ [2] ಕೇಳೆಂದ ॥ ೨೬

ಸ್ಥಳವೆ ಜಲರೂಪದಲಿ ಜಲವೇ
ಸ್ಥಳದ ಪಾಡಿನಲಿದ್ದುದದು ಕೆಲ
ಬಲದ ಭಿತ್ತಿಯ ಕಂಭ ಕಂಭದ ನಡುವೆ ಭಿತ್ತಿಗಳ [3] ।
ಹೊಳವನೇ [4] ಕಂಡೆನು ವಿವೇಕದ
ಕಳವು ಚಿತ್ತದ ಸೆಱೆ ದುಹಾರದೊ
ಳುಱಿದುವಕ್ಷಿಗಳಂತು ಸೋತೆನು ತಾತ ಕೇಳೆಂದ ॥ ೨೭

---

1 ಕಡೆಯ, ಡ.
2 ತಳವೆಂದರಸ, ಡ.
3 ಳು, ಕ, ಚ.
4 ಹೊಳೆವುದನೆ, ಡ.

ಪಾಂಡವರ ಮನೆಯಲ್ಲಿ ತನಗಾದ ಅವಮಾನವನ್ನು ದುರ್ಯೋಧನನು ಹೇಳುವಿಕೆ.

ಮುಂದೆ ವಿಮಲಸ್ಫಟಿಕಭೂಮಿಯ
ನೊಂದು ಠಾವಿನಲೀಕ್ಷಿಸುತ ಕೊಳ
ನೆಂದು ಬಗೆದೆನು ನಿಂದು ಸಂವರಿಸಿದೆನು ಮುಂಜೆಱಗ ।
ಅಂದು ದ್ರೌಪದಿಸಹಿತ ನಾರೀ
ವೃಂದ ಕೈಗಳ ಹೊಯ್ದು ಮಿಗೆ ಘೋ
ಷೆಂದು ನಕ್ಕುದು ನೊಂದು ತಲೆವಾಗಿದೆನು ಲಜ್ಜೆಯಲಿ ॥ ೩೮

ಊಹೆಯಲಿ ತಡವರಿಸಿ ಹೆಜ್ಜೆಯ
ಗಾಹುಗತಕದೊಳಿಡುತ ಕಾಂತಿಯ
ಸೋಹನಱಿಯದೆ ಬೀದಿಯಲಿ ಕಂಡೆನು ಸರೋವರವ ।
ಆಹರಿಬವನು ಮುಱಿವೆನೆಂದದ
ನೂಹಿಸಿದೆನಾಸ್ಫಟಿಕವೆಂದು
ತ್ಸಾಹಿಸಲು ನೀರಾಯ್ತು ನನೆದೆನು ನಾಭಿದಘ್ನದಲಿ [1] ॥ ೩೯

ಮತ್ತೆ ಘೋಷೆಂದರು ನೃಪಾಲನ
ಮತ್ತಕಾಶಿನಿಯರು ಯುಧಿಷ್ಠಿರ
ನಿತ್ತ ದಿವ್ಯದುಕೂಲವನು ತಡಿಗಡಱಿ ತೊಡಚಿದೆನು ।
ಬತ್ತಿತೆನ್ನಭಿಮಾನಜಲನಿಧಿ
ಮತ್ತೆ ಮಾರಿಯ ಮಸಕವನು ನೀವ್
ಚಿತ್ತವಿಸಿರೇ ಬೊಪ್ಪ ಯೆಂದನು ಕೌರವರ ರಾಯ ॥ ೪೦

ನಂಬಿ [2] ಸಿದುದೊಂದೆಡೆಯ ಬಾಗಿಲು
ಬಿಂಬಿಸಿತು ಭಿತ್ತಿಯಲಿ ತತ್ಪ್ರತಿ
ಬಿಂಬವೆಂದಾನಱಿಯೆನದ ಹಾಯ್ದನು ಚೌಕದಲಿ ।
ಎಂಬೆನೇನನು ಹೊರಟೆ ನಗುವ ನಿ

---

1 ಪರಿಯಂತ, ಡ.	2 ಲಂಬಿ, ಖ. ಡ,

ತಂಬಿನಿಯರನು ಭೀಮಪಾರ್ಥರ
ಡಂಬರವ ಕಂಡಸುವ ಹಿಡಿದೆನು ನೋಡಿಕೊಳ್ಳೆಂದ || ೪೧

ನೊಂದುದೀಹಣೆ ಮನದೊಳಗೆ ಮಿಗೆ
ನೊಂದೆನವದಿರ ನಗೆಗೆ ನಡೆದೆನು
ಮುಂದಣೋವರಿಬಾಗಿಲನು ಕಂಡೆನ್ನ ಚಿತ್ತದಲಿ |
ಹಿಂದೆ ಹೆದಱದ [1] ಭಂಗವೇ ಸಾ
ಕೆಂದು ಸುಪ್ರೌಢಿಯಲಿ ಬಾಗಿಲ
ನೊಂದು ಠಾವಿನೊಳಱಸಿ ತಡವರಿಸಿದೆನು ಭಿತ್ತಿಗಳ || ೪೨

ನಗೆಗೆ ನಗೆ ಕುಂಟಣಿ ವಿವೇಕದ
ಹೊಗೆಗೆ ಹೊಗೆ ಸಖಿಯಾದುದಲ್ಲಿಯು
ಹಗರಣಿಗ ನಾನಾದೆನದು ನೋಟಕದ ಜನವಾಯ್ತು |
ನಗುವವರ ಜರದನೆ ಯುಧಿಷ್ಠಿರ
ನಗೆಯು ಮಱೆದೆನೆ ಬೊಪ್ಪ ನಿಮ್ಮಯು
ಮಗನವಸಾಧರೂಪವಿದು ಚಿತ್ತೈಸಿ ನೀವೆಂದ || ೪೩

ಒಡ್ಡವಿಸಿತೆನ್ನಾಟ ನಗೆಯೊಳ
ಗಡ್ಡಬಿದ್ದಳು ಪಾಂಡುಪುತ್ರರ
ಒಡ್ಡಿ ಬಿಂಕದಲವರು ಬಿರಿದರು ಭೀಮಫಲುಗುಣರು |
ಖಡ್ಡಿಗರುವೆನ್ನಿಂದ ರೋಷದ
ಗೊಡ್ಡು ತಾನಾದೆನು ವಿಘಾತಿಯು
ಒಡ್ಡಿ ನಿನ್ನದು ಬದುಕಿದೆನು ಧೃತರಾಷ್ಟ್ರ ಕೇಳೆಂದ || ೪೪

ಇದರಿಂದ ಅವರಲ್ಲಿ ನನಗೆ ಕ್ರೋಧವೆಂದು ಹೇಳುವಿಕೆ.

ಸಿಂಗಿಯನು ಬಿತ್ತಿದೆನು ಪಾಂಡವ
ರಂಗದಲಿ ತತ್ಫಲದ ಬೆಳಸಿನ
ಸಿಂಗಿಯಲಿ ನಾ ಸಾವೆನಲ್ಲದೊಡಗ್ನಿ ಕುಂಡದಲಿ ||

1 ಹೆದಱಿದ, ಕ ಖ

ಭಂಗಿಸುವೆನೀಕ್ಷಣದೊಳನ್ನನು
ನುಂಗಬೇಹುದು ವಹ್ನಿ ವೋಣೀ
ಗಂಗೆಯಲಿ ಬಿದ್ದೊಡಲ ನೀಗುವೆನೆಂದು ಬಿಸುಸುಯ್ದ ॥ ೪೫

ಆಯುಧಿಷ್ಠಿರಸಹಿತ ನೀನೇ
ರಾಯನಾಗಿರು ಮೋಣು ನವಿಶ್ವಾ
ತಾಯಿ ಸಂತಸಬಡಲಿ ದುಶ್ಶಾಸನನ ಪಟ್ಟದಲಿ ।
ರಾಯತನವೆಮಗಿಂದ್ರಲೋಕದ
ಲಾಯದಲಿ ದಿಟವೆಂದು ನುಡಿವರು
ಜೋಯಿಸರು ಸಾಕವರ ವಚನ ನಿರರ್ಥವಲ್ಲೆಂದ ॥ ೪೬

ಪುರದೊಳೆಂಬತ್ತೆಂಟುಸಾವಿರ
ಧರಣಿಯಮರರು ನಿತ್ಯಪಡಿಯುವ
ರರಸ ಕೇಳ್ಕೆ ಹತ್ತುಸಾವಿರಹೊನ್ನತಳಿಗೆಯಲಿ ।
ವರಯತೀಶರು ಹತ್ತುಸಾವಿರ
ವರಮನೆಯಲುಂಬುದು ನೃಪಾಲಾ
ಧ್ವರದ ಸಿರಿಯನು ನೀವೆ ಕಂಡಿರೆ ಯೆಂದನಾ ಭೂಪ ॥ ೪೭

ದುರ್ಯೋಧನನ ದುರ್ಬುದ್ಧಿಗಾಗಿ ತಂದೆಯ ಚಿಂತೆ.

ಕೇಳಿದನು ಬಿಸುಸುಯ್ದನಕಟ ವಿ
ಟಾಳಿಸಿತೆ ಕೌರವನ ಬುದ್ಧಿ ವಿ
ಟಾಳಸಂಗತಿಯಾಯ್ತಲಾ ಪಿಸುಣಾರ ಕೆರಳಿಚದು [1] ।
ಕೇಳು ಮಗನೇ ಧರ್ಮಪುತ್ರನ
ಮೇಲೆ ಮುನಿವರೆ ರಾಜಋಷಿ ನರ
ಪಾಲಮಾತ್ರನೆ ಶಿವ ಮಹಾದೇವೆಂದನಾಭೂಪ ॥ ೪೮

ಸತಿಯರಲಿ [2] ನಿಮ್ಮವ್ವೆ ಸುಪತಿ
ವ್ರತೆ ಮಹಾಖಳ ನೀನು ಬೀಜ

1 ಕೊಂಡೆಯರ ಮೇಳದಲಿ ಡ. 2 ಸತಿಯಲಾ, ಡ.

ಸ್ಥಿತಿಯುಲೂಣೆಯುವಿಲ್ಲ ನಿನ್ನಯ ಬುದ್ಧಿದೋಷವಿದು ।
ಕೃತಕವೋ ಸಹಜವೊ ನವೀನ
ಸ್ಥಿತಿಯ ಕಂಡೆನು ಶಿವ ಶಿವಾ ದು
ರ್ಮತಿಗಳೇನನು ನೆನೆಯರೆಂದನು ಸುಯ್ದು ಧೃತರಾಷ್ಟ್ರ ॥ ೪೯

ಇದು ಅಯುಕ್ತವೆಂದು ಮಗನಿಗೆ ತಂದೆಯ ಉಪದೇಶ.

ಪಾಂಡುವಿನ ಮಕ್ಕಳುಗಳಾರಾ
ಪಾಂಡುವಿನೊಳೆನ್ನಲ್ಲಿ ಭೇದವ
ಕಂಡೆಲಾ ನೀನವರಿಗೇನಪ್ರಾಪ್ತವೇ ಧರಣಿ ।
ಉಂಡು ಬದುಕುವ ಬಹಳ ಭಾಗ್ಯರ
ಕಂಡಸೂಯವ ಬಡುವ ಖಲರನು
ಭಂಡರೆನ್ನದೆ ಲೋಕ ನಿನಗಿದು ಸಾವ್ಯವಲ್ಲೆಂದ ॥ ೫೦

ಧೃತರಾಷ್ಟ್ರನನ್ನು ಕುರಿತು ದುರ್ಯೋಧನನ ನಿಷ್ಠುರವಾಕ್ಯಗಳು.

ಅಹುದು ಬೊಪ್ಪ ವೃಥಾಭಿಮಾನದ
ಕುಹಕಿ ಹೋಗಲಿ ನಿಮ್ಮ ಚಿತ್ತಕೆ
ಬಹ ಕುಮಾರರ ಕೂಡಿ ನಡೆವುದು ಪಾಂಡುನಂದನರ ।
ಮಹಿಯ ಹಂಗಿಂಗೋಸುಗವೆ ಬಿ
ನ್ನಹವ ಮಾಡಿದೆ ತನಗೆ ಭಂಡಿನ
ರಹಣಿ ಬಂದುದು ಸಾಕಲೇ ಸೊಗಸಾಯ್ತು ಲೇಸೆಂದ ॥ ೫೧

ತಾಯೆ ನೇಮವ ಗೊಂಡೆನಯ್ಯಾ
ಗಾಯುಧಿಷ್ಠಿರನಾತ್ಮಜನಲೇ
ವಾಯುಸುತನರನಕುಲಸಹದೇವರು ಕುಮಾರರಲೆ ।
ಈ ಯುಗದಲಿನ್ನವರ ಸಂತತಿ
ದಾಯಭಾಗಿಗಳಾಗಿ ಬದುಕಲಿ
ರಾಯರಿಲ್ಲಾ ಮತ್ತೆ ನಮ್ಮನು ರಕ್ಷಿಸುವರೆಂದ ॥ ೫೨

ಅರಸ ಧರ್ಮಜ್ಞನು ಯುಧಿಷ್ಠಿರ
ಹಿರಿಯಮಗನುತ್ತಮನು ಪವನಜ
ನರರು ವಿನಯಾನ್ವಿತರು ನೀವೇ ಪುತ್ರವತ್ಸಲರು ।
ಧರಣಿಗಿನ್ನಾವ್ಯಸಲೇ ನಾ
ರ್ದರು ಕುಮಾರರು ಹೊರಗೆ ನಿಮ್ಮಯ
ಕರುಣವೇ ಸಾಮ್ರಾಜ್ಯವೆಮ್ಮನು ಬೀಳುಕೊಡಿ ಯೆಂದ ॥ ೫೩

ಆಯುಚಕಲವಭಿಮಾನ ಹೋಗಲಿ
ಸಾಯ[1] ಬೇಕೆಂಬರೆ ನೃಪಾಲರ
ಬಾಯ ತಂಬುಲ ತಿಂದು[2] ಹೊರುವೆವು ಬೆಂದ ಬಸುರುಗಳ ।
ಆಯುಚಕಲವಾಚಂದ್ರತಾರಕ
ಕಾಯುವಧ್ರುವವೆಂಬೊಡಿದಕೆ ಸ
ಹಾಯುವಿದಲಾ ಕಾಳಕೂಟಕಠೋರನದಿಯೆಂದ ॥ ೫೪

ಅರಸನಭ್ಯುದಯವನು ಭೀಮನ
ಧರಧುರವನರ್ಜುನನ ಬಿಂಕವ
ನರಸಿಯಾಟೋಪವನು ಮಾದ್ರೀಸುತರ ಸಂಭ್ರಮವ ।
ಹೊರೆಯ ಧೃಷ್ಟದ್ಯುಮ್ನ ದ್ರುಪದಾ
ದ್ಯರ ವಿಡಂಬವ ಕಂಡು ಕಂಡೆದೆ
ಬಿರಿದುದಳುಕಿದೆವಾವು ನೀವ್[3] ಸಂತೈಸಲರಿದೆಂದ ॥ ೫೫

ಧೃತರಾಷ್ಟ್ರನು ಅದನ್ನು ಕೇಳಿ ಸುಮ್ಮನೆ ಯಿರುವಿಕೆ.

ಕರಗಿದಳು ಗಾಂಧಾರಿ ಕಂಬನಿ
ದುರುಗಲಲಿ ಧೃತರಾಷ್ಟ್ರನೆದೆ ಜ
ರ್ಝರಿತವಾದುದು ಮಗನ ಮಾತಿನ ಮುಸಲಹತಿಗಳಲಿ ।
ಸುರಿವ ನಯನಾಂಬುಗಳ ಮೂಗಿನ
ಬೆರಳ ತೂಗುವ ಮಕುಟದವನೀ
ಶ್ವರನು ಮೌನದೊಳಿರ್ದನೊಂದುವಿಘಳಿಗೆಮಾತ್ರದಲಿ ॥ ೫೬

---

1 ಕಾಯ, ಚ. 2 ದಿಂದ, ಚ. ಟ. 3 ಬಿರಿದುದಳುಕಿದೆನಳುಕಿದೆನು, ಚ.

ಆಗ ದುರ್ಯೋಧನನು ಕೋಪದಿಂದ ಹೊರಟು ಹೋಗುವಿಕೆ.

ಮಾತು ಸೊಗಸದಲಾ ವೃಥಾ ನೀ
ವೇತಕೆನ್ನನು ಕರೆಸಿದಿರಿ ನಿ
ಮ್ಮಾತಗಳು ಭೀಮಾರ್ಜುನರು ಸಹಿತೀಮಹೀತಳವ ।
ತಾತ ನೀವಾಳುವುದು ತಾಯೆ ಸು
ನೀತನಾಧರ್ಮಜನು ಧರ್ಮ ವಿ
ಘಾತಕರು ನಾವೆಮ್ಮ ಕಳುಹುವುದೆನುತ ಹೊಱವಂಟ ॥ ೫೭

ಧೃತರಾಷ್ಟ್ರನು ಮಗನನ್ನು ಕರೆಸುವಿಕೆ.

ಎಲೆಗೆ ಕರೆಯಾ ಪಾಪಿಕೌರವ
ಕುಲಕುಠಾರನ ನಿನ್ನ ಮಗನೊಡ
ಲಱವುದೈ ಸಲೆ ಪಾಂಡುಪುತ್ರರ ವೈರಬಂಧದಲಿ ।
ತಿಳುಹಿ ತಾ ಯೆನಲಾಕೆ ಶಕುನಿಯು
ಕಳುಹಿ ಕರಸಿದೊಡಾತ ಮರಳಿದ
ನಳಲುದೊಱೆಯಲಿ ಮೂಡಿ ಮುಳುಗಿದನೆಂದು ಧೃತರಾಷ್ಟ್ರ ॥ ೫೮

ಅಸಾಧ್ಯರಾದ ಪಾಂಡವರನ್ನು ಯಾವರೀತಿಯಿಂದ ಜಯಿಸುವುದು ಯೆಂದು ಧೃತರಾಷ್ಟ್ರನ ಪ್ರಶ್ನೆ.

ಏನ ನೆನೆದೈ ಮಗನೆ ಕುಂತೀ
ಸೂನುಗಳ ರಾಜ್ಯಾಪಹಾರದೊ
ಳೇನು ಬುದ್ಧಿವಿಲಾಸವಾವುದು ಕಾರ್ಯಗತಿ ನಿನಗೆ ।
ದಾನದಲಿ ಮೇಣ್ಸಾಮದಲಿ ಭೇ
ದಾನುಮತದಲಿ ದಂಡದಲಿ ನೀ
ನೇನ ನಿಶ್ಚೈಸಿರುವೆ ಹೇೞೆನ್ನಂಜಬೇಡೆಂದ ॥ ೫೯

ಹಿಂದೆ ವಿಷವಿಕ್ಕಿದೆವು ಮಡುವಿನೊ
ಳಂದು ಬಿಸುಟರೆ ಮುೞುಗಿ ಸುಖದಲಿ
ಮುಂದು ಹೊಱವಂಟರು ಮಹಾಗ್ನಿಯು ಭವನಭಂಗದಲಿ ।

ಬಂದು ಕೂಡಲು ಸೀಯದನಿಬರು
ಬಂದರಿವು ಮೊದಲಾದಕೃತ್ರಿಮ
ದಿಂದ ಪಾಂಡವರಟ್ಟಿದುದಿಲ್ಲದಕೇನು ಹದನೆಂದ ॥ ೬೦

ಭೇದಿಸುವೊಡಿನ್ನಾವುಪಾಯವು
ಕಾದಿ ಗೆಲಲೆಮಗರಿದು ಮೀಱಿದ
ರಾದುರುಳಪಾಂಡವರು ಸ್ವೈರಿಸೆ ನೀನವರ ಸಿರಿಯು ।
ಸಾಧಿಸುವುದಿನ್ನಾವಪರಿಯಲಿ
ಹೋದ ಹಗೆ ಮಿಗೆ ಬಲಿವುದೆಂದು ವಿ
ಷಾದದಲಿ ಮನ ನೊಂದು ಮತವೇನೆಂದನವನೀಶ ॥ ೬೧

ದ್ಯೂತದಲ್ಲಿ ಜಯಿಸಬಹುದೆಂದು ಶಕುನಿಯ ಉತ್ತರ.

ನೀವು ಚಿತ್ತೈಸಿದರೆ ನೆತ್ತದೊ
ಳಾವು ಸೋಲಿಸಿ ಕೊಡುವೆವವರನು
ನೀವು ಕರೆಸುವುದಿಲ್ಲಿಗುಚಿತಪ್ರೀತಿವಚನದಲಿ ।
ನಾವು ಜಾಣರು ಜೇಯ ನೆತ್ತದ
ಜೀವಕಳೆಯಲಿ ಧರ್ಮಸುತನಿದ
ನಾವ ಹವಣೆಂದಱಿಯನಾತನ ಜಯಿಸಬಹುದೆಂದ ॥ ೬೨

ಅದನ್ನು ಒಪ್ಪಿ ವಿದುರನಿಗೆ ಹೇಳಿ ಮಾಡುವೆನೆಂದು
ತಂದೆಯು ಹೇಳುವಿಕೆ.

ಅಹುದು ತಪ್ಪೇನಿದುವೆ ಸಾಧನ
ವಹುದು ವಿದುರನ ಬುದ್ಧಿಗಭಿಮತ
ವಹೊಡೆ ಕರೆಸುವೆವೈಸಲೇ ಬೆಸಸುವೆನು ವಿದುರಂಗೆ ।
ಕುಹಕವಾತನೊಳಿಲ್ಲ ನೋಡುವೊ
ಡಿಹಪರತ್ರದ ಹಿತವನಿದಸಿ
ರ್ವಹಿಸಿ ಕೊಡುವೊಡೆ ಮಂತ್ರವೆಂದನು ಮಗಗೆ ಧೃತರಾಷ್ಟ್ರ ॥ ೬೩

ಈಕಾರ್ಯಕ್ಕೆ ವಿದುರನು ಬೇಡವೆಂದು ಮಗನು ಹೇಳಿದುದು.

ಖೂಳರಲಿ ಸತ್ಕಲೆಗಳನು ಕಿವಿ
ಗೇಳದವನಲಿ ಮಂತ್ರಬೀಜವ
ನಾಲಿಯಿಲ್ಲದವಂಗೆ ರೂಪುವಿಲಾಸವಿಭ್ರಮವ |
ಹೇಳುವಂತಿರೆ ನಿಮ್ಮ ವಿದುರನ
ಕೇಳಿಸಿದರಾಕಾರ್ಯಗತಿಗೆ ವಿ
ಶಾಳವಾಗದೆ ಬೊಪ್ಪ ಯೆಂದನು ನಗುತ ಕುರುರಾಯ || ೬೪

ಅಱುಹಿದರೆ ವಿದುರಂಗೆ ಕಾರ್ಯವ
ಮುಱಿವನಾತನು ಬಳಿಕ ನಿಮ್ಮಯ
ಕಿಱುಯತಮ್ಮನ ಮಕ್ಕಳಿಗೆ ಕೂಡಿ ಹಸ್ತಿನಾಪುರವ |
ಕಱುಬುಗಳು ನಾವ್ ನೂಱುಮಕ್ಕಳು
ಹೊಱಗೆ ಬದುಕುವೆವೈಸಲೇ ಬಳಿ
ಕುಱುವಮಕ್ಕಳ ಕೂಡಿ ಸುಖದಲಿ ರಾಜ್ಯವಾಳೆಂದ || ೬೫

ವಿದುರನನ್ನು ಬಿಟ್ಟರೆ ನಿನ್ನಭಿಮತ ಸಿದ್ಧಿಸುವುದಿಲ್ಲವೆಂದು
ತಂದೆಯು ಹೇಳಿಕೆ.

ಪಾರಲೌಕಿಕದುಚಿವನೈಹಿಕ
ದೋರೆಪೋರೆಯನಿಂದು ಬಲ್ಲವ
ರಾರು ಹೇಳಾ ವಿದುರನಲ್ಲದೆ ನಮ್ಮ ಪೈಕದಲಿ |
ಸಾರವಾತನ ಮಾತು ನಯವಿ
ಸ್ತಾರಸಹಿತಿಹುದಲ್ಲಿ ನಂಬುಗೆ
ದೂರವಲ್ಲೆನಗಱಿಯೆ ನೀನಿಲ್ಲೆಂದನಂಧನೃಪ || ೬೬

ತಿಳುಹಿ ವಿದುರನನವರ ಕರೆಯಲು
ಕಳುಹುವೆನು ಯಮಸೂನು ನಮ್ಮಯ
ಬಲುಹಿನಲಿ ತಾ ಬಹನೆ ಭೀಮಾರ್ಜುನರ ನೀನಱಿಯ [1] |

---

1 ಭೀಮಾರ್ಜುನರು ಕಿಱುಕುಳರೇ, ಚ.

ತಿಳಿವರವರೀತನ ನುಡಿಯು ನಿ
ರ್ಮಲಿನವೆಂದು ನಿಧಾನವಿದು ನೀ
ಕಳವಳಿಸದಿದ್ದರೆ ಮನೋರಥವಹುದು ನಿನಗೆಂದ ॥ ೬೭

ಹೇಗಾದರೂ ಕರೆಸಿ ಕೊಟ್ಟರೆ ಸಾಕೆಂದು ಮಗನ ಹೇಳಿಕೆ.

ಸಾಕು ಕರುಣದೊಳಮ್ಮ ಸಲಹುವ್ರೊ
ಡಾಕುಮಾರರ ಕರೆಸಿ ಕೊಟ್ಟರೆ
ಸಾಕು ಮತ್ತೊಂದಿಹುದಲೇ ಪಾಂಚಾಲನಂದನೆಯು ।
ನೂಕಿ ಮುಂದಲೆವಿಡಿದು ತೊತ್ತಿರೊ
ಳಾಕೆಯನು ಕುಳ್ಳಿರಿಸಿದಂದು ವಿ
ಶೋಕನಹೆನಾದಿವಸದಲಿ ಕೃತಕೃತ್ಯ ತಾನೆಂದ ॥ ೬೮

ಆಗ ಗಾಂಧಾರಿಧೃತರಾಷ್ಟ್ರರ ಯೋಚನೆ.

* ಹೋಗು ನೀನೆಂದವನ ಕಳುಹಿ ತ
ದಾಗಮನಯತ್ನೈಕಚಿಂತಾ
ಸಾಗರದೊಳೋರಂತೆ ಮುೞುಗಿದನಂದು ಧೃತರಾಷ್ಟ್ರ ।
ಈಗಳಿನ ಸುಖಕಳುಪಿ ಮೇಗಣ
ತಾಗನಱಿಯನು ಕಂದನಿದಕಿ
ನ್ನೇಗುವೆನು ಗಾಂಧಾರಿ ಹೇೞಿದಕೆಂದು ಬಿಸುಸುಯ್ದ * ॥ ೬೯

ಅವರು ಕಪಟವನಱಿಯರೀತನ
ಹವಣ ನೀನೇ ಕಂಡೆ ಕರೆಸಿದೊ
ಡವರು ನಿಲ್ಲರು ತೋಹೆಯಲಿ ಬೞಿಸಂದಮೃಗದಂತೆ ।

---

* ಆಗಲದಕೇನಾಯ್ತು ವಿದುರನ
ನೀಗ ಕಳುಹುವೆ ಪಾಂಡುಪುತ್ರರ
ವೇಗದಲಿ ಕರೆಸುವೆನು ನಿನ್ನಭಿಮತವ ಸಲಿಸುವೆನು ।
ಹೋಗಿ ನೀವೆಂದವರ ಕಳುಹಿದೊ
ಡಾಗ ಮನೆಗೈತಂದು ಚಿಂತಾ
ಸಾಗರದೊಳದ್ದಂತೆ ಮುಳುಗಿದನಂದು ಧೃತರಾಷ್ಟ್ರ ॥ ಖ.

ಎಮಗೆ ಬಹುದಪಕೀರ್ತಿಯಿಾಗಿ
ನ್ನವರ ಕುಹಕವ ಲೋಕವಱಿಯದು
ಶಿವ ಶಿವಾ ಯೆಂದಱಲಿ ಮಱುಗಿದನಂದು ಧೃತರಾಷ್ಟ್ರ ॥ ೨೦

ಮುಱಿವೆನೇ ಮುನಿದಿವರು ನೂರ್ವರು
ಕೊಱೆವರೆನ್ನನು ತೊಡಕಿಸುವೆನೇ
ತಱಿದು ಬಿಸುಡುವರವರು ಕೌರವಶತವನಲುಕಿದೊಡೆ[1] ।
ಹೊಱಗೊಳಗೆ ಹದನಿದು ನಿಧಾನಿಸ
ಲಱಿಯೆನೆನ್ನ ಸುವಿನಲಿ ಹೃದಯದ
ಸೆಱೆ ಬಿಡದು ಶಿವ ಯೆನುತ ಕಱಗಿದನಂದು ಧೃತರಾಷ್ಟ್ರ ॥ ೨೧

ಕೌರವರನ್ನಾದರೂ ಹಿಡಿ ಪಾಂಡವರನ್ನಾದರೂ ಹಿಡಿ ಎಂದು
ಗಾಂಧಾರಿಯು ಹೇಳಿಕೆ.

ಏಕೆ ನಿಮಗೀಚಿಂತೆ ಯಿಂದೆರ
ಡೌಕಿದುವು ದುಷ್ಕಾರ್ಯಸಂಧಿ ವಿ
ವೇಕಶಕ್ತಿಯಲೊಂದ ಮೋಹರಿಸೊಂದು ಬಾಹೆಯಲಿ ।
ಈಕುರುವ್ರಜನೂಱ ಹಿಡಿ ಕುಂ
ತೀಕುಮಾರರ ಬಿಸುಡು ತನುಜರ
ನೂಕಿ ಹಿಡಿ ಪಾಂಡವರನೆಂದಳು ಪತಿಗೆ ಗಾಂಧಾರಿ ॥ ೨೨

ಆಗ ಸಭಾನಿರ್ಮಾಣೋದ್ಯೋಗ.

ಐಸಲೇ ತಾನಾದುದಾಗಲಿ
ಲೇಸ ಕಾಣೆನು ನಿನ್ನ ಮಕ್ಕಳ
ವಾಸಿಗಳ ವಿಸ್ತಾರ ಮೆಱೆಯಲಿ ಹಲವು ಮಾತೇನು ।
ಆಸಭೆಯ ಸರಿಸದ ಸಭಾವಿ
ನ್ಯಾಸಶಿಲ್ಪಿಗರಾರೆನುತ ಧರ
ಣೀಶ ಕರೆಸಿದನುರುಸಭಾನಿರ್ಮಾಣಕೋವಿದರ ॥ ೨೩

---

[1] ಶತಕವನು ಬಟಿಕ್ಕ, ಚ.

ತೆಗಿಸಿ ಭಂಡಾರದಲಿ ಬಹುವ
ಸ್ತುಗಳನಿತ್ತನು ತರುಶಿಲಾಕೋ
ಟಿಗಳ ತರಿಸಿದನುರುಸಹಸ್ರಸ್ತಂಭಡಂಬರವ ।
ಝುಗಝುಗಿಪ ಬಹುವಮೌಲ್ಯಮುಕ್ತಾ
ಳಿಗಳನುರುತರರತ್ನಲಹರೀ
ಸ್ಥಗಿತದಿಗ್ಭಿತ್ತಿಗಳನನುಪಮರತ್ನರಾಜಿಗಳ ॥ ೨೪

ಮಾಡಿತಗ್ಗದ ಸಭೆ ಸುಧರ್ಮೆವ
ನೇಡಿಸುವ ಚೆಲುವಿನಲಿ ಪುರದಲಿ
ರೂಢಿಸಿತು ಬಳಿಕಂಧನೃಪನೇಕಾಂತಭವನದಲಿ ।

ವಿದುರನಿಗೆ ದ್ಯೂತಸಂಗತಿಯನ್ನು ಹೇಳುವಿಕೆ.

ಕೂಡಿಕೊಂಡು ಕುಲೋಪಘಾತದ
ಕೇಡುಗರ ಕಲ್ಪನೆಯ ಕಲುಷದ
ಜೋಡಿಯನೆ ನಿಶ್ಚೈಸಿ ವಿದುರಂಗಱುಹಿದನು ಕರೆಸಿ ॥ ೨೫

ವಿದುರ ಹೇಳೈ [1] ಪಾಂಡವರ ಸಂ
ಪದಕೆ ಸರಿಯೋ ಮಿಗಿಲೊ ಸಭೆ ತಾ
ನಿದು ವಿಶೇಷವಲಾ ಸಮಸ್ತಕ್ಷತ್ರವಿಭವದಲಿ ।
ಇದಱೊಳೋಲಗವಿತ್ತು ಹರುಷಾ
ಸ್ಪದರು ಕುರುನೃಪರಲಿ ಸುಖದ್ಯೂ
ತದಲಿ ರಮಿಸಲಿ ಸೇರಿ ಬದುಕಲಿ ಪಾಂಡುಸುತರೆಂದ ॥ ೨೬

ಅವರ ವಿಭವವನವರ ಯಾಗೋ
ತ್ಸವವನಿಂದ್ರಪ್ರಸ್ಥದಲಿ ಕಂ
ಡೆವು ಮನೋರಥಸಾಯ್ತು ಬಳವಿಗೆ ಪಾಂಡುಸಂತತಿಯು [2] ।
ಅವರು ಹಸ್ತಿನಪುರಿಗೆ ಬಂದು

1 ಕೇಳೈ, ಚ. 2 ನಂದನರ, ಚ.

ತ್ಸವದೊಳೀಸಭೆಯಲಿ ಸುಖದ್ಯೂ
ತವನು ಸುಖಿಸಲಿ ಕರೆದು ತಾ ಕುಂತೀಕುಮಾರಕರ [1] ॥ ೬೭

ವಿದುರನು ಅದನ್ನು ಕೇಳಿ ಯುಕ್ತವಲ್ಲವೆಂದು ಹೇಳುವಿಕೆ.

ಮಾತು ಹೊಲಸಿನ ಗಂಧವಾಗಿದೆ
ಭೀತಿರಸದಲಿ ಮನ ಮುಳುಗಿತೀ
ಪ್ರೀತಿ ಮಾರಿಯ ಮುಸುಕನುಗಿವುದನಾರು ಕಲಿಸಿದರು ।
ಕೈತವದ ಕಣಿ ನಿನ್ನ ಮಗನಿಗೆ
ಸೋತೆಲಾ ಶಿವ ಶಿವ ಸುಖಾಂಗ
ದ್ಯೂತವೇ ಹಾ ಹಾ ಯೆನುತ ತಲೆದೂಗಿದನು ವಿದುರ ॥ ೬೮

ಹಾ ಮರುಳೆ ಕೆಣಕುವರೆ ಫಲುಗುಣ
ಭೀಮರನು ಮಿಗೆ ಹೆಚ್ಚಿ ಬಳೆದು
ದ್ದಾಮಸಿರಿಯಿದು ಹಸ್ತಿನಾಪುರವಕಟ ಕೆಡಿಸಿದೆಲ ।
ಕ್ರೈಮಗುಚದೇ ವಿಭವವಿದು ನಿ
ರ್ನಾಮರಾರೋ ಬಿತ್ತಿದರು ಕುರು
ಭೂಮಿಯಲಿ ವಿಷಬೀಜವನು ಹಾ ಯೆನುತ ಚಿಂತಿಸಿದ ॥ ೬೯

ವಿದುರನಿಗೆ ಧೃತರಾಷ್ಟ್ರನ ಸಮಾಧಾನೋಕ್ತಿ.

* ವಿದುರ ಬೆಂಬೀಳದಿರು ಭೀಮಾ
ರ್ಜುನರ ಬಿಂಕದ ಹದನ ಬಲ್ಲೆನು
ಮೊದದಿ ತಾನೇ ಮುನಿಯಲಾಪೆನೆ ಹೇಳು ತನಯರಿಗೆ * ।
ಇದು ಮಹಾಸಭೆಯಿಲ್ಲಿ ಮೇಳಾ
ಪದಲಿ ಕುರುಪಾಂಡವರು ಸುದ್ಯೂ
ತದಲಿ ರಮಿಸುವೊಡೇನು ಹೊಲ್ಲಹವೆಂದನಂಧನೃಪ ॥ ೭೦

---

1 ರಮಿಸಲಿ ಸೇರಿ ಬದುಕಲಿ ಪಾಂಡುಸುತರೆಂದ, ಚ.

* ವಿದುರ ಬೆಂಬೀಳದಿರು ಬಿಂಕದ
ಹದನ ಬಲ್ಲೆನು ಭೀಮಪಾರ್ಥರ
ಮುದವ ಖಿಮುಸುವೆ ಮುನಿಯಲಾಪೆನೆ ಹೇಳು ತನಯರಿಗೆ, ಚ

ದ್ಯೂತವು ಕುಲನಾಶಕರವೆಂದು ವಿದುರನ ವಚನ.

ಮೊದಲಲಿದು ಸುದ್ಯೂತವವಸಾ
ನದಲಿ ವಿಷಮದ್ಯೂತದಲಿ ನಿಲು
ವುದು ನಿವಾರಣವುಂಟೆ ಮರ್ಮವನಿರಿದ ಸಬಳದಲಿ ।
ತುದಿಗೆ ತಾಸಿದಪಥ್ಯ ಕುರುವ
ರ್ಗದಲಿ ನಾಶನಬೀಜವಿದು ನಿಮ
ಗಿದರೊಳಗೆ ಸೊಗಸಾದುದೇ ಕೈಕೊಂಡೆ ನಾನೆಂದ ॥ ೮೧

ಆಗ ಪಾಂಡವರನ್ನು ಕರೆತರಲು ವಿದುರನನ್ನು
ಕಳುಹಿಸುವಿಕೆ.

ಕರೆದು ತಾನೀನವರ ನಾವುಪ
ಚರಿಸುವಂದವ ನೋಡು ನಿನ್ನಯ
ಕರಣವೃತ್ತಿಗೆ ಕಠಿನವಹುವೇ ನಮ್ಮ ಮಾತುಗಳು ।
ದುರುಳರವರಿವರೆಂಬರನಾದ
ದರಿಸದಿರು ನೀ ಪೋಗು ಪಾಂಡವ
ಧರಣಿಪರನೊಡಗೊಂಡು ಬಾ ಯೆಂದಟ್ಟಿದನು ನೃಪತಿ ॥ ೮೨

ಅರುಹಿದನು ಭೀಷ್ಮಂಗೆ ಗುರುಕೃಪ
ರಱಿದರಿಂನಪಮೃತ್ಯುವೇನೆಂ
ದಱಿಯುದಿನ್ನುತ್ಸಾಹಶಕ್ತಿಗೆ ಮನವ ಮಾಡಿತಲ ।
ಹರಿದುದೇ ಕುರುವಂಶಲತೆ ಹೊ
ಕ್ಕಱಿದನೇ ಧೃತರಾಷ್ಟ್ರನೀ ಬೇ
ಸಱಿದಿವರನು ಕರೆದು ತಾ ಹೋಗೆಂದರವರಂದು । ೮೩

ವಿದುರನು ಪಾಂಡವರ ಬಳಿಗೆ ಬರುವಿಕೆ

ಶುಭಮುಹೂರ್ತವಿಶೇಷಲಗ್ನದೊ
ಳಿಭಪುರಿಯು ಹೊಱವಂಟು ಶರಸ
ನ್ನಿಭನು ಬಂದನು ಹಲವುಪಯಣದಲಿವರ ಪಟ್ಟಣಕೆ ॥

ಆಗ ವಿದುರನನ್ನು ಮಾನಿಸಿ ಸರ್ವರ ಕ್ಷೇಮವನ್ನು ಕೇಳಿದುದು.

ರಭಸ ಮಿಗಲಿದಿರ್ಗೊಂಡು ತಂದರು
ಸಭೆಗೆ ಮಾನ್ಯಯಥೋಪಚಾರ
ಪ್ರಭವಸತ್ಕಾರದಲಿ ಕೇಳ್ದರು ಕುಶಲಸಂಗತಿಯ ॥ ೮೪

ಧರಣಿಪತಿ ಗಾಂಗೇಯ ಗೌತಮ
ಗುರುತನುಜಗುರುಕರ್ಣಸೌಬಲ
ಕುರುನೃಪತಿಯನುಜಾತ್ಮಜರು ಗಾಂಧಾರಿ ಭಾನುಮತಿ ।
ವರಸಚಿವಸಾವಂತಪುರಜನ
ಪರಿಜನಂಗಳ ಕುಶಲವನು ವಿ
ಸ್ತರಿಸಿದನು ವಿದುರನು ಮಹೀಪತಿಗಾಪ್ತಬಾಂಧವರ ॥ ೮೫

ಪಾವುಡಂಗಳನಿತ್ತು ಭೂಪನ
ನೋಡಿದನು ನಾನಾಕಥಾಸಂ
ಭಾವನಾನಂತರದೆ ಮಜ್ಜನಭೋಜನಾದಿಗಳ ।
ಆವಿವಿಧಸತ್ಕಾರದಲಿ ದಿವ
ಸಾವಸಾನವ ಕಳೆದು ಬಳಿಕ ಸ
ಭಾವಳಯದಲಿ ಪಾಂಡುಸುತರಿಗೆ ನುಡಿದನಾವಿದುರ ॥ ೮೬

ಪಾಂಡವರನ್ನು ಕುರಿತು ನೀವು ಬರಲು ಧೃತರಾಷ್ಟ್ರನ
ಅಪ್ಪಣೆಯಾಗಿದೆ ಯೆಂದು ಹೇಳುವಿಕೆ.

ಧರಣಿಪತಿ ಬೆಸಸಿದನು ನೀವೈ
ವರು ಕುಮಾರರು ರಾಜಸೂಯಾ
ಧ್ವರಮಹಾವ್ರತದೇಕಭುಕ್ತಾದಿಯಲಿ ಬಳಲಿದಿರಿ ।
ವರಸಭೆಯ ರಚಿಸಿದಿರಿ ಹಸ್ತಿನ
ಪುರಕೆ ಬಿಜಯಂಗೈದು ವಿಭವೋ
ತ್ಕರದ ವಿಮಳದ್ಯೂತದಲಿ ರಮಿಸುವುದು ನೀವೆಂದ ॥ ೮೭

ನೋಡುವುದು ಬಾಂಧವರ ನಿಮ್ಮಡಿ
ಮಾಡುವುದು ಸೌಖ್ಯವನು ಭಯದಲಿ
ಬಾಡುವುದಲೇ ರಿಪುನೃಪಾಲರ ಸಮರಜಯಬೀಜ |
ಜೋಡಿಸುವುದುಚಿತದಲಿ ಕೀರ್ತಿಯ
ಝಾಡಿಯನು ನಿಮ್ಮಭ್ಯುದಯ ಬಟ
ಕೇಡಿಸುವುದೈ ದುಂದುಮಾರದಿಲೀಪದಶರಥರ || ೮೮

ನಂಬಿಸುವ ನಿಮ್ಮಯ್ಯನಿದ ಬೇ
ಡೆಂಬುವರು ಗುರುಭೀಷ್ಮರುಚಿದವ
ರಂಬಿನೋಪಾದಿಯಲಿ ನಿಲುವರು ಹಲವು ಮಾತೇನು |
ಡಂಬಕರು[1] ನೃಪಕರ್ಣಶಕುನಿಗ
ಳೆಂಬಿವರು ನಿಮ್ಮೊಡನೆ ವಚನಾ
ಡಂಬರವೆ ಬಹುದುಂಟೆ ಬಿಜಯಂಗೈಯ್ಯಿ ಸೀವೆಂದ || ೮೯

ಆಗ ಬರುವುವೆಂದು ಧರ್ಮಸುತನ ಉತ್ತರ.

ಕರೆಸುವನು ಧೃತರಾಷ್ಟ್ರ ಗಡ ನ
ಮ್ಮರಸನಲಿ ಧೃತರಾಷ್ಟ್ರನಲಿ ನಮ
ಗೆರಡು ಮನವೇ ಭಾವಭೇದವೆ ಪಾಂಡುಬೊಪ್ಪನಲಿ |
ವರವೆ ದೊರಕಲಿ ಮೇಣು ಶಾಪವೆ
ಬರಲಿ ಭಯವಿಲ್ಲೆಮಗೆ ಬೊಪ್ಪನ
ಕರಣಕೃತಿಗೆ ಹಸಾದವೆಂದನು ಧರ್ಮಸುತ ನಗುತ || ೯೦

ದ್ಯೂತದ ವಿಷಯವನ್ನು ಹೇಳಿ ಆಲೋಚನೆಯಿಂದ ಕಾರ್ಯದಲ್ಲಿ
ಪ್ರವರ್ತಿಸು ಎಂದು ವಿದುರನ ವಾಕ್ಯ.

ದ್ಯೂತ ಮೃಗಯಾವ್ಯಸನ ಪಾರು
ಷ್ಯಾತಿಶಯ ಮಧುಪಾನ ಕಾಂತಾ
ಪ್ರೀತಿ ದಂಡವಿಘಾತಿ ದೂಷಣವರ್ಥಸಂಗತಿಯು |

1 ಶಂಬರರು, ಚ.

ಜಾತಸಪ್ತವ್ಯಸನವಿವು ಸಂ
ಪ್ರೀತಿಕರ ಮೊದಲಲಿ ವಿಪಾಕದೊ
ಳಾತು ಕೆಡಿಸುವ ಹದನನಱಿದಿಹುದೆಂದನಾವಿದುರ । ೯೧

ಖಳರು ಕೌರವರಕ್ಷಧೂರ್ತರ
ತಿಲಕ ಶಕುನಿ ವಿಕಾರಿ ಗುರು ದು
ಶ್ಶಳೆಯ ಪತಿ ದೌರ್ಜನ್ಯಮುಖದೀಕ್ಷಿತನು ಕಲಿ ಕರ್ಣ ।
ಉಚಿದ ಭೀಷ್ಮದ್ರೋಣರೇ ನಿ
ಷ್ಫಲವಿಧಾನರು ನಿಮ್ಮ ಬೊಪ್ಪನ
ಬಳಕೆ ಕನ್ನಡಿ ನೋಡಿಕೊಳ ನೀವೆಂದನಾವಿದುರ ॥ ೯೨

ಪ್ರಕಟವೈ ಸಲೆ ಕರ್ಣಕೌರವ
ಶಕುನಿಗಳ ದುಶ್ಚೇಷ್ಟೆ ಭೀಷ್ಮಾ
ದ್ಯಕುಟಿಲರು ಸಲ್ಲರು ಸುಯೋಧನಮಂತ್ರಸಂಗತಿಗೆ ।
ಮುಕುರಪದನೆಮ್ಮಯ್ಯನೆಂಬುದು
ವಿಕಳವಲ್ಲಲೆ ವಿದುರ ಪರಿಪಾ
ಲಕನಲೇ ಧೃತರಾಷ್ಟ್ರನಾತನ ನಂಬಿ ಬಹೆವೆಂದ ॥ ೯೩

ಕರೆಸಿ ನಿಮ್ಮಯ ಮಂತ್ರಿಜನಮು
ಖ್ಯರ ಪಸಾಯಿತರ ಕೇಳುವುದು ಮನ
ದೊರೆಗೆ ತೂಕಕೆ ಬಹರೆ ಭೀಮಾರ್ಜುನರ ಮತವಿಡಿದು ।
ಅರಸ ನಿಶ್ಚೈಸುವುದೆನಲು ನೀ
ಮರುಳ ವಿದುರ ಭವದ್ವಚೋವಿ
ಸ್ತರಕೆ ಪಡಿಸಣವುಂಟೆ ಶಿವ ಶಿವ ಯೆಂದನಾಭೂಪ ॥ ೯೪

ಹೋಹುದೇನಭಿಮತವೆ ಧೂರ್ತ
ವ್ಯೂಹವೆದು ಭೀಷ್ಮಾದಿಹಿರಿಯರು
ಸಾಹಸಿಕರೈಸಲೆ ರಹಸ್ಯಕೆ ಸಲ್ಲರವರುಗಳು ।

ಕಾಹುರನು ಕೌರವನು ಸಮರೋ
ತ್ಸಾಹಶಕ್ತಿಗೆ ಠಾವದಲ್ಲ
ವ್ಯಾಹತವೆ ಮತವೆಂದು ಭೀಮಾದಿಗಳ ಬೆಸಗೊಂಡ ‖ ೯೫

ಜೀಯ ಬಿನ್ನಹವಿಂದು ದೇಹ
ಚ್ಛಾಯೆಗುಂಟೇ ಬೇಱೆ ಚೇಷ್ಟೆನ
ವಾಯಿಯೇ ನಿಮ್ಮನಿಬರಿಗೆ ರಾಜಾಭಿಮಾನದಲಿ ।
ನೋಯೆ ನೋವುದು ನಿಮ್ಮ ದೇಹದ
ಬೀಯದಲಿ ತಾ ಬೀಯುವಹುದೆ
ವ್ಮಾಯತವು ಸ್ವಾತಂತ್ರ್ಯವೆಮಗಿಲ್ಲೆಂದನಾಭೀಮ ‖ ೯೬

ಆರ್ಯನಾದ ಧೃತರಾಷ್ಟ್ರನ ಮಾತನ್ನು ನಂಬಿ ಬರುವೆವೆಂದು
ಧರ್ಮರಾಯನ ಉತ್ತರ.

ಕರೆಸುವನು ಧೃತರಾಷ್ಟ್ರನೆಮ್ಮನು
ಕರವ ಮಣಿಹ ಸುಯೋಧನಾದಿಯ
ಮರುಳುಗಳ ಮಾತೇನು ಹಿರಿಯರು ನೀವಲಾ ನಮಗೆ ।
ಧರಣಿ ಯಿದು ಶಾಶ್ವತವೆ ತಂದೆಗೆ
ಹಿರಿಯನಾಧೃತರಾಷ್ಟ್ರನಾಜ್ಞೆಯ
ಶಿರದೊಳಾಂತೆನು ಬಹೆನೆನುತ ನಿಶ್ಚೈಸಿದನು ನೃಪತಿ ‖ ೯೭

ಇರುಳು ನೂಕಿದರುದಯದಲಿ ಭೂ
ಸುರರ ಕರೆಸಿದರಮಳಸಂವ
ತ್ಸರದ ಸುಮುಹೂರ್ತದಲಿ ಹೊಯ್ಸಿದರಂದು ಹೊಱಗುಡಿಯ ।
ಪುರದ ಕಾಹನು ಸಚಿವಸಾವಂ
ವಂತರಿಗೆ ನೇಮಿಸಿ ಸಕಲದಳವೋ
ಹರದ ದೆಕ್ಕಾಳವನು ನೋಡುತ್ತ ಪುರವ ಹೊಱವಂಟ ‖ ೯೮

ಬಿಗಿದರೆಂಚೆಯು ಹೊಮ್ಮಿಣಿಯು ಹೊರ
ಜಿಗಳ ಝೂಡಿಯು ಪಕ್ಕಘಂಟೆಯು
ಝುಗೆಯು ಮೊಗರಂಬದ ವಿಳಾಸದ ಮಣಿಯು ಝುಳವಟೆಯು ।
ಬಿಗಿವ ಕೂರಂಕುಶದ ಮಾವಂ
ತಿಗನ ಸನ್ನೆಗೆ ಕುಸಿದ ದಂತಿಯು
ಹೆಗಲ ಹೊಂಗದ್ದುಗೆಗೆ ಬಿಜಯಂಗೈದನವನೀಶ । ೯೯

ತಳಿತುವಿನನುದಯದಲಿ ತಾರಾ
ವಳಿಗಳದ್ಭುತವೆನಲು ಮುಕ್ತಾ
ವಳಿಯ ಧವಳಚ್ಛತ್ರವೆಡಬಲಕೊಲೆವ ಚೌರಿಗಳ ।
ಕೆಲಬಲದ ಭೀಮಾರ್ಜುನರ ಗಜ
ದಳದ ಮುಂದೆ ಕುಮಾರವರ್ಗದ
ಸುಳಿವುಗಳ ಸಂರಂಭದಲಿ ಹೊಱವಂಟನಾಭೂಪ ॥ ೧೦೦

ಮುಂದೆ ಮೋಹರದೆಗೆದು ನಡೆದುದು
ಸಂದಣಿಸಿ ನಕುಲಾದಿಭೂಪರ
ಹಿಂದೆ ಮಣಿಕೇವಣದ ದಡ್ಡಿಯು ಬಿಗಿದ ಬೀಯಗದ ।
ಗೊಂದಣದ ಹೆಮ್ಮಕ್ಕಳದ್ದಸೆ
ಯಂದಣದ ಸಂದಣಿಗಳಲಿ ನಡೆ
ತಂದುದನಿಬರ ರಾಣಿವಾಸದ ದಂಡಿಗೆಗಳಂದು ॥ ೧೦೧

ಉಡಿಗೆಗಳ ದೇಸಿಯು ವಿಳಾಸದ
ತೊಡಿಗೆಗಳ ಮಾಳಿಯು ನವಾಯಿಯು
ಮುಡಿಗಳೆಡಬಲದೋರೆನೋಟದ ಬಳ್ಳಿ ಬೆಳಗುಗಳ ।
ಕಡು ಬೆಮರ ತನುಪರಿಮಳದೊಳಡೆ
ವಿಡದ ಗಗನೋದರದ ಗರುವೆಯ
ರಡಸಿದರು ದ್ರುಪದಾತ್ಮಜೆಯ ದಂಡಿಗೆಯು ಬಳಿಸಿನಲಿ ॥ ೧೦೨

ಭೂರಿಭೇರಿಯ ವಾದ್ಯರವ ಕೈ
ವಾರಿಗಳ ಕಳಕಳದೊಳಡಗಿತು
ನಾರಿಯರ ನೇವುರದ ಮೊಱಗಿನೊಳಡಗಿದುದು ರಭಸ।
ಆರು ಹೊಗಳುವರಾವಿಭವವಿ
ಸ್ತಾರಪವಣನು ಪಯಣಗತಿಯಲಿ
ಭೂರಮಣನೈತಂದು ಹೊಕ್ಕನು ಹಸ್ತಿನಾಪುರವ ॥　೧೦೩

ಹದಿಮೂರನೆಯ ಸಂಧಿ ಮುಗಿದುದು.

ಹದಿನಾಲ್ಕನೆಯ ಸಂಧಿ.

ಸೂಚನೆ.

ವೀತರಾಗದ್ವೇಷಭಯನನ
ಜಾತಶತ್ರುವನಕಟ ಕಪಟ
ದ್ಯೂತದಲಿ ಕುರುರಾಯ ಗೆಲಿದನು ಧರ್ಮನಂದನನ ॥

ಪಾಂಡವರು ಹಸ್ತಿನಾವತಿಗೆ ಬಂದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಪಾಂಡವನೃಪರನರಮನೆ
ಬೀಳುಕೊಂಡುದು ವಿಳಸದಿಂದ್ರಪ್ರಸ್ಥಪುರಸಹಿತ।
ಮೇಲೆ ಮೊಱಗುವ ದುರ್ನಿಮಿತ್ತವ
ನಾಲಿಸದೆ ಸೋದರರು ಸಹಿತ [1] ನಿ
ಮೀಲಿತಾಂತಃಕರಣಹತರೈತಂದರಿಭಪುರಿಗೆ ॥　೧

ಆಗ ಅಪಶಕುನಗಳು.

ಹರಡಿ ಕೆದಱಿತು ಬಲದಲುದಯದ
ಲುರಿಯಲೊದಱಿತು ಹಸುಬನೆಡದಲಿ

1 ನಾಲಿಸಿದರೇ ದೈವದೋಷನಿ, ಚ.

ಕರಿಯು ಹಕ್ಕಿಯು ತಾರುಹಂಗನ ವಾಮದುಡಿಗೆಗಳ |
ನರಿಗಳೊದಱಿದುವಿದಿರಿನಲಿ ಮೋ
ಹರವ ಮೊಲನಡಹಾಯ್ದು ವಾನೆಗ
ಳರಿಚಿ ಕೆಡೆದುವು ಮುಗ್ಗಿದುವು ತೇರುಗಳ ವಾಜಿಗಳು || ೨

ಈಗ ಪ್ರಯಾಣವನ್ನು ನಿಲ್ಲಿಸೆಂದು ವಿಪ್ರರ ನುಡಿಗಳು.

ಶಕುನಗತಿ ಸಾಮಾನ್ಯವಿದು ಕಂ
ಟಕದ ನೆಲೆ ಜನ್ಮದಲಿ ಸಪ್ತಾ
ಧಿಕದೊಳಿದ್ದರು ಸೌರಿಗುರುಭೌಮಾಬ್ಜಬಾಂಧವರು |
ವಿಕಳ ದೆಸೆ ನಿಮ್ಮಡಿಗೆ ವೈರಿ
ಪ್ರಕರಕುನ್ನತದೆಸೆ ಮಹೀಪಾ
ಲಕಶಿರೋಮಣಿ ಪುರಕೆ ಮರಳೆಂದರು ಮಹೀಸುರರು || ೩

ಧರ್ಮರಾಯನು ಅದನ್ನುಪೇಕ್ಷಿಸುವಿಕೆ.

ಮರಳಬಹುದೇ ದೈವವಿಕ್ಕಿದ
ಕೊರಳ ಕಣ್ಣಿಯು ಕುಣಿಕೆ ಯಾರಲಿ
ಹರಿವುದೈ ಮನ್ನಿಸುವುದಿಲ್ಲ ಮೌಹೂರ್ತಿಕರ ನುಡಿಯು |
ಕರೆಸುವನು ಧೃತರಾಷ್ಟ್ರ ನಮಗೀ
ನರಿಮೊಲಂಗಳ ಹಕ್ಕಿ ಹರಿಣಿಯು
ಕರಹವೇಗುವುವೆಂದು ಜಱಿದನು ಶಕುನಕೋವಿದರ || ೪

ಹಸ್ತಿನಾವತಿಯ ಪ್ರವೇಶ.

ಹರಿದರರಸಾಳುಗಳು ರಾಯನ
ಬರವನಱುಹಿದರಂದು ಭೂಪತಿ
ಪುರದೊಳಗೆ ಗುಡಿಗಟ್ಟಿಸಿದನಂದತುಳಹರುಷದಲಿ |
ಸುರನದೀಜದ್ರೋಣಗೌತಮ
ಗುರುಜಕರ್ಣಜಯದ್ರಥಾದಿಗ
ಳುರುವಿಭವದಿಂದಿದಿರುಗೊಂಡರು ಹೊಗಿಸಿದರು ಪುರವ || ೫

ಸೇನೆ ಬಿಟ್ಟುದು ಪುರದ ಬಹಿರು
ದ್ಯಾನವೀಧಿಗಳೊಳಗೆ ಕುಂತೀ
ಸೂನುಗಳು ಸುಮ್ಮಾನ ಮಿಗೆ ನಡೆತಂದರೊಲವಿನಲಿ [1] ।
ಆನಗರದೊತ್ತೊತ್ತಿಗಳ ನಾ
ಮಾನಿನಿಯರುಪ್ಪಾರತಿಯ ವಿಮ [2]
ಳಾನನದ ಬೆಳದಿಂಗಳೌಕಿತು [3] ಬಿಸಿಲ ಬೇಗೆಗಳ ॥ ೬

ಪೌರನಾರೀಜನದ ಸೇಸೆಗ
ಳಾರತಿಯ ತಳಿಗೆಗಳ ಲಾಜೆಯ
ತೋಱಮುತ್ತಿನ ಮಳೆಯ ಮಂಗಳರವದ ಕಳಕಳದ ।
ಓರಣದ ತೋರಣದ ಗುಡಿಗಳ
ಚಾರುವೀಧಿಗಳೊಳಗೆ ಬಂದರು
ಭೂರಮಣರುತ್ಸಾಹದಲಿ ಧೃತರಾಷ್ಟ್ರನರಮನೆಗೆ ॥ ೭

ಇಟ್ಟಿದರಾನೆಯನಮಳರತ್ನಾ
ವಳಿಯ ಕಾಣಿಕೆಗಳನು ಸುಱಿದರು
ಖಳಶಿರೋಮಣಿಗೆಱಗಿದರು ಧೃತರಾಷ್ಟ್ರಭೂಪತಿಗೆ ।
ಕುಲತಿಲಕ ಬಾ ಕಂದ ಭರತಾ
ವಳಿಲಲಿತಮಾಕಂದ ಧರ್ಮ
ಸ್ಥಳಲತಾವಳಿಕಂದ ಬಾ ಯೆಂದಪ್ಪಿದನು ನೃಪತಿ ॥ ೮

ಪಾಂಡವರಲ್ಲಿ ಧೃತರಾಷ್ಟ್ರನ ಆದರ.

ಬಾ ಮಗನೆ ರಿಪುರಾಯಮನ್ಮಥ
ಭೀಮ ಬಾರೈ ಭೀಮ ರಣನಿ
ಸ್ಸೀಮ ಫಲುಗುಣ ಬಾ ನಕುಲ ಸಹದೇವ ಬಾರೆನುತ ।
ಪ್ರೇಮರಸದಲಿ ಬೇಱೆ ಬೇಱೆ

---

1 ಸೂನುಗಳುನಡೆತಂದಧೃತರಾಷ್ಟ್ರನರಮನೆಗೆ, ಖ.
2 ನಮ, 3 ರಾನನೇಂದುಪ್ರಭೆ ವಿಭಾಡಿಸೆ, ಚ

ದ್ಧಾಮಭುಜನಪ್ಪಿದನು ಚಿತ್ತದ
ತಾಮಸದ ತನಿಬೀಜ ಮುಸಕಿತು ಬಾಹ್ಯರಚನೆಯಲಿ ॥ ೯

ಹರಸಿದನು ಕಾಣಿಕೆಯ ಕೊಂಡೈ
ಯ್ವರ ಮಹಾಸತಿಯನು ಕುಮಾರರ
ನರಸಿಯರನನಿಬರ ವಿಚಿತ್ರರಚನೆಯಲಿ ಮನ್ನಿಸಿದ ।
ಅರಸ ಗಾಂಧಾರಿಯನು ವಂದಿಸುತ
ದರುಶನವ ಕೊಡು ಹೋಗೆನಲು ಕಡು
ಹರುಷವಿಗಿಲ್ಯೆತಂದರಾಗಾಂಧಾರಿಯರಮನೆಗೆ ॥ ೧೦

ಬಂದು ಕಾಣಿಕೆಗೊಟ್ಟು ವಂದಿಸಿ
ನಿಂದರನಿಬರು ತನ್ನ ಕೆಳದಿಯ
ರಿಂದ ತರಿಸಿದಳಾರತಿಯನುಪ್ಪಾರತಿಯನೊಲಿದು ।
ಚಂದದೈಸಾವಿರದ ಸಂಖ್ಯೆಯ
ರಿಂದುಮುಖಿಯರು ತಳಿಗೆಯಾರತಿ
ಸಂದಣಿಸಿದರು ಜಯಸಬುದ ಝೋಂಪಿಸಿದುದಂಬರವ ॥ ೧೧

ಅರಸಿ ಕಾಣಿಸಿಕೊಂಡಳೀನೃಪ
ರರಸಿಯನು ಸುಕುಮಾರಕರನವ
ರರಸಿಯರ ಸಖಿಯರ ವಿಳಾಸಿನಿಯರ ಪಸಾಯ್ತಿಯರ ।
ತರಿಸಿ ಕೊಟ್ಟಳು ಬೇಱಬೇಱನಿ
ಬರಿಗೆ ಯುಡುಗೊಱೆ ಗಂಧಮಾಲ್ಯಾ
ಭರಣವನು ರಾಜೋಪಚಾರವಿಳಾಸದೇಸಿಯಲಿ ॥ ೧೨

ಬೀಳುಕೊಟ್ಟಳು ಬಳಿಕ ಕುರುನೃಪ
ನಾಲಯಕೆ ನಡೆತಂದು ಕುಂತಿಯ
ಕಾಲಿಗೆಱಗಿದನವರನುಚಿತೋಕ್ತಿಯಲಿ ಮನ್ನಿಸಿದ ।

ಆಗ ದುರ್ಯೋಧನಾದಿಗಳ ಸಂತೋಷ.

ಬಾಲಮೃಗ ವೊಳಗಾಯ್ತಲಾ ಕೊಡು
ಕೋಲನೆಂದರು ನಗುತ ಮನದಲಿ
ಕೌಳಿಕದ ಕುಹಕಿಗಳು ಕೌರವಕರ್ಣಶಕುನಿಗಳು ॥ ೧೩

ಖಳರ ಹೃದಯದ ಕಾಳಕೂಟದ
ಹುಳುಕ ಬಲ್ಲರೆ ಮಾನ್ಯರವದಿರು
ಲಲಿತಮಧುರವಚೋವಿಳಾಸಕೆ ಮರುಳಗೊಂಡರಲೆ ।
ಅಳುಪಿದರೆ ಮಧುಕರನ ಮಱಿ ಬೊ
ಬ್ಬುಲಿಯು ಬನದೊಳಗೇನಹುದು ನೃಪ
ತಿಲಕರಿದ್ದರು ಬೇಱೆ ರಚಿಸಿದ ರಾಜಭವನದಲಿ ॥ ೧೪

ಬಂದು ಕಂಡುದು ನಿಖಿಳಪುರಜನ
ವೆಂದು ಕಾಣಿಕೆಗೊಟ್ಟು ಕೌರವ
ನಂದನರು ಸಚಿವರು ಪಸಾಯ್ತನಿಯೋಗಿ ಮಂತ್ರಿಗಳು ।
ಸಂದಣಿಸಿದುದು ಕವಿಗಮಕಿನಟ
ವೃಂದಮಾಗಧಮಲ್ಲಗಾಯಕ
ವೃಂದದೀನಾನಾಥರೋಲೈಸಿದರು ಧರ್ಮಜನ ॥ ೧೫

ಆದಿವಸವನು ಮಧುರಗೇಯ ವಿ
ನೋದದಲಿ ಕವಿವಾದಿವಾಗ್ಮಿ ವಿ
ನೋದದಲಿ ನೂಕಿದರು ಮಜ್ಜನಭೋಜನಾದಿಯಲಿ ।

ದುಃಸ್ವಪ್ನದರ್ಶನ.

ಆದುದುತ್ಸವವೆಂದಿನಿರುಳುದಿ
ನಾದಿಯಲಿ ಕಂಡನು ಕನಸ ಪ್ರಾ
ಸಾದಶಿಖರವನುರುಳಿಬಿದ್ದುದನಟವಿಮಧ್ಯದಲಿ ॥ ೧೬

ಆಗ ಧೌಮ್ಯರ ಅಭಯೋಕ್ತಿ.

ಅರಸನುಪ್ಪವಡಿಸಿದನವನೀ
ಶ್ವರವಿಹಿತಸತ್ಕ್ರಿಯೆಗಳನು ವಿ
ಸ್ತರಿಸಿದನು ದುಃಸ್ವಪ್ನಕುಂತವಿಭಿನ್ನಚೇತನನು ।
ಕರೆಸಿ ಧೌಮ್ಯಂಗಱುಹಲತಿದು
ಸ್ತರದ ಕನಸಿದು ಶಾಂತಿಕರ್ಮವ
ಪುರದೊಳಗೆ ರಚಿಸುವೆನಂಜದಿರೆಂದನಾಧೌಮ್ಯ ॥ ೧೭

ಪುರದೊಳಲ್ಲಿಯು ಶಾಂತಿ ನಾರದ
ನೊರೆದನುತ್ಪಾತಪ್ರಬಂಧದ
ಹೊರಿಗೆಯನು ನಿಮ್ಮೈಶ್ವರ್ಯವಿಧ್ವಂಸಕರವೆಂದು ।
ಇರುಳು ನಾನಾಸ್ವಪ್ನಕಾನನ
ಗಿರಿಪರಿಭ್ರಮಣೈಕಚಿಂತಾ
ಭರಿತನಾದೆನು ದೈವಕೃತವುಪಭೋಗ್ಯವೆಮಗೆಂದ ॥ ೧೮

ಕೃಷ್ಣ ಸಹಾಯನಾಗಿರಲು ಚಿಂತೆಬೇಡೆಂದು ಧೌಮ್ಯರ ವಾಕ್ಯ.

ಅರಸ ಚಿಂತೆಯಿದೇಕೆ ಯಾದವ
ರರಸನನುನಯವಿರಲು ಭಾಗ್ಯಕೆ
ವರಸಮಾಗಮಸುಧರ್ಮಸತ್ಯಕೆ ಕೊಱತೆ ಯಿಲ್ಲೆಂದು ।
ವರವಸಿಷ್ಠಕುಮಾರನಾಭೂ
ವರನ ತಿಳಿಹಿದನತ್ತ ಕರೆಯಾ
ಧರಣಿಪನನೆಂದಂಧನೃಪ ದೂತರಿಗೆ ನೇಮಿಸಿದ ॥ ೧೯

ಧೃತರಾಷ್ಟ್ರನ ಅಪ್ಪಣೆಯಂತೆ ಧರ್ಮಾದಿಗಳು ಬರುವಿಕೆ.

ಜನಪ ಕಳುಹಿದ ದೂತರಿವರರ
ಮನೆಗೆ ಬಂದರು ಜೀಯ ಧೃತರಾ
ಷ್ಟ್ರನ ಸಮಯವಾಯಿತ್ತು ನಿಮ್ಮಡಿ ಬಿಜಯಮಾಡುವುದು ।
ಎನಲು ತನ್ನಕುಮಾರರನು ತ

ನ್ನನುಜರನು ಸಚಿವಪ್ರಧಾನರ
ನನಿಬರನು ಕರೆಸಿದನು ನೃಪ ಹೊಱವಂಟನರಮನೆಯ ॥ ೨೦

ಆಗ ಧೃತರಾಷ್ಟ್ರನ ಆದರ.

ಬಂದು ಧೃತರಾಷ್ಟ್ರನ ಪದಾಬ್ಜವ
ವಂದಿಸಿದೊಡೆನ್ನಾನೆ ಬಾರೈ
ತಂದೆ ಬಾರೆಂದೆಳೆದು ಕುಳ್ಳಿರಿಸಿದನು ಮಂಚದಲಿ ।
ನಂದನರು ಭೀಮಾರ್ಜುನಾದಿಗ
ಳಂದು ಪರಿವೇಷ್ಟಿಸಿದರಿತ್ತಲು
ಕಂದುಹೃದಯದ ಕೌರವೇಂದ್ರನ ಹದನ ಕೇಳೆಂದ ॥ ೨೧

ಶಕುನಿ ಮೊದಲಾದವರು ದ್ಯೂತಪ್ರಯತ್ನ ಮಾಡಿದುದು.

ಕರೆಸಿದನು ಶಕುನಿಯನು ಕರ್ಣಂ
ಗಱುಹಿದನು ಸೈಂಧವನನೆಕ್ಕಟಿ
ಕರೆದು ಹೇೞಿದ ಕೃತ್ರಿಮದ ಹಾಸಂಗಿಗಳ ರಚಿಸಿ ।
ಹರಸಿಕೊಂಡರು ಗಣಪಯಕ್ಷೇ
ಶ್ವರಿಕಳಾವತಿದುರ್ಗಭುವನೇ
ಶ್ವರಿಗಳಿಗೆ ವಿವಿಧೋಪಚಾರದ ಬಲಿವಿಧಾನದಲಿ ॥ ೨೨

ದ್ಯೂತಸಿದ್ಧಿಯ ಮಂತ್ರಪರವಿ
ದ್ಯಾತಿಶಯವಿಚ್ಛೇದರಕ್ಷೆ ವಿ
ಧೂತರಿಪುಮಂತ್ರಿಯಂತ್ರಪರಸಂಮೋಹನೌಷಧಿಯ ।
ಈತಗಳು ಮೇಳೈಸಿದರು ನಿ
ಭೀತರಿವರಿದನೆತ್ತ ಬಲ್ಲರು
ಕೈತವದ ಕಣಿ ಕೌರವೇಶ್ವರ ಬಂದನರಮನೆಗೆ ॥ ೨೩

ಆಗ ದುರ್ಯೋಧನನು ಪಾಂಡವರ ಸಭೆಯನ್ನು ಸ್ತುತಿಸಿದುದು.

ಚಿತ್ತವಿಸಿದಿರೆ ಬೊಪ್ಪ ಮಯನಿವ
ಗಿತ್ತ ಸಭೆಯದು ದೇವನಿರ್ಮಿತ

ವೆತ್ತ ಮಾನುಷಕರ್ಮವೆತ್ತಲು ಸರಿಸವಲ್ಲದಕೆ ।
ಇತ್ತ ನಿಮ್ಮಡಿ ಮಾಡಿಸಿದ ಸಭೆ
ಯತ್ತ ಬಿಜಯಂಗೈದು ನೋಡುವು
ದುತ್ತಮವಲೇ ಯೆಂದನಾ ದುರ್ಯೋಧನನನು ನಗುತ ॥ ೭೪

ಐಸಲೇ ನೋಡುವೆವು ಶಿಲ್ಪದ
ದೇಶಿಕಾಱಱ ಕೈಮೆಗಳು ಲೇ
ಸೈಸಲೇ ಬೇಱೇನು ಮಾನುಷದೈವಕೃತಿಯೆಂದು ।
ಈಸು ಸಂಪ್ರಿಯಯೆಮ್ಮೊಳುಂಟೇ
ಲೇಸೆನುತ ನೃಪನೆದ್ದು ಕೈಗೊಡ
ಲಾಸಭೆಗೆ ಧೃತರಾಷ್ಟ್ರ ಬಂದನು ಧರ್ಮಸುತಸಹಿತ ॥ ೭೫

ಕೌರವಸಭೆಯ ವರ್ಣನೆ.

ಬಿಗಿದ ನೀಲದ ಸರಿಯ ನೆಲಗ
ಟ್ಟುಗಳ ಗೋಮೇಧಿಕದ ವಜ್ರದ
ಜಗಲಿಗಳ ನವವೇದಿಕೆಯ ವಿದ್ರುಮದ ಲೋವೆಗಳ ।
ಝಗೆಯ ಲಹರಿಯ ಜಾಳಿಗೆಯ
ಪಚ್ಚೆಗಳ ಸಾರದ ಸಕಲರತ್ನಾವ
ಳಿಗಳೆಸೆದುದು ರಾಜಸಭೆ ತತ್ಕ್ರೋಶಮಾತ್ರದಲಿ ॥ ೭೬

ಕವಿದುವರುಣಾಂಶುಗಳ ಲಹರಿಯ
ಲವಣಿ ಲಾವಣಿಗೆಯಲಿ ನೀಲ
ಚ್ಛವಿಯ ದೀಧಿತಿ ಝಗಝಗಿಸಿದುದು ಪ್ರಭೆಯ ಲಹರಿಯಲಿ ।
ತಿವಿದುವೆಳಮುತ್ತುಗಳ ಚಂದ್ರಿಕೆ
ಜವಳಿಸಿದದೊಂದೊಂದನೌಕಿದ
ವಿವರಣೆಯ ಮಣಿಕಿರಣವೇಣಿಯ ಬಂಧಬಂಧುರದಿ ॥ ೭೭

ಅಲ್ಲಿ ವಿಪುಳೋದ್ಯಾನವೀಧಿಗ
ಳಲ್ಲಿ ತಾವರೆಗೊಳದ ರಚನೆಗ
ಳಲ್ಲಿ ಹಂಸಮಯೂರಮಧುಕರಶುಕಪಿಕಾದಿಗಳು ।

ಅಲ್ಲಿ ಕೇಳೀಶೈಲಹಿಮಗೃಹ
ವಲ್ಲಿ ವಿವಿಧವಿಲಾಸರಚನೆಗ
ಳಲ್ಲಿ ಹೊಯ್ ಕೈಯೆನಿಸಿ ಮೆಱೆದುದು ಪಾಂಡವರ ಸಭೆಯು ॥ ೨೮

ಧರ್ಮರಾಯನು ಸಭೆಯನ್ನು ಪ್ರವೇಶಿಸಿದುದು.

ಸ್ಥಳವನೇ ಜಲವೆಂದು ನಿರ್ಮಳ
ಜಲವನೇ ಸ್ಥಳವೆಂದು ಬಾಗಿಲ
ನೆಳಲ ಭಿತ್ತಿಯ ಹಾಯ್ದು ಬಾಗಿಲ ಭಿತ್ತಿಯೆಂದಿಱಿದು ।
ಕಳವಳಿಸುವನೆ ಧರ್ಮಸುತನಾ
ಕೊಳವನೇ ಕೊಳನೆಂದು ಬಾಗಿಲ
ನೆಳಲ ಹೊಗಱುತ ಬಂದು ಹೊಕ್ಕನು ಬಹಳಚೌಕಿಗೆಯ ॥ ೨೯

ಕೆಲಸಿಗರು ಶಿಲ್ಪಿಗಳು ರತುನಾ
ವಳಿಯ ಘಾಟಿನಲಾದುದೀಸಭೆ
ಯಿಳೆಗಪೂರ್ವವಲಾ ಮಹಾದೇವೆಂತು ರಚಿಸಿದರೊ ।
ವಿಳಸದಾಯುವ್ಯಯದ ವಿಶ್ರುತ
ವಳಯದುನ್ನತ ವಾಸ್ತುಲಕ್ಷಣ
ದೊಳಗೆ ಸೇರಿದುವೆಂದು ಕೊಂಡಾಡಿದನು ನೃಪ ಸಭೆಯ ॥ ೩೦

ಸೂಸಕದ ಮುತ್ತುಗಳು ತಾರಾ
ರಾಶಿಗಳ ಹಬ್ಬುಗೆಯ ನೀಲದ
ಹಾಸಱೆಗಳೇ ಹೋಲುತಿರ್ದುವು ಗಗನಮಂಡಲವ ।
ಸೂಸಕಂಗಳ ಮುಖದ ಮುಸುಕಿನ
ದೇಶಿಕಾತಿಯರಾನನೇಂದುಗ
ಳಾಸುಧಾಕರನನಲು ಗೆಲಿದುದು ಸಭೆ ನಭಸ್ಥಳವ ॥ ೩೧

ಗುರುನದೀಸುತಕರ್ಣಸೈಂಧವ
ಗುರುತನುಜಭಗದತ್ತಬಾಹ್ಲಿಕ
ನುರುಯವನಸೌವೀರಕೋಸಲಚೈದ್ಯಮಾಗಧರು ।

ಅರಸುಗಳು ನಾನಾದಿಗಂತದ
ಧರಣಿಪರು ಸಚಿವರು ಪಸಾಯ್ತರು
ನೆರೆದುದಂದಿನ ದಿವಸದೋಲಗದೊಡ್ಡು ಚಲುವಾಯ್ತು ॥ ೩೦

ಆಗ ಆಸಭೆಯಲ್ಲಿದ್ದವರ ವರ್ಣನೆ.

ಧರಣಿಪತಿ ಕೇಳೊಂದು ಹರಿಯಂ
ತರವಿಶಾಲ ಮಹಾಸಭಾವಿ
ಸ್ತರಣವದಱಲಿ ತೆಱಹ ಕಾಣೆನು ತೀವಿತವನಿಪರು ।
ಹೊಱಗೆ ರಥಿಕರು ರಾಹುತರು ಜೋ
ಧರು ಪದಾತಿಗಳಿದ್ದುದಂದಿನ
ಸಿರಿ ಸುರೇಂದ್ರನ ಪಾಡಿಗೈವಡಿ ಹತ್ತುಮಡಿ ಯೆಂದ ॥ ೩೩

ಒಂದು ಕಡೆಯಲಿ ಕವಣಿಕೆಯ ಜಾ
ಜೊಂದು ಕಡೆಯಲಿ ಗದ್ಯಪದ್ಯವ
ದೊಂದು ಕಡೆಯಲಿ ವಾರವಧುಗಳ ಸಾರಸಂಗೀತ ।
ಒಂದುಮೆಯ್ಯಲಿ ತರ್ಕಗೋಷ್ಠಿಯ
ದೊಂದು ದೆಸೆಯಲಿ ಕೌರವೇಂದ್ರನ
ಮುಂದೆ ಜಡಿದುದು ರಭಸ ಹಾಸಂಗಿಗಳ ಸಾರಿಗಳ ॥ ೩೪

ದ್ಯೂತಕ್ಕೆ ಧರ್ಮರಾಯನನ್ನು ಕರೆಯುವಿಕೆ.

ಆಡಲಱವನು ಗಡ ಯುಧಿಷ್ಠಿರ
ನಾಡುವೊಡೆ ಬರ ಹೇಳು ಮೇಣಾ
ನೋಡುತಿರಲಾವಾಡುವೆವು ಸಭೆಯಲಿ ವಿನೋದವಲೆ ।
ಜೋಡಿಯಿಲ್ಲದೆ ಬರಲಿ ನೆತ್ತವ
ನಾಡಲಱಯದ ನೃಪತಿ ಮೃಗವೆಂ
ದಾಡುತಿಹರಱವವರು ತಾವಲ್ಲೆಂದನಾಶಕುನಿ ॥ ೩೫

ಕುಟಿಲರೊಡನೆ ಜೂಜು ಕೂಡದೆಂದು ಧರ್ಮರಾಯನ ಉತ್ತರ.

ಅಹುದು ಹೊಲ್ಲೆಹವಾವುದಾಡಲು
ಬಹುದು ಸುಜನರ ಕೂಡೆ ನೀವೇ

ಕುಹಕವಿದ್ಯಾಸಾರ್ವಭೌಮರು ಶಕುನಿಕೌರವರು |
ಸುಹೃದಯರಿಗತಿಕುಟಿಲರಲಿ ನಿ
ಸ್ಪೃಹರಿಗತಿರಾಗಿಗಳೊಡನೆ ದು
ಸ್ಸಹ ಕಣಾ ಸಮ್ಮೇಳವೆಂದನು ಧರ್ಮಸುತ ನಗುತ || ೩೬

ನೀವು ಸುಹೃದಯರಿಂದು ದುರ್ಜನ
ರಾವು ನೀವ್ ರಾಗಿಗಳು ವೋಲ್ ರಾ
ಗಾವಲಂಬರು ನಾವೆಲೇ ನೀವಱಿಯಿರೇ ನಿಜವ |

ಬಂಧುಗಳಲ್ಲಿ ಭೇದಚಿಂತೆ ಏಕೆಂಬ ದುರ್ಯೋಧನನ ಭಾಷಣ.

ನೀವು ನಾವೆಂಬೀಪೃಥಗ್ಭಾ
ವಾವಲಂಬನವೇನು ನಿಮ್ಮೊಳು
ನಾವು ನೀವೇ ನಮ್ಮೊಳೆಂದನು ನಗುತ ಕುರುರಾಯ || ೩೭

ದ್ಯೂತವು ಯೋಗ್ಯವಲ್ಲೆಂದು ಧರ್ಮರಾಯನ ವಾಕ್ಯ.

ಇರಲಿ ಬಾಂಧವರಿದಱೊಳರಡಿ
ಟ್ಟಿರದೆ ನಿಲುವುದು ಲೇಸಲಾ ವಿ
ಸ್ತರಿಸಲೇಕೆ ದ್ಯೂತ ದುರ್ವ್ಯಸನಪ್ರಪಂಚವಿದು |
ತರುಣವಿಟಚಾರಣಕುಶೀಲವ
ಭರತಗಣಿಕಾಯೋಗ್ಯವಿಷಯಕೆ
ಗರುವರೊಲಿವರೆ ಯೆಂದನಾಕುರುಪತಿಗೆ ಯಮಸೂನು || ೩೮

ಇದು ರಾಜರಿಗಾಗಿ ಹುಟ್ಟಿದ್ದು ಇದನ್ನೊಲ್ಲದವನು
ಮೃಗವೆಂದು ದುರ್ಯೋಧನನ ನುಡಿ

ದ್ಯೂತವಿದು ದುರ್ವ್ಯಸನವೆಂಬವ
ನೀತಿವಿದನೇ ಶ್ರೋತ್ರಿಯರಿಗ
ಖ್ಯಾತಿ ಯಿದು ಯತಿಗಳಿಗೆ ವೋಲ್ ರಣಭೀತಭೂಪರಿಗೆ |
ದ್ಯೂತಮೃಗಯಾಸ್ತ್ರೀವ್ಯಸನ ನೃಪ
ಜಾತಿಗೋಸುಗವಾದುವಿದಱ ರ
ಸಾತಿಶಯವಱಿಯದವ ನರಮೃಗವೆಂದನಾಶಕುನಿ || ೩೯

ಶಕುನಿಯು ದ್ಯೂತಕ್ಕೋಸ್ಕರ ಧರ್ಮರಾಯನನ್ನು ಕರೆಯುವಿಕೆ.

ಅರಸ ಕೇಳ್ಕೌಳಗಕೆ ಜೂಜಿಗೆ
ಕರೆದೊಡೋಸರಿಸಿದರೆ ಬಳಿಕವ
ಗರುವನೇ ಕ್ಷತ್ರಿಯರೊಳಗೆ ನೃಪಧರ್ಮ ನೀನಱಿಯು ।
ಕರೆದೆವಾವ್ ಜೂಜಿಂಗೆ ಬೇಕೇ
ಧರಣಿಪತಿ ಬಾ ರಾಜಧರ್ಮವ
ನೊರಸುವೊಡೆ ನಿಲ್ಲೆಂದುಪೇಕ್ಷಿಸಿ ನುಡಿದನಾಶಕುನಿ ॥ ೪೦

ರಾಜಧರ್ಮವಿದಹುದು ಕಳವಿನ
ಜೂಜು ಧರ್ಮದ ಮಗನೊ ಮೊಮ್ಮನೊ
ಬೀಜವಾವುದು ನಿಮ್ಮ ಕಪಟದ್ಯೂತನಿರ್ಣಯಕೆ ।
ರಾಜಪರಿಪಾಟಿಗಳ ಪಂಥದ
ಜೂಜ ಬಲ್ಲರೆ ಕರೆಯಬಾರದೊ
ಡಾಜನಾರ್ದನನಾಣೆ ಯೆಂದನು ಧರ್ಮಸುತ ನಗುತ ॥ ೪೧

ಆಗ ಧರ್ಮರಾಯನು ದ್ಯೂತದಲ್ಲಿ ಮನಮಾಡುವಿಕೆ.

ಭೂರಮಣ ಕೇಳಖಿಳನೃಪಸಂ
ಹಾರಬೀಜದ ಕರ್ಮಫಲಸಂ
ಸ್ಕಾರವಳ್ಳಿಯು ಸಱಿದು ನೂಕಿತು ಧರ್ಮನಂದನನ ।
ಧೀರನಲ್ಲಾ ಧರ್ಮಶಾಸ್ತ್ರವಿ
ಚಾರಸಾರಜ್ಞಾನನಿಷ್ಠೆಯೊ
ಳೋರೆಯುಂಟೇ ದ್ಯೂತಕೇಳಿಗೆ ಮಾಡಿದನು ಮನವ ॥ ೪೨

ಆಗ ನಾನಾವಿಧದ ಅಪಶಕುನಗಳು

ಇಂದುವದನೆಗೆ ದಕ್ಷಿಣಾಕ್ಷಿ
ಸ್ಪಂದವಾಯಿತು ಭೀಮಪಾರ್ಥರಿ
ಗಂದು ಕೆತ್ತಿತು ಹೃದಯ ವಾಮಭುಜಾಕ್ಷಿಗಳು ಸಹಿತ ।

ಕಂದಿದುವು ಮೋರೆಗಳು ಗಂಗಾ
ನಂದನದ್ರೋಣಾದಿಸುಜನರಿ
ಗಂದವೇಱಿತು ಮುಸುಡು ಶಕುನಿಸುಯೋಧನಾದಿಗಳ ॥ ೪೩

ಕುರುಪತಿಯ ಕೃತಪುಣ್ಯಬೀಜಾಂ
ಕುರದಕಾಲದಿಗಂತದವನೀ
ಶ್ವರಸಮೂಹಚಮೂನಿಬರ್ಹಣಸೂಚನಾಸಮಯ ।
ಅರಸ ಕೇಳ್ ಕುಂತೀಕುಮಾರರ
ಸಿರಿಯ ದುಗುಡದ ಹೊತ್ತು ಮಿಗೆಗ
ಬ್ಬರಿಸಿತ್ತೈ ಧರ್ಮಜನ ಗಾಢದ ಬುದ್ಧಿ ಪರ್ವತವ ॥ ೪೪

ವ್ಯಸನತೃಷ್ಣೆಯ ಕೀಳುಚಿತ್ತದ
ಮಿಸುನಿಯೊಳು ಬೆಱಸಿತು ಸುಬುದ್ಧಿಯ
ರಸವು ಹಾಱಿತು ಹುದಿದ ರಾಗದ್ವೇಷವಹ್ನಿಯಲಿ ।
ಮುಸುಡ ತಿರುಹಿತು ತಿಳಿವು ಲಜ್ಜೆಯ
ದೆಸೆಗೆ ದುರ್ಘಟವಾಯ್ತು ಪರಿಭವ
ದೊಸಗೆಯನು ಸೂಚಿಸಿತು ಲಕ್ಷ್ಮಿಗೆ ಧರ್ಮಜನ ಹೃದಯ ॥ ೪೫

ಹಲವುಮಾತಿನಲೇನು ಭೂಪತಿ
ತಿಲಕ ಸಿಕ್ಕಿದನವದಿರೊಡ್ಡಿದ
ಬಲೆಗೆ ಬಂದನು ನೆತ್ತ ಸಾರಿಯ ಗುಱಿಯ ಗದ್ದುಗೆಗೆ ।
ಕೆಲದಲನುಜರು ವಾಮದಲಿ ಮಣಿ
ವಳಯಮಂಚದಲಂಧನೃಪನಿದಿ
ರಲಿ ಸುಯೋಧನಕರ್ಣಶಕುನಿಜಯದ್ರಥಾದಿಗಳು । ೪೬

ದ್ಯೂತಾರಂಭ.

ಹಲಿಗೆ ಯಿಕ್ಕಿತು ಹೊನ್ನ ಸಾರಿಗ
ಳಱುಹಿದುವು ಹೇಱೊಡ್ಡವನು ಕಳ

ಕಳವ ನಿಲಹೇಟೆನುತ ಮಿಗೆ ಗರ್ಜಿಸಿದನಾಶಕುನಿ [1] |
ನೆಲಕೆ ಹಾಕಿದನಡಿಗಡಿಗೆ ಮಂ
ಡಳಿಸಿ ಸಾರಿಯ ಹೂಡಿ ಕುರುಪತಿ
ಗೆಲಿವ ಹೋಗೆಂದೊದಱುತಿರ್ದನು ಶಕುನಿ ಬೊಬ್ಬಿಱಿದು [2] || ೪೭

ಶಕುನಿಯ ಸಂತೋಷ.

ಸಿಕ್ಕಿದನು ಧರ್ಮಜನು ಜೂಜಿನೊ
ಳೊಕ್ಕಲಿಕ್ಕಿದ ಖತಿಯ ಹೆಚ್ಚಿಸಿ
ಸೊಕ್ಕಿದೀ ಭೀಮಾರ್ಜುನರ ಕೌರವರ ಕೈಯ್ಯಿಂದ |
ಹಿಕ್ಕಿ ಕೊಲಿಸುವೆನೆಂಬಭೀಷ್ಟಕೆ
ತಕ್ಕುದಾಯಿತೆನುತ್ತ ಮನದೊಂ
ದಕ್ಕಱೊಳು ಗುಡಿಗಟ್ಟಿ ಕುಣಿದನು ಶಕುನಿ ಮನದೊಳಗೆ || ೪೮

ಶಕುನಿಯು ಜೂಜಿನಲ್ಲಿ ಧರ್ಮರಾಯನು ಒಡ್ಡಿದ ಪಣವನ್ನೊಂದೊಂದಾಗಿ ಗೆಲ್ಲುವಿಕೆ.

ಆಟವಾರಂಭಿಸಿತು ಬಱಿಬೊ
ಬ್ಬಾಟವೇನಿದು ವಿಜಯಸಿರಿ ವಾ
ಚಾಟರಿಗೆ ಮೆಚ್ಚುವೆಳ್ ತೋಱೂ ದ್ಯೂತಕೌಶಲವ |
ತೋಟಿ ಬೇಕೇ ಕೈಯ್ಯ ಹೊಯ್ಬ
ತಾಟವೇತಕೆ ಧರ್ಮನಂದನ
ನಾಟವೊಳ್ಳಿತು ಬಲ್ಲೆನೆಂದನು ಶಕುನಿ ನಸುನಗುತ || ೪೯

ಎನ್ನೊಳಾಟಕೆ [3] ಶಕುನಿ ಭೂಪತಿ
ನಿನ್ನೊಡನೆ ಕೈಪೊಯ್ದ ನೊಡ್ಡವ
ನೆನ್ನೊಡನೆ ಹೇಳೆಂದು ನುಡಿದನು ಕೌರವರ ರಾಯ |
ನಿನ್ನೊಳಾಗಲಿ ನಿನ್ನ ಮಾವನೆ

---

1 ಹಾಸಂಗಿಗಳ ಹೊಸೆದೊಸೆದು, ಕ. ಖ.
2 ತೊಡೆಯನಪ್ಪಳಿಸಿ, ಚ.
3 ಎನ್ನಲೆಕ್ಕಕೆ, ಚ.

ಮುನ್ನ ಬರಲಿದಕೇನೆನುತ ಸಂ
ಪನ್ನ ಶಠರೊಡನಳವಿಗೊಟ್ಟನು ಭೂಪ ಕೇಳೆಂದ ॥ ೫೦

ಹೇಮಭಾರದ ವಿಮಳರತ್ನ
ಸ್ತೋಮವಿದೆ ಪಣವೆನಲು ಕೌರವ
ಭೂಮಿಪತಿಯೊಡ್ಡಿದನು ಧರ್ಮಜ ಹೆಸರಿಸಿದ ಧನವ ।
ಆಮಹೀಪತಿ ಶಕುನಿ ಸಾರಿಯ
ಸೀಮೆಯನು ಕೆದಱಿದರು ತಿವಿದರು
ತಾಮಸದಲುಬ್ಬಿದ್ದು ವಿಬ್ಬರ ಕರಣವೃತ್ತಿಗಳು ॥ ೫೧

ದುಗನ ಹಾಯಿಕು ತನಗೆ ಹಾಯಿಕು
ತಿಗನನೆಂಬಬ್ಬರದ ಹಾಸಂ
ಗಿಗಳ ಬೊಬ್ಬೆಯ ಸಾರಿಗಳ ಕಟಕಟಿತನಿಸ್ವನವ ।
ಉಗಿವ ಸೆರೆಗಳ ಬಳಿ ದುಹಾರದ
ಬಿಗುಹುಗಳ ಬೀದಿಗಳ ಕಲಿಸಾ
ರಿಗಳ ಧಾಳಾಧೂಳಿ ಮಸಗಿತು ಭೂಪ ಕೇಳೆಂದ ॥ ೫೨

ರಾಯ ಸೋತನು ಶಕುಸಿ ಬೇಡಿದ
ದಾಯ ತಹ ಹಮ್ಮಿಗೆಯಲೊದಗಿದ
ವಾಯತದ ಕೃತ್ರಿಮವಲೇ ಕೌರವರ ಸಂಕೇತ ।
ಆಯಿತೀಸಲಿಗೆಯಸು ಕೌರವ
ರಾಯ ಗೆಲಿದನು ಮೇಲೆ ಪಣವೇ
ನಾಯಿತೆಂದನು ಶಕುನಿ ಯಮನಂದನನನೀಕ್ಷಿಸುತ ॥ ೫೩

ಕನಕಮಯರಥವುಂಟು ಸಾವಿರ
ವೆನಗೆ ಹೂಡಿದುವೆಂಟುಸಾವಿರ
ವಿನುತವಾಜಿಗಳೊಡ್ಡವೆಂದನು ಧರ್ಮನಂದನನು ।
ಜನಪತಿಗೆ ತಾನ್ಯಸಲೇ ಹಾ

ಯೆನುತ ಸಾರಿಯು ಕೆದಱಿದನು ದು
ರ್ಜನರಿಗೊಲಿದುದು ದೈವಗತಿ ಬೊಬ್ಬಿಱಿದನಾಶಕುನಿ ॥ ೫೪

ಸೋತೆಯರಸಾ ನಿಮಗೆ ಜೂಜಿನ
ಭೀತಿಯುಂಟೇ ಮಾಣು ಮೇಣ್ನಿ
ರ್ಭೀತನೇ ಮೇಲೊಡ್ಡವನು ನುಡಿ ಹಲವು ಮಾತೇನು ।
ಕಾತರಿಸಬೇಡಿನ್ನು ಘಡ ಧನ
ಭೀತನೇ ತಾನಕಟೆನುತ ಕುಂ
ತೀತನುಜನೊಡ್ಡಿದನು ಸಾವಿರಮತ್ತಗಜಘಟೆಯ ॥ ೫೫

ಆದವೆಮಗಿವು ಗಜಘಟೆಗಳಂ
ದಾದುರಾತ್ಮಕರಾಡಿದರು ದು
ರ್ಭೇದವವದಿಱ ಕಪಟತಂತ್ರವನಾವನಱಿವವನು ।
ಆದುದರಸಗೆ ಸೋಲವಿನ್ನೇ
ನಾದುದೈ ಭೂಪತಿಯ ಗಜಘಟೆ
ತೀದವೈ ತೋಱೇನು ಪಣ ವುಂಟೆಂದನಾಶಕುನಿ ॥ ೫೬

ಘಡ ದರಿದ್ರನೆ ತಾನು ತನ್ನಯ
ಮಡದಿಯರ ಕೆಳದಿಯರು ಸಾವಿರ
ಮಡಿ ಸುಯೋಧನರಾಜಭವನದ ವಾರನಾರಿಯರ ।
ನುಡಿಯ ಬೇಕೇ ಧರ್ಮಸುತ ನಿ
ಮ್ಮಡಿಗಳೊಡ್ಡಿದ ಬಳಿಕ ಗೆಲಿದವ
ರೊಡೆಯರೈ ಸಲೆ ಹಾಯ್ಕು ಹಾಯ್ಕೆಂದೊದಱಿದನು ಶಕುನಿ ॥ ೫೭

ಏನನಾಡಿದೊಡೇನು ಫಲ ದೈ
ವಾನುರಾಗದಿ ಬಯಕೆ ಬೇಱಿಹು
ದಾನರೇಂದ್ರನ ಸಾರಿ ಸೋತುವು ನಿಮಿಷಮಾತ್ರದಲಿ ।
ಆನಿರೂಢಿಯ ಹತ್ತುಸಾವಿರ
ಮಾನಿನಿಯರನು ಮತ್ತೆ ಸೋತನು
ಮಾನನಿಧಿಯೇ ಮತ್ತೆ ಪಣವೇನೆಂದನಾಶಕುನಿ ॥ ೫೮

ಅರಸಿಯರ ವೈಗಾಹುಗಳ ಕಿಂ
ಕರರು ಸಾವಿರವಿದಱ ಪಣ ನಿ
ಮ್ಮರಸನಲಿ ಹೇಱೆನಲು ನೀವೆಮಗೇನನೊಡ್ಡಿದಿರಿ ।
ಮರಳಿ ಬೆಸಗೊಳಬೇಡ ನಮ್ಮಲಿ
ಬರಹವದು ಹಾಯ್ಕೆನಲು ಹರುಷದ
ಹರಹಿನಲಿ ಬೞಿಕರಸ ಸಾರಿಯು ಸಾಲ ಜೋಡಿಸಿವ ॥ ೫೯

ಅರಸ ಸೋತೆಯಲಾ ಜಯೋದಯ
ಮರಳತಿತ್ತಲು ಮನಕೆ ಭೀತಿಯು
ಬೆಱಕೆಯುಳ್ಳೊಡೆ ಬಿಟ್ಟು ಕಳ್ ಪ್ರಸರಕೆ ಸಮಯವಿದು ।
ಅರಸು ಪಂಥದ ವಾಸಿ ಮನಕು
ಬ್ಬರಿಸುವೊಡೆ ಪಣವೇನು ಹೇಱೈ
ಧರಣಿಪಾಲ ಯೆನುತ್ತ ರಿಂಗಣಗುಣಿದನಾಶಕುನಿ ॥ ೬೦

ಎಲವೊ ಸೌಬಲ ಪಾಂಡುವಿನ ಮು
ಕ್ಕಳು ಕಣಾ ಚತುರಂಬುನಿಧಿಪರಿ
ಲುಳಿತವಿಸ್ತರ ಕುರುನರೇಂದ್ರರ ಸೀಮೆ ಪರಿಯಂತ ।
ನೆಲವಿದೆಮ್ಮದು ನೃಪರೊಳಗೆ ನಾ
ವಱಿಯೆ ಧರಣಿಪರಾರು ರಥಸಂ
ಕುಳವನೊಡ್ಡಿದೆ ಹತ್ತುಸಾವಿರವೆಂದನಾಭೂಪ ॥ [1] ೬೧

ಈರಥದೊಳೊಂಬತ್ತು ಸಾವಿರ [2]
ವಾರುವಂಗಳ ಕೂಟವಾಪರಿ
ವಾರವಿದೆಲಾ ರಪಣ ವೆಂದನು ಸುಬಲನಂದನಗೆ ।
ವೀರನಹೆಯ್ಕ ಧರಣಿಪತಿ ನೀ
ಸಾರಿಗಳ ಬಿಡು ಸೆಱೆಯ ಬಿಗಿದು ದು
ಹಾರದಲಿ ನೀ ಸೋತೆ ಹೋಗೆಂದೊದಱಿದನು ಶಕುನಿ ॥ ೬೨

1 ನೊಡ್ಡುವೆನೊಂದು ಭಾರಿಗೆ ಹತ್ತುಸಾವಿರವ, ಚ. 2 ನಾಲ್ವತ್ತು ಸಾವಿರ, ಚ.

ಆವ ಕೌಳಿಕ ಮಂತ್ರಯಂತ್ರದ
ಡಾವರದ ಡೊಳ್ಳಾಸವಿಕ್ಕದ
ದೀವಸದ ಬೇಳುವೆಯನೇನೆಂಬೆನು ಮಹೀಪತಿಯೆ ।
ಆವ ವಸ್ತುವನರಸನೊಡ್ಡಿದೊ
ಡಾವ ಪಹಿಬದಲಸಿತ ಸೋಲಿಸಿ
ಕೈವಳಿಸಿದನೊ ಬಲ್ಲನಾವವನೆಂದನಾಭೂಪ ॥ ೬೩

ಅರಸ ನೀಗಿದೆ ಪತ್ತುಸಾವಿರ [1]
ವರರಥವನಿನ್ನೇನು ಸಾಕೀ [2]
ಸರಲಿ ನಿಲುವುದೊ ವಿತ್ತವುಂಟೇ ಮತ್ತೆ ಹೇಳೆನಲು ।
ಮರುಳೆ ಸೌಬಲ ಚಿತ್ರರಥನೀ
ನರಗೆ ಕೊಟ್ಟನು ತೇಜಿಗಳ ಕ
ತ್ತುರಿಯು ಬಣ್ಣದ ಹತ್ತುಸಾವಿರ ತುರಗವಿದೆ ಯೆಂದ ॥ ೬೪

ಆಡಿದನು ನೃಪನಾಕ್ಷಣಕೆ ಹೋ
ಗಾಡಿದನು ಖೇಚರರ ಖಾಡಾ
ಖಾಡಿಯಲಿ ಜೋಡಿಸಿದ ಹಯವನು ಹತ್ತುಸಾವಿರವ ।
ಹೂಡಿದನು ಶಾರಿಗಳ ಮರಳಿ
ನ್ನಾಡುವೊಡೆ ಪಣವಾವುದೈ ಮಾ
ತಾಡು ಧರ್ಮಜ ಯೆನೆ ಮಹೀಪತಿ ಧನವ ಚಿಂತಿಸಿದ ॥ ೬೫

ಅಗಣಿತದ ಧನವುಂಟು ಹಾಸಂ
ಗಿಗಳ ಹಾಯಿಕು ಸೋತ ವಸ್ತುವ
ತೆಗೆವೆನೀಗಳೆ ಶಕುನಿ ನೋಡಾ ತನ್ನ ಕೌಶಲವ ।

---

1 ಅರಸ ಕೇಳೆಂಬತ್ತುಸಾವಿರ ಖ

2 ವರತುರಗರಥಸಿಕ್ಕಿದುವುಕೇಳ್, ಖ.

ದುಗುಣ ಹಲಗೆಗೆ ಹತ್ತು ಮಡಿ ರೇ
ಖೆಗೆ ಗಜಾಶ್ವರಥನಿಕಾಯವಾ
ಜಿಗಳು ಸಹಿತಿದೆ ಸಕಲಸೈನಿಕರೆಂದನಾಭೂಪ ॥ ೬೬

ಆಯಿತಿದು ಪಣವೆಹುದಲೇ ನೃಪ
ಹಾಯಿಕಾ ಹಾಸಂಗಿಗಳ ಸಾ
ಹಾಯ ಕುರುಪತಿಗಿಲ್ಲ ಕೃಷ್ಣಾದಿಗಳು ನಿಮ್ಮವರು ॥
ವಾಯು ಕಂದೆಱೆದರೆ ಸುಯೋಧನ
ರಾಯನುಪಚಿತಪುಣ್ಯವಕಟಾ
ದಾಯವೇ ಬಾರೆನುತ ಜಱೆದಬ್ಬರಿಸಿದನು ಶಕುನಿ ॥ ೬೭

ಮತ್ತೆ ಹೇಳುವುದೇನು ಸೌಬಲ
ಬಿತ್ತಿ ಬಳೆದನು ಭೂಪನವರಿಗೆ
ತೆತ್ತನೈ ಸರ್ವಸ್ವಧನವನು ಸಕಲಸೈನಿಕರ ।
ಮತ್ತೆ ಪಣವೇನೆನಲು ಬಟಿಕಱು
ವತ್ತು ಸಾವಿರ ಕರಿಕಳಭವೆಂ
ಬತ್ತು ಸಾವಿರತುರಗಶಿಶುಗಳನೊಡ್ಡಿದನು ಭೂಪ ॥ ೬೮

ಅರಸ ಕೇಳೈ ತುರಗಶಿಶುವಾ
ಕರಿಕಳಭರಥಸೈನ್ಯ ಹಸ್ತಿನ
ಪುರಿಗೆ ಬಂದುದು ತಮ್ಮ ಕೂಡೆ ವಿನೋದವಿಭವದಲಿ ।
ಕುರುಪತಿಯು ವಶವಾಯ್ತು ಬಟಿಕಿನ
ಮುಱಿಗುದುರೆ ಮಱಿಯಾನೆಗಳನು
ಬ್ಬರಿಸಿ ಸಾರಿಯ ಹೂಡಿದಾಗಳ್ ಸೋತನಾಭೂಪ ॥ ೬೯

ಅಕಟ ಸಾಲದೆ ಜೂಜು ನಿಬ್ಬರ
ಧಕವದೇತಕೆ ಶಿವ ಶಿವೆತ್ತಣ
ಶಕುನಿ ಯೆತ್ತಣ ಭರತಕುಲದ ಮಹಾಮಹೀಶ್ವರರು ।

ವಿಕಳಚೇಷ್ಟೆಯಿದೇನು ವೃದ್ಧ
ಪ್ರಕರಕಿದು ವಿಳಸವೆ ವಿಘಾತಿಗೆ
ಸಕಲಜನಸಮ್ಮತವೆ ಯೆಂದನು ಖಾತಿಯಲಿ ವಿದುರ ॥ ೩೦

* ವರಪುರೂರವನಹುಷಶಂತನು
ಧರಣಿಪತಿದುಷ್ಯಂತನಳಸಂ
ವರಣಕುರುವೀರಪ್ರತೀಪಪರಂಪರಾಗತರು । *
ಭರತಕುಲವಿದಱೊಳಗೆ ವಂಶೋ
ದ್ಧರಣರೇ ಬೆಳಗಿದರು ನೀನವ
ತರಿಸಿ ತಂದೈ ತೊಡಕನೆಂದನು ಖಾತಿಯಲಿ ವಿದುರ ॥ ೩೧

ಸೋಲ ಮೆಚ್ಚಿದುದವರಸೊಡ್ಡದ
ಮೇಲೆ ಹೇಱಿದುದೊಡ್ಡವೀಗಳು
ಮೇಲುಗೈ ನೀನಾದೆ ಕುಸಿದರು ಪಾಂಡುನಂದನರು ।
ಸೋಲವಿದು ಕಾಲಾಂತಕನ ವೈ
ಸಾಲ ಸಾಱಿದೆನಕಟ ಸಾಕಿ
ನ್ನೇಱು ಕೌರವನೃಪತಿ ಯೆಂದನು ಖಾತಿಯಲಿ ವಿದುರ ॥ ೩೨

ಗೆಲಿದ ಧನ ದಕ್ಕುವುದೆ ಸೋತವ
ರಳುಕಿದವರೇ ಭೀಮಪಾರ್ಥರ
ಬಲುಹ ಬೆಸಗೊಳ್ಳಾ ತದೀಯಶ್ರವಣದೃಷ್ಟಿಗಳ ।
ಎಲೆ ಸುಯೋಧನ ವಿಷದ ಮಧುರವು
ಕೊಲುವುದೋ ಮನ್ನಿಸುವುದೋ ಕ
ಕ್ಕುಲಿತೆಗಿದು ಕಡೆ ಹಾರವಾಗಲಿ ಸಾಕು ತೆಗೆಯೆಂದ ॥ ೩೩

---

* ವರಪುರೂರವನಹುಷನವನೀ
ಶ್ವರತಿಲಕದುಷ್ಯಂತಕುರುಸಂ
ವರಣನವುಳಯಯಾತಿಯಾದಿಪರಂಪರಾಗತದ, ಚ

ಗೆಲಿದ ದರ್ಪದ ದಡ್ಡಿತೆಗೆ ಸೌ
ಬಲನ ಬೀಪ್ಸೊಡು ತನ್ನ ಶಯ್ಯಾ
ವಳಿಯೊಳಾಡಲಿ ಮಧುರವಚನದಲಿವರ ಸಂತವಿಸು ।
ನೆಲನನೇಕಚ್ಛತ್ರದಲಿ ನೆಲೆ
ಗೊಳಿಸಿ ಬದುಕುವರಿದು ನಿಜಾನ್ವಯ
ದುಃಖವು ಬೆಸಗೊಳು ಬೇಗ ಹಿರಿಯರನೆಂದನಾವಿದುರ ॥ ೭೪

ಖೂಳನೆಂಬೆನೆ ಸಕಲಕಲೆಗಳ
ಬಾಳುಮನೆ ಗಡ ನಿನ್ನ ಬುದ್ಧಿ ವಿ
ಶಾಲಮತಿ ನೀನೆಂಬೆನೇ ಜಗದಜ್ಞರಧಿದೈವ ।
ಕೇಳದೊಡೆ ಮೋಹಿತಹಿತವನು
ಹೇಳುವುದು ಪಾಂಡಿತ್ಯ ನಿನ್ನನು
ಕೇಳದವರಾರೆನುತ ಜರಿದನು ಕೌರವರ ರಾಯ ॥ ೭೫

ಹಿತವ ನೀನವರಿಗೆ ಕುಟುಂಬ
ಸ್ಥಿತಿ ವಿಳಂಬಕೆ ನಾವು ಕುಂತೀ
ಸುತರೊಡನೆ ಸಂಮೋಳವೆಮ್ಮಲಿ ವೈಮನಸ್ಯ ಗತಿ ।
ಕೃತಕಮಾರ್ಗದ ಮೋಡಿಯಲಿ ಪರಿ
ಚಿತನು ನೀನಲ್ಲಕ್ಷವಿಮಳ
ಕ್ರತುವಿಧಾನವನಕ್ಷದೀಕ್ಷಿತರರಿವರಿದನೆಂದ ॥ ೭೬

ನೀ ಹಿತವನೇ ಶಕುನಿ ರಾಜ
ದ್ರೋಹಿಯೈ ಹುಸಿ ಯಲ್ಲ ನೀನೇ
ಹೋಹುದೈ ನಿಮಗಾವುದಭಿರುಚಿಯಾ [1] ದಿಗಂತರಕೆ ।
ಐಹಿಕಾಮುಷ್ಮಿಕದ ವಿಭವೋ
ತ್ಸಾಹನಿಸ್ಪೃಹರಾವಲೇ ಸಂ
ದೇಹವೇ ನೀವೆಳಿಯಿರೆಂದನು ತೂಗಿ ತುದಿವೆರಳ ॥ ೭೭

1 ದಭಿಮತವಾ, ಚ.

ವಿಹಿತವಹುದೇ ಶಕುನಿ ವಿದುರನ
ಕುಹಕನುಡಿಗಳ ಕೇಳದಿರೆ ಗೆಲ
ವಹುದು ನಮ್ಮದು ಸಕಲಜನದಿದಿರಲಿ ದಿಗಂತರಕೆ ।
ಸಹಜವೋ ರಹವೋ ನೃಪಾಲರ
ಮಹಿಮೆಯೋ ಯೊದ್ಯೂತದನುಭವ
ಲಹರಿಯನು ನೀವಱಿದಿರೆಂದನು ಕೌರವರ ರಾಯ ॥ ೭೮

ಗುರುಗಳಸುರರು ಭೀಷ್ಮರೆಮ್ಮನು
ತೆರಳಿಚರು ಕೃಪ ನುಡಿಯನಯ್ಯನ
ಕೊರಳು ಕೊಂಕದು ಬಾಹ್ಲಿಕನ ಮನ ನೋಯದಿನ್ನಬರ ।
ಹಿರಿಯರವರೇನಜ್ಞರೇ ನೀ
ಪರಿಣತನೆ ನಿಷ್ಪ್ರಜ್ಞಶಠನೆಂ
ದಱಿಯನೇ ತಾನೆಂದು ಜಱಿದನು ಕೌರವರ ರಾಯ ॥ ೭೯

ಇವರ ಜನಪಾಧ್ವರವ ನಡಹಾ
ಯ್ದವನನಾಗಳ ದೇವಕೀಸುತ
ಸವಱಿದನು ನಮ್ಮೀವಿನೋದದ್ಯೂತಸಂಪದದ ।
ಸವನವಿಘ್ನವಿಕಾರಿಯನು ಪರಿ
ಭವಿಸುವವರಿಲ್ಲಾ ಶಿವಾ ಯೆಂ
ದವನಿಪತಿ ನಿಜಹುಬ್ಬಿನಲಿ ಹೂಱಿದನು ಪರಿಚರರ ॥ ೮೦

ಮಣಿವ ತಾನಲ್ಲೀಯನರ್ಥವ
ಕುಣಿಕೆಗೊಳಿಸಿದ ನೀಸಹಿತನಿ
ನ್ನಿಣೆಗಳೀ ಸೈಂಧವನನೀ ರಾಧೇಯಶಕುನಿಗಳ ।
ರಣದೊಳಗೆ ಭೀಮಾರ್ಜುನರ ಮಾ
ರ್ಗಣದ ಧಾರೆಗೆ ವೀರನಾರಾ
ಯಣನ ಸೇರಿಸಿ ಕೊಡುವನೆಂದನು ಖಾತಿಯಲಿ ವಿದುರ ॥ ೮೧

ಹದಿನಾಲ್ಕನೆಯ ಸಂಧಿ ಮುಗಿದುದು.

ಹದಿನೈದನೆಯ ಸಂಧಿ.

ಸೂಚನೆ.

ರಾಯಪಾಂಡವರರಸಿ ಕಮಲದ
ಳಾಯತಾಕ್ಷಿಯು ಪರಿಭವವ ನೆಱೆ
ಕಾಯ್ದು ಸಲಹಿತು ವೀರನಾರಾಯಣನ ಸಿರಿನಾಮ ।

ಕೇಳು ಜನಮೇಜಯ ಧರಿತ್ರೀ
ಪಾಲ ವಿದುರನ ಮಾತು ಮುಱಿದು ನೃ
ಪಾಲನೆಚ್ಚರಿಸಿದನು ಕರ್ಣಸನ್ನೆಯಲಿ ಸೌಬಲನ ।
ಹೇೞು ಧರ್ಮಜ ಸೋತೆಲಾ ನಿ
ನ್ನಾಳುಕುದುರೆಯನಿನ್ನು ಸಾಕು ದ
ಯಾಳಲಾ ದುರ್ಯೋಧನನು ಧನವಿಲ್ಲ ನಿನಗೆಂದ ॥ ೧

ತೆಗೆವೆನೇ ಸಾರಿಗಳ ನಿನ್ನಯ
ನಗೆಮೊಗದ ಸಿರಿ ಸೀದು ಕರಿಯಾ
ಯ್ತುಗುಳುತಿದೆ ನಿನ್ನನುಜರಿಂಗಿತರೋಷಪಾವಕನ ।
ಸೊಗಸು ಬೀಯದು ರಪಣವಿಲ್ಲದ
ಬೆಗಡು ನೋಯದು ಕ್ಷಾತ್ರಧರ್ಮದ
ತೆಗಹು ಸಾಯದು ನಿನಗೆನುತ ಗಹಗಹಿಸಿದನು ಶಕುನಿ ॥ ೨

ಎಲವೊ ಸೌಬಲ ವಿತ್ತವಿಸರ
ಬಱಿವುದೇ ನೀ ನಗುವವೊಲು ನಂ
ಮೊಳಗು ಡಿಳ್ಳವೆ ರಪಣವಿದೆಲಾ ಬಹಳ ಭಂಡಾರ ।

ಸುಳಿಸು ಹಾಸಂಗಿಗಳ ಮೋಹರ
ಗೊಳಿಸು ಸಾರಿಯನೊಂದು ರೇಖೆಯ
ಬಳಿಯಲೊಂದೇ ಕೋಟಿ ಹಾಯ್ಕೆಂದೊದಱಿದನು ಭೂಪ ॥ ೩

ದುಗುಣಕಿಕ್ಕಿದನರಸನಾಕೆಗೆ
ತೆಗೆದನವೆ ಮೂಱೆಂದು ನಾಲ್ಕ
ಕ್ಕಗಿದನವನಿಪನೈದ ಕಳೆದನು ಬಹಳವನು ಶಕುನಿ ।
ತೆಗೆದ ನಿಮ್ಮಡಿಗರಸನವನಾ
ತ್ರಿಗುಣ ಪಂಚಕಸಪ್ತನವಕ
ಪ್ರಗುಣವೆಂದನು ಶಕುನಿ ಸೋಲಿಸಿದನು ಮಹೀಪತಿಯ ॥ ೪

ಎಣಿಸಿದನು ರೇಖೆಗಳನಿಮ್ಮಡಿ
ಗಣಿತಸಂಖ್ಯಾಸಿದ್ಧವಸ್ತುವ
ನೆಣಿಸಲರ್ಬುದಸಂಖ್ಯೆಯಾದುದು ಹಲಗೆ ಯೊಂದಱಲಿ ।
ಗುಣನಿಧಿಯೆ ಮಗುಳೊಡ್ಡಲಾಪರೆ
ಪಣವ ವಚನಿಸು ಕೇಳ್ವೆನೆನೆ ನೃಪ
ಗುಣಶಿರೋಮಣಿ ಧರ್ಮಸುತ ನಸುನಗುತಲಿಂತೆಂದ ॥ ೫

ಹೂಡು ಸಾರಿಯ ರೆಖೇರೇಖೆಗೆ
ವೊಡಿತರ್ಬುದ ಧನ ಸುಯೋಧನ
ನಾಡಿ ನೋಡಲಿ ಹಾಯ್ಕು ಹಾಸಂಗಿಗಳ ಹಾಯ್ಕೆನುತ ।
ಆಡಿದನು ಧರ್ಮಜನು ಖಾಡಾ
ಖಾಡಿಯಲಿ ಸಾರಿಗಳೊಡನೆ ಹೋ
ಗಾಡಿದನು ಭಂಡಾರವನು ಜನನಾಥ ಕೇಳೆಂದ ॥ ೬

ಸಾರಿ ಸೋತುವು ಸೋಲ ನಿಮಗನು
ಸಾರಿ ನಿಮ್ಮೈವರು ವನಾಂತಕೆ
ಸಾರಿ ಸಾಕಿನ್ನೊಡ್ಡಲಾಪರೆ ಮತ್ತೆ ನುಡಿ ಧನವ ।

ಭೂರಮಣ ಹೇಳೆನಲು ರೇಖೆಯ
ಬಾರಿಯೊಡ್ಡಕೆ ಪದ್ಮಸಂಖ್ಯೆಯ
ಭೂರಿಧನವಿದೆ ದಾಯಕೆಂದನು ಧರ್ಮನಂದನನು ॥ ೭

ಬರಹಕಿಮ್ಮಡಿ ನೂಱುಮಡಿ ಸಾ
ವಿರದ ಮಡಿ ಪರಿಯಂತವಿಕ್ಕಿತು
ಪರುಷ ನಗೆ ಕೊನೆಯಾಯ್ತು ಹೆಚ್ಚಿತು ಕಲಿಮಲಾವೇಶ ।
ಸ್ಥಿರವೆ ಹಿಂಗಿತು ವಾಸಿ ಪಾಡಿನ
ದುರುಳತನವುಬ್ಬೆದ್ದುದಡಿಗಡಿ
ಗರಸನೊಡ್ಡಿದ ಮೇಲೆ ಮೇಲೊಡ್ಡುವನು ಜೋಡಿಸಿದ ॥ ೮

ತೀರಿತಿಂದ್ರಪ್ರಸ್ಥದುರುಭಂ
ಡಾರ ತನ್ನರಮನೆಯ ಪೈಕದ
ವಾರಕದ ಭಂಗಾರವೊಡ್ಡಿತು ಕೋಟಿಸಂಖ್ಯೆಯಲಿ ।
ಸೇರಿತದು ಕುರುಪತಿಗೆ ರಾಯನ
ನಾರಿಯರ ರತ್ನಾಭರಣಶೃಂ
ಗಾರವೊಡ್ಡಿತು ಕೊಂಡು ಮುಳುಗಿತು ಖಡ್ಡತನ ನೃಪನ ॥ ೯

ನಕುಲಸಹದೇವಾರ್ಜುನರ ಮಣಿ
ಮಕುಟಕರ್ಣಾಭರಣಪದಕಾ
ದಿಕಸಮಸ್ತಾಭರಣವೊಡ್ಡಿತು ಹಲಗೆ ಯೊಂದಱಲಿ [1] ।
ವಿಕಟಮಾಯಾವಿಷಮಕರ್ಮವ [2]
ನಕಟ ಬಲ್ಲನೆ ಸಾಧುಜನಸೇ
ವಕನು ಸೋತನಸಾಧ್ಯವಾವುದು ವಿಧಿಯು ಮುಹಿಸೆಯಲಿ ॥ ೧೦

ಧರ್ಮರಾಯನನ್ನು ಕುರಿತು ಶಕುನಿಯ ಬಿರುನುಡಿಗಳು

ಸೋತೆಲಾ ಕೌಂತೇಯ ನಿಮಿಷಕೆ
ಬೀತುದೇ ನಿನ್ನಧಿಕಸಿರಿ ವಿ

---

1 ರೋಷತಿಮಿರದಲಿ, ಖ.　　2 ರೋಷತಿಮಿರವ, ಖ.

ಖ್ಯಾತಿ ಬಱತುದೆ ವೇಡೆಗೆದಱಿತೆ ಮನದ ವಾಸಿಗಳ |
ಪ್ರೀತಿಯುಂಟೇ ನಿಮಗೆ ಮತ್ತೀ
ದ್ಯೂತದಲಿ ಧನವಿಲ್ಲಲಾ ಗ
ರ್ವಾತಿರೇಕವ ಬೀಱುಗೊಂಡಿರೆ ಯೆಂದನಾಶಕುನಿ ॥ ೧೧

ಆಗ ಧರ್ಮರಾಯನ ಚಿಂತೆ.

ಖಿನ್ನನಾಥನು ರಾಜ್ಯಲಕ್ಷ್ಮಿಯು
ಬೆನ್ನ ಕಂಡನು ಕಳಚಿ ಹೋದ ನಿ
ಜೋನ್ನತಿಯುಳವನೀಶನಿದ್ದನು ಮುಱಿದ ಮಹಿಮೆಯಲಿ |
ಇನ್ನು ಪಣವೇನೋ ವಿರೋಧಿಗ
ಳನ್ನು ಭಂಗಿಸಿ ನಗುವರಿನ್ನೀ [1]
ಕೆನ್ನನಿಕ್ಕಿಯೆ [2] ದ್ಯೂತವಿಜಯವ ಸಾಧಿಸುವೆನೆಂದ ॥ ೧೨

ಬಳಿಕ ನಕುಲಾದಿಗಳನ್ನು ಪಣವಾಗಿಡುವಿಕೆ.

ಎಲವೊ ಘಡ ಘಡ ಶಕುನಿ ಗರ್ವದ
ತಳಿ ಮುಱಿವುದೇ ನಿಮ್ಮ ದುರ್ಮತಿ
ಗಳಿಗೆ ಹೂಡಿದ ದುರ್ಗವಿದೆ ನಮ್ಮಂತರಂಗದಲಿ |
ಉಱಿದ ಧನವೇಗುವುದು ಜೀವ
ಸ್ಥಳವಿದೇ ಮೇಲೊಡ್ಡುವೊಂದೇ
ಹಲಿಗೆಗೊಡ್ಡಿದೆನೆನ್ನ ನಕುಲನನೆಂದನಾಭೂಪ ॥ ೧೩

ಮಾಸಿಗನುಜನನೊಡ್ಡಿದರೆ ನಮ
ಗೀಸರಲಿ ಭಯವೇನು ನೋಡುವೆ
ವೈಸಲೇ ಹಾಸಂಗಿಗಳ ನೃಪ ಹಾಯ್ಕು ಹಾಯ್ಕೆನುತ |
ಆಶಕುನಿ ಪೂರ್ವಾರ್ಜಿತದ ಡೊ
ಳ್ಳಾಸದಲಿ ಡಾವರಿಸೆ ಧರ್ಮವಿ
ನಾಶಿ ನಕುಲನ ಗೆಲಿದು ಬೊಬ್ಬಿಱಿದವನಿಪಗೆ ನುಡಿದ ॥ ೧೪

---

1 ನುಡಿದಂದಕಿ, ಚ. 2 ನ್ನೆನ್ನನಿದಕ್ಕೀ, ಚ.

ಅರಸ ಸೋತೆಯೆ ನಕುಲನನು ಹೇ
ವರಿಸದಿರು ಹೇೞೊಡ್ಡವನು ನಿ
ಸ್ತರಣವೊಂದೇ ಹಲಗೆ ಸೋಲ್ವುದು ಹೇೞು ಹೇೞೆನಲು |
ವರಿಸಿದೆನು ಸಹದೇವನನು ನೆಱೆ
ಮರಳಿಚುವೆನೆನ್ನಖಿಳವಸ್ತೂ
ತ್ಕರವೆನೆಂದನು ಧರ್ಮನಂದನನರಸ ಕೇಳೆಂದ || ೧೫

ಹರಿಬದಲಿ ತನ್ನಖಿಳವಸ್ತೂ
ತ್ಕರವ ಮರಳಿಚುವನು ಮಹೀಪತಿ
ಕಿಱಿಯ ತಮ್ಮನ ವೊಡ್ಡಿದನು ಮಾದ್ರೀಕುಮಾರಕನ |
ಅರಸುದಾಯವೆ ಬಾ ಜಯಾಂಗದ
ಸಿರಿಯೆ ಬಾ ಕುರುರಾಯರಃಜೋ
ತ್ಕರದ ಸಿದ್ಧಿಯೆ ಬಾ ಯೆನುತ ಗರ್ಜಿಸಿದನಾಶಕುನಿ || ೧೬

ಏನ ಬಣ್ಣಿಸುವೆನು ವಿಕಾರಿಗ
ಳೇನ ನೆನೆಯರು ಕಪಟವಿಧದಲಿ
ಮಾನನಿಧಿ ಸೋತನನುಜದ್ವಯಮಹಾಧನವ |
ಗ್ಲಾನಿ ಚಿತ್ತದೊಳಿಲ್ಲ ಲೇಸು ಮ
ನೋನುರಾಗದೆ ಭೀಮಪಾರ್ಥರು
ತಾನಿದೊಮ್ಮಿಗೆ ಬದುಕಿದರು ಬೞಿಕೆಂದನಾಶಕುನಿ || ೧೭

ಭೇದಮಂತ್ರವ ಮಾಡಿ ನಮ್ಮನು
ಭೇದಿಸುವ ಗಡ ಸುಬಲಸುತನಕ
ಟೀದುರಾತ್ಮನ ನೋಡಿರೈ ಸಭ್ಯರು ಶಿವಾ ಯೆನುತ |
ಆದುರಾಗ್ರಹಿಲೋಕಜನಪರಿ
ವಾದಪದನಿರ್ಭೀತನಕ್ಷವಿ
ನೋದಕರ್ದಮಮಗ್ನನೊಡ್ಡಿದನಾಧನಂಜಯನ || ೧೮

ಎಲೆ ಧನಂಜಯ ನಿನ್ನನೊಡ್ಡಿದ
ಛಲಿ ಯುಧಿಷ್ಠಿರನಲ್ಲಿ ಸೋತರೆ

ಬಳಿಕ ನಿನ್ನನೆ ಮಾರಿದನಲಾ ಕೌರವೇಂದ್ರನಿಗೆ |
ತಿಳಿದು ಭೀಮಾರ್ಜುನರು ನೀವ್ ನಿ
ಮ್ಮೊಳಗೆ ಬಲಿದಿಹುದೆನಲು ಖತಿಯಲಿ
ಮುಳಿದು ಬೈದರು ಭೀಮಪಾರ್ಥರು ಜಱಿದು ಸೌಬಲನ ॥ ೧೯

ದೇಹಿಗೆರಡೇ ದೇಹವೆಲವೋ
ದೇಹಿ ಭೂಪತಿ ಧರ್ಮಪುತ್ರನ
ದೇಹವಾವಿದಱೊಳಗೆ ನಿನ್ನ ಕುಮಂತ್ರಭಾಷಿತವ |
ಊಹೆಗೊಂಬುದೆ ಕಪಟದಿಂದವ
ಗಾಹಿಸುವೆ ಸಾಕಿನ್ನು ಮೇಲಣ
ಗಾಹುಗತಕಗಳಮ್ಮೊಳೆಂದರು ಜಱಿದು ಸೌಬಲನ ॥ ೨೦

ಮೇಲೆ ಹೇಳುವುದೇನು ಸಾರಿಯು
ಸಾಲು ಮುಱಿದುದು ಸೆಱೆಯು ಕಳವಿನ
ಕಾಲು ಕೀಲ್ಗಳನೆತ್ತ ಬಲ್ಲರು ಕುಟಿಲಕೋವಿದರ |
ಹೇಳುವದಱಿಂ ಮುನ್ನ ಶಕುನಿಗೆ
ಬೀಳುವುವು ಬೇಕಾದ ದಾಯವು
ಕೌಳಿಕದ ವಿಧಿಪಾಶ ತೊಡಕಿತು ಕೆಡಹಿತರ್ಜುನನ ॥ ೨೧

ಸೋತಿರರಸರೆ ಮತ್ತೆ ಹೇಳೀ
ದ್ಯೂತಶಿಖಿಗಾಹುತಿಯನೆನೆ ಕುಂ
ತೀತನುಜನೊಡ್ಡಿದನು ವಿಗಡಬಕಾಸುರಾಂತಕನ |
ಆತುದೊಂದರಘಳಿಗೆ ಸೌಬಲ
ಸೋತ ಧರ್ಮಜ ಗೆಲಿದನವನಿಪ
ಸೋತ ಸೌಬಲ ಗೆಲಿದನೆಂಬವೊಲಾಯ್ತು ಘನರಭಸ ॥ ೨೨

ಆಹಲಗೆ ಸೋತುದು ಯುಧಿಷ್ಠಿರ
ನೂಹೆ ಮುಱಿದುದು ಮುಂದುಗೆಟ್ಟನು

ರಾಹು ಹಾಯ್ದ ಹಿಮಾಂಶುಮಂಡಲದುಱಿದ ಕಳೆಯಂತೆ ।
ತೋಹಿನಲಿ ತುಟ್ಟಿಸಿದ ಮೃಗದವೊ
ಲೂಹೆಯಱಿದುದು ಯಂತ್ರಸೂತ್ರದ
ಹೂಹೆ ಯಂತಿರೆ ಹಗೆಗೆ ತೆತ್ತನು ನೃಪತಿ ತನುಧನವ ॥ ೭೩

ಜನಪ ಮಾರಿದೆ ಭೀಮಸೇನಾ
ರ್ಜುನರ ಸಹಿತೊಡಹುಟ್ಟಿದರ ನಿ
ರ್ಧನಿಕನಾದ್ಯೆ ಮತ್ತೆ ಬಿಡದೇ ದ್ಯೂತದುರ್ವ್ಯಸನ ।
ಎನಲು ಶಕುನಿಯ ಜಱಿದು ತಾನೇ
ಧನವಲಾ ಸಾಕೊಂದುಹಲಗೆಯ
ಲೆನಗೆ ಜಯವಿದೆ ದಾಯವೆಂದೊಡಱಿದನು ನರನಾಥ ॥ ೭೪

ಹೇೞಲೇನದನವರು ರಚಿಸಿದ
ಬೇಳುವೆಯನಾಶಕುನಿಯೊಡ್ಡಿದ
ಕಾಲುಕಣಿ ಯೊಳಾರು ಬೀೞರು ನೃಪತಿ ನಿಮಿಷದಲಿ ।
ಬೀೞ್ಕೊಟ್ಟನು ತನ್ನನಾಜನ
ಜಾಲ ವಿದ್ದುದು ಬಿಗಿದ ಬೆಱಗಿನೊ
ಳಾಲಿಸುತ್ತಿರೆ ಜೇಯ ಧನವೇನೆಂದನಾಶಕುನಿ ॥ ೭೫

ದ್ರೌಪದಿಯನ್ನು ಪಣವಾಗಿಡುವಿಕೆ.

ಎಲವೊ ಸಾಬಲ ಸಾಕಿದೊಂದೇ
ಹಲಗೆಯಲಿ ಸರ್ವಸ್ವವನು ತಾ
ನಿಳುಹುವೆನು ನೀಲಾಲಕಿಯನೊಡ್ಡುವೆನು ದ್ರೌಪದಿಯ ।
ಉಱಿದ ಧನವೆಮ್ಮೈವರಿಗೆ ಸಿ
ಶ ಲಿತವಿದು ಹೂಡೆನಲು ಹರುಷದ
ಬಳಿಯ ಚೌಪಟಮಲ್ಲ ಸಾರಿಯ ಸಾಲ ಜೋಡಿಸಿದ ॥ ೭೬

ಆಡಿದನು ಯಮಸೂನು ಮಿಗೆ ಹೋ
ಗಾಡಿದನು ಮನುಮಥನ ಖಾಡಾ

ಖಾಡಿಖಾತಿಯನಕಟ ಮದನನ ಮಂತ್ರದೇವತೆಯು |
ಕೂಡೆ ತಿವಿದನು ಕಟ್ಟಿದನು ಕಳಿ
ದೋಡಿಸಿದ ಸಾರಿಗಳ ಸೋಲದ
ಝಾಡಿಯಲಿ ಚಿತ್ರಿಸಿದನರಸನ ಚಿತ್ತಭಿತ್ತಿಯಲಿ || ೭೭

ಬಳಿಕ ಧರ್ಮರಾಯನ ಚಿಂತೆ.

ಬೆಱಗು ಬಲಿದುದು [1] ಮನದ ಮಿಡುಕಿನ
ಮುಱುಕ ಮುಂದಲೆಗೊಟ್ಟುದಱಿವಿನ
ಸೆಱಗು ಹಾಱಿತು ಲಜ್ಜೆ ಬೆಳಗಿತು ಬಿಟ್ಟ ಬೀದಿಯಲಿ |
ಉಱುಬಿತಪದೆಸೆ ರಾಜ್ಯಲಕ್ಷ್ಮಿಯ
ತುಱುಬು ಕೈದೊಳಸಾಯ್ತು ಹಗೆಗಾ
ನಱಿಯೆನರಸನ ಚಿತ್ತವೃತ್ತಿಯ ಭಾವಭಂಗಿಯಲಿ || ೭೮

ದುರ್ಯೋಧನಾದಿಗಳ ಸಂತೋಷ

ಎಳನಗೆಯ ಕಟಕಿಗಳ ಹದುರಿನ
ಪಳವುಗಳ ಸನ್ನೆಗಳ ಸವಿ ಬ
ಯ್ಗುಳಿನ ಜಾಣಿನ ಸೋಹೆಗಳ ಜೊತ್ತಿನ ನವಾಯಿಗಳ |
ಬಳೆದಗಹಿನುಬ್ಬೆಗಳ ಮೀಸೆಯೊ
ಳಱಿವ ಬೆರಳ್ಗಳ ಕರ್ಣಸೈಂಧವ
ಖಳತಿಲಕದುಶ್ಶಾಸನಾದಿಗಳಿದ್ದುದಾಚೆಯಲಿ || ೭೯

ಕಳವಳದ ಕಂದೆಱೆವೆಗಳ ಕುರು
ಕುಲದ ನಿರ್ಮೂಲನದ ನಿಶ್ಚಯ
ದೊಳಗುವೆಱೆವಾಳೋಚನೆಯ ನಿರ್ದ್ರವದ ತಾಳಿಗೆಯ |
ತಳಿತಮೌನದ ಬೀತಹರುಷದ
ಜಲದ ನಯನದಲಿರ್ದರಾ ನೃಪ
ಕುಲತಿಲಕಬಾಹ್ಲಿಕಭೀಷ್ಮದ್ರೋಣಗೌತಮರು || ೮೦

1 ಬಳಿದುದು, ಚ.

ಇಟ್ಟ ಮೂಗಿನ ಬೆರಳ ನೆಲದಲಿ
ನೆಟ್ಟ ಕಂಗಳ ಕಳವು ಜೂಜಿನ
ದಿಟ್ಟರಾಟಕೆ ಬಲದ ಬೆಱಗಿನ ಬಿಗಿದ ಖಾತಿಗಳ ।
ತುಟ್ಟಿಸುವ ರಿಪುಗರ್ವಶಿಖಿಯಲಿ
ಸುಟ್ಟಕರಣಚತುಷ್ಟಯದಜಗ
ಜಟ್ಟಿಗಳು ಭೀಮಾರ್ಜುನಾದಿಗಳಿರ್ದರೀಚೆಯಲಿ ॥ ೨೧

ಹಾಸಗರ್ವದ ಮೌನದಲಿ ಸಂ
ತೋಷಗರ್ವದ ದುಗುಡದಲಿ ಸುವಿ
ಲಾಸಗರ್ವದ ಭೇದದಲಿ ಮದಗರ್ವ ಚಿಂತೆಯಲಿ ।
ವೈಸಿಕದ ಕಣಿ ಕುಟಿಲಮಂತ್ರದ
ಮೀಸಲಱಿಯದ ಕುಹಕವಿದ್ಯಾ
ವಾಸಗೃಹಧೃತರಾಷ್ಟ್ರನಿದ್ದನು ವಿಕೃತಭಾವದಲಿ ॥ ೨೨

ಜನಪತಿಯ ಜಾಡ್ಯವನು ಭೀಮಾ
ರ್ಜುನರ ಸೈರಣೆಗಳನು ದುರ್ಯೋ
ಧನನ ದುಶ್ಚೇಷ್ಟೆಯನು ಶಕುನಿಯಪಾರಕೃತ್ರಿಮವ ।
ತನತನಗೆ ಕಂಡರು ಮಹೀಸುರ
ಜನಪವೈಶ್ಯಚತುರ್ಥರುಕ್ಕಿದ
ಮನದೊಳಱಲಿತು ಬೈದರಚ್ಯುತಹರಚತುರ್ಮುಖರ ॥ ೨೩

ಶಕುನಿಯು ತನ್ನನ್ನು ಹೊಗಳಿಕೊಂಡುದು.

ಗೆಲಿದು ಕೊಟ್ಟೆನು ಸಕಲಚಾತು
ರ್ಬಲವನಾಭಂಡಾರಸಹಿತ
ಗ್ಗಳೆಯರೈಯ್ವರ ಜಯಿಸಿ ಕೊಟ್ಟೆನು ಕಮಲಮುಖಿಸಹಿತ ।
ಕಳಸವಿಟ್ಟೆನು ಕೊಟ್ಟಭಾಷೆಗೆ
ಯೆಲೆ ಸುಯೋಧನ ಯೊಂದುನಯನಾಂ
ಗುಲಿಯ ಸಂಕೇತದಲಿ ಸನ್ನೆಯ ಮಾಡಿದನು ಶಕುನಿ ॥ ೨೪

ನ್ಯಾಯವೆಮ್ಮದು ಮುನ್ನ ಸೋತಿರಿ
ಜೇಯ ನಿಮ್ಮೊಡಹುಟ್ಟಿದರು ಸಹಿ
ತಾಯತಾಕ್ಷಿಯ ಬಳಿಕ ಸೋತಿರಿ ಬಲುಹ ಮಾಡೆವಲೆ |
ರಾಯನೊಲಿದುದ ಮಾಡಲಾವ
ನ್ಯಾಯವರ್ತಿಗಳಲ್ಲಲೇ ಬೆಸ
ಸಾ ಯುಧಿಷ್ಠಿರ ಯೆಂದು ಕೈಗಳ ಮುಗಿದನಾಶಕುನಿ || ೧೫

ಆಗ ವಿದುರನನ್ನು ಕುರಿತು ದುರ್ಯೋಧನನ ವಕ್ರ ವಚನಗಳು.

ವಿದುರ ಬಾರೈ ನಮ್ಮ ವಶ ದ್ರೌ
ಪದಿಯ ಕರೆ ಬೆಸಗೊಂಬ ತೊತ್ತಿರ
ಸದನದಿಚ್ಛೆಯೊ ರಾಣಿವಾಸದ ಮನೆಯುಪೇಕ್ಷಿತವೊ |
ಬೆದಱಬೇಡಿನ್ನಬುಜಮುಖಿಗಾ
ವುದು ಮನೋರಥವೇನು ಹದನಂ
ಬುದ ಲತಾಂಗಿಯ ಕರೆಸಿ ಯೆಂದನು ಕೌರವರ ರಾಯ || ೧೬

ಆಗ ವಿದುರನು ದುರ್ಯೋಧನನ್ನು ಧಿಕ್ಕರಿಸಿ ಮಾತನಾಡಿದುದು.

ಸಿಡಿಲ ಪಟ್ಟಣಗಟ್ಟಿ ಶಾಖವ
ಗೊಡುವರೇ ಹರನೇತ್ರವಹ್ನಿಯೊ
ಳಡಬಳವ ಸುಡಬಗೆವರೆ ಮರುಳೇ ಮಹೀಪತಿಯೆ |
ಹೆಡತಲೆಯ ತುಱಿಸುವರೆ ಹಾವಿನ
ಹೆಡೆಯೊಳಕಟಾ ಪಾಂಡುಪುತ್ರರ
ಮಡದಿ ತೊತ್ತಹಳೇ ಶಿವಾ ಯೆಂದಱಿಲಿದನು ವಿದುರ || ೧೭

ಕಾಳಕೂಟದ ತೊಱೆಗಳಲಿ ಜಲ
ಕೇಳಿಯೇ ಕಾಲಾಂತಕನ ದಂ
ಷ್ಟ್ರಾಳಿಯಲಿ ನವಿಲುಯ್ಯಲೆಯ ನೀವಾಡಲಾಪಿರಲ |
ಕಾಲರುದ್ರನ ವಿಲಯನಾಟ್ಯದ
ಕೇಳಿಕೆಗೆ ನೀವರ್ತಿಕಾಱಱೆ
ಹೋಲದೈ ಶಿವ ಯೆನುತ ಕಂಬನಿದುಂಬಿದನು ವಿದುರ || ೧೮

ವಿದುರನ ಸುವಾಕ್ಯಗಳು.

ಬಡಗಲುತ್ತರಕುರುನರೇಂದ್ರರ
ನಡುಗಿಸಿದರುದಯಾದ್ರಿತನಕವೆ
ನಡೆದು ಮುಱಿದರು ಮೂಡಣರಸುಗಳತುಲಭುಜಬಲರ [1] |
ಪಡುವಲಗಣಿತಯವನರಿತ್ತಲು
ಗಡಿ ವಿಭೀಷಣರೀಮಹೀಶರ
ಬಡಿದ ಪಾಂಡವರರಸಿ ತೊತ್ತಹಳೇ ಶಿವಾ ಯೆಂದ || ೩೯

ಸುರಕರಿಯು ನೆಲಕಿಳುಹಿ ಮಾತೆಯು
ಧರೆಯುಱಿಯೆ ನೋಸಿಸಿದನಿಂದ್ರನ
ಹಿರಿಯುವುದ್ಯಾನವನು ವಹ್ನಿಗೆ ಕೊಟ್ಟು ಭುಂಜಿಸಲು |
ಅರಸ ಕೌರವ ಮರುಳೆ ಮೃತ್ಯುವ
ಬರಿಸಿ ಕೊಂಬರೆ ಮಂದಿರಕೆ ಸೀ
ನಱಿಯೆ ಫಲುಗುಣನೊಡನೆ ಕದನವ ಮಸೆವರೇ ಯೆಂದ || ೪೦

ತಿರುವ ಕೊರಳಲಿ ತೊಡಿಸಲಾರದೆ
ತೆರಳಿದರು ಚತುರಂಗದವನೀ
ಶ್ವರರು ಮಾಗಧಚೈದ್ಯಮೊದಲಾದತುಳಭುಜಬಲರು |
ತಿರುವನೇಱಿಸಿ ಧನುವನುಗಿದ
ಬ್ಬರಿಸಿ ಗಗನದ ಯಂತ್ರಮತ್ಸ್ಯವ
ಮುಱಿದ ಪಾಂಡವರರಸಿ ತೊತ್ತಹಳೇ ಶಿವಾ ಯೆಂದ || ೪೧

ಬಕನ ಮುಱಿದರು ವನದಲು ಹಿಡಿಂ
ಬಕನ ಹಣಿದರು ಮಾಗಧನ ಸು
ಪ್ರಕಟಬಲವಂಬುಜದ ನಾಳವನಾನೆ ಕೀೞ್ವಂತೆ |
ಸಕಲನೃಪಜನವೆಱಿಯೆ ಸೀೞಿದ
ನಕಟ ಮಾರಿಯು ಜೇಟವೇ ಪಾ
ತಕವಲಾ ಪಾಂಚಾಲಿ ತೊತ್ತಹಳೇ ಶಿವಾ ಯೆಂದ || ೪೨

1 ಮುಡಿದ ತೊತ್ತಹಳೇ ಶಿವಾಯೆಂದಱಿದನು ವಿದುರ, ಡ

ಸೋಲಿಸಿದೆನೀನೀಗಳೀನರ
ಪಾಲಕರ ಜೂಜಿನಲಿ ಮೇಲಣ
ಕಾಳಗದ ಕಣನೊಳಗೆ ಕವಿತಹ ಕೋಲ ತೋಹಿನಲಿ |
ಸೋಲ ವೊಂದಕೆ ನೂಱು ನೂಱಱ
ಮೇಲೆ ಸಾಸಿರಸಾಸಿರದ ಮೈ
ಸಾಲ ಲಕ್ಷವನಂತವಾಗಿಯೆ ತೆಗೆವರಿವರೆಂದ || ೪೩

ಎಳದು ಕರೆಸಾ ದ್ರೌಪದಿಯ ಸೀ
ಕಳಕಳಕೆ ಮೈಗೊಟ್ಟವೋಲ್ ಸಿ
ಙ್ಖಲಿತರಿಪುರತಿಸಮತೆಯಲಿ ತತ್ಸಮಯಪರಿಯಂತ |
ಬಱಿಕ ನೂವ ರ ಸತಿಯರಕ್ಕ್ರೈಯ
ಕಳಕಳದ ಬಿಡುಮುಡಿಯ ಬಸುಱಿನ
ಕಳದ ಬಿಱುವೊಯಿಲುಗಳ ಭಂಗಿಯ ಕಾಂಬಿರೆಲೆ ಯೆಂದ [1] || ೪೪

ದ್ರೌಪದಿಯ ಕರೆತರಲು ದುರ್ಯೋಧನನ, ಪ್ರಾತಿಕಾಮಿ
ಕನನ್ನು ಕಳುಹಿಸುವಿಕೆ.

ಇವನವರ ಬಹಿರಂಗಜೀವ [2]
ವ್ಯವಹರಣೆಯಾತನು ವೃಥಾ ನಾ
ನಿವನ ಕೆಣಕಿದೆನಕಟ ಬೋಧಭ್ರಾಂತಬಾಹಿರನ |
ಇವನಿರಲಿ ಬಾ ಪ್ರಾತಿಕಾಮಿಕ
ಯುವತಿಯನು ಕರೆ ಹೋಗು ನೀನೆನ
ಲವ ಹಸಾದವ ಹಾಯ್ಕಿ ಬಂದನು ದೇವಿಯರಮನೆಗೆ || ೪೫

ಬಂದು ಬಾಗಿಲ ಗಾಹಿಗಳ ಕರೆ
ದೆಂದವರಸಿಗೆ ಬಿನ್ನವಿಸಿ ತಾ
ಬಂದ ಹದನನು ಕಾರ್ಯವುಂಟೆನೆ ಹಲವು ಬಾಗಿಲಲಿ |

---

[1] ಭೇದ, ಡ. [2] ಕಾಂಬುವರೆಂದ, ಕ. ಖ

ಬಂದರಲ್ಲಿಯುದಲ್ಲಿಗಳುಹಿಸ
ಲಿಂದುಮುಖಿ ಕೇಳಿದಳು ಬರಹೇ
ಳೆಂದೊಡಾತನ ಹೊಗಿಸಿದರು ಹೊಕ್ಕನು ಸತೀಸಭೆಯು ॥ ೪೬

ಹೊಳೆವ ಕಂಗಳ ಕಾಂತಿಗಳ
ಥಳಥಳಿಪ ವದನ [1] ಪ್ರಭೆಯು ರತ್ನಾ
ವಳಿಯು ಬಹುವಿಧರಶ್ಮಿಗಳ ಲಾವಣ್ಯಲಹರಿಗಳ ।
ಎಳನಗೆಯು ಸುಳಿಪಲ್ಲ ಮುಕ್ತಾ
ವಳಿಯು ನಖಕಾಂತಿಗಳ ಬೆಳಗಿನ
ಬಳಗವೆನೆ ಬಾಲಿಕೆಯರಿರ್ದರು ಸತಿಯು ಬಳಸಿನಲಿ ॥ ೪೭

ಗಿಳಿಯು ಮೆಲ್ನುಡಿಗಳ ವಿನೋದದಿ
ಕೆಲರು ವೀಣಾರವದ ರಹಿಯಲಿ
ಕೆಲರು ಸರಸಸುಸಂಗಸಂಗೀತದ ಸಮಾಧಿಯಲಿ ।
ಕೆಲರು ನೆತ್ತದಲಮಳಮುಕ್ತಾ
ವಳಿಯು ಚೆನ್ನೆಯು ಚಮರಿಯರು ಕಂ
ಗೊಳಿಸಿದರಬಲೆಯು ಮಣಿಮಂಚದ ಸುತ್ತುವಳಯದಲಿ ॥ ೪೮

ಸಕಲಶಕ್ತಿಸ್ಫುರಿತವಿಮಳಾಂ
ಬಿಕೆಯವೋಲ್ ವರಮಂತ್ರದೇವೀ
ಪ್ರಕರಮಧ್ಯದಿ ಶೋಭಿಸುವ ಸಾವಿತ್ರಿಯಂದದಲಿ ।
ವಿಕಟರಶ್ಮಿನಿಬದ್ಧರತ್ನ
ಪ್ರಕರಮಧ್ಯದ ಕೌಸ್ತುಭದ ವೋಲ್
ಚಕಿತಬಾಲಮೃಗಾಕ್ಷಿ ಮೆಱೆದಳು ಯುವತಿಮಧ್ಯದೊಳು ॥ ೪೯

ಸುತ್ತಲೆಸೆಯೆ ವಿಲಾಸಿನೀಜನ
ಹತ್ತುಸಾವಿರ ನಡುವೆ ಕಂಡನು .
ಮತ್ತಕಾಶಿನಿಯನು ಪತಿವ್ರತೆಯರ ಶಿರೋಮಣಿಯ ।

---

1 ರದನ, ಡ.

ಹತ್ತಿರೈತರಲಂಜಿದನು ತ
ನ್ನುತ್ತಮಾಂಗಕೆ ಕರಯುಗವ ಚಾ
ಚುತ್ತ ಬಿನ್ನಹ ಮಾಡಿದನು ಪಾಂಚಾಲನಂದನೆಗೆ ॥ ೫೦

ಅವನು ದ್ರೌಪದಿಯ ಬಳಿ ಬಂದು ವಿಜ್ಞಾಪಿಸಿದುದು.

ತಾಯೆ ಬಿನ್ನಹವಿಂದು ನಿಮ್ಮಯ
ರಾಯ ಸೋತನು ಜೂಜಿನಲಿ ಕುರು
ರಾಯ ಗೆಲಿದನು ಕೋಶವನು ಕರಿತುರಗರಥಸಹಿತ ।
ನೋಯಲಾಗದು ಹಲವುಮಾತೇ
ನಾಯುಧಿಷ್ಠಿರನೃಪತಿ ಸೋತನು
ತಾಯೆ ಭೀಮಾ [1] ರ್ಜುನನಕುಲಸಹದೇವ [2] ನೀವ್ಸಹಿತ ॥ ೫೧

ಅರಳಿದಂಬುಜವನಕೆ ಮಂಜಿನ
ಸರಿಯು ಸುರಿವಂದದಲಿ ಸುಗ್ರೀಯ
ಸಿರಿಯ ಹೊಸಬೆಳುದಿಂಗಳನು ಬಲುಮುಗಿಲು ಕವಿವಂತೆ ।
ಚರನ ಬಿನ್ನಹಕರಸಿ ಮೊದಲಾ
ಗಿರೆ ಸಮಸ್ತಸಖೀಜನದ ಮುಖ
ಸರಸಿರುಹ ಬಾಡಿದುದು ಮುಸುಕಿತು ಮೌನಮಯಜಲದ । ೫೨

ದೂತ ಹೇಳ್ಳೈ ತಂದೆ ಜೂಜನ
ಜಾತರಿಪು ಮಾಡಿದನೆ ಸೋತನೆ
ಕೈತವದ ಬಲೆಗಾಱರವದಿರು ಶಕುನಿಕೌರವರು ।
ದ್ಯೂತದಲಿ ಮುನ್ನೇನನೊಡ್ಡಿಯೆ
ಸೋತನೆನ್ನನು ಶಿವ ಶಿವಾ ನಿ
ರ್ಧೂತಕಿಲ್ಬಿಷನರಸನೆಂದಳು ದ್ರೌಪದೀದೇವಿ ॥ ೫೩

ಸೋತಕ್ರಮವನ್ನು ವಿಚಾರಿಸಿದುದು.

ತಾಗಿದುದಲಾ ನಾರದಾದ್ಯರ
ನಾಗತವನಱುಹಿದರು ಹಿಂದೆ ವಿ

---

1 ವಾಯುಜಾ, ಡ. 2 ದೇವಾದಿ, ಡ.

ಯೋಗವಾಯ್ತೇ ಲಕ್ಷ್ಮಿಗಿಂದ್ರಪ್ರಸ್ಥಪುರವರದ ।
ಹೋಗಲಿದು ಮುನ್ನೇನನೊಡ್ಡಿಯೆ
ನೀಗಿದನು ಗಡ ತನ್ನನಿಂತಿದ
ರಾಗುಹೋಗೆಂತೆಂದು ನುಡಿದಳು ಪ್ರಾತಿಕಾಮಿಕಗೆ ॥ ೫೪

ಮೊದಲಲರ್ಥವ ಹೆಸರುಗೊಂಡೊ
ಡ್ಡಿದನು ಸೋತನು ಮಗುಟೆ ಮಗುಟೊ
ಡ್ಡಿದನು ಹೇರಾಳದಲಿ ಧನವನು ಕರಿಘಟಾವಳಿಯ ।
ಕುದುರೆ ರಥ ನಿಮ್ಮಡಿಯ ಮೇಳದ
ಸುದತಿಯರನೊಡ್ಡಿದನು ಸೋತನು
ತುದಿಯಲನುಜರನೊಡ್ಡಿ ಸೋತನು ದೇವಿ ಕೇಳೆಂದ ॥ ೫೫

ಬಳಿಕ ತನ್ನನು ಸೋತನಲ್ಲಿಂ
ಬಳಿಕ ನಿಮ್ಮಡಿಗಳಿಗೆ ಬಂದುದು
ಖಳರು ಶಕುನಿಸುಯೋಧನರು ನೀವಾಗಳೆಂದಿರಲೆ ।
ಅಳುಕಬೇಡಿನ್ನೇನು ಭೂಪತಿ
ತಿಲಕ ತನ್ನನು ಮುನ್ನ ಸೋತನು
ಬಳಿಕಲೆನ್ನನು ಸೋತನೇ ಹೇಳೆಂದಳಿಂದುಮುಖಿ ॥ ೫೬

ಅಹುದು ತನ್ನನೆ ಮುನ್ನ ಸೋತನು
ಮಹಿಳೆಗೊಡ್ಡಿದೆನೆಂದು ನಿಮ್ಮನು
ಮಹಿಪ ಸೋತನು ತಾಯೆ ಬಿಜಯಂಗೈಯ್ಯ ಬೇಹುದೆನೆ ।
ವಿಹಿತವಿದು ಮಾನುಷವೆ ದೈವದ
ಕುಹಕವೈ ಸಲೆ ಮಗನೆ ತಾನೇ
ಬಹೆನು ನೀ ಹೋಗೊಮ್ಮೆ ಹೇಳೀಮಾತನಾಸಭೆಗೆ ॥ ೫೭

ಆಗ ದ್ರೌಪದಿಯು ಬರಲು ಒಪ್ಪದೇ ಹೋಗುವಿಕೆ.

ಮುನ್ನ ತನ್ನನು ಸೋತ ಬಳಿಕಿನೊ
ಳೆನ್ನ ಸೋತರೆ ಸಲುವುದೇ ಸಂ
ಪನ್ನವಿಮಳಜ್ಞಾನರಱಿದೀಪ್ರಶ್ನೆಗುತ್ತರವ ।

ಎನ್ನ ಮೆಚ್ಚಿಸಿ ಕೊಡಲಿ ತಾ ಬಹೆ
ನಿನ್ನ ಹೋಗೆನಲವನು ಭಯದಲಿ
ತನ್ನೊಳಗೆ ಬೆದಱುತ್ತ ಬಂದನು ಕೌರವನ ಹೊರೆಗೆ ॥ ೫೮

ಅವನು ಸಭೆಗೆ ಬಂದು ಆವರ್ತಮಾನವನ್ನು ಹೇಳುವಿಕೆ

ಜೀಯ ದೇವಿಯರೆಂದಮಾತಿದು
ರಾಯ ಮುನ್ನವೆ ತನ್ನ ಸೋತಬು
ಜಾಯತಾಕ್ಷಿಯ ಬೞಿಕ ಸೋತೊಡೆ ಧರ್ಮಸೂಕ್ಷ್ಮದಲಿ ।
ರಾಯಸಭೆಯಲಿ ಹಿರಿಯರಱಿದಿದ
ಱಾಯತವ ಹೇೞಿದರೆ ಬಹೆನೆಂ
ದಾಯುವತಿ ಬಿನ್ನಹವ ಮಾಡಿದಳೆಂದು ಕೈಮುಗಿದ ॥ ೫೯

ರಾಯ ಸೋತನು ತನ್ನನಾವ
ನ್ಯಾಯದಲಿ ತಹುದಿಲ್ಲ ತೊತ್ತಿರ
ಲಾಯದಲಿ ಕೂಡುವೆವು ಕರೆ ಯೆನಲವನ ಗರಹೊಡೆದು ।
ವಾಯುಸುತನಂಜಿಸುವನೆಂದೀ
ನಾಯಿ ಬೆದಱಿದನಕಟ ದೂತನ
ಬಾಯ ನೋಡಾ ಯೆಂದು ಬೈದನು ಕೌರವರ ರಾಯ ॥ ೬೦

ದುಶ್ಶಾಸನನನ್ನು ಕಳುಹಿಸುವಿಕೆ.

ತಮ್ಮ ಬಾರೈ ಹೋಗು ನೀ ದಿಟ
ನಮ್ಮವರೆ ಹಿಡಿದೆಳದು ತಾ ನೃಪ
ರೆಮ್ಮ ಕಿಂಕರರೈವರಿವರಿದ್ದೇನ ಮಾಡುವರು ।
ತಮ್ಮ ಕರ್ಮವಿಪಾಕಗತಿ ತಮ
ತಮ್ಮನೇ ಕಾಡುವುದು ಧರ್ಮದೊ
ಳೆಮ್ಮ ಕಾರಣವಲ್ಲ ನೀ ಹೋಗೆಂದು ನೇಮಿಸಿದ ॥ ೬೧

ಗಾಳಿಯಳ್ಳಿಯ ನಿಱಿಯಲಗ್ನಿ
ಜ್ವಾಲೆಯಲಿ ತಡೆಯುವೆ ಕಡುಹಿನ
ಕಾಳಕೂಟದ ನದಿಗೆ ನಂಜಿನ ಹೊನಲು ಬೆಱಸಿತಲೆ ।

ವಾಳೆಯವೆ ದುಶ್ಶಾಸನನು ಜಗ
ದೂಱಿಗದ ದುಱುದುಂಬಿ ಕುರುಪತಿ
ಮೇಲೆ ನೇಮಿಸಲುಚಿತಗೈವನೆ ಭೂಪ ಕೇಳೆಂದ ॥ ೬೨

ಹರಿದನವ ಬೀದಿಯಲಿ ಬಿಡುವಲೆ
ವೆರಸಿ ಸತಿಯರಮನೆಗೆ ಬಾಗಿಲ
ಚರರು ತಡೆದರೆ ಮೆಟ್ಟಿದನು ತಿವಿದನು ಕಠಾರಿಯಲಿ ।
ತರುಣಿಯರು ಕಂಡಂಜಿ ಪೊಕ್ಕರು
ಸರಸಿಜಾಕ್ಷಿಯ ಮಱೆಯನಾಖಳ
ನುರುವಣಿಸಿದನು ರಾಹು ತಾರಾಧಿಪನ ತಗುಬ್ಬಿಯಂತೆ ॥ ೬೩

ದ್ರೌಪದಿಯನ್ನು ಕುರಿತು ದುಶ್ಶಾಸನನ ಕ್ರೂರವಚನಗಳು.

ಬಂದನವನಬುಜಾಕ್ಷಿ ಯಿದಿರಲಿ
ನಿಂದನಲೆಗೇ ಗರುವತನವಿದು
ಹಿಂದೆ ಸಲುವುದು ಸಲ್ಲದಿದು ಕುರುರಾಜಭವನದಲಿ ।
ಇಂದು ಮಱೆವರೆ ನಮ್ಮ ತೊತ್ತಿರ
ಮುಂದೆ ಮೆಱೆ ನಡೆ ಮಂಚದಿಂದಿೞಿ
ಯೆಂದು ಜಱೆದನು ಕೌರವಾನುಜನಾ ಮಹಾಸತಿಯ ॥ ೬೪

ಜನಪನನುಜನು ನೀನೆನಗೆ ಮೈ
ದುನನಲಾ ತಪ್ಪೇನು ಯಮನಂ
ದನನು ಸೋಲಲಿ ತನ್ನ ಪ್ರಶ್ನೆಗೆ ಕೊಡಲಿ ಮಱುಮಾತ ।
ಅನುಜ ಕೇಳೈ ಪುಷ್ಪವತಿಯಾ
ನೆನಗೆ ರಾಜಸಭಾಪ್ರವೇಶನ
ವನುಚಿತವಲೇ ಹೇಳೆನಲು ಖಳರಾಯ ಖತಿಗೊಂಡ ॥ ೬೫

ಎಲ್ಲಿಯದು ದುಷ್ಪ್ರಶ್ನೆ ಮಱುಮಾ
ತೆಲ್ಲಿಯದು ನೀ ಪುಷ್ಪವತಿಯಾ
ಗಲ್ಲಿ ಫಲವತಿಯಾಗು ನಡೆ ಕುರುರಾಜಭವನದಲಿ ।

ಖುಲ್ಲರೈವರು ತಮ್ಮ ಸೋತರು
ಬಲ್ಲವಿಕೆಯುಚಿತವನು ಮೌಳಿಯು
ನಲ್ಲಿ ತೋಱೂ ಯೆನುತ ತಪ್ಪಿದನಹಹ ಸಿರಿಮುಡಿಗೆ ॥ ೬೬

ಆಮಹೀಶಕ್ರತುವರದೊಳು
ದ್ದಾಮಮುನಿಜನರಚಿತಮಂತ್ರ
ಸ್ತೋಮಪುಷ್ಕರಪೂತಪುಣ್ಯಜಲಾಭಿಷೇಚನದ ।
ಶ್ರೀಮುಡಿಗೆ ಕೈಯಿಕ್ಕಿದನು ವರ
ಕಾಮಿನೀನಿಕುರುಂಬ ಮಕಟಕ
ಟಾ ಮಹಾಸತಿ ಶಿವ ಶಿವಾ ಯೆಂದಂದೊದಱಿತಲ್ಲಲ್ಲಿ ॥ ೬೭

ಕೆದಱಿದುವು ಸೂಸಕದ ಮುತ್ತುಗ
ಳುದುರಿದುದು ಸೀಮಂತಮಣಿಗಳ
ಹೊದಱು ಮುಱಿದುದು ಕರ್ಣಪೂರದ ಮೌಕ್ತಿಕಾವಳಿಯು [1] ।
ಸುದತಿಯರು ಗೋಳಿಡುತ ಬರೆ ಮೆ
ಟ್ಟಿದನು ಪಾತಕಿ ಕಾಲೊಳಡ್ಡಬಿ
ದ್ದುದು ಸಖೀಜನವೆಳೆದು ಝಾಡಿಸಿ ಜಱಿದು ಜೋಂಪಿಸಿದ ॥ ೬೮

ಮಣಿದ ತನುವಿನ ವೇಗಗತಿಯಲಿ
ಝಣಝಣಿತನೂಪುರದ ರವಕಂ
ಕಣದ ಧ್ವನಿ ಕೇವಣದ ಹೊಂಗಿಱುಗೆಜ್ಜೆಗಳ ರಭಸ ।
ಗಣಿಕೆಯರ ಕೆಳದಿಯರ ಹಾ ಹಾ
ರಣಿತಕಿವು ನೆರವಾದುವಾಪ
ಟ್ಟಣವ ತುಂಬಿತು ಶೋಕರಸವೇನೆಂಬೆನದ್ಭುತವ ॥ ೬೯

ಹಡಪದವರಾಸೀಗರಿಯು ಕ
ನ್ನಡಿಯವರು ಮೇಳದ ವಿನೋದದ
ನುಡಿ ನಗೆಯ ಸಖಿಯರು ಪಸಾಯಿತೆಯರಾಪ್ತದಾಸಿಯರು ।

---

1 ರತ್ನದೋಲೆಗಳು, ಚ.

ದ್ರೌಪದಿಯನ್ನು ಸಭೆಗೆ ಕರೆತಂದುದು.

ಒಡನೆ ಬಂದರು ಕಂಬನಿಯ ಬಿಡು
ಮುಡಿಯ ಹಾಹಾರವದ ರಭಸದ
ನಡೆಯಲಖಿಳವಿಳಾಸಿನಿಯರು ಸಹಸ್ರಸಂಖ್ಯೆಯಲಿ ॥ ೨೦

ನಗೆಮೊಗವನೊಮ್ಮೆಯು ಪಯೋಧರ
ಯುಗವ ನೋಡುವ ಸಖ್ಯದಲಿ ದೃ
ಗ್ಯುಗಳಜಲಬಿಂದುಗಳ ಗಾಜಳಬಿಂದು ಸುರಿವಂತೆ ।
ಒಗುವ ಖಂಡಿತಹಾರಮುಕ್ತಾ
ಳಿಗಳು ಮೆಱೆದುವು ಮಾನಿನಿಯರು
ಬ್ಬೆಗದ ರೋದನರೌರವದೊಳೈತಂದಳಿಂದುಮುಖಿ ॥ ೨೧

ಬೆದಱುಗಂಗಳ ಬಿಟ್ಟಮಂಡೆಯ [1]
ಪುದಿದ ಹಾಹಾರವದ ತೊಡಕಿದ
ಪದಯುಗದ ಮೇಲುದಿನ ಬೀದಿಯ ಧೂಳಿಧೂಸರದ ।
ವದನಕಮಲದ ಖಳನ ವಾಮಾಂ
ಗದಲಿ ಬಾಗಿದ ತನುಲತೆಯ ವರ
ಸುದತಿ ಬಂದಳು ರಾಜಸಭೆಗೆ ನೃಪಾಲ ಕೇಳೆಂದ ॥ ೨೨

ಆಗ ದ್ರೌಪದಿಯ ಅವಸ್ಥೆಯನ್ನು ನೋಡಿ ಸಭೆಗೆ ಶೋಕ.

ಅಹಹ ಪಾಂಡವರಾಯಪಟ್ಟದ
ಮಹಿಳೆಗಿದು ವಿಧಿಯೇ ಮಹಾಕ್ರತು
ವಿಹಿತಮಂತ್ರಜಲಾಭಿಷಿಕ್ತಕಚಾಗ್ರಗಿದು ವಿಧಿಯೆ ।
ಮಿಹಿರಬಿಂಬವ ಕಾಣದಾನೃಪ
ಮಹಿಳೆಗಿದು ವಿಧಿಯೇ ವಿಧಾತ್ರನ
ಕುಹಕವೈ ಸಲೆ ಶಿವ ಶಿವಾ ಯೆಂದರು ಸಭಾಸದರು ॥ ೨೩

---

1 ವಂಕೆಯ,

ತುಳುಕಿದುವು ಕಂಬನಿಗಳಾಸಭೆ
ಯೊಳಗೆ ದುಶ್ಶಾಸನಸುಯೋಧನ
ಖಳಶಿರೋಮಣಿಶಕುನಿಕರ್ಣಜಯದ್ರಥಾದ್ಯರಿಗೆ |
ತಳಿತುದದ್ಭುತಹರ್ಷ ಮುಖಮಂ
ಡಲಕೆ ಸೀರೆಯನಿಕ್ಕಿ ನಯನೋ
ಚ್ಚಲಿತಜಲಧಾರೆಯಲಿ ನೆನೆದುದು ಸಭೆ ವಿಷಾದದಲಿ || ೨೪

ವ್ಯಾಕುಲವನಿತ ಕಾಂಬ ಕಣ್ಣುಗ
ಳೇಕೆ ರಾಜಕುಮಾರಿಯಾಕೆಯ
ಶೋಕರಸವನು ಕುಡಿವ ಕರ್ಣದ್ವಯವಿದೇಕೆಮಗೆ |
ಏಕೆ ವಿಧಿ ನಿರ್ಮಿಸಿದನೋ ನಾ
ವೇಕೆ ಸಪ್ರಾಣರೊ ಶಿವಾ ಯೆಂ
ದಾಕಠೋರರ ಬೈದುದಾಸಭೆಯೊಳು ಬುಧಸ್ತೋಮ || ೨೫

ವನಜಮುಖಿಯುಕ್ಕಿಯನು ದುಶ್ಶಾ
ಸನನ ದುರ್ನೀತಿಯನು ದುರ್ಯೋ
ಧನನ ದುಶ್ಚೇಷ್ಟೆಯನು ಕಂಡೀಭೀಮಫಲುಗುಣರು |
ಮನದೊಳಗೆ ಕೌರವನ ಕರುಳನು
ತನಿರಕುತದಲಿ ಕುದಿಸಿದರು ನಿಜ
ಜನಿತಕರ್ಮಕ್ರಮವ ನೆನೆವುದನಱಿದನಾಭೂಪ || ೨೬

ಹುಬ್ಬಿನಲಿ ನಿಲಿಸಿದನು ಪವನಜ
ನುಬ್ಬಟೆಯನರ್ಜುನನ ವಿಕೃತಿಯ
ನಿಬ್ಬರಾಳಾಪವನು ಧರ್ಮರಹಸ್ಯನಿಷ್ಠೆಯಲಿ |
ಹಬ್ಬಿದುದು ಭೀಷ್ಮಂಗೆ ಶೋಕದ
ಮಬ್ಬು ಗುರುಗೌತಮರು ವಿದುರನ
ಖರ್ಬಖೇದಾಂಬುಧಿಯೊಳದ್ದರು ಭೂಪ ಕೇಳೆಂದ || ೨೭

ಪಾಂಡವರ ಸೋಲನ್ನು ಅವರ ಮಕ್ಕಳು ಕೇಳಿದುದು.

ಅರಸ ಕೇಳ್ಳೈ ಕೂಡೆ ಹಸ್ತಿನ
ಪುರದೊಳಾಯ್ತು ವಾರ್ತೆ ಬಳಿಕಾ
ಪುರದ ಬಹಿರುದ್ಯಾನವೀಥಿಗಳೊಳಗೆ ಹರಹಿನಲಿ ।
ಅರಸಿಯರು ಸಾಭದ್ರನವರ್ಕೈ
ವರು ಕುಮಾರರು ಮಂತ್ರಿಗಳು ಮು
ಖ್ಯರು ಪಸಾಯ್ತರು ಕೇಳಿದರು ಪಾಂಡವರ್ರಾಜಯವ ॥ ೭೮

ಆಗ ಅವರು ಯುದ್ಧಕ್ಕಾಗಿ ಸಿದ್ಧರಾಗುವಿಕೆ.

ಬಂದರಿದಿರೊಳು ಕೌರವರ ಕಡೆ
ನಂದನರ ಕಡೆಯಾವುದೆನೆ ಸಾ
ವಂದದಲಿ ಹೊಯ್ದಾಡಿ ಹಿಡಿಪವು ಸುರರ ಸೂಳೆಯರ ।
ಇಂದು ನೋಡುವೆವೆಂದು [1] ಸೇನಾ
ವೃಂದಸಜ್ಜೋಡಿನಲಿ ಕಾಳಗ
ಕೆಂದು ಮೋಹರವಾಗಿ ನಿಂದುದು ಪುರದ ಬಾಹೆಯಲಿ ॥ ೭೯

ಆಗ ಧರ್ಮರಾಯನ ಸಮಾಧಾನ.

ಕೇಳಿದನು ಧರ್ಮಜನು ತನ್ನಯ
ಪಾಳೆಯದ ಗಜಬಜವ ಸಿಲ್ಲಿಸ
ಹೇಟಿ ಕಳುಹಿದನಾಗ ಧೌಮ್ಯನನಾತಸಿದಿರ್ಕೈದಿ ।
ಕಾಲತನಯನ ಸತ್ಯವನು ನೀವ್
ಪಾಲಿಸುವುದೊಡೀಚಾತುರಂಗದ
ಮೇಳನವು ಬೇಡೆಂದು ಮಾಣಿಸಿ ಮರಳಿದನು ಮುನಿಪ ॥ ೮೦

ದುರ್ಯೋಧನನ ಕ್ರೂರವಚನ

ಇತ್ತಲಬಲೆಯು ವಿಧಿಯು ಕೇಳ್ಳತಿ
ಮತ್ತನೈ ಧೃತರಾಷ್ಟ್ರಸುತನಾ
ಮತ್ತಗಜಗಾಮಿನಿಯು ಬಿಡಿಸಿದನವನ ಕೈಯ್ಯಿಂದ ।

1 ಎಂದು ತಮ್ಮೊಳು ನೆರೆದು, ಚ.

ನೆತ್ತ ಸೋತುದು ನಿನ್ನನೂಡಿ ನೃ
ಪೋತ್ತಮನು ಸಲೆ ಮಾರಮಾರಿದ
ನತ್ತೊಡೇನಹುದೆಲೆಗೆ ನಡೆ ತೊತ್ತಿರ ಹಿಂಡ ಹೊಗುಯೆಂದ ॥೮೧

ದ್ರೌಪದಿಯು ಯುಕ್ತವನ್ನು ಹೇಳುವಿಕೆ.

ಲಲಿತಬುದ್ಧಿಗಳೀಗ ನೋಡಿರಿ [1]
ಲಲನೆಯನು [2] ಸತಿ ದಿಟ್ಟಯುನ್ನದಿ
ರೆಲೆ ಸುಯೋಧನ ಕೇಳು ಸಭೆ ಯಿದು ದೋಷರಹಿತವಲೆ ।
ಗೆಲುವುದೆಂತುಟೊ ತನ್ನ ಸೋಲಿನ
ಬಳಿಕ ಸೋತರೆ ಧರ್ಮಗತಿಯನು
ತಿಳಿದು ಹೇಳಲಿ ಸತ್ಯಭಾಸದರೆಂದಳಿಂದುಮುಖಿ ॥ ೮೨

ಹಿರಿಯರಿಲ್ಲದ ಸಭೆ ಮನುಷ್ಯರ
ನೆರವಿಯದು ಸಭೆಯಲ್ಲ ಮೂರ್ಖರು
ಹಿರಿಯರಲ್ಲ ಯಥಾರ್ಥಭಾಷಣಭೀತಚೇತನರು ।
ಹಿರಿಯರಿದೆ ಸಾಮಾಜಿಕರು ಸ
ಚ್ಚರಿತರಿದೆಲಾ ಸ್ತ್ರೀಮತವನು
ತ್ತರಿಸಬಾರದೆ ಧರ್ಮಮಾರ್ಗದೊಳೆಂದಳಿಂದುಮುಖಿ ॥ ೮೩

ದ್ರೌಪದಿಯನ್ನು ಕುರಿತು ಕರ್ಣನ ಕ್ರೂರವಚನ.

ಚಪಳ ಘಡ ಹೋಗಿವಳು ಹಲಬರ
ನುಪಚರಿಸಿನುಡಿಯಲಾದುದು
ದ್ರುಪದನಂದನೆ ನಡೆ ವಿಳಾಸಿನಿಯರ ನಿವಾಸದಲಿ ।
ಕೃಪಣವೇ ಕುರುರಾಯ ನಿನಗಿ
ನ್ನುಪದೆಸೆಯ ಹೊಲೆ ಹೋಯ್ತು ರಾಯನ
ವಿಪುಳವಿಭವವನನುಭವಿಸು ಹೋಗೆಂದನಾಕರ್ಣ ॥ ೮೪

---

1 ಗಳೀಕ ನಾವೇ, ಕ. ಚ. ಗಳಿವೆಗೆ ನಾವೇ, ಜ, ಝ.

2 ಲಲನೆಯುಂ, ಕ. ಚ. ಝ.

ಶಕುನಿಯ ಬಿರುನುಡಿ

ಅಹುದಲೇ ಬಳಿಕೇನು ದಾಸ್ಯಕೆ
ವಿಹಿತವಾದುದು ನಿನ್ನ ತನುವಿನ
ಲಹ ಮನೋವ್ಯಥೆ ಯೇಕೆ ರಾಣೀವಾಸಪದವಿಯಲಿ ।
ಮಹಿಳೆಯರ ಸಖ್ಯದಲಿ ಸೌಖ್ಯದ
ರಹಣಿಗೊಡಬಡು ಮಾರಕದಲತಿ
ಬಹಳಭೂಷಣಭಾರದಲಿ ಮುಱೆಯೆಂದನಾಶಕುನಿ ॥ ೮೫

ಭೀಷ್ಮರ ವಾಕ್ಯ.

ಮಾರಕದ ವಿವಿಧಾಭರಣಶೃಂ
ಗಾರವಂತಿರಲೀಕೆ ಯಾಡಿದ
ಸಾರಭಾಷೆಗೆ ನೆನೆಯಿರೃ ಸಿವಾರ್ಹಸಂಗತಿಯು ।
ಓರೆಪೋರೆಯಲಾಡಿ ಧರ್ಮದ
ಧಾರಣೆಯ ದಟ್ಟಿಸುವುದಿದು ಗಂ
ಭೀರರಿಗೆ ಗರುವಾಯಿಯೋ ಸುಡಲೆಂದನಾಭೀಷ್ಮ ॥ ೮೬

ತುಷ್ಟಿಸಲಿ ಧನಮಾನ ಗರ್ವದ
ಬೆಟ್ಟ ಬಿಱಯಲಿ ಜೀವನೊಡಲನು
ಬಿಟ್ಟು ಹೋಗಲಿ ಬಿಡೆನು ಧರ್ಮವನೆಂದು ಯಮಸೂನು ।
ನೆಟ್ಟನೇ ನಿಶ್ಚೈಸಿದನು * ಜಗ
ಜಟ್ಟಿ ಭೀಮಾರ್ಜುನರಿದೆಲ್ಲವ
ಬಿಟ್ಟು ಭೂಪನ ಮನವ ಹಿಡಿದಿಹರೆಂದನಾಭೀಷ್ಮ ॥ ೮೭

ಅಱಿಯದಿಹುದೇ ಧರ್ಮ ಸತ್ಯದ
ನೆಳಲು ಪೋಗದೆ ಕೀರ್ತಿವಧುವಿನ
ಸುಳಿವು ನೋಯದೆ ತಳಿರು ಬಾಡದೆ ಧೈರ್ಯ ಸುರಕುಜದ ।

* ನೊಡ ಹುಟ್ಟಿದರು ಮನ್ನಿಸಿಪರಲ್ಲದೆ ಹುಟ್ಟಿಹೊಂದಲು ಗತಿಯಹುದೆ ನಿಮ
ಗೆಂದನಾಭೀಷ್ಮ * ಖ.

ಹಳಿವಿಗಳುಕದೆ ವೈರಿವರ್ಗದ
ಕಳಕಳಕೆ ಕೈಗೊಡದೆ ನೃಪನಿ
ರ್ಮಳದೊಳಿರ್ದೊಡೆ ನಿಮಗೆ ಸದರವೆ ಯೆಂದನಾಭೀಷ್ಮ ॥ ೮೮

ಆಗ ದುರ್ಯೋಧನನು ಭೀಷ್ಮಾದಿಗಳನ್ನು ಜರಿದುದು.

ಸೋತ ಬಳಿಕಿವಳಮ್ಮ ವಶವ
ಖ್ಯಾತಿಯಲಿ ನಾವ್ ನಡೆವರಲ್ಲ ವ್ಯ
ಥಾತಿರೇಕವ ನುಡಿವಿರೇ ತಾವಂಜುವುವೆ ನಿಮಗೆ ।
ಈತಳೋದರಿ ತೊತ್ತಿರಲಿ ಸಂ
ಘಾತವಾಗಲಿ ಸಾಕು ನಿಮ್ಮಯ
ಮಾತೆನುತ ಕುರುರಾಯ ಜಱಿದನು ಭೀಷ್ಮಗುರುಕೃಪರ ॥ ೮೯

ಭೀಮನ ಕೋಪ.

ನೊಂದನಾಮಾತಿನಲಿ ಮಾರುತ
ನಂದನನು ಸಹದೇವನನು ಕರೆ
ದೆಂದನಗ್ನಿಯ ತಾ ಯುಧಿಷ್ಠಿರನೃಪನ ತೋಳುಗಳ ।
ಮಂದಿ ನೋಡಲು ಸುಡುವೆನೇಪೇ
ಳೆಂದು ಜಱಿದೊಡೆ ಹಿಡಿದು ಮಾದ್ರೀ
ನಂದನನ ನಿಲಿಸಿದನು ಫಲುಗುಣ ನುಡಿದನನಿಲಜನ ॥ ೯೦

ಅರ್ಜುನನ ಸಮಾಧಾನ.

ಏನಿದೇನೈ ಭೀಮ ನಿಲು ಯಮ
ಸೂನು ಶಿವ ಶಿವ ಗುರುವಲಾ ನಮ
ಗೀನಿತಂಬಿನಿಯಾದಿಯಾದ ಸಮಸ್ತವಸ್ತುಗಳು ।
ಈನರೇಂದ್ರಗೆ ಸರಿಯೆ ಕುಂತೀ
ಸೂನುವೇ ಪ್ರಾಣಾರ್ಥದಿಂದ ಸ
ಮಾನನೈ ನಮಗೀತನೇ ಗತಿಯೆಂದನಾಪಾರ್ಥ ॥ ೯೧

ಭೀಮ ವಾಕ್ಯ.

ಹಿಂಗಿ ಹೋಗಲಿ ತನುವಿನಸು ಸ
ಪ್ತಾಂಗ ಬೇಯಲಿ ಶೋಡಿ ಮನದಲಿ
ಹಿಂಗುವುದೆ ಹರ ಹರ ಧನಂಜಯ ಕಾಕನಾಡಿದೆಲ |
ಅಂಗನೆಯ ಮೇಲೊಡ್ಡವೇ ಲಲಿ
ತಾಂಗಿಗೀವಿಧಿಯೇಕೆ ನಮಗೀ
ಭಂಗ ಸಾಲದೆ ಸುಡುವೆನಾದೊಡೆ ತನ್ನ ತೋಳುಗಳ || ೯೨

ಈಯುವಸ್ಥೆಗೆ ತಂದ ಕೌರವ
ನಾಯಿಗಳ ಸಿಟ್ಟಿಲುವ ಮುಳಿದು ನ
ವಾಯಿಯಲಿ ಘಟ್ಟಿಸದೆ ಕೊಬ್ಬಿದ ತನ್ನ ತೋಳುಗಳ |
ವಾಯುಸಖನಲಿ ಸುಡುವೆನೀಗಳ
ಬೀಯವಾಗಲಿ ದೇಹವಾಟಂ
ದ್ರಾಯತವೆ ಯೆಂದೆಂಡನೊಡನೆ ಮಿಡುಕಿದನು ಕಲಿಭೀಮ || ೯೩

ಕೋಪ ಕಿಡಿಯಿಡಲಾಗ ರೌದ್ರಾ
ಟೋಪದಲಿ ರಂಜಿಸುವ ಭೀಮನ
ರೂಪ ಕಂಡನು ನುಡಿದನಾಗಳ ಬೆರಳ ಸನ್ನೆಯಲಿ |
ಪಾಪರಹಿತನೆ ಸಕಲಧರ್ಮಕ
ಳಾಪ ನೀನರಿಯದುದೆ ಯಿಾಕುರು
ಭೂಪನು ಭ್ರಮಿತನವ ಸೈರಿಸು ಯೆಂದನಾಭೂಪ || ೯೪

ದ್ರೌಪದಿಯು ಭೀಷ್ಮಾದಿಗಳನ್ನು ಕುರಿತು ಹೇಳುವಿಕೆ.

ಅಕಟ ಧರ್ಮಜ ಭೀಮಫಲುಗುಣ
ನಕುಲಸಹದೇವಾದ್ಯರಿರ ಬಾ
ಲಿಕೆಯನೊಪ್ಪಿಸಿ ಕೊಟ್ಟಿರೇ ಮೃತ್ಯುವಿನ ತಾಳಿಗೆಗೆ |
ವಿಕಳರಾದಿರೆ ನಿಲ್ಲಿ ನೀವಿಂ
ದಕುಟಿಲರಲಾ ಭೀಷ್ಮಗುರುಬಾ
ಹ್ಲಿಕಕೃಪಾದಿಗಳುತ್ತರವ ಕೊಡಿ ಯೆಂದಳಂದುಮುಖಿ || ೯೫

ಕಂಗಳಿಂದನುಯೋಗ ನಿಜಪ
ಸ್ತಾಂಗುಳಿಯುಉತ್ತರ ಲಸದ್ಭ್ರೂ
ಭಂಗದಲಿ ಸಂದೇಹ ಮುಖವಿಕೃತಿಯಲಿ ದುರ್ನೀತಿ ।
ಇಂಗಿತದಲಾಂಗಿಕದ ಭಾವದ
ಭಂಗವಿಧಿಯನು ಯೋಗಯುಕ್ತನ
ಯಂಗಳನು ತಿಳಿದುಸುರದಿರ್ದುದು ಸಭೆ ಸುಭೀತಿಯಲಿ ॥ ೯೬

ವಿಕರ್ಣನ ನೀತಿವಚನಗಳು

ಅಱಿದು ಮೌನವ್ರೊ ಮೇಣು ಮಾಸಿನಿ
ಯೊಱಲುತಿರಲೆಂದೆಂಬುಪೇಕ್ಷೆಯೊ
ಮುಱಿದು ನುಡಿವುದಸಾಧ್ಯವೋ ಮೇಣಾವುದಿದಱೊಳಗೆ ।
ಅಱಿ ಯಿರೇಸಮವರ್ತಿದೂತರ
ಮುಖಕವನು ನೀವೇಕೆ ನಿಮ್ಮನು
ಮಱೆದಿರೆಂದು ವಿಕರ್ಣ ನುಡಿದನು ತತ್ಸಭಾಸದರ ॥ ೯೭

ಹುಸಿ ವಚನಪಾರುಷ್ಯ ಲಲನಾ
ವಿಷಯ ಮೃಗತೃಷ್ಣಾ ಪಿಪಾಸಾ
ವ್ಯಸನಿ ಬಲ್ಲನೆ ಧರ್ಮ ತತ್ತ್ವರಹಸ್ಯನಿಶ್ಚಯವ ।
ಪುಸುರಲಮ್ಮರೆ ವೈದಿಕದ ತನಿ
ರಸದ ಸವಿ ನಿಮಗಲ್ಲದಾರಿಗೆ
ಬಸಿದು ಬೀಱ್ವುದು ಭೀಷ್ಮ ಯೆಂದು ವಿಕರ್ಣ ಗರ್ಜಿಸಿದ ॥ ೮೯

ತನ್ನ ಸೋತಾಗಳೆ ಮಹೀಪತಿ
ಯನ್ಯನಾದನು ಸತಿಗೆ ತನ್ನಿಂ
ಮುನ್ನ ಸೋತೊಡೆ ತನ್ನ ಧನವೇ ಸಲೆ ವಿಚಾರಿಸಲು ।
ಅನ್ಯನನ್ಯಳ ಸೋತ ಗಡ ತಾ
ತನ್ನ ಧನವೆಂದರಸ ಶಕುನಿಯ
ಬಿನ್ನಣಕೆ ಬೆಂಡಾದನೆಂದಾ ವಿಕರ್ಣ ಗರ್ಜಿಸಿದ ॥ ೯೯

ಕರ್ಣನ ಅಧಿಕ್ಷೇಪವಾಕ್ಯ.

* ಘಡ ವಿಕಾರವೆ ನಮ್ಮೊಡನೆ ಬಾ
ಯ್ಬಡಿಕತನವೇ ಕುರುಮಹೀಪತಿ
ಯೊಡನೆ ಹುಟ್ಟಿದೆ ಯಾದ ಕಾರಣ ಬಿಟ್ಟೆನೀಸರಲಿ ।
ನುಡಿವೊಡೆಯು ಭೀಷ್ಮಾದಿಗಳು ಸಿ
ನ್ನೊಡಬಡಿಸಲೆಂತಱಿವೆ ಧರ್ಮದ
ಕಡೆಮೊದಲ ಕೈವಾರ ನಿನಗೇಕೆಂದನಾಕರ್ಣ ॥ ೧೦೦

ಏಕಪತಿ ಬಹುಸತಿಯರೆಂಬುದು
ಲೋಕಪದ್ಧತಿ ಯಾದುದದು ತಾ
ನೇಕಸತಿ ಬಹುಪತಿಗಳಿದು ವೈದಿಕವಿರುದ್ಧವಲೆ ।
ಲೌಕಿಕವ್ಯವಹಿತದ ಧರ್ಮವ
ನೀಕುಮಾರ್ಗಿಗಳಲ್ಲಿ ಕಂಡೆವು
ನೀ ಕುರುವ್ರಜದೊಳಗೆ ಜನಿಸೆ ವಿಕರ್ಣ ಹೋಗೆಂದ ॥ ೧೦೧

ಅದಕ್ಕೆ ದುರ್ಯೋಧನನ ಅನುಮತಿ.

ಅಹುದು ಕರ್ಣನ ನುಡಿ ವಿಕರ್ಣನು
ಬಹುವಚನಪಂಡಿತನು ಬಾಹಿರ
ನಹುದೆಲೇ ಕುರುರಾಯವಂಶದೊಳುದಿಸಿ ಫಲವೇನು ।
ಅಹಿತಹಿತವಿಜ್ಞಾನವಿಲ್ಲದ
ಸಹಜಬುದ್ಧಿವಿಚಾರಶೂನ್ಯ[1]ನು
ಗಹನನೇಕೆ ವಿಕರ್ಣಯೆಂದನು ನಗುತ ಕುರುರಾಯ ॥ ೧೦೨

* ಈ ಗುರ್ತಿನ ಪದ್ಯಕ್ಕೆ ಪೂರ್ವಪದ್ಯವಾಗಿ, ಕ. ಪುಸ್ತಕದಲ್ಲಿ ಮಾತ್ರ ದೊರೆಯುವ ಒಂದು ಪದ್ಯ ಅಶುದ್ಧವಾದುದರಿಂದು ಬಹು ಪ್ರತಿಗಳಲ್ಲಿಲ್ಲದರಿಂದು ಬಿಡಲ್ಪಟ್ಟಿದೆ.

[1] ಬೃಹದುದರಕಿಂಕರರ ನುಡಿಯೊ, ಕ. ಚ.

ದುರ್ಯೋಧನನು ದುಶ್ಶಾಸನನನ್ನು ನಿಯಮಿಸುವಿಕೆ.

ಹಾರಪದಕಕಿರೀಟಮಣಿಕೇ
ಯೂರಕರ್ಣಾಭರಣವೆಂಬಿವು
ಭಾರವಲ್ಲಾ ತೆಗೆಯ ಹೇಟ ದಾಕ್ಷಿಣ್ಯವೇನಿದಕೆ ।
ನಾರಿಗೀವಸ್ತ್ರಾಭರಣಶೃಂ
ಗಾರವೇಕಿನ್ನಿವನು ತೆಗೆ ಕೈ
ವಾರವಿನ್ನೇಕೆಂದು ದುಶ್ಶಾಸನಗೆ ನೃಪ ನುಡಿದ ॥ ೧೦೩

ಧರ್ಮಾದಿಗಳು ತಮ್ಮ ಹಾರಾದಿಗಳನ್ನು ತೆಗೆಯುವಾಗ ದುಶ್ಶಾಸನನು ದ್ರೌಪದಿಯ ಸೆರಗನ್ನು ಹಿಡಿದುದು.

ತೆಗೆದು ಬಿಸುಟರು ಹಾರಪದಕಾ
ದಿಗಳನಿವರೈವರು ದುಕೂಲವ
ನುಗಿದು ಹಾಯ್ಕಿದರಿದ್ದರಾಗೊಂದೊಂದು ವಸ್ತ್ರದಲಿ ।
ಹೊಗೆಮೊಗದ ಕಿಱುಗಣ್ಣ ಕೆಮ್ಮೀ
ಸೆಗಳ ಗುಜುರಿನ ಜುಂಜುಕೇಶದ
ವಿಗಡನೆದ್ದನು ಬಂದು ಹಿಡಿದನು ದ್ರೌಪದಿಯ ಸೆಱಗ ॥ ೧೦೪

ಆಗ ಭೀಷ್ಮಾದಿಗಳ ಕೋಪ.

ಮುಱುಹಿದರು ಮುಸುಡುಗಳ ಮಿಗೆ ನೀ
ರೊಱೆವ ಕಂಗಳಲಕಟಕಟ ನಿ
ಷ್ಠುರವಿದೇಕನುಚಿತವಿದೇಕಪಕೀರ್ತಿ ಯೇಕೆನುತ ।
ಕಱಗಿದರು ಕಂದಿದರು ಮೊಮ್ಮಲ
ಮೊಱುಗಿದರು ಭೀಷ್ಮಾದಿಗಳು ಝು
ರ್ಝುರಿತರಾದರು ತಡೆಯಲಾರದೆ ಖಳನ ದುಷ್ಕೃತಿಯ ॥ ೧೦೫

ಆಗ ದ್ರೌಪದಿಯು ಪತಿಗಳ ಕಡೆ ನೋಡಿದುದು.

ಅಳುಕಿದನೆ ಸುಡಲವನ ಮೇಲುದ
ಸೆಳದೊಡುನ್ನತಕುಚವ ನಳಿತೋ
ಳ್ಗಳಲಿ ಮುಚ್ಚಿದಳಬಲೆ ಬೆಚ್ಚಿದಳವನ ನಿಷ್ಠುರಕೆ ।

ಕಳವಳಿಸಿದಳು ಬೆರಳಿನಲಿ ದೃಗ್
ಜಲವ ಮಿಡಿಯುತ ನೋಡಿದಳು ನೃಪ
ತಿಲಕನನು ಭೀಮಾರ್ಜುನರ ಮಾದ್ರೀಕುಮಾರಕರ ॥ ೧೦೬

ಆಗ ಸಭೆಯಲ್ಲಿದ್ದವರನ್ನು ಬಿಡಿಸಿರೆಂದು ದ್ರೌಪದಿಯು ಕೇಳಿದಳು.

ಮುಱಿದುದನಿಬರ ಮೋಱೆ ಮಹಿಪನ
ಕೊರಳ ಕೊಂಕಿನಲಿರ್ದರಾಸೋ
ದರರು ಸಾರವನಲ್ಲಿ ಕಾಣದೆ ಭೀಷ್ಮಗುರುಕೃಪರ ।
ತರಳೆ ನೋಡಿದಳಕಟ ಗಂಗಾ
ವರಕುಮಾರದ್ರೋಣಕೃಪರಿರ
ಸೆಱಗ ಬಿಡಿಸಿರೆ ತಂದೆಗಳಿರೆಂದೊಱಲಿದಳು ತರಳೆ ॥ ೧೦೭

ಕ್ರೂರನೀದುಶ್ಶಾಸನನು ಗಾಂ
ಧಾರಿ ಬಿಡಿಸಾ ತಾಯೆ ಸೊಸೆಯು
ಲ್ಲಾರು ಹೇಳೌ ತಂಗಿ ಯಲ್ಲವೆ ಭಾನುಮತಿ ನಿನಗೆ ।
ಧೀರ ಸೈಂಧವನರಸಿ ರಾಜಕು
ಮಾರಿ ನೀನಾದಿನಿಯಲಾ ಖಳ
ರೌರವದೊಳದ್ದುವುದ ತೆಗೆಸೆಂದೊಱಲಿದಳು ತರಳೆ ॥ ೧೦೮

ಎಲೆ ವಿಳಾಸಿನಿಯರಿರ ಭೂಪನ
ತಿಳುಹಿರೌ ತಾಯ್ಗಳಿರ ನೀವೆಂ
ದೆಲೆ ಪಸಾಯಿತೆಯರಿರ ಸೋದರಿಯೆಂದು ಕೌರವನ ।
ತಿಳುಹಿ ತಾ ಶರಣಾಗತರ ತಾ
ನೊಲಿದು ಕಾವುದು ಧರ್ಮಕಕಟಾ
ಕಲುಷಹೃದಯರೈ ನೀವೆನುತ ಹಲುಬಿದಳು ತರಳಾಕ್ಷಿ ॥ ೧೦೯

ಧಾರುಣೀಪತಿಗಳಿರ ರಾಜಕು
ಮಾರರಿರ ಮಂತ್ರಿಗಳಿರಾ ಪರಿ
ವಾರಕಿವು ಪಂಥವೆ ವಿಚಾರಿಸಿ ನಿರಘರಾಧಿಯನು ।

ನಾರಿಯೊಬ್ಬಳನಕಟ ಸಭೆಯಲಿ
ಸೀರೆ ಯುಡಿಯಲುಚರ್ಚುವರೆ ಕೆಟ್ಟೆನು
ಕಾರುಣಿಕರಿಲ್ಲಾ ಶಿವಾ ಯೆಂದೊಱಲಿದಳು ತರಳೆ ॥ ೧೧೦

ಪತಿಗಳನ್ನನು ಮಾರಿ ಧರ್ಮ
ಸ್ಥಿತಿಯ ಕೊಂಡರು ಭೀಷ್ಮಮೊದಲಾ
ದತಿರಥರು ಪರಹಿತವ ಬಿಸುಟಹರರ್ಥಭೀತಿಯಲಿ ।
ಸುತನ ಕಡು ಸಿರಿ ಸೊಗಸಲಾ ಭೂ
ಪತಿಗೆ ಗಾಂಧಾರಿಗೆ ಯನಾಥೆಗೆ
ಗತಿಯ ಕಾಣೆನು ಶಿವ ಶಿವಾ ಯೆಂದೊಱಲಿದಳು ತರಳೆ ॥ ೧೧೧

ಆಗ ಶ್ರೀಕೃಷ್ಣನನ್ನು ಮೊರೆ ಹೊಕ್ಕದು

ಮೈದೆಗೆದುದೀಪ್ರಾಣವಾಯುಗ
ಳೈದು ಬೞಿಕಿದಕಾರು ಮೊಱುಗುವ
ರೈದೆ ತನುವೊಂದುೞಿಯಲುೞಿವುವು ಮಿಕ್ಕಮಹಿಮೆಗಳು ।
ಬೈದು ಫಲವೇನಿನ್ನು ನಿನ್ನಯ
ಮೈದುನರ ಮರುಳಾಟಕೆನ್ನನು
ಕಾಯ್ದು ಕೊಳ್ಳೈ ಕೃಷ್ಣ ಯೆಂದೊಱಲಿದಳು ತರಳಾಕ್ಷಿ ॥ ೧೧೨

ಕೃಷ್ಣಸ್ತುತಿ.

ಸುಲಿವರೂರೊಳಗುಟ್ಟ ಸೀರೆಯ
ನೆಲೆ ಮುರಾಂತಕ ರಕ್ಷಿಸೈ ಶಶಿ
ಕಳೆಗೆ ಸದರವೆ ರಾಹು ರಚಿಸಿದ ತುಟಿಯ ತೋಟಿಯದು[1] ।
ಸೆಳೆವರಸುವನು ಖಳರು ಸೀರೆಯ
ಸೆಳೆಯಲುೞಿವೆನೆ ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದೊಱಲಿದಳು ತರಳೆ ॥ ೧೧೩

---

1 ರಚಿಸಿದರವಿಯ ತೆರನಂತೆ, ಖ,

ಗತಿವಿಹೀನರಿಗಕಟ ನೀನೇ
ಗತಿಯಲ್ಲೆ ಗೋವಿಂದ ರಿಪುಬಾ
ಧಿತರನಾಥರಿಗಬಲರಿಗೆ ನೀ ಪರಮಬಂಧುವಲ |
ಸತಿಪಶುದ್ವಿಜಬಾಧೆಯಲಿ ಜೀ
ವಿತವ ತೊಱೆವರು ಗರುವತನ ಹಿಂ
ಗಿತು ಸುಯೋಧನಸಭೆಯೊಳೆಂದೊಱಲಿದಳು ನಳಿನಾಕ್ಷಿ || ೧೧೪

ಕಾಯ್ದೆ ಯೈ ಕರುಣದಲಿ ದಿವಿಜರ
ತಾಯ ಪರಿಭವವನು ಪಯೋಧಿಯ
ಹಾಯಿದಮರಾರಿಗಳ ಖಂಡಿಸಿ ತಲೆಯ ಚೆಂಡಾಡಿ |
ಕಾಯಿದೈ ಜಾನಕಿಯನೆನ್ನನು
ಕಾಯ ಬೇಹುದು ಹೆಣ್ಣ ಹರಿಬಕೆ
ನೋಯಬಲ್ಲರೆ ಕೆಲಬರೆಂದೊಱಲಿದಳು ಪಾಂಚಾಲಿ || ೧೧೫

ವೇದವಧುಗಳ ಕಾಯ್ದೆಲಾ ತಮ
ಬಾಧೆಯಲಿ ಬಳಸಿಂದ ಧರಣಿಯ
ಹೋದ ಯಲಕ್ಕಡಿದವೆ ದಾಡೆಯಲಿ ದಾನವನ |
ಕೋದು ಹಾಕೀಭೂತಧಾತ್ರಿಯ
ಕಾದೆಲಾ ಕಾರುಣ್ಯಸಿಂಧುವೆ
ಕಾದುಕೊಳ್ಳೈ ಕಷ್ಣ ಯೆಂದೊಱಲಿದಳು ತರಳಾಕ್ಷಿ || ೧೧೬

ರಕ್ಷಿಸಿದೆಯೋ ಗಿಣಿಗೆ ಬೆದಱುವ
ದಕ್ಷಸುತೆಯನು ಕೋಪಶಿಖಿ ತಿವಿ
ರಾಕ್ಷನನು ಜಮದಗ್ನಿಮುನಿಪನ ನುಡಿಯನನುಕರಿಸಿ |
ರಕ್ಷಿಸಿದೆ ರೇಣುಕೆಯನೆನ್ನನು
ಪೇಕ್ಷಿಸದಿರೈ ಕರುಣದಲಿ ಕಮ
ಲಾಕ್ಷ ಬಿಡಿಸೈ ಸೆಱಗನೆಂದೊಱಲಿದಳು ಕಮಲಾಕ್ಷಿ || ೧೧೭

ದೇವಕೀದೇವಿಯರ ಸೆಱೆಯನು
ದೇವ ಕೃಪೆಯಲಿ ಬಿಡಿಸಿದೈ ಕರು
ಣಾವಲಂಬದಿ ಕಳಚಿದೈ ಹದಿನಾಱುಸಾವಿರದ |
ದೇವಕನ್ಯಾಬಂಧನವನಭಿ
ಭಾವಕರ ಕೌರವರ ಭಂಗಿಸಿ
ದೇವ ಬಿಡಿಸೈ ಸೆಱಗನೆಂದೊಱಲಿದಳು ದ್ರುಪದಸುತೆ || ೧೧೮

ಶಿಶುವಧೆಗೆ ಸೀವರಿಸಿದಸುರನ
ಬಸುಱ ಹೂಮಾಲೆಯನು ನೀ ತಱು
ಬಿಸಿದೆಲಾ ನಖರಾಜಿಗಬಲನ ಕಾಯ್ದು ಕರುಣದಲಿ |
ಶಿಶುವನಯ್ಯಂಗಿತ್ತು ಜಲಧಿಯ
ಮುಸುಕನುಗಿವತಿ ಕರುಣಿಯೇ ಹೆಂ
ಗಸಿನ ಹರಿಬಕೆ ಕೃಪೆಯ ಮಾಡೆಂದೊಱಲಿದಳು ತರಳೆ || ೧೧೯

ತುಱುವ ನುಂಗಿದ ಫಣಿಯ ಗಂಟಲ
ಮುಱಿದು ಕಾಯ್ದೆ ಗೋವುಗಳ ಗಿರಿ
ಮಱೆಯಲಿಂದ್ರನ ಖಾತಿಗಳುಕದೆ ಕಾಯ್ದೆ ಗೋಕುಲವ |
ಮೆಱೆದೆಲಾ ಕೃಪೆಯಲಿ ಗಜೇಂದ್ರನ
ಮುಱಿಯಲೀಯದೆ ಖಳನ ಸೋಂಕಿದ
ಸೆಱಗ ಬಿಡಿಸೈ ಕೃಷ್ಣಯೆಂದೊಱಲಿದಳು ತರಳಾಕ್ಷಿ || ೧೨೦

ಒದೆದೊಡೊಲಿದವರುಂಟೆ ಬೈದೊಡೆ
ಪದವನಿತ್ತವರುಂಟೆ ಕರುಣಾ
ಸ್ಪದರ ತಾ ಕೇಳ್ದಱಿಯೆನಾಕಮಲಾಸನಾದ್ಯರಲಿ |
ಪದವ ಸೋಂಕಿದ ಮೊಱಡಿಯನು ತಿ
ದ್ದಿದೆ ಯೆಲಾ ಹೆಂಗಸಿನ ಹೇರಾ
ಳದ ಕೃಪಾಳುವೆ ರಕ್ಷಿಸೆಂದೊಱಲಿದಳು ಮೃಗನಯನೆ || ೧೨೧

ಸೊಕ್ಕಿದಂತಕದೂತರನು ಸದೆ
ದೊಕ್ಕಲಿಕ್ಕಿಯಜಾಮಿಳನ ಹಿಂ
ದಿಕ್ಕಿ ಕೊಂಡೆಯಲೈ ದುರಾತ್ಮಕ್ಷತ್ರಬಂಧುಗಳು ।
ಸೊಕ್ಕಿದರು ಕೌರವರು ಖಳರಿಗೆ
ಸಿಕ್ಕಿದೆನು ನಿನಗಲ್ಲದಾರಿಗೆ
ಕಕ್ಕುಲತೆ ಬಡುವೆನು ಮುಕುಂದ ಯೆನುತ್ತ ಹಲುಬಿದಳು ॥೧೨೦

ಚರಣಭಜಕರ ಮಾನಹಾನಿಯು
ಹರಿಬವಾರದು ಕೃಷ್ಣ ನಾಮ
ಸ್ಮರಣೆ ಧನಿಕರಿಗುಂಟೆ ಫಲ್ಲಣೆ ಘೋರಪಾತಕದ ।
ಪರಮಭಕ್ತಕುಟುಂಬಕನು ನೀ
ಕರುಣಿಯಲ್ಲದೊಡೀ ಕುಟುಂಬನ
ಪೊರೆವರಾರೈ ಕೃಷ್ಣ ಯೆಂದೊಡಲಿದಳು ತರಳಾಕ್ಷಿ ॥ ೧೨೩

ನಾಥರಿಲ್ಲದ ಶಿಶುಗಳಿಗೆ ನೀ
ನಾಥನೈ ಗೋವಿಂದ ಕೇಳೈ
ಯೂಥಪತಿಗಳು ಬಿಸುಟ ಕರಿಣಿಗೆ ಕೃಪೆಯ ನೀ ಮಾಡ್ಡೈ ।
ನಾಥರಿಲ್ಲೆನಗಿಂದು ದೀನಾ
ನಾಥಬಾಂಧವನೀ ನಲಾ ವರ
ಮೈಥಿಲೀಪತಿ ಮನ್ನಿಸೆಂದೊಡಲಿದಳು ಮೃಗನಯನೆ ॥ ೧೨೪

ಹೊಲಬುದಪ್ಪಿದ ಹುಲ್ಲೆ ಬೇಡನ
ಬಲೆಗೆ ಬಿದ್ದಂತಾದೆನೈ ಬಲು
ಹಬುವದಲಿ ತಾಯ ಬಿಸುಟ ಶಿಶು ತಾನಾದೆನೈ ಹರಿಯೆ ।
ಕೊಲುವುವೈ ಕಾಗೆಗಳಕಟ ಕೋ
ಗಿಲೆಯ ಮರಿಯನು ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದೊಡಲಿದಳು ತರಳೆ ॥ ೧೨೫

ಅಕಟ ಹಂಸೆಯು ಮಱಿಯು ವೋದುವ
ಬಕನ ತೆಗಿಸೈ ಗಿಡುಗನೌಕುವ
ಶುಕನ ಶೋಕವ ಮಾಣಿಸೈ ವಾಣಿಯುವೆ ಭಕ್ತರಲಿ ।
ಪ್ರಕಟಭೂತಗ್ರಹದ ಬಾಧೆಗೆ
ವಿಕಳೆ ನಿನ್ನಯ ಬಿರುದ ತಡೆದೆನು
ಭಕ್ತವತ್ಸಲನಹೊಡೆ ಸಲಹೆಂದೊಱಲಿದಳು ತರಳೆ ॥ ೧೭೬

ಆರಿಗೊಱಲುವೆನೈ ಖಳಾಪ
ಸ್ಮಾರವಿದೆ ಸೆಱಗಿನಲಿ ನಿನ್ನಯ
ಸೈರಣೆಗೆ ಮಾನವಾದುದೆ ತನ್ನೀವಿಪತ್ತಿನಲಿ ।
ಘೋರತರಭವದುರಿತತರುವಿನ
ಬೇಱ ಸುಡುವೀನಿನ್ನ ನಾಮಕೆ
ನಾರಿಯುಕ್ಕೈಯು ನಿಲಿಸಲರಿದೇನೆಂದಳಿಂದುಮುಖಿ ॥ ೧೭೭

ಕರುಣಿ ನೀ ಕಾರುಣ್ಯಪಾತ್ರದ
ತರಳೆ ತಾ ದೀನಾರ್ತದುಃಖೋ
ತ್ತಾರಣ ನೀ ದೀನಾರ್ತದುಃಖಿತೆಯಾನು ಜಗವಱಿಯೆ ।
ಪರಮಪಾಲಕ ನೀನಗತ್ಯಂ
ತರದ ವಿಹ್ವಳೆ ತಾನಲಾ ನಿ
ಷ್ಠುರವಿದೇಕೈ ಕೃಷ್ಣ ಯೆಂದೊಱಲಿದಳು ಲಲಿತಾಂಗಿ ॥ ೧೭೮

ಮಱೆದೆನಭ್ಯುದಯದಲಿ ನೀನೆಂ
ದಱಿವೆನಾಪತ್ತಿನಲಿ ಮದದಲಿ
ಮಱುಕಿಸುವೆನುಬ್ಬಿನಲಿ ಕಳವಳಿಸುವೆನು ಖೋಡಿಯಲಿ ।
ಅಱಿಯದಜ್ಞರ ಗುಣವ ದೋಷವ
ನಱಸುವರೆ ನಿಮ್ಮಡಿಯು ಗುಣವನು
ಮೆಱೆಯಲಾಗದೆ ಕೃಷ್ಣ ಯೆಂದೊಱಲಿದಳು ನಳಿನಾಕ್ಷಿ ॥ ೧೭೯

ಋಷಿಗಳತಿತಾರ್ಕಿಕರು ಕರ್ಮ
ವ್ಯಸನಿಗಳು ಬಾಹಿರರು [1] ಮಿಕ್ಕಿನ
ವಿಷಯದೊಳವಿಜ್ಞಾನಿಗಳು ಮೂಢಮನುಷ್ಯರೆಂಬವರು ।
ಬಸೆದು ನಿನ್ನವನೆಂದು ನೆನೆವಗೆ
ಬಸಿದು ಬೀಱುವ ಕೃಪೆಯು ನೀ ತೋ
ಱಿಸೆ ಯಿದೇಕೈ ಕೃಷ್ಣ ಯೆನಗೆಂದೊಱಲಿದಳು ತರಳೆ ॥ ೧೩೦

ತುಸವೊದಲು ಚತುರಾಸ್ಯಪರ್ಯಂ
ತೆಸೆವುದೈ ಭುವನದಲಿ ಜೀವ
ಪ್ರಸರವಿದ್ದುದು ದುಃಖಸೌಖ್ಯದ ತಾರತಮ್ಯದಲಿ ।
ಉಸುರಪಸರಣವಿಲ್ಲದೆನ್ನು
ಬ್ಬಸದ ಭೀತಿಯು ಬೇಗೆ ಮಿಗೆ ದಾ
ಹಿಸುವುದೈ ಕಾರುಣ್ಯನಿಧಿಯೆಂದೊಱಲಿದಳು ತರಳೆ ॥ ೧೩೧

ಏಕಹಸ್ತದಲಂಬರವ ಹಿಡಿ
ದೇಕಹಸ್ತವ ನೆಗಹಿ ಮೊಱೆಯಿಡೆ
ಲೋಕನಾಥ ಮುಕುಂದ ತಾನದ ಕೇಳದಂತಿರಲು ।
ಆಕೆ ಮನದೊಳಗಱಿದು ತನಗಿ
ನ್ನೇಕೆ ಮನದಭಿಮಾನವೆನುತಲೆ
ಲೋಕಸುಂದರಿ ಕರವೆರಡ ಮುಗಿದೆತ್ತಿಯೊಱಲಿದಳು ॥ ೧೩೨

ನಂದಗೋಪಕುಮಾರ ಗೋಪೀ
ವೃಂದವಲ್ಲಭ ದೈತ್ಯಮಥನ ಮು
ಕುಂದ ಮುರಹರ ಭಕ್ತವತ್ಸಲ ಘನಕೃಪಾಜಲಧಿ ।
ನೊಂದೆನೈ ನುಗ್ಗಾದೆನೈ ಗೋ
ವಿಂದ ಕೃಪೆಮಾಡಕಟೆನುತ ಪೂ
ರ್ಣೇಂದುಮುಖಿ ಹಲುಬಿದಳು ಬಲುತೆರದಿಂದಲಚ್ಯುತನ ॥ ೧೩೩

---

1 ಕೋವಿದರು, ಚ.

ಶ್ರೀಕೃಷ್ಣನು ದ್ರೌಪದಿಯ ಅವಸ್ಥೆಯನ್ನು ತಿಳಿದು
ಚಿಂತೆಯಿಂದಿರುವಿಕೆ.

* ಇತ್ತಲಾದ್ವಾರಿಕೆಯೊಳಗೆ ವರ
ಸತ್ಯಭಾಮಾಭವನದೊಳು ನರ
ವೃತ್ತಿಯಿಂದಿರುತ ಕೇಳಿದ ಸತಿಯು ಹೊಲ್ಲಯನು ।
ಕೆತ್ತದುಮ್ಮಾನದಲಿ ದ್ರೌಪದಿ
ಯುತ್ತಮೆಯಲಾ ದೃಢಪತಿವ್ರತೆ
ಗೆತ್ತಣದು ಪರಿಭವವಿದೆಂದಸುರಾರಿ ಚಿಂತಿಸಿದ ॥ * ೧೩೪

ಆಗ ಸತ್ಯಭಾಮೆಯೊಡನೆ ಆಟದಲ್ಲಿ ಅಕ್ಷಯವೆಂದು
ಹಾಸಂಗಿಯನ್ನು ಹಾಕಿದುದು.

ಹರಿಯು ಚಿತ್ತದ ಮುಗುಡವನು ತಾ
ನಳಿದು ಸತ್ರಾಜಿತನ ಸುತೆಯಂ
ದುರುತರಾಲಸ್ಯವನು ಪರಿಹರಿಪನುವ ನೆನೆದಾಗ ।
ವಿರಚಿಸಿದಳೊಲವಿನಲಿ ನೆತ್ತವ
ನಿರದೆ ಹಾಸಂಗಿಗಳ ಢಾಳಿಸಿ
ಸರಿಬೆಸನೊ ಹೇಳೆಂದುದಕ್ಷಯವೆಂದನಾಸತಿಗೆ ॥ ೧೩೫

ಚಿತ್ತವಿಸು ಜನಮೇಜಯ ಕ್ಷಿತಿ
ಪೋತ್ತಮನೆ ಹರಿ ಲೀಲೆಯಿಂದಾ
ಸತ್ಯಭಾಮಾದೇವಿಯೊಳು ನಾನಾವಿನೋದದಲಿ ।

---

* ಇತ್ತ ದ್ವಾರಾವತಿಯೊಳಗೆ ದೇ
ವೋತ್ತಮನು ಭಕತರಿಗೆ ತನ್ನನು
ತೆತ್ತು ಬದುಕುವೆನೆಂಬ ಪರಮವ್ರತದ ನಿಷ್ಠೆಯನು ।
ಚಿತ್ತದಲಿ ನೆಲೆಗೊಳಿಸಿ ರುಕ್ಮಿಣಿ
ಸತ್ಯಭಾಮೆಯರೊಳು ಸಮೇಳದ
ನೆತ್ತಸಾರಿಯ ಹರಹಿ ಹಾಸಂಗಿಯನು ದಾಳಿಸುತ ॥ *

ನೆತ್ತವಾಡುತ ನುಡಿದನುತ್ತರ
ವಿತ್ತಗವ ಹಾಯ್ಕಕ್ಷಯವೆ ಯೆ
ನ್ನುತ್ತ ನುಡಿದನು ಮೂಱುಬಾರಿಯು ಹಾಯ್ಕಿ ಸಾರಿಗಳ ॥ ೧೩೬

ಶ್ರೀಕೃಷ್ಣನನ್ನು ಕುರಿತು ಸತ್ಯಭಾಮೆಯ ಪ್ರಶ್ನೆ.

ಸತಿ ನೆಗಹಿದಳು ಸಾರಿಯನು ಗಣಿ
ಸುತ್ತ ನೋಡಿದಳಣಿಕೆಯೊಳಗಿ
ಲ್ಲತಿಶಯದ ನುಡಿಯಕ್ಷಯವದೆಂದೆಂಬ ವಾಕ್ಯವಿದು ।
ಮತಿಗೆ ಗೋಚರವಲ್ಲ ಯಿಾಸಂ
ಗತಿಗೆ ಬಾರದು ದೇವ ವಾಕ್ಯ
ಸ್ಥಿತಿಯ ಪಲ್ಲಟವೆನುತ ಮಿಗೆ ಬೆಸಗೊಂಡಳಾಹರಿಯ ॥ ೧೩೭

ದ್ಯೂತದಲಿ ಪಲ್ಲಟಿಸಿ ಬಂದುದು
ಮಾತು ನಿಮ್ಮಯ ಚಿತ್ತ ತಾ ನಿಂ
ದೇತಱಲಿ ಸಿಲುಕಿದುದೊ ಸತಿಯರ ಸೇಱುವೆಯ ನೆನಹು ।
ಏತಕೀಪುರುಷರಲಿ ನಂಬುಗೆ
ಬೀತುದಂಗನೆಗೆನಲು ನಸುನಗು
ತಾತಳೋದರಿಗೆಂದನಸುರಾರಾತಿ ವಿನಯದಲಿ ॥ ೧೩೮

ಆಗ ಶ್ರೀಕೃಷ್ಣನು ದ್ರೌಪದಿಯ ಅವಸ್ಥೆಯನ್ನು ತಿಳಿಸಿದುದು.

ಕೌರವರು ಜೂಜಿನಲಿ ನಾರಿಯ
ಸೀರೆಯನು ಸುಲಿಯಲ್ಕೆ ಮೊಱೆಯಿಡೆ
ನಾರಿಗಕ್ಷಯವಸ್ತ್ರವಾಗಲಿ ಯೆನ್ನ ನೆನೆದುದಕೆ
ಆರದೆನ್ನನು ನೆನೆವರವರಿಗೆ
ಧಾರಕನು ತಾನಹೆನು ಕೇಳಲೆ
ನಾರಿ ಬೇಱೊಂದಿಲ್ಲವೆಂದನು ಶೌರಿ ನಸುನಗುತ ॥ ೧೩೯

ಎನಲು ವಿಸ್ತರವಾಗಿ ನೀವಿದ
ನೆನಗೆ ಹೇಳಲು ಬೇಕು ದ್ರೌಪದಿ
ಗಿನಿತು ಪೂರ್ವಾರ್ಜಿತದ ಪರಿಭವ ತಪ್ಪಿದಂದವನು ।
ವಿನಯದಿಂ ಹೇಳೆಂದು ಮಾನಿನಿ
ಯನುನಯದಿ ಬೆಸಗೊಳಲು ತಾನಿದ
ನಿನಗೆ ಹೇಳುವೆ ಸತಿಯ ಪೂರ್ವದ ಕಥೆಯ ಕೇಳೆಂದ ॥ ೧೪೦

ಭೂಸುರರು ಚೋರರುಗಳಿಂದವೆ
ಗಾಸಿಯಾಗಿ ದಿಗಂಬರದಿ ಬರೆ
ಯಾಸುದತಿ ತಾನುಟ್ಟವಸ್ತ್ರದೊಳರ್ಧವನು ಸೀಳಿ ।
ವಾಸುದೇವಾರ್ಪಣವು ತಾನೆಂ
ದೋಸರಿಸದಂತಾಗ ಕೊಡಲಿಂ
ದೀಸಮಯಕಿಂತೊದಗಿ ಬಂದುದು ಪೂರ್ವದತ್ತಫಲ ॥ ೧೪೧

ಪಾಂಡವರಿಗೆ ಆದ ತೊಂದರೆಯನ್ನು ಶ್ರೀಕೃಷ್ಣನು ಹೇಳಿದುದು.

ಅತ್ತಲಾಹಸ್ತಿನಪುರಕೆ ಭೂ
ಪೋತ್ತಮನನತ್ಯಧಿಕಗುಣಯುತ
ವೃತ್ತನನು ಧರ್ಮಜನನಾಕೌರವರು ಕರೆದೊಯ್ದು ।
ಚಿತ್ತದಲಿ ಸೈರಿಸದೆ ಕಪಟದ
ನೆತ್ತದಲಿ ಸೋಲಿಸಿದನಖಿಳಸು
ವಸ್ತುವಾಹನವನುಜತಾವೊದಲಾಗಿ ಸತಿಸಹಿತ ॥ ೧೪೨

ಅತಿದುರಾತ್ಮರು ಕೌರವರು ದ್ರೌ
ಪದಿಯ ತಂದಾಸಭೆಯ ಮಧ್ಯದಿ
ಸತಿಯ ವಸ್ತ್ರಾಕರುಷಣಂಗೈಯಲಿಕೆ ಕರವೆತ್ತಿ ।
ಮತಿ ಮಱೆಯದೊಱಲಿದಳು ನೀನೇ
ಗತಿ ಮುಕುಂದ ಮುರಾರಿ ಲಜ್ಜಾ
ಸ್ಥಿತಿಯನುಳುಹೆನೆ ಕೇಳಿ ನುಡಿದಿಹೆನಕ್ಷಯವದೆನುತ ॥ ೧೪೩

ಎಂದು ಮುರರಿಪು ಸಂತವಿಟ್ಟಾ
ನಂದದಿಂದಲಿ ಸತ್ಯಭಾಮೆಯು
ನಂದು ನಿಲಿಸಿದ ಸೀರೆಗಳನಾನೇನು ಹೇಳುವೆನು ।
ಇಂದುಮುಖಿ ಬಾಯ್ಬಿಡುತ ಕರುಣಾ
ಸಿಂಧು ನೀನೆನಗಲ್ಲದಾರಿಗೆ
ತಂದೆಯೆಂದೊರಲುತ್ತ ಮೊರೆಯಿಡುತಿರ್ದಳಾಕಾಂತೆ ॥ ೧೪೪

ಆಸತಿಯು ನಾನಾಪ್ರಕಾರದಿ
ಬೇಸರದೆ ಮೊರೆಯಿಟ್ಟು ಮತ್ತೆಯು
ವಾಸುದೇವನ ನಂಬಿದಳು ನೆರೆ ಕೇಳಲೈ ಭೂಪ ।
ಆಸಮಯದಲಿ ಕೃಷ್ಣ ಕರುಣದ
ಲಾಸತಿಯು ಪರಿಭವಕೆ ವಸ್ತ್ರವ
ಬೇಸರದೆ ಹುಟ್ಟಿಸಿದ ಲಜ್ಜೆಯ ಕಾಯ್ದನಾಸತಿಯ ॥ ೧೪೫

ಕೇಳಿದನು ಮುರವೈರಿ ತನ್ನಯ
ಮೇಳದೈವರ ಸತಿಯು ಹುಯ್ಯಲ
ನಾಳನಪಮಾನಂಗಳಾಳ್ದನಿಗೆಂಬ ನುಡಿಯಿಂದ ।
ಕೋಳುವೋದುವೆ ಪಾಂಡುತನುಜರ
ಬಾಳುವೆಗಳಕಟೆನುತ ಲಕ್ಷ್ಮೀ
ಲೋಲ ಚಿಂತಿಸಿ ನುಡಿದ ರುಕ್ಮಿಣಿದೇವಿಗೀಹದನ ॥ ೧೪೬

ಕ್ರೂರದುರ್ಯೋಧನನು ದ್ರುಪದ ಕು
ಮಾರಿಪಾಂಚಾಲಿಯನು ಸಭೆಯೊಳು
ಸೀರೆಯನು ಸುಲಿಯಲ್ಕೆ ಕಾಯ್ಯೈ ಕೃಷ್ಣ ಯೆಂದೆನುತ ।
ನಾರಿಯೊರಲಿದಳಾಕೆಯುಟ್ಟಿಹ
ಸೀರೆ ಸೆಳೆಯಲು ಬಳಿಕಲಕ್ಷಯ
ಸೀರೆಯಾಗಲಿ ಯೆಂದ ಗದುಗಿನ ವೀರನಾರಯಣ ॥ ೧೪೭

ಹದಿನೈದನೆಯ ಸಂಧಿ ಮುಗಿದುದು.

ಹದಿನಾರನೆಯ ಸಂಧಿ.

ಸೂಚನೆ.

ಸೋಲದಲಿ ಮನ ನೊಂದ ಧರಣೀ
ಪಾಲರನು ಸಂತೈಸಿ ಯಂಧನೃ
ಪಾಲ ಕಳುಹಿದನಿವರು ಹೊಱವಂಟರು ಪುರಾಂತರವ ||

ದುಶ್ಶಾಸನನು ದ್ರೌಪದಿಯ ಸೀರೆಯನ್ನು ಸೆಳೆಯುತ್ತಿರಲು
ಅದು ಅಕ್ಷಯವಾದುದು.

ನಿಯತಮತಿ ಚಿತ್ತವಿಸು ಜನಮೇ
ಜಯ ಮಹೀಪತಿ ದೇವತಾಶ
ಕ್ತಿಯಲಿದೇನಾಶ್ಚರ್ಯವೈ ಶಿವ ಶಿವ ಮಹಾದೇವ |
ಜಯ ಜಯೆಂದುದು ನಿಖಿಳಜನ ಝೂ
ಡಿಯಲಿ ಝೋಂಪಿಸಿ ಸೆಳವ ಸೀರೆಗೆ
ಲಯವ ಕಾಣೆನು ಲೀಲೆಯೆಂತುಟೊ ದೇವಕೀಸುತನ || ೧

ಉಗಿದು ಹಾಯ್ಕುವ ಖಳನ ನಿಡಿದೋ
ಳುಗಳು ಬಱಲಿದುವಳ್ಳೆ ಹೊಯ್ದುವು
ಪಗೆಯ ಡಾವರವಾಯ್ತು ಬಹಳ ಸ್ವೇದಜಲ ಜಡಿಯೆ |
ತೆಗೆದು ನಿಂದನು ಸೀರೆಯೊಟ್ಟಲು
ಗಗನವನು ಗಾಹಿಸಿತು ಗರುವೆಯ
ಬಗೆಗೆ ಬೇಸಱವಿಲ್ಲ ಬೆಱಗಾಯಿತು ಮಹಾಸ್ಥಾನ || ೨

ಹಾ ಮಹಾಸತಿ ಶಿವ ಶಿವಾ ಲ
ಜ್ಜಾಮಹೋದಧಿ ಬತ್ತುವುದೆ ನಿ
ರ್ನಾಮರೇ ಕುಂತೀಸುತರುಚಿತರೇ [1] ಪರಾಭವಕೆ |

---

1 ಪಥ್ಯರೇ, ಚ. ಪರರೇ, ಚ.

ಶ್ರೀಮುಕುಂದನ ದಿವ್ಯನಾಮ
ಪ್ರೇಮರಸಕಿದು ಸಿದ್ಧಿ ಯೆನಲಾ
ಯ್ತಾಮಹಾಸ್ಥಾನದಲಿ ಬಳೆದುದು ಬೆಱಗು ಬಿಂಕದಲಿ ॥ ೩

ಅಹಹ ದೈವಪ್ರೇಮವಿದಲಾ
ಮಹಿಳೆಯಲಿ ಮಾನವರ ಕೃತಿ ಗೆಲ
ಲಹುದೆ ಗರುವೆಯ ಗಾಹಿಸಿತು ಗೋವಿಂದನಭಿಧಾನ ।
ವಿಹಿತವಿದು ಕುರುರಾಜಕುಲವನ [1]
ದಹನ [2] ಭೀಮಧನಂಜಯಾದ್ಯರ
ವಿಹರಣದ ವಿನ್ಯಾಸವಾಯ್ತೆಂದುದು ಬುಧವ್ರಾತ ॥ ೪

ಬೆಗಡಿನಲಿ ಮುಖಭೇದ ನಯನಾಂ
ಬುಗಳಲಾನಂದಾಶ್ರು ಶೋಕದ
ಡಗೆಯಲುಬ್ಬುವ ನಗೆಯ ಭಯಸ್ವೇದದಲಿ ರೋಮಾಂಚ ।
ದುಗುಡದಲಿ ಪರಿತೋಷ ಕಂದಿದ
ಮೊಗದೊಳುಜ್ಜ್ವಲವೃತ್ತಿ ಭೀಷ್ಮಾ
ದಿಗಳೊಳಗೆ ಪಲ್ಲಟಿಸುತಿರ್ದುದು ಪ್ರತಿಮುಹೂರ್ತದಲಿ ॥ ೫

ಆಗ ವಿದುರನು ದುರ್ಯೋಧನನಿಗೆ ಬುದ್ಧಿ
ಯನ್ನು ಹೇಳಿದುದು.

ನಸೆದೆ ನೀನನುಚಿತವ ನೀ ಹೊ
ತ್ತಿನಲಿ ದ್ರುಪದಾತ್ಮಜೆಯ ದೈವದ
ವಿನಯದಲಿ ದೂಸಱಡಗಿತಲೆ ಬೆಳಸಾದುದಪಕೀರ್ತಿ ।
ವನಿತೆಯನು ಬಿಡು ಪಾಂಡುನೃಪನಂ
ದನರ ನೀನೊಲಿದಂತೆ ಮಾಡುವು
ದನುನಯವು ನಿನಗೆಂದು ನುಡಿದನು ವಿದುರ ಕುರುಪತಿಗೆ ॥ ೬

---

1 ಅಹಿತವರು ಕುರುರಾಜಕುಲಘನ, ಚ. 2 ಗಹನ, ಚ.

ಆಗ ವಿದುರವಾಕ್ಯದಲ್ಲಿ ದುರ್ಯೋಧನನ ಉಪೇಕ್ಷೆ.

ದೈವವೀದ್ರೌಪದಿಗೆ ಸೀರೆಯ
ನೀವುದಲ್ಲದೆ ಬಿಡಿಸಲಾವುದೆ
ದೈವ ತೊತ್ತಿರ ಹುರುಡುಗೆಲಸದ ಹಿಂಡುಕೂಟದಲಿ ।
ದೈವವಿವಳಿಗೆ ತಾನಲೇ ತ
ನ್ನೈವರಿಕ್ಕಿದ ಮಾತು ರಿಪುಗಳ
ಮೈವಳಿಯ ನುಡಿಗಾಣ ನೀ ಸಾಯೆಂದು ನೃಪ ಜಱಿದ ॥ ೭

ನೀತಿಮರುಳನು ವಿದುರನೀತನ
ಮಾತಿನಲಿ ಫಲವಿಲ್ಲ ತೊತ್ತಿರೊ
ಳೀತಳೋದರಿ ಬೆರಸಿ ಬದುಕಲಿ ಕರ್ಣ ಕಳುಹಿವಳ ।
ಈತತುಕ್ಷಣ ದೃಷ್ಟಿಬಂಧವ
ನೇತಱಲಿ ಮಾಡಿದಳೊ ಲಜ್ಜೆಯ
ಜಾತಿಯುಟದುದು ಬಳದಸೀರೆಯ ಕಟ್ಟಿ ಹೊಱಿಸೆಂದ ॥ ೮

ಎನಲು ನೋಡಿದಳಬಲೆ ಮುನಿಯುತ
ಮನದ ಕೋಪಾಗ್ನಿಯಲಿ ಭುಗಿಭುಗಿ
ಲೆನುತ ಬೆಂದುವು ಬಹಳಪರ್ವತರೂಪಿನಂಬರವು ।
ಅನಿಮಿಷರು ತಲ್ಲಣಿಸೆ ಸಭೆಯಲಿ
ಜನನಿಕರ ನಡುನಡುಗೆ ಕೌರವ
ಜನಪನೆದೆ ಜರ್ಝರಿತವಾದುದು ಧೂಮಮಯವಾಗೆ ॥ ೯

ಇವಳಲೇ ನಮ್ಮನಿಬರಭಿಮಾ
ನವನು ಕೊಂಡಳಲಾ ಸ್ವಯಂವರ
ಭವನದಲಿ ಭಂಗಿಸಿದಳಮ್ಮನು ಸಭೆಯೊಳಡಹಿದೊಡೆ ।
ಇವಳು ಬಹುವಿಧಪುಣ್ಯಶಕ್ತಿಯೊ
ಳವಗೆ ಸಿಲುಕಿದಳಿನ್ನು ತೊತ್ತಿರ
ಸವತಿ ಬೇಟದ ಸವಿಯ ಸುರಿಯಲಿ ಭಂಡವಿಂಡರಿಗೆ ॥ ೧೦

ಸೋತನರಸನು ತನ್ನನಿನ್ನನು
ಸೋತುದನುಚಿತವೆಂಬ ಬೆಡಗಿನ
ಮಾತನರಿಯದ ಮೂಢರನು ಸುಡಲೆಂದಳಿಂದುಮುಖಿ ॥ ೧೧

ದುರ್ಯೋಧನನ ವಚನ.

ಸೋತುದಿಲ್ಲಾ ನಿನ್ನಸೋತುದ
ನೀತಿಯೆಂಬುದು ವಿದಿತವೇ ತಾ
ನೀತ ನುಡಿಯಲಿ ಧರ್ಮಪುತ್ರನು ಸತ್ಯಸಂಧನಲೆ ।
ಈತಳೋದರಿ ತರಚಕುಗೆಡೆದೀ
ಮಾತಿನಲಿ ತಾ ಬಿಡುವೆನೇ ನಿ
ನ್ನಾತನನು ನುಡಿಸೆಂದು ಖಳ ಘಟ್ಟಿಸಿದನಂಗನೆಯ ॥ ೧೨

ಪಾಂಚಾಲಿಯ ವಿಷಯದಲ್ಲಿ ಕರ್ಣನ ಬಿರುನುಡಿಗಳು.

ಜೀಯ ಮಾತೇಕಿವಳೊಡನೆ ರಿಪು
ರಾಯರಿಗೆ ದಾಸತ್ವವಾಗಲು
ಬಾಯಿಬಡುಕಿಯದಾರೊಡವೆ ತದ್ದಾಸಧನವಲ್ಲೆ ।
ಆಯತಾಕ್ಷಿಯನಿಂದು ನಿನ್ನಪ
ಸಾಯಿತೆಯರಲಿ ಕೂಡು ತೊತ್ತಿರ
ಲಾಯ ಬೇಡುಪಕಾರವೆನಗೆಂದೆಱಗಿದನು ಕರ್ಣ ॥ ೧೩

ಎಲೆಗೆ ಭಜಿಸಾ ಕೌರವಾನ್ವಯ
ತಿಲಕನನು ನಿನ್ನವರ ಮೆಱೆ ನಿ
ನ್ನುಚಿವ ನೆನೆ ಯಿಾಸಮಯದಲಿ ಕಾಲೋಚಿತಕ್ರಮವ ।

ಆಗ ಪಾಂಚಾಲಿಯು ಕರ್ಣನನ್ನು ಧಿಕ್ಕರಿಸಿದುದು.

ಬಳಸು ನೀನೆನೆ ಗಜಱಿದಳು ಕುರು
ತಿಲಕನನು ತಱಿದೊಟ್ಟ ರಣದಲಿ
ತಿಳಿರಕುತದಲಿ ದಣಿವನನಿಲಜನೆಂದಳಬುಜಾಕ್ಷಿ ॥ ೧೪

ದುರ್ಯೋಧನನ ಸೊಕ್ಕಿನ ನುಡಿ.

ಏಕೆ ಕೆಣಕಿದೆ ಕರ್ಣ ಬೂತಿನ
ಬೀಕಲಿನ ಬವಗಿಯನು ಸಮರದೊ
ಳೀಕೆಯನಿಲಜ ಮುಳಿವನೆನುತವೆ ತನ್ನ ಮುಂಜೆಱಗ |
ನೂಕಿ ತೊಡೆಗಳ ತೋಱಿಸುತ ಲೋ
ಕೈಕವೀರನ ನೇಱಿಸಿದೊಡ
ವ್ಯಾಕುಲನ ಮನ ಖಂಡಿಯೋದುದು ಖತಿಯ ಹೊಯ್ಲಿನಲಿ ||

ಆಗ ಭೀಮನ ಕೋಪ

ನೋಡಿದನು ಪರಿಘವನು ಕಡೆಗ
ಣ್ಣಾಡಿತಿವದಿರ ಮೇಲೆ ವೈಯ್ಯಾಲಿ
ಜಾಡಿ ಗೆದಱಿತು ರೋಮ ಝಳಪಿಸಿತರುಣಮಯನಯನ |

ಭೀಮನನ್ನು ಕುರಿತು ಧರ್ಮರಾಯನ ಸಮಾಧಾನ.

ಮೂಡಿತುರಿ ಸುಯ್ಲಿನಲಿ ರೋಷದ
ಬೀಡು ಭೀಮನ ಕಂಡು ಧರ್ಮಜ
ಬೇಡಿಕೊಂಡನು ತನ್ನ ಕೊರಳಿನ ಬೆರಳ ಸನ್ನೆಯಲಿ || ೧೬

ಸೈರಿಸಕಟಾ ಭೀಮ ರೋಷವಿ
ಹಾರಕಿದು ಹೊತ್ತಲ್ಲ ಗರ್ವವಿ
ಕಾರದಲಿ ಕೌರವರು ಮೆಱೆಯಲಿ ಕಾಲವವರದಲೆ |

ಅದಕ್ಕೆ ಅರ್ಜುನನ ಅನುಮತಿ

ಧಾರಿಣೀಶನ ಧರ್ಮತತ್ವದ
ಸಾರವುಳಿದರೆ ಸಾಕು ಮಿಕ್ಕಿನ
ನಾರಿಧನವಭಿಮಾನ ಬೇಯಲಿ ಯೆಂದನಾಪಾರ್ಥ || ೧೭

ಕ್ಷಮೆಯೆ ಧನವೆಂದಿದ್ದೆವಿವಳಲಿ
ಮಮತೆಯನು ಮಾಡಿದೆವೆ ನಾವು
ಶ್ರಮಿ [1] ಸುವೊಡೆ ದೇವೇಂದ್ರ ತೃಣವಿವರಾವ ಪಾಡೆಮಗೆ |

[1] ಭ್ರಮಿ, ಚ.

ರಮಣಿಯಾಡಿದ ಧರ್ಮಪಥವೀ
ಕುಮತಿಗಳ ಮತವಲ್ಲದಿದ್ದೊಡೆ
ತಮಗೆ ದಾಸಿಯೆ ದ್ರುಪದನಂದನೆ ಯೆಂದನಾಪಾರ್ಥ ॥ ೧೮

ದುರ್ಯೋಧನನ ಸ್ವಚ್ಛಂದಭಾಷಣ.

ಶ್ರುತಿತದರ್ಥಸ್ಮೃತಿಗಳಲಿ ಪಂ
ಡಿತರು ಪರಿಣತರುಂಟು ಪಾರ್ಥ
ಸ್ಮೃತಿಯ ಬಟ್ಟಿಕಾದರಿಸುವೆವು ನಿಮಗಾದದಾಸ್ಯದಲಿ ।
ಕೃತಕವಿಲ್ಲದೆ ನಡೆದು ತೋಱಾ
ಸತಿಯ ಸೆಱೆಯನು ಬಿಡಿಸಲೆಮ್ಮಾ
ಕ್ಷಿತಿಯೊಳಾರುಂಟೆಂದು ಕೌರವರಾಯ ಗರ್ಜಿಸಿದ ॥ ೧೯

ಆಗ ಕರ್ಣನ ಮಾತುಗಳು.

ಭಾಷೆ ಯೇಕಿವನೊಡನೆ ದ್ರೌಪದಿ
ದಾಸಿಯಲ್ಲೆಂಬವನ ದಿವಸವ
ದೇಸು ಬಲುಹೋ ಪೂತು ಮಝು ತಾನಿಂದ್ರಸುತನೆಂಬ ।
ಐಸರಲಿ ದೇವೇಂದ್ರ ತೃಣ ಗಡ
ವೈಸಲೇ ನೀ ಮುನಿದೊಡೀನುಡಿ
ದಾಸಭಾವದ ಬಣಗುಗಳಿಗೇಕೆಂದನಾಕರ್ಣ ॥ ೨೦

ನೂಕಿಸಾ ತೊತ್ತಿರ ಮನೆಗೆ ತಡ
ವೇಕೆ ತರುಣಿಯನಿನ್ನು ನೀನು ವಿ
ವೇಕದಲಿ ನಿನ್ನಂತೆ ತೆಗೆ ಸಾಕಿವರ ಮಾತೇನು ।
ಈಕುಠಾರರ ಕಳುಹಿ ಕಳ ತಾ
ವೇಕೆ ನೃಪಸಭೆಯಲಿ ವರಾಸನ
ವೇಕೆನುತ ಕುರುಪತಿಗೆ ನುಡಿದನು ಖಾತಿಯಲಿ ಕರ್ಣ ॥ ೨೧

ಆಗ ಕರ್ಣನನ್ನು ಸಮಾಧಾನಪಡಿಸಿ ದುಶ್ಶಾಸನನಿಗೆ
ದುರ್ಯೋಧನನ ಅಪ್ಪಣೆ.

ಅಹುದಲೇ ಬೞಿಕೇನು ನೀನತಿ
ಬಹಳಮತಿಯೈ ಕರ್ಣ ನೀನೀ
ಕುಹಕಕೋಟಿಯನೆತ್ತಬಲ್ಲೈ ವೃಥಾಭಿಮಾನಿಗಳ ।
ರಹಣಿ ಸಾಕಂತಿರಲಿ ತೊತ್ತಿರ
ಸಹಚರರ ಸೂಪಾಯುತರ ಕರೆ
ಮಹಿಳೆಯನು ನೂಕೆಂದು ದುಶ್ಶಾಸನಗೆ ನೃಪ ನುಡಿದ [1] ॥ ೧೨

ಸುೞಿವ ಹುಲ್ಲೆಯ ಸೋಹಿನಲಿ ಕು
ಕ್ಕುೞಿಸಿದರೆ ಕುಕ್ಕುರನ ಕೈಯ್ಯಲಿ
ಕೞುವಹುದೆ ಜನಮೇಜಯಕ್ಷಿತಿಪಾಲ ನಿನ್ನವರ ।
ಬೞಲಿಕೆಯನೇನೆಂಬೆನೈ ಹಿಡಿ
ದೆೞೆಯೆ ಹೆಣಗಿದಳಕಟ ರಾಯನ
ಲಲನೆಗೀವಿಧಿಯೇ ಯೆನುತ ಸೂೞಿಟ್ಟುದಖಿಳಜನ ॥ ೧೩

ಆಗ ದ್ರೌಪದಿಯು ಭೀಷ್ಮಾದಿಗಳನ್ನು ಕೇಳಿಕೊಳ್ಳುವಿಕೆ.

ಮಾಣಿಸೈ ಗಾಂಗೇಯ ಗುರು ಸಿ
ನ್ನಾಣೆಯಿಡು ಕೃಪ ಕೃಪೆಯ ಮಾಡೈ
ರಾಣಿವಾಸಂಗಳಿರ ನಿಲಿಸಿರೆ ನಿಮ್ಮ ಮೈದುನನ ।
ಪ್ರಾಣವಿದ ಕೊಳಹೇೞಿರೆ ಸಾ
ಕೂಣೆಯುವ ಹೊಱಲಾರೆನೆನುತಾ
ರಾಣಿ ಹಲುಬಿದಳೊಡೆಮುಱುಚಿ ಹೆಣಗಿದಳು ಖಳನೊಡನೆ ॥ ೧೪

ಮಾವ ನಿಮ್ಮಯ ನೇತ್ರವಂತ
ರ್ಭಾವದಲಿ ಬೆರಸಿದೊಡೆ ವಿಜ್ಞಾ
ನಾವಲಂಬನದೃಷ್ಟಿ ಬೆಂದುದೆ ನಿಮ್ಮ ಹೃದಯದಲಿ ।

1 ಸೇಪಿಸಿದ, ಚ.

ದೇವಿಯರಿಗಿದು ಸೊಗಸಲಾ ಸ
ಖ್ಯಾವಳಿಗೆ ಸೇರುವುದಲಾ ನಿ
ರ್ಜರವರಾದಿರೆ ನೀವೆನುತ ಹಲುಬಿದಳು ಲಲಿತಾಂಗಿ ॥ ೭೫

ಕ್ಷಿತಿಯೆ ಬಿಡಿಸಾ ಸೆಱಗನೆಲೆ ಪಾ
ರ್ವತಿಯೆ ತನ್ನದು ಧರ್ಮವಾದೊಡೆ
ಗತಿ ತನಗೆ ನೀವಾಗಿರೌ ಕಮಲಾದಿಶಕ್ತಿಗಳ ।
ಸತಿಯಹಲ್ಯಾದಿತಿಯರುಂಧತಿ
ಯತಿಮಹಾಮಾಯಾದಿದೇವಪ್ರ
ತತಿ ಬಿಡಿಸಿರೆ ಸೆಱಗನೆಂದೊಱಲಿದಳು ಪಾಂಚಾಲಿ ॥ ೭೬

ಶರಧಿವಧುಗಳು ಬಂದು ಬೇಡಲು
ಪುರುಷಭಿಕ್ಷವನಿಕ್ಕದೇ ದಶ
ಶಿರನನುಜ ಶರಣೆಂದು ಬಂದೊಡೆಯಚಲಪದವಿತ್ತೆ ।
ಚರಣ ಸೋಕಲು ಸತಿಯಹಲ್ಯೆಯು
ನಿರದೆ ಕಾಯ್ದೆ ಭಕ್ತವತ್ಸಲ
ಕರುಣಿ ಕೃಷ್ಣಾ ಕಾಯ್ದುಕೊಳ್ಳೆಂದೊಱಲಿದಳು ತರಳೆ ॥ ೭೭

ಅಂಧನೊಬ್ಬನೆ ಮಾವ ನೀವೇ
ನಂಧನಾದಿರೆ ಪಾಂಡು ಕರುಣಾ
ಸಿಂಧು ನೀ ಸೈರಿಸುವುದೇ ತನ್ನವಿಪತ್ತಿನಲಿ ।
ಅಂಧಕಾಸುರಮಥನ ನೀನೇ
ಬಂಧಿಸಿದೆಲಾ ಪೂರ್ವವರಸಂ
ಬಂಧವನು ನೀ ಸೆಱಗ ಬಿಡಿಸೆಂದೊಱಲಿದಳು ತರಳೆ ॥ ೭೮

ಸೊಸೆಯಲಾ ದೇವೇಂದ್ರ ತನ್ನೀ
ಘಸಣಿಯಾರದು ಹಿರಿಯಮಾವನ
ವಶವಲಾ ತ್ರೈಜಗದ ಜೀವರ ಜೀವವೇ ಭ್ರಮಣ ।

ಉಸುರು ನಿಮ್ಮಗಧೀನವೀ ದು
ರ್ವ್ಯಸನಿಗಳ ಕೊಂಡಾಡುವರೆ ಕರು
ಣಿಸು ಸಮೀರಣ ಯೆಂದು ಹಲುಬಿದಳಶ್ವಿನೀಯರಿಗೆ ॥ ೨೯

ಮೂವದಿರು ಮೊದಲಾದ ದಿಕ್ಪಾ
ಲಾವಳಿಗೆ ನಮಿಸಿದೆನು ನೈದಿಲ
ತಾವರೆಯ ಮಿತ್ರರಿಗೆ ಮಂಡೆಯಲಿಟ್ಟೆನಂಜಲಿಯ ।
ಕಾವುದೆನ್ನನು ಹೆಂಗಸಲ್ಲಾ
ಹಾವು ಹಲಬರ ನಡುವೆ ಸಾಯದು
ದೇವರಿಗೆ ದೂರೈದಲೆಂದೊಱಲಿದಳು ನಳಿನಾಕ್ಷಿ ॥ ೩೦

ಆಗ ವಿದುರನ ಮಾತುಗಳು.

ಬಾಯ ಬಿಡಲೇಕಕಟ ಬೞಲಿದೆ
ತಾಯೆ ಕೈದೋಱುಸರು ನಿನ್ನಯ
ರಾಯರೈವರು ಕೆಲದಲಿದ್ದವರೇನ ಮಾಡುವರು ।
ನ್ಯಾಯ ನಿಮ್ಮದು ದೈವದೊಲುಮೆಯ
ದಾಯ ತಪ್ಪಿತು ಬೞಿದೆ ಧೈರ್ಯವ
ಬೀಯ ಮಾಡದಿರೆಂದು ನುಡಿದನು ವಿದುರನಂಗನೆಯ ॥ ೩೧

ಎಲೆಗೆ ನಿನ್ನವರೇನ ಮಾಡುವ
ರೊಲೆಯೊಳಡಗಿದ ಕೆಂಡವಿವರ
ಗ್ಗಳಕೆ ನಂದಿದುದೆನುತ ಮುಂಜೆಱಗೆತ್ತಿ ಮೂನಿಸಿಗೆ ।
ಖಳನು ತೊಡೆಯನು ತೋಱಿಸಿದೊಡತಿ
ಮುಳಿದು ಕೊಟ್ಟಳು ಶಾಪವನು ನಿ
ನ್ನುಱಿವು ತೊಡೆಯಲಿ ಘಟಿಸಲೆಂದಳು ಮುಗುದೆ ಖಾತಿಯಲಿ ॥

ಕೋಪದಿಂದ ಭೀಮನು ಎದ್ದುದು.

ಕಡಲ ತೆಱೆಗಳ ತಱುಬಿ ತುಱುಕುವ
ವಡಬನಂತಿರೆ ಮೇಘಪಟಲವ

ನೊಡೆದು ಸೂಸುವ ಸಿಡಿಲಿನಂತಿರೆ ಸಭೆಯೊಳಡಹಾಯ್ದು |
ಕುಡಿ ಕುಠಾರನ ರಕುತವನು ತಡೆ
ಗಡಿ ಸುಯೋಧನನೂರುಗಳ ನಿ
ವ್ಕ್ರಡಿಸಿ ಮುನಿಯಲಿ ಧರ್ಮಸುತನೆಂದೆದ್ದನಾಭೀಮ ॥ ೩೩

ಹೆದಱು ಹೊಕ್ಕುದು ಸಭೆಗೆ ಕೌರವ
ನೆದೆ ಬಿರಿದುದಾಸ್ಥಾನಜಲಸಿಧಿ
ಕದಡಿತುಕ್ಕಿದ ಬೆಱಗಿನಲಿ ಬೆಳ್ಳಾದನವನೀಶ |
ಹದನಹುದು ಹಾ ಯೆನುತಲಿರ್ದುದು
ವಿದುರಭೀಷ್ಮದ್ರೋಣಕೃಪರೀ
ಕೆದರುಗೇಶದ ಕಾಂತೆ ಹುದಿದಳು ಹರುಷಭಾರದಲಿ ॥ ೩೪

ಆಗ ದುಶ್ಶಾಸನನು ದೂರ ಹೋದುದು.

ಒಡೆಯನೈತರಲಿಕ್ಷುತೋಟದ
ಬಡನರಿಗಳೋಡುವವೊಲೀಕೆಯ
ಹಿಡಿದೆಳವ ಖಳ ಹಾಯ್ದನೈ ಕೌರವನ ಹೊರೆಗಾಗಿ |
ನುಡಿ ತರುಣಿ ತನ್ನಾಣೆ ಭೀತಿಯ
ಬಿಡಿಸಿದೆನಲಾ ರಾಯನಾಜ್ಞೆಯ
ತಡಿಕೆವಲೆ ನುಗ್ಗಾಯ್ತು ಹೋಗಿನ್ನೆಂದನಾಭೀಮ ॥ ೩೫

ಭೀಮನು ಕೋಪದಿಂದ ಬಿರುನುಡಿಗಳನಾಡಿ ಪಾಂಚಾಲಿಯನ್ನು ಸಮಾಧನ ಪಡಿಸಿದುದು.

ಉರಿವ ಕೋಪಾಗ್ನಿಯಲಿ ಕರ್ಣನ
ಶಿರದ ಭಾಂಡದಲಿವನ ನೊಱೆನೆ
ತ್ತರಿನಲಿವನಗ್ರಜನ ಕೊಬ್ಬಿದ ನೆಣನ ಕೊಯ್ಕೊಯ್ದು |
ದುರುಳಶಕುನಿಯ ಕಾಳಿಜದಳೊಡೆ
ವೆರಸಿ ಕುದಿಸಿ ಮಹೋಗ್ರಭೂತದ
ನೆರವಿಗುಣಲಿಕ್ಕುವೆನು ಸತಿ ಕೇಳೆಂದನಾಭೀಮ ॥ ೩೬

ಕೊಂಬೆನೇ ಧರ್ಮಜನ ಧರ್ಮದ
ಡೊಂಬಿಯನು ಮುದಿಗುರುಡನಿಕ್ಕಿದ
ನಂಬುಗೆಯು ವಿಷವೈ ಸಲೇ ತಲೆಗೇಱಿತಗ್ರಜನ |
ಡೊಂಬಿಗರ ಡಾವರಿಗರಿವದಿರ
ತಿಂಬೆನೀಗಳೆ ತರಳೆ ಕೇಳೆನು
ತಂಬುಜಾಕ್ಷಿಯ ಸಂತವಿಟ್ಟನು ಕುರುಳ ನೇವರಿಸಿ || ೩೭

ಮುಡಿಯ ನೀಕಟ್ಟೆಲೆಗೆ ಸತಿಯೆನೆ
ನುಡಿದಳಾಕಾಂತಂಗೆ ವಚನವ
ಮುಡಿಯ ಕಟ್ಟೆನೆ ಕಾಲವೀದುಶ್ಶಾಸನನ ಶಿರವ |
ಕೆಡಹಿ ಶಾಕಿನಿಯರಿಗೆ ರಕುತವ
ಕುಡಿಸಿ ತಣಿಯಲು ಕರುಳದಂಡೆಯ
ಮುಡಿವ ವ್ರತವೆನಗಿಹುದು ನೀ ಹೇೞಿದಕೆ ನಿರ್ವಾಹ || ೩೮

ಐಸಲೇ ಯೀವ್ರತದ ನಿನ್ನಯ
ಭಾಷೆ ನಮ್ಮದು ಸತಿಯೆ ಯಿದು
ಶ್ಶಾಸನನ ತೊಡೆಗಡಿದು ಶಾಕಿನಿಯರಿಗೆ ರಕುತವನು |
ಸೂಸುತೆಱೆವೆನು ತರುಣಿ ಸೊಕ್ಕಿದ
ದೂಷಕನ ನೆಱೆ ಸೀಳಿ ನಿನ್ನಯ
ಕೇಶವನು ಕಟ್ಟಿಸಿಯೆ ಮುಡಿಸುವೆ ಕರುಳದಂಡೆಗಳ || ೩೯

ಆಗ ಭೀಮನನ್ನು ಕುರಿತು ಅರ್ಜುನನ ಸಮಾಧಾನೋಕ್ತಿಗಳು.

ಇಱಿದನರ್ಜುನನಾಸಭಾಮಂ
ಡಲದ ವೇದಿಯನಹಹ ಧರ್ಮಜ
ನುೞಿವನೇ ನುಡಿಯೆಡಹಿದೊಡೆ ಸಿಗುರೇಱು ಸದ್ಗುಣಕೆ |
ಕಳವಳದ ಕಾಲುವೆಯ ಕಾಹುರ
ಕೊಳಗುಗೊಡದಿರು ಭೀಮ ಹಗೆ
ಗಳ ಹಿಳಿವಱಿದು ಹೊತ್ತಲ್ಲೆನುತ ಹಿಡಿದನು ವೃಕೋದರನ ||೪೦

ಭೀಮವಚನ

ಮೊಣಲದು ಕೌರವರ ನೂರ್ವರ
ಗೋಣ ಬನಕಾಳಗದೊಳನ್ನಯ
ಕೇಣಿ ತನ್ನಯ ಗದೆಗೆ ದುರ್ಯೋಧನನ ತೊಡೆಗಳಗೆ |
ವಾಣಿಯುವು ದುಶ್ಶಾಸನನ ತನಿ
ಶೋಣಿತವ ತಾ ಕುಡಿಯದಿರೆ ನಿ
ನ್ನಾಣೆ ಸ್ವೈರಣೆಗಿದುವೆ ಫಲ ಕೇಳೆಂದನಾ [1] ಭೀಮ || ೪೧

ಧರಣಿಜಲಪಾವಕಸಮೀರಾ
ದ್ಯರುಗಳಖಿದಿರಿ ಶಕ್ರನೈಋತ
ವರುಣರುದ್ರಕುಬೇರಯಮರೆಂಬಖಿಳದಿಗಧಿಪರು |
ಬರೆದು ಕೊಂಡಿರಿ ಭಾಷೆಯನುಸುರ
ನರಫಣಿವ್ರಜವೆಂದು ಭೀಮನ
ಧರಧುರದ ಧಟ್ಟಣೆಗೆ ಧೃತಿಗೆಟ್ಟುದು ಕುರುಸ್ತೋಮ || ೪೨

ಆಗ ಬಹು ವಿಧವಾಗಿ ಪಾಂಡವರು ಪ್ರತಿಜ್ಞೆ
ಯನ್ನು ಮಾಡಿದುದು.

ಬರೆಸಿರೈ ಭಾಷೆಯನು ದೇವಾ
ಸುರರ ಸಾಕ್ಷಿಯೊಳಾಯ್ತು ಕರ್ಣನ
ಕೊರಳಗೆನ್ನಯ ಬಾಣದುಂಗುರಕುಡಿಕೆ ಯಿಂದಿನಲಿ |
ಸುರನರೋರಗರಖಿದಿರೆಂದ
ಬ್ಬರಿಸಿದನು ಕಲಿಪಾರ್ಥ ಶಕುನಿಯ
ಶಿರಕೆ ಕೊಟ್ಟೆನು ಸಂಚಕಾರವನೆಂದ ಸಹದೇವ || ೪೩

ಈ ಕುಠಾರಶಕುನಿತನೂಜನು
ಲೂಕನನು ಸಮರದಲಿ ತನ್ನ ಶ
ರಾಕರುಷಣೆಗೆ ಬಲಿಯ ಕೊಡುವೆನು ಬರೆಸಿ ಭಾಷೆಯನು |

---

[1] ವೆಂದೊದಱಿದನು, ಚ.

ಲೋಕಪಾಲರಿಗಂದು ವೀರೋ
ದ್ರೇಕದಲಿ ಮಿಗೆ ನುಡಿದ ನಕುಲನು
ಮಾಕಮಲಮುಖಿಯೆಂದಳಾಗಳ ಸಭೆಯ ಮಧ್ಯದಲಿ ॥ ೪೪

ಮುಂದಲೆಯ ಹಿಡಿದೆಳದು ಸಭೆಯಲಿ
ತಂದು ತನ್ನನು ಭಂಗಬಡಿಸಿದ
ಕಂದುಹೃದಯನ ಕರುಳದಂಡೆಯ ಸೈದೆ ಸಿರಿಮುಡಿಗೆ ।
ಅಂದದಿಂದಲೆ ಮುಡಿದು ಚರ್ಮದ
ಚಂದದುಡುಗೆಯನುಟ್ಟು ಬಳಿಕಿನೊ
ಳಂದು ಕಬರಿಯ ಕಟ್ಟುವೆನು ತಾನೆಂದಳಂದುಮುಖಿ ॥ ೪೫

ಮುಡಿಯ ಕಟ್ಟಲೆ ನಾರಿ ಭಾಷೆಯ
ನುಡಿಯು ತನ್ನದು ಬೇಡವೆಂದೆನೆ
ನುಡಿದ ನುಡಿಗಳುಪುವೆನೆ ಯಾದುಶ್ಶಾಸನನ ಶಿರವೆ ।
ಕೆಡೆಯೊದೆದು ತಾ ಕರುಳದಂಡೆಯ
ಮುಡಿವುದೇ ವ್ರತವೆನಗೆ ನಿಮ್ಮಡಿ
ನುಡಿಯಲಂಜುವೆನೆನಲು ಬಳಿಕಿಂತೆಂದನಾಭೀಮ ॥ ೪೬

ಐಸಲೇ ಯಾವ್ರತವು ನಿನ್ನಯ
ಭಾಷೆ ಯೆನ್ನದು ಸತಿಯೆ ಕೇಳ್ ದು
ಶ್ಶಾಸನನ ಕಡೆಗಡಿದು ಶಾಕಿನಿಯರಿಗೆ ರಕುತವನು ।
ಸೂಸುವೆನು ಮಿಗೆ ಸೊಕ್ಕಿ ಕುಣಿದೀ
ದೋಷಿಯನು ನೆಱೆ ಸೀಳಿ ನಿನ್ನಯ
ಕೇಶವನು ಕಟ್ಟಿಸುವೆ ಮುಡಿಸುವೆ ಕರುಳದಂಡೆಗಳ ॥ ೪೭

ತರುಣಿ ದುಶ್ಶಾಸನನ ನೊಱನೆ
ತ್ತರಲಿ ನಾದುವೆ ನಿನ್ನ ಮಂಡೆಯ
ಕುರುಳ ಬಾಚುವೆನಿವನ ದಂತದ ಫಣಿಗೆಯಲಿ ಖಳನ ।

ಕರುಳದಂಡೆಯ ಮುಡಿಸಿ ಶಾಕಿನಿ
ಯರನು ಕರೆಯಿಸಿ ನಿನ್ನ ಕಯ್ಯಲಿ
ಧುರದೊಳಗೆ ಬಾಯಿನವ ಕೊಡಿಸುವೆನಬಲೆ ಕೇಳೆಂದ ॥ ೪೮

ಜನಗಳ ಅನುತಾಪ.

ಸಿಂಗ ಮಿಗೆ ಹಣುಗಿದರೆ ಮದಮಾ
ತಂಗಕದು ಭೀತಿಜವೆ ರೋಷದಿ
ಹಿಂಗಲಾಮಿಷಕೆಂದು ಭಾವಿಪೊಡದು ಪಲಾಯನವೆ ।
ಸಂಗರದೊಳಾಂತದಟರನುಜರ
ನುಂಗುವೀಪಾಂಡವರ ಸೈರಣೆ
ಭಂಗಿಸದೆ ಕುರುಕುಲವನಂತ್ಯದೊಳೆಂದುದಖಿಳಜನ ॥ ೪೯

ಸುರರ ಅಭಿಪ್ರಾಯ.

ಕಲಿಗಳತುಳಪರಾಕ್ರಮರು ನಿ
ಶ್ಚಲರು ಸಾಹಸಿಕರು ಸದೈವರು
ಕುಲಭರಿತಪಾಲಕರು ಮಹಿಮೋದಾರಪಾಂಡವರು ।
ಲಲನೆಯನು ದುಶ್ಶಾಸನನು ಮುಂ
ದಲೆವಿಡಿದು ಪರಿಭವಿಸೆ ಸೈರಿಸಿ
ದರಕಟಕಟರಿದು ಯೆನುತಿರ್ದುದು ಸುರಸ್ತೋಮ ॥ ೫೦

ಆಗ ನಾನಾವಿಧ ಉತ್ಪಾತಗಳು.

ಅರಸ ಕೇಳಾಶ್ಚರ್ಯವನು ಗಜ
ಪುರದೊಳಗೆ ನೆಲ ಬಾಯ ಬಿಟ್ಟುದು
ಸುರಿದುದರುಣಾಂಬುವಿನ ಮಳೆ ತತ್ಪುರದ ವಳಯದಲಿ ।
ನರಿಗಳವನಿಪನಗ್ನಿಹೋತ್ರದೊ
ಳೂಳಿದುವು ಸುಸ್ವೇದದಲಿ ಹೂಂ
ಕರಿಸುತಿರ್ದುವು ದೇವತಾಪ್ರತಿಮೆಗಳು ನಗರಿಯಲಿ ॥ ೫೧

ಉಗುಳುತಿದುವು ಕುಳುಗಿಡಿಗಳನು ಕೈ
ದುಗಳು ವಾರುವಪಟ್ಟದಾನೆಗ

ಳೊಗುಮಿಗೆಯು ಕಂಬುಸಿಗಳಭ್ರದಿ ಧೂಮಕೇತುಗಳು ।
ನೆಗಟಿದುವು ಬಿಱುಗಾಳಿ ಗಿರಿಗಳ
ಮಗುಚಿ ಮುಱಿದುವು ದೇವತಾಭವ
ನಗಳ ಶಿಖರವನಂತವದ್ಭುತವಾಯ್ತು ನಿಮಿಷದಲಿ ॥ ೩೧೦

ಬಾರಿಸಿತು ದೆಸೆದೆಸೆಗಳಲಿ ಹಾ
ಹಾರವಾವಿರ್ಭಾವ ತೊಳಗಿತು
ತಾರಕೆಗಳಿನಮಂಡಲವ ಝೋಂಪಿಸಿದುದಾರಾಹು ।
ತೋರಣದಲುರಿ ತಳಿತು ರಾಜ
ದ್ವಾರ ಹೊಗೆದುದು ದಿವದಲಂಬರ
ಧಾರಿಣಿಯುಲುತ್ಪಾತ ಬಿಗಿದುದು ಪೊಗೆದುದುತ್ಸವವ [1] ॥ ೩೧೩

ನಡುಗಿತಿಳೆ ನಡುಹಗಲು ಕತ್ತಲೆ
ಯುಡಸಿತಾಕಾಶದಲಿ ಹೆಮ್ಮರ
ನುಡಿದು ಬಿದ್ದವು ಸಲಿಲ ವೃಕ್ಕಿತು ಕೂಡೆ ತೊಱೆತೊಱೆಯು ।
ಉಡಿದುವಸಿಬರ ಕೈಯು ಕೈಮುಗ
ಳೊಡನೊಡನೆ ಸಿಡಿಲೆಱಗಿತಾಸಭೆ
ನಡುಗಿತಲ್ಲಿಯುದಲ್ಲಿ ಹುದುಗಿತು ಭೀತಿ ಗರಹೊಡೆದು ॥ ೩೧೪

ಧೃತರಾಷ್ಟ್ರನನ್ನು ಕುರಿತು ಭೀಷ್ಮವಾಕ್ಯ.

ಅಹಹ ಭೂತಕ್ಷೋಭವಿದು ನಿ
ರ್ದಹಿಸದೇ ಕುರುಕುಲವನಕಟಾ
ಮಹಿಳೆಯೊಱಲಿದಳಮರಸಿಕರಕೆ ದೈವಕೃತವಿದಲೆ ।
ಕುಹಕಿಮಕ್ಕಳ ಕಂಡು ಮೌನದ
ಲಿಹರೆ ನೀ ಧೃತರಾಷ್ಟ್ರ ಪಾಂಡವ
ಮಹಿಳೆಯನು ಸಂತೈಸು ನಡೆ ನಡೆ ಯೆಂದನಾಭೀಷ್ಮ ॥ ೩೧೫

1 ದದ್ಭುತವ, ಚ

ವಿದುರನ ಮಾತು.

ಇದಕೆ ನಿಸ್ಸಂದೇಹವೈ ವರ
ಸುದತಿಯನು ನೀ ಬೇಡಿಕೊಳು ಯು
ಜ್ಞದಲಿ ಪಾವಕಗುದಿಸಿದೀಪಾಂಚಾಲಿ ಮಾನವಿಯೆ।
ಇದು ಭವತ್ಸಂತಾನವಿಲಯಾ
ಸ್ಪದ ಕಣಾ ನಡೆ ಪಾಪಿಯೆಂದಾ
ವಿದುರ ಗೌತಮರೌಕಿದರು ಧೃತರಾಷ್ಟ್ರಭೂಪತಿಯ॥ ೫೬

ಅತಿಮಥನದಲಿ ಮುನ್ನ ದಿವಿಜರ
ಪತಿಗೆ ವಿಷವದು ದೊರೆತವೊಲು ನಿಜ
ಸುತನ ಸರಸದ್ಯೂತ ಕಡೆಯಲಿ ವಿರಸವಾದುದಲ।
ಹಿತರ ಕುಲಪಾಲಕರ ಸುದತಿಯ
ನತಿಗಳೆದ ಫಲವಾಯ್ತು ದ್ರುಪದನ
ಸುತೆಯ ನೀ ಸಂತೈಸು ನಡೆ ನಡೆ ಯೆಂದನಾವಿದುರ॥ ೫೭

ದ್ರೌಪದಿಯನ್ನು ಕುರಿತು ಧೃತರಾಷ್ಟ್ರನ ಸಮಾಧಾನ.

ಖೇದ ಮಿಗೆ ಹರಿತಂದು ನೃಪತಿ ತ
ಳೋದರಿಯ ನುಡಿಸಿದನು ಮಗಳೆ ವಿ
ಷಾದವನು ಬಿಡು ಮಾತ ಮನ್ನಿಸು ಮಾವ ನಾ ನಿನಗೆ।
ಈದುರಾತ್ಮನ ಮಾತ ಬೇಡ ವಿ
ಭೇದವೇ ದುಶ್ಶಳೆಗ ನಿನಗೆಂ
ದಾದರಿಸಿ ನುಡಿದನು ವಿಪತ್ತಿನಲಾಮಹಾಸತಿಯ॥ ೫೮

ದ್ರೌಪದಿಯ ಉತ್ತರ.

ಮಗಳಹೆನು ಸೊಸೆಯಹೆನು ನಿಮ್ಮಯ
ಮಗನ ಕಣ್ಣಿಗೆ ಕಾಳಕೂಟದ
ಮಗಳೊ ಸೊಸೆಯೋ ನಾದಿನಿಯೊ ಬೆಸಗೊಳ್ಳಿ ನಿಮ್ಮವರ।

ಅಗಡುಮಾಡಿದ ನಿನ್ನ ಮಕ್ಕಳ
ವಿಗಡತನಕಂಜಿದರೊ ದುರಿತದ [1]
ಸೊಗಡಿಗಂಜಿದರೊಪೃಥಾಸುತರೆಂದಳಬುಜಾಕ್ಷಿ [2] ॥ ೫೯

ಧೃತರಾಷ್ಟ್ರನು ಬಹುವಿಧದಿಂದ ದ್ರೌಪದಿಯನ್ನು ಸಮಾಧಾನ ಪಡಿಸಿದುದು

ಧರ್ಮ ನಿಮ್ಮದು ತಾಯೆ ಕಿಲ್ಬಿಷ
ಕರ್ಮವೆಮ್ಮದು ಲೋಕನೆಱಿಯಲು
ನಿರ್ಮಲರು ನೀವ್ ಪಾಪಕಾಶ್ರಯಹೃದಯರಾವ್ ಜಗಕೆ ।
ದುರ್ಮತಿಗಳವದಿರ ಕುಚೇಷ್ಟೆಯ
ನಮ್ಮನೀಕ್ಷಿಸಿ ಮಱೆದು ಕಳೆ ಸ
ದ್ಧರ್ಮಗತಿಗಳು ನೀವೆನುತ ತಿಳುಹಿದನು ದ್ರೌಪದಿಯ ॥ ೬೦

ದುರಳರೆನ್ನವದಿರು ದುರಂತಃ
ಕರಣರಾವ್ ದುಶ್ಚೇಷ್ಟೆಯೆಮ್ಮದು
ದುರುಬಿಗರು ದುಷ್ಪುತ್ರರೆಮ್ಮ ಕುಮಾರರಭಿಧಾನ ।
ಕರುಣಿಗಳು ಕಮನೀಯಗುಣಬಂ
ಧುರರು ಶೌರ್ಯಬಲಪ್ರಭಾವೋ
ತ್ಕರರು ನಿನ್ನವರೆಂದು ಗುಣವಲಿ ತಿಳುಹಿದನು ಸತಿಯ ॥ ೬೧

ವರಗಳ ಬೇಡೆಂದು ಧೃತರಾಷ್ಟ್ರನ ಅಪ್ಪಣೆ.

ತಾಯೆ ಬೇಡೌ ವರವ ನಾವ
ನ್ಯಾಯದಲಿ ನಿಮ್ಮನು ನಿರರ್ಥಕೆ
ನೋಯಿಸಿದೆವದ ನೆನೆಯದಿರಿ ಸರ್ವಾಪರಾಧವನು ।
ದಾಯಗೆಡೆ ನಿನ್ನವರು ಕೊಲುವರೆ
ಕಾಯಲಾಪವರುಂಟೆ ವರಸ
ತ್ಯಾಯುಧರಲೇ ನೀವೆನುತ ತಿಳುಹಿದನು ಧೃತರಾಷ್ಟ್ರ ॥ ೬೨

---

1 ಧರ್ಮದ, ಚ. 2 ಬೆಗಡಿಗಂಜಿದರೊ ಪೃಥಾಸುತರೆಂದಳಿಂದವನು ಖ, ಚ.

ವರಗಳನ್ನು ಪಡೆದುದು.

ವರವನೀವೊಡೆ ಮಾನ ಭೂಮಿಾ
ಶ್ವರರ ದಾಸ್ಯವ ಬಿಟ್ಟು ಕಳ ಮ
ತ್ತೆರಡನೆಯು ವರವೇನು ವಚನಿಸು ಕೊಟ್ಟೆನಂ ನಿನಗೆ ।
ನರವೃಕೋದರನಕುಲಸಹದೇ
ವರಿಗೆ ಕೊಡಿ ಶಸ್ತ್ರಾಸ್ತ್ರಗಜರಥ
ತುರಗನಿಕರವನೆಂದೊಡೆಂದನು ಮತ್ತೆ ಧೃತರಾಷ್ಟ್ರ ॥ ೬೩

ವರವೆರಡು ಸಂದುವು ಮನೋರಥ
ಭರಿತವಾಗಲಿ ಮತ್ತೆ ಬೇಡೆನೆ
ತರುಣಿ ನುಡಿದಳು ಧರ್ಮಶಾಸ್ತ್ರಪ್ರಕಟಪದ್ಧತಿಯ ।
ವರವು ವೈಶ್ಯಂಗೊಂದು ನರಪತಿ
ಗೆರಡು ನೃಪರಿಗೆ ಮೂಱು ಭೂದೇ
ವರಿಗೆ ನಾಲ್ಕಧಿಕಾರವೆಂದಳು ನಗುತ ಪಾಂಚಾಲಿ ॥ ೬೪

ಹಾರಲತಿಶಯತೃಷ್ಣೆ ನಾಶಕೆ
ಕಾರಣವಲೇ ಮಾವ ವರವಿದು
ಭಾರಿಯಾದೊಡೆ ಬೇಡ ಲಘುವನು ಕರುಣಿಸುವುದೆನಲು ।
ಭಾರವಾವುದು ಮಗಳೆ ಕೊಟ್ಟೆನು
ಧಾರಿಣೀಪತಿ ಬಿಜಯಮಾಡಲಿ
ವೈರಬಂಧದ ಕಂದುಕುಂದನು ಮಱೆದು ಕಳೆಯೆಂದ ॥ ೬೫

ವೈರವಾರೊಳು ಪೂರ್ವತರಸಂ
ಸ್ಕಾರವದು ಸೂಚಿಸಿದೊಡಂಗನೆ
ಮಾರುತನ ಸುತನಱಿಯ ಬಲ್ಲೆವು ಕೇಳಿ ವುಱಿದವರು ।
ವಾರಣವ ರಥಹಯವ ಪತ್ತಿಯ
ಸಾರಶಸ್ತ್ರಾಸ್ತ್ರಗಳನಿತ್ತಾ
ನಾರಿಯನು ಪತಿಕರಿಸಿ ಸಂತೈಸಿದನು ಪಾಂಡವರ ॥ ೬೬

ದ್ರೌಪದಿಯನ್ನು ಕುರಿತು ಕರ್ಣನ ಮಾತು.

ಪೂತುರೇ ಪಾಂಚಾಲಿ ಭುವನ
ಖ್ಯಾತೆಯಾದೆಲೆ ಜಾಗು ನಿನ್ನಯ
ಚೈತಲೆಯ ಮಣಿ ಮಾಱುವೋದುದ ಮತ್ತೆ ಬಿಡಿಸಿದೆಲೆ |
ಬೀತ ಮರಫಲವಾಯ್ತಲಾ ನಿ
ನ್ನಾತಗಳ ಬಹುಖೇದಜಲಧಿಗೆ
ಸೇತುವಾದೆಲೆ ನೀನೆನುತ ತಲೆದೂಗಿದನು ಕರ್ಣ || ೬೭

ಹೊಕ್ಕಗೂಡಿನ ಹುಲಿಗಳನು ಹೊಱ
ಗಿಕ್ಕಿದೆಯೆಲೈ ಇಱುಬಿನೊಳು ಬಿ
ದ್ದಿಕ್ಕಲಂಗಳ ಸೇದಿದೆಯೆಲೈ ಕಣ್ಣಿವರೆಗಳಲಿ [1] |
ಸೊಕ್ಕಿದುರು ಮೀನುಗಳ ಗಂಟಲೊ
ಳಿಕ್ಕಿದಂತಹ ಗಾಳಗಂಟಿನ
ಸಿಕ್ಕಬಿಡಿಸಿದೆ ಗರುವೆ ನೀನೆಂದುಲಿದನಾಕರ್ಣ || ೬೮

ಕರ್ಣನ ಮೇಲೆ ಭೀಮನ ಕೋಪ.

ಘುಡುಘುಡಿಸಿದನು ರೋಷವಹ್ನಿಯ
ವಡಿಯ ಹೊಕ್ಕನು ಬಿಗಿದ ಹುಬ್ಬಿನ
ಬಿಡೆಯ ಭವಣಿಯ ಲಳಿಯ ಲವಣಿಯ ಲೋಚನದ್ವಯದ |
ಕಡುಮುಳಿಸಿನುಬ್ಬಟೆಯ ಮಾರುತಿ
ಕಡುಹಿನಲಿ ಭುಗಿಭುಗಿಸಿ ಭಾರಿಯ
ಕಿಡಿಗೆದಱಿ ನೋಡಿದನು ಬಾಗಿಲ ಲಾಳವಂಡಿಗೆಯ || ೬೯

ಧರ್ಮರಾಯನ ಸಮಾಧಾನ.

ಹಗೆಗಳೇ ಕೌರವರು ತೆಗೆ ಬಲು
ವಗೆ ಕಣಾ ಪ್ರಾರಬ್ಧಕರ್ಮವು [2]
ಸೆಗಳಿಕೆಯ ಸಸಿಯಾಗವೇ ನಿಜಸತ್ಯಭಾಷೆಗಳು |

---

1 ನೋಯಲೀಯದೆ ಕೆಲಕೆ ತೆಗೆದೆಯೆಲೈ, ಚ. 2 ಕಾಮಾದಿರಿಪುಗಳು, ಚ.

ಉಗುಱುಗುಱು ಕೋಪವನು ರಾಧೆಯ
ಮಗ ವಿಕಾರಿ ಕರ್ಣ ವೃಕೋದರ
ಬೆಗಡುಗೊಳಿಸದಿರೆಂದು ನುಡಿದನು ಧರ್ಮನಂದನನು ‖ ೨೦

ಬಾ ವೃಕೋದರ ನಕುಲ ಬಾ ಸಹ
ದೇವ ಬಾರೈ ತಮ್ಮ ಫಲುಗುಣ
ಭೂವರನೆ ನೀವ್ ಬನ್ನಿಯೆನಲವನೀಶನೈತಂದು ।
ಆವುದೈ ಕರ್ತವ್ಯ ನೀವೇ
ದೈವಗುರುಪಿತರೆಂದು ವಿಗೆ ಸಂ
ಭಾವನೋಕ್ತಿಯಲಾಡಿದನು ಧೃತರಾಷ್ಟ್ರ ಭೂಪತಿಗೆ ‖ ೨೧

ಮಕ್ಕಳನಗವರಲ್ಲ ನೀವೇ
ಮಕ್ಕಳೈವರು ಮಗನೆ ನಮ್ಮದು
ಮಕ್ಕಳಾಟಿಕೆಯಾಯ್ತಲಾ ಶಾಬಲನ ದೆಸೆಯಿಂದ ।
ಮಿಕ್ಕು ನೀ ಸೈರಿಸುವುದೆ [1] ಮ್ಮದು
ಬಿಕ್ಕಡಿಯು ಬೇಳಂಬ ನಿಮ್ಮಲಿ
ಕಕ್ಕುಲಿತೆ ಯಿಲ್ಲೆನುತ ತೆಗೆದಪ್ಪಿದನು ಧರ್ಮಜನ ‖ ೨೨

ಆಗ ಬಹು ವಿಧವಾಗಿ ಪಾಂಡವರನ್ನು ಧೃತರಾಷ್ಟ್ರನು
ಸಮಾಧಾನ ಪಡಿಸಿದುದು.

ಎನ್ನ ನಿಕ್ಷಿಸು ಮಗನೆ ತಾಯ್ ನಿಮ
ಗನ್ಯಳೇ ಗಾಂಧಾರಿ ಪಿತನೆಂ
ದೆನ್ನ ಕಾಂಬಿರಿ ವೃದ್ಧನೆಂದು ಗತಾಕ್ಷ ತಾನೆಂದು ।
ಮನ್ನಿಸುವಿರೆಲೆ ಮಕ್ಕಳಿರ ಸಂ
ಪನ್ನ ಸತ್ಯರು ನೀವು ಕರ್ಮಿಗ
ಳನ್ನವರು ರೋಷಾಭಿಸಂಧಿಯ ಮಱೆದು ಬಿಡಿ ಯೆಂದ ‖ ೨೩

1 ನೀವ್ ಸೈರಿಸಿದರೆ, ಕ. ಖ.

ರೂಢಿಗಗ್ಗದ ರಾಜಸೂಯದ
ಲೂಡಿ ನಿರ್ಜರಕಟಕವನು ಖಯ
ಖೋಡಿಯನು ಬಿಡಿಸಿದೆ ಯೆಲಾ ತ್ರಿದಶರಲಿ ಪಾಂಡುವಿನ |
ಮಾಡುವೆಯೆಲಾ ಮಗನೆ ತಾನೀ
ಗೂಡ ಬಿಸುಟರೆ ಸುರರ ಸಂಗದೊ
ಳಾಡುವಂತಿರೆ ತನಗೆ ಗತಿ ನೀನಲ್ಲದಾರೆಂದ || ೨೪

ಪಾಲಿಸವನಿಯನೆನ್ನ ಮಕ್ಕಳ
ಬೂಳತನವನು ಮನಕೆ ತಾರದಿ
ರಾಲಿಸದಿರಪರಾಧಿವಾಚಾಳರ ವಚೋಮತವ |
ಕಾಲದೇಶಾಗಮನ ನಿಗಮದ
ಡಾಳವಱಿದೈಹಿಕಪರತ್ರದ
ಚಾಳಿಯಲಿ ನಡೆ ಕಂದ ಯೆಂದಪ್ಪಿದನು ಧರ್ಮಜನ [1] || ೨೫

ಸತ್ಯಕ್ಕೆ ತಪ್ಪಿ ನಡೆಯುವುದಿಲ್ಲವೆಂದು ಧರ್ಮರಾಯನ ಉತ್ತರ.

ಸೋತೆವೆಮ್ಮವರನು ಜೂಜಿನೊ
ಳೀತಳೋದರಿ ಸಹಿತ ಕೇಳ್ಳೆ
ತಾತ ಪೋಪುದುವುಚಿತವೇ ನೀವ್ ಕಳುಹುವುದು ಮತವೆ |
ನೀತಿಯಲ್ಲದು ಧರಣಿಯೊಳು ವಿ
ಖ್ಯಾತಿ ಸಲ್ಲದು ಲೋಕ ಮೆಚ್ಚದು
ಮಾತು ಪೊಲವಹುದುಚಿತವಲ್ಲೆಂದವನಿಪತಿ ನುಡಿದ || ೨೬

ಎಲೆ ಮಗನೆ ನಿನಗುಂಟೆ ಪಾತಕ
ಹಟವು ಸತ್ಯವು ಧರ್ಮವೆಂಬಿವು
ಕುಲತಿಲಕ ನೀನಲ್ಲದಾರುಂಟೆಮ್ಮ ವಂಶದಲಿ |
ಒಲಿದು ಕೇಳುವುದೆಮ್ಮ ಮಾತನು
ತಿಳಿದು ಹೋಹುದು ಪುರಕೆ ನಿಮ್ಮಯ
ಲಲನೆಸಹಿತೆಂದವನಿಪತಿ ತಿಳುಹಿದನು ಧರ್ಮಜನ || ೨೭

1 ವಿಟಾಳಿಸದೆ ನಡೆ ಕಂದ ಯೆಂದನು ಮರಳಿ ತೆಗೆದಪ್ಪಿ, ಚ,

ಪಾಂಡವರಿಗಾಗಿ ಧೃತರಾಷ್ಟ್ರನ ಉಪಚಾರ.

ತರಿಸಿದನು ಮಡಿವರ್ಗದಮಲಾಂ
ಬರವನಂಬುಜಮುಖಿಗೆ ರತ್ನಾ
ಭರಣವನು ವಿವಿಧಾನುಲೇಪನಚಿತ್ರಸಂಪುಟವ ।
ಅರಸನಿತ್ತನು ವೀಳೆಯವ [1] ಕ
ರ್ಪೂರದ ತವಲಾಯಿಗಳನಂತಃ [2]
ಪುರ [3] ಕಿವರ ಕಳುಹಿದನು ಗಾಂಧಾರಿಯನು ಕಾಣಿಸಿದ ॥ ೪೮

ದ್ರೌಪದಿಯನ್ನು ಕುರಿತು ಗಾಂಧಾರಿಯ ಸಮಾಧಾನ.

ನೋಡಲಾಗದು ಮಕ್ಕಳಿರ ಕುಲ
ಗೇಡಿಗಳ ಕಪಟವನು ನಮ್ಮನು
ನೋಡಿ ಮಱೆವುದು ಪಾಂಡುವೆಂದಿಹುದಂಧಭೂಪತಿಯು ।
ನಾಡೆ ನೋಡಲು ತಾಯೆ ಬಾ ಮಗ
ಮಾಡಿದನುಚಿತಶತವನೆಲ್ಲವ
ಮಾಡಿದೆನು ತಾನೆಂದಳಾದ್ರೌಪದಿಗೆ ಗಾಂಧಾರಿ ॥ ೪೯

ಮಱೆದನಾಗಳ ವಿಗಡವಿಧಿಯೆ
ಚ್ಚರಿಸಿದೊಡೆ ತದ್ಭುಕ್ತಿಮುಖದಲಿ
ಮುಱಿದುದೆಮ್ಮಯ ಪೂರ್ವದುಷ್ಪ್ರಾರಬ್ಧ ಕರ್ಮಫಲ ।
ಹೆರರನೆಂಬುದು ಖೂಳತನವೇ
ನಱಿಯುದವರೇ ಪಾಂಡುಸುತರೆಂ
ದುಱುಬೆಯಲಿ ಬಿನ್ನೈಸಿದಳು ಗಾಂಧಾರಿಗಬುಜಮುಖಿ ॥ ೫೦

ಧೃತರಾಷ್ಟ್ರನ ಮಾತನ್ನು ನಂಬಿದುದು.

ಸಾಕು ನೇಮವ ಕೊಡಿ ಯೆನುತ ಕುಂ
ತೀಕುಮಾರರು ಬೀೞುಕೊಂಡರು

---

1 ಅರಸ ನಿತ್ತನು ನೂಕಿದನು, ಕ. ಖ. ಡ. 2 ನಭ್ಯಂ, ಕ. ಜ. ಡ.
3 ತರ, ಕ. ಖ. ಡ.

ನೂಕಿ ಹೊಕ್ಕುದು ದಾಳವಟ್ಟದಲಿವರ ಪರಿವಾರ ।
ತೋಕಿದುವು ಸೀಗುರಿಗಳಡಬಲ
ದಾಕೆಯಲಿ ಪಾಂಡವಕುಮಾರಾ
ನೀಕ ಬೆರಸಿತು ಕರಿತುರಗರಥಪಾಯದಳಸಹಿತ ॥ ೮೧

ಕಳದೆವೇ ಖಳರೊಡ್ಡಿದಿಱುಬಿನ
ಕುಳಿಗಳನು ಕೈತಪ್ಪುಮಾಡದೆ
ಸಲಹಿದೆವು ಸತ್ಯವನು ಸುಜನರ ಕಲೆಗೆ ಸಂದೆವೆಲೆ ।
ಕಳವಳದ ಕಡುಗಡಲೊಳಾೞದೆ
ಸುಳಿದೆವಿತ್ತಲು ಶಿವ ಶಿವಾ ಯೆದು
ಕುಲಜ ಗದುಗಿನ ವೀರನಾರಾಯಣನ ಕರುಣದಲಿ ॥ ೮೨

ಹದಿನಾರನೆಯ ಸಂಧಿ ಮುಗಿದುದು.

ಹದಿನೇಳನೆಯ ಸಂಧಿ.

ಸೂಚನೆ.

ದ್ಯೂತಮುಖದಲಿ ಸಕಲರಾಜ್ಯವ
ಸೋತು ತನ್ನನುಜಾತಮುನಿಸಂ
ಘಾತಸಹಿತವನೀಶ ವನವಾಸಕ್ಕೆ ಹೋದವೆಂಟ ॥

ಪಾಂಡವರು ಈ ವರ್ತಮಾನವನ್ನು ಮಕ್ಕಳಿಗೆ ತಿಳಿಸಿದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಕುಂತೀನಂದನರು ತ
ಮ್ಮಾಳೊಡನೆ ಹೇಳಿದರು ಸೌಭದ್ರಾದಿತನಯರಿಗೆ ।
ಬಾಲಿಕೆಯ ಬೇಳಂಬವನು ಜೂ
ಜಾಳಿಗಳ ಜಜ್ಝಾರತನವನು
ಕೇಳಿ ಬೈದುದು ಸೇನೆ ಖತಿಯಲಿ ಖಳಚತುಷ್ಟಯವ ॥ ೧

ಎತ್ತಿತೀಪಾಳೆಯವು ನಿಜಪುರ
ದತ್ತ ತಿರುಗಿತು ಜನಜನಿತ ರಾ
ಜೋತ್ತಮನ ಕಡೆಯಾಯ್ತು ಸತ್ಯಕ್ಷಮೆ ಪರಾಕ್ರಮಕೆ ।
ಇತ್ತಲಡು ಪಾಯ್ಬೞಿಗೆ ಬಿಸುಗುದಿ
ಕಿತ್ತಡವು ಕಾರ್ಪಣ್ಯ ಕಪಟ ಖ
ಳೋತ್ತಮರ ಹೃದಯದಲಿ ಮೂಡಿತು ನೃಪತಿ ಕೇಳೆಂದ ॥ ೨

ದುಶ್ಶಾಸನನು ದುರ್ಯೋಧನನ ಮುಂದೆ ಪಾಂಡವರು ತಮ್ಮ ಊರಿಗೆ ಹೊರಟದ್ದನ್ನು ತಿಳಿಸಿದುದು

ರವಿಯುದಯದಲಿ ಕೌರವೇಂದ್ರನ
ಭವನಕೈತಂದನು ಕುಠಾರರ
ಜವಳಿಯನು ಕರೆಸಿದನು ರಾಧಾಸುತನ ಸಾಬಲನ ।
ಅವನಿಪತಿಗಾಂಧಾರಿಯರು ಪಾಂ
ಡವರ ಮನ್ನಿಸಿ ಕಳುಹಿದರು ತ
ಮ್ಮವನಿಗೈದಿದರೆಂದನಾದುಶ್ಶಾಸನನು ನಗುತ ॥ ೩

ಮುಱಿಮುಱಿದು ಪಟ್ಟಣವ ನೋಡುತ
ನರವೃಕೋದರರೌಡುಗಚ್ಚು ತ
ತಿರುಗಿದರು ಗಡ ಗಾಢಬದ್ಧಭ್ರುಕುಟಭೀಷಣರು ।
ಕರಿಯು [1] ಸೊಗಡಿನ ಮೃಗಪತಿಗೆ ಮೈ
ಹರಿದ ಪಂದಿಗೆ ನೊಂದಹಾವಿಂ
ಗರಸ ಮೈಚಾಚಿದೆ ಯೆಲಾ ನೀನೆಂದನಾಶಕುನಿ ॥ ೪

ಆಗ ಕರ್ಣನ ವಾಕ್ಯ.

ಅವರ ಹೆಂಡಿರ ಮುಂದಲೆಯ ಹಿಡಿ
ದವಗಡವ ಮಾಡಿಸಿದೆ [2] ಪಟ್ಟದ

---

1 ಕಿಱಿಯ್ರು, ಕ. ಖ. ಡ. 2 ದೆವ್ರು, ಕ. ಖ. ಡ.

ಯುವತಿಯುನು ಸಲೆ ಲಜ್ಜೆಗೆಡಿಸಿದೆ ನಿಮ್ಮ [1] ಲಾಪನಿತ |
ಅವಳ ದೈವೋದಯದಲ್ಲೈಸಲೆ
ಸವಡಿ ಸೀರೆಯ ಸುತ್ತು ಬಳೆದುದು
ನಿವಗದಾಗಳೆ ಮಱೆದು ಹಿಂಗಿದುದೆಂದನಾಕರ್ಣ || ೫

ಬೊಪ್ಪನಿತ್ತನು ವರವ ನಮಗದ
ತಪ್ಪಿಸಲು ತೀರುವುದೆ ಭೀಮನ
ದರ್ಪಕರ್ಜುನನುಬ್ಬಟೆಗೆ ಮಾಡಿದೆವು ಮದ್ದುಗಳ |
ತಪ್ಪಿಸಿತಲಾ ದೈವಗತಿ ನ
ಮ್ಮಪ್ಪನೇ ಕೆಡಿಸಿದನು ನಮಗಿ
ನ್ನಪ್ಪುದಾಗಲಿ ಯೆಂದು ನುಡಿದನು ಕೌರವರ ರಾಯ || ೬

ಜಯವಹುದೆ ನಿರ್ವೇದದಲಿ ನಿ
ರ್ಭಯವಹುದೆ ಬಿಸುಸುಯ್ಲಿನಲಿ ನಿ
ರ್ಣಯವಹುದೆ ರಿಪುನೃಪರಗಿದು ತಾ ನೀತಿಮಾರ್ಗದಲಿ |

ನಿಮ್ಮ ತಂದೆತಾಯಿಗಳನ್ನು ಮೊದಲು ಸರಿಮಾಡೆಂದು
ಶಕುನಿಯ ಉಪದೇಶ.

ನಿಯತವಿದು ನಿಶ್ಯೇಷ ನಿಮ್ಮ
ನ್ವಯಕೆ ನಿರ್ವಾಹವನು ಗಾಂಧಾ
ರಿಯಲಿ ನಿಮ್ಮಯ್ಯನಲಿ ಬೆಸಗೊಳ್ಳೆಂದನಾಶಕುನಿ || ೭

ಅರಸ ಕೇಳ್ ಧೃತರಾಷ್ಟ್ರಭೂಪತಿ
ಯರಮನೆಗೆ ನಡೆತಂದರೀನಾ
ಲ್ವರು ವಿಷಾದವಿಡಂಬವಿಹ್ವಳಕರಣವೃತ್ತಿಯಲಿ |
ಪರಿಮಿತದಿ ಕುಳ್ಳಿರಿಸಿದರು ಸಹ
ಚರರ ಶೋಧಿಸೆ ಕಡು ರಹಸ್ಯದೊ
ಳರಸಿಯನು ಬರಹೇಳಿದರು ಗಾಂಧಾರಿದೇವಿಯನು || ೮

1 ಯುವತಿಯಾಕೆಯ ಭಂಗಪಡಿಸಿದೆ, ಚ.

ತಂದೆಯನ್ನು ಕುರಿತು ದುರ್ಯೋಧನನ ನಿಷ್ಠುರ ಭಾಷಣಗಳು.

ಅವರ ದಾಸ್ಯವ ಬಿಡಿಸಿ ನಿಜರಾ
ಜ್ಯವನು ಕರುಣಿಸಿ ನೀತಿಯಲಿ ನಿ
ಮ್ಮವರ ಕಳುಹಿದಿರೆಂದು ಕೇಳಿದೆವಾಯ್ತು ಪರಿತೋಷ ।
ಅವರು ನಿಮಗತಿಭಕ್ತರೈ ಬಾಂ
ಧವರಲಾ ಬಳಿಕೇನು ಧರ್ಮ
ಪ್ರವರರಿಗೆ ನೀವೊಲಿದಿರೆಂದನು ಕೌರವರ ರಾಯ ॥ ೯

ನಾವಲೇ ಹೊಱಗವರ ಹೆಂಡಿರ
ಹೇವ ಗೆಡಿಸಿದೆವವರ ಸೋಲಿಸಿ
ಜೀವಮಾತ್ರವನುಳುಹಿ ಸೆಳೆದೆವು ಸಕಲವಸ್ತುಗಳ ।
ನೀವು ಕರುಣಿಸಿದಿರಿ ಕೃಪಾವಿ
ರ್ಭಾವ ಹಿರಿಯರಲುಂಟಲೇ ತ
ಪ್ಪಾವುದೈ ತಪ್ಪಾವುದೆನುತಲ್ಲಾಡಿದನು ಶಿರವ ॥ ೧೦

ತಾಯೆ ನೇಮವೆ ಹಗೆಯ ಕೈಯ್ಯಲಿ
ಸಾಯಲಾರೆವು ಸಾಗರಾಂತ್ಯದ
ರಾಯರಿಲ್ಲವೆ ಹೋಟಿಯಲಾಪೆವು ಬೆಂದಬಸುಱುಗಳ ।
ಕಾಯಿದನು ಕರುಣದಲಿ ತಂದೆ ಸ
ಹಾಯಕರ ಪಾಂಡವರ ಗೂಡಿ ಚಿ
ರಾಯು ಬದುಕಿರಲೆಮ್ಮ ಬಿಡಿ ಯೆಂದೆಱಗಿದನು ಪದಕೆ [1] ॥ ೧೧

ದುರ್ಯೋಧನನ ದೂಷಣ.

ಏಕೆ ಬೆಸಗೊಳ್ಳಲೆಗೆ ಸುಡಲವಿ
ವೇಕವಿಷಮಗ್ರಹವಿಕಾರ
ವ್ಯಾಕರಣದುರ್ಲಲಿತನಿಷ್ಫಲವಿಪ್ರಲಾಪ ವಿದು ।

---

[1] ರಾಯು ಬದುಕಿರಲೆಮ್ಮ ಕಳುಹೆಂದೆಱಗಿದನು ಪದಕೆ, ಚ.

ಈಕುಲವನೀಪುರವ ನೀಲ
ಕ್ಷ್ಮೀಕರವ ನೀಜನವ ನೀವಿಭ
ವಾಕೃತಿಯನಂಬುಧಿಯೊಳದ್ದುವ ನಿನ್ನ ಮಗನೆಂದ ॥ ೧೨

ಪಾಂಡವರ ಗುಣಕಥನ.

ಸರಿಹಸುಗೆಯಿಂದರ್ಧರಾಜ್ಯದ
ಸಿರಿಗೆ ಯೋಗ್ಯರು ಬಾಹುಸತ್ವಕೆ
ಸುರರು ಸರಿಯಿಲ್ಲಕಟ ಪಾಡೇ ಮನುಜಜಂತುಗಳು ।
ಚರಿತವೆಂಬೊಡೆ ಋಷಿಗಳಿಗೆ ಗೋ
ಚರಿಸದವರಾಚರಣೆ ನಿಮಗೆಂ
ತರಿವಿನಾಶನಸಿದ್ಧಿಯೆಂದನು ಸುಯ್ದು ಧೃತರಾಷ್ಟ್ರ ॥ ೧೩

ದುರ್ಯೋಧನನು ಕೋಪದಿಂದ ಹೊರಡುವಿಕೆ.

ಬೇಹವರು ಸಮರಾಜ್ಯದಲಿ ಸಂ
ದೇಹವೇ ಮೇಲವರು ಸತ್ವದ
ಸಾಹಸದ ಸತ್ಯದ ಸದಾಚಾರದ ನಿವಾಸರಲೈ ।
ಸ್ನೇಹಿತರು ನಿಮಗವರ ಮೇಲವ
ಗಾಹಿಸದೆ ಯನ್ಯಾಯದಲಿ ಸ
ದ್ರೋಹರಾವೆಮಗಿನ್ನು ನೇಮವೆ ಯೆನುತ ಹೊಱವಂಟ ॥ ೧೪

ತಂದೆಯು ಮಗನನ್ನು ಪುನಃ ಕರೆಕಳಿಹಿಸುವಿಕೆ.

ಕಲಕಿತರಸನ ಕರಣಕಂಗಳ
ಕುಳಿಗಳಲಿ ನೀರೊಱೆತವಕಟಕ
ಟೆಲೆಗೆ ಕರೆಯಾ ಪಾಪಿಕುರುವಂಶಾಂತಕನನೆನಲು ।
ಸೆಳದು ತಂದರು ಕರ್ಣಶಕುನಿಗ
ಳಟಲಿಗನ ತೆಗೆದಪ್ಪಿದನು ಕುರು
ತಿಲಕ ನೀನುಱದೊಡಲ ಹೊರೆವೆನೆ ಯೆಂದನಂಧನೃಪ ॥ ೧೫

ದುರ್ಯೋಧನನನ್ನು ಕುರಿತು ಸಮಾಧಾನ.

ಏನ ಮಾಡುವುದವರ ಕೆಡಿಸುವು
ದೇನುಪಾಯವ ಕಂಡೆ ದೈವ
ಧ್ಯಾನನಿಷ್ಠರ ಮುಱಿವುದರಿದನ್ಯಾಯಮಾರ್ಗದಲಿ ।
ಏನು ನಿನ್ನಭಿಮತವು ನಿನ್ನೊಳ
ಗಾನು ಹೊಱಗೇ ಕಂದ ನುಡಿ ದು
ಮ್ಮಾನ ಬೇಡೆನ್ನಾಣೆನುತ ಸಂತೈಸಿದನು ಮಗನ ॥ ೧೬

ಪಾಂಡವರ ವಿಷಯದಲ್ಲಿ ದುರ್ಯೋಧನನ ಅಭಿಪ್ರಾಯ.

ನೊಂದರವರಗ್ಗಳಿಸಿ ಹೃದಯದೊ
ಳೊಂದಿ ಬೆರಸರು ತೆರಹು ಮರಹಿನೊ
ಳಂದಗೆಡಿಸಿದೊಡಲ್ಲದುೞಿಹರು ನಿನ್ನ ಸಂತತಿಯ ।
ಒಂದು ಸತ್ತಿಗೆ ನಮ್ಮದಿಲ್ಲಿಗೆ
ನಿಂದುದೆನಿಸಲಿ ನಾವು ನಿಲಲವ
ರೊಂದು ಸತ್ತಿಗೆಯಾಗಿ ಸಲಹಲಿ ನಿಖಿಳರಾಜ್ಯವನು ॥ ೧೭

ಹುದುವ ಸೈರಿಸಿ ಬಳಸಿದರು ದ್ರೌ
ಪದಿಯನವರೈವರು ಧರಿತ್ರಿಯ
ಹುದುವ ಸೈರಿಸಲಾರೆನವರೊಡನಿಂದುಮೊದಲಾಗಿ ।
ಒದೆದು ಕಳ ನಮ್ಮನಿಬರನು ನೇ
ಹದಲಿ ಸಲಹೈವರನು ನೀನಿಂ
ದೊದೆವುದೈವರ ನಮ್ಮ ಹಿಡಿ ಬೇಱಿಲ್ಲ ಮತವೆಂದ ॥ ೧೮

ಅನಿಲಜನ ಬಾಯ್ಬಡಿಕತನವ
ರ್ಜುನನ ಬಱಿಬೊಬ್ಬಾಟ ಸಹದೇ
ವನ ಸಗರ್ವದ ಮಾತು ಮೈಯ್ಯಿಕ್ಕುವುದೆ ಬೞಿಕಿನಲಿ ।

ಮನೆಮೊಗವ ಕಾಣಿಸದೆ ಘನಕಾ
ನನದೊಳಗೆ ಸುಳಿವಂತೆ ಮಂತ್ರವ
ನೆನದೆನಿದು ನಿಮ್ಮಡಿಯ ಚಿತ್ತಕೆ ಬಹೊಡೆ ಬೆಸಸೆಂದ ॥ ೧೯

ಅದಕ್ಕೆ ಧೃತರಾಷ್ಟ್ರನ ಅಂಗೀಕಾರ.

ಮರುಳು ಮಗನ್ನೆ ಶಿವ ಶಿವಾ ಮನ
ಬಱಿಡನೇ ತಾನಕಟ ನಿಮ್ಮೈ
ಶ್ವರಿಯ ಹಗೆ ದಾಯಾದ್ಯರುಗಳಭ್ಯುದಯದಲಿ ಸೊಗಸೆ ।
ದುರುಳರವದಿರು ದೈವಮುಖದೆ
ಚ್ಚರಿಕೆ ಘನ ಕೆಡರೆಂದು ಮೊಱ
ಗರೆ ಕೊರೆಮನದ ಸೂಸಕದ ನೇಹವ ನಟಸುತಿಹೆ ಯೆಂದ ॥ ೨೦

ಪಾಂಡವರನ್ನು ಕರೆಸಿಕೊಡೆಂದು ಮಗನು ಕೇಳಿದುದು.

ಕರೆಸಿಕೊಡಿ ನೀವಿಲ್ಲಿಗವರೈ
ವರನು ಜೂಜಿನೊಳೊಂದು ಹಲಗೆಯ
ಲರಸ ಚಿತ್ತೈಸಲದು ಹನ್ನೆರಡಬುದ ವಿಪಿನದಲಿ ।
ವರುಷವೊಂದಜ್ಞಾತವದಱೊಳ
ಗಱಿದೆವಾದೊಡೆ ಮತ್ತೆ ಬನದಲಿ [1]
ವರುಷಹದಿಮೂಱಕ್ಕೆ ಕೊಡುವುದು [2] ಮತ್ತೆ ವೀಳೆಯವ ॥ ೨೧

ಧರೆಯ ಗೆಲಿದರೆ ಭೀಮಫಲುಗುಣ
ರುರುವಣಿಸುವರು ಭೀಷ್ಮವಿದುರರು
ಗುರುಕೃಪರು ಸೈರಿಸರು ದಟ್ಟಿಸಿ ಮರಳಿ ಕೊಡಿಸುವರು ।
ವರುಷಸಂಖ್ಯೆಯುಲವರ ಸತ್ಯದ
ಭರದಲವನಿಯ ಕೊಂಬುದಿದು ತಾ
ಪರಮಮಂತ್ರವಿದೆಂದು ನುಡಿದರು ಖಳಚತುಷ್ಟಯವು ॥ ೨೨

---

1 ಮರಳಿ ವಿಪಿನಕ್ಕೆ, ಚ 2 ಹನ್ನೆರಡಕ್ಕೆ ಕೊಡುವೆವು, ಚ.

ಅಹುದು ಮಂತ್ರವಿದೆಂದು ಚಿತ್ತಕೆ
ಬಹೊಡೆ ಕಳುಹಿ ಮನುಷ್ಯರನು ಕರೆ
ಸಹಿತರನು ವಿದುರಾದಿಗಳ ಕೊಂಡೆಯಕೆ ಕಿವಿಗೊಡದೆ ।
ಕುಹಕವುಂಟೇ ನಮ್ಮ ಕಳುಹುವು
ದಹ ಮತವೆ ಬೆಸಸೆನಲು ನಿಮ್ಮೊಳು
ಕುಹಕ ವುಂಟೇ ಮಗನೆ ಕರೆಸುವೆನೀಗ ಪಾಂಡವರ ॥ ೨೩

ಅವರನ್ನು ಪ್ರಾತಿಕಾಮಿಕನಿಂದ ಕರೆಸುವುದು.

ಪ್ರಾತಿಕಾಮಿಕ ಬಾ ಯುಧಿಷ್ಠಿರ
ಭೂತಳೇಶನ ಕರೆದು ತಾರೈ
ತಾತ ಕರೆಸಿದನೆಂಬುದಿಂದ್ರಪ್ರಸ್ಥದಲ್ಲಿರಲಿ ।
ಪ್ರೀತಿಪೂರ್ವಕವಲ್ಲದಿಲ್ಲಿ ವಿ
ಘಾತಿಯಿಲ್ಲೆಂದುಚಿತವಚನದೊ
ಳಾತಗಳ ಕರೆ ಯೆಂದು ಬೆಸಸಿದನವಗೆ ಧೃತರಾಷ್ಟ್ರ [1] ೨೪

ಅದಕ್ಕೆ ಭೀಷ್ಮಾದಿಗಳ ಅನುತಾಪ.

ಕೇಳಿದರು ಭೀಷ್ಮಾದಿಗಳು ಬರ
ಹೇಳಿದುದ ಪಾಂಡವರನಕಟಾ
ಹೇಳಿದರೆ ಕೌರವರ ನೂರ್ವರನಂತಕಾಲಯಕೆ ।
ಹೇಳಿಗೆಯು ಹೇಳಿದನೆ ಹಾವಿನ
ಮೇಲುಮುಚ್ಚಳ ಮುಱಿಯಲೆಂದಿದ
ಕೇಳಿದೆವೆ ಕೌತುಕವೆನೆಂದರು ಕುದಿದು ತಮ್ಮೊಳಗೆ ॥ ೨೫

ಉಱುವ ಮಕ್ಕಳನಿಕ್ಕಿ ಸಾಧಿಸು
ವೆಱಕೆಯಾವುದು ಹೇಳಲಾಗದೆ
ಕುಱಿಗಳೇ ಸಿನ್ನವರು ಬಲಿ ಯಿದು ಮೇಲೆ ವಿಧಿಯೆನುತ [2] ।

1 ನೊಡಗೊಂಡು ಬಾ ಹೋಗೆಂದನಂಧನೃಪ, ಚ.

2 ಬಲ್ಲರೇ ಮೋಲಣಾಪಜಯುವ, ಚ,

ಮಱುಗುವಳು ಗಾಂಧಾರಿ ಮಕ್ಕಳ
ಹಱಿವ ಕಂಡರೆ ಮೇಲೆ ನಿನಗೇ
ನಱಿಯಬಾರದೆ ಮರುಳೆ ಯೆಂದುಲಿದನು ಕಲಿಭೀಷ್ಮ ॥ ೨೬

ಕೊಂಬುದೇ ಖಳಜನಕೆ ಸಾಧುಗ
ಳೆಂಬ ಮಾತು ವಿಧಾತೃಕಲ್ಪಿತ
ವೆಂಬ ವಿಷದುಬ್ಬಟಕೆ ಗಾರುಡವೇನ ಮಾಡುವುದು ।
ತುಂಬುವುದು ಬತ್ತುವುದು ಕಾಲನ [1]
ಡೊಂಬಿದಾರಿಗೆ ಸಾಧ್ಯ ನಾವೇ
ನೆಂಬೆವಿದಕೆಂದುಲಿದರು ಭೀಷ್ಮಾದಿಸಜ್ಜನರು ॥ ೨೭

ಇವರ ವಂಚಿಸಿ ರಜನಿಮಧ್ಯದೊ
ಳವನ ಕಳುಹಿದೊಡಾತನೈತಂ
ದಿವರ ಪಾಳೆಯದೊಳಗೆ ಹೊಕ್ಕನು ಹಲವುಪಯಣದಲಿ ।
ಅವನಿಪತಿ ಮಱುದಿವಸ ಬೀಡೆ
ತ್ತುವೆ ನಿಧಾನವನಱಿದು ರಾಯನ
ಭವನಿಕೆಯ ಹೊಱಬಾಹೆಯಲಿ ದಂಡಿಗೆಯನವನಿೞಿದ ॥ ೨೮

ಕರೆದು ಹೇಳಿದನಾಗ ಪಡಿಹಾ
ರರಿಗೆ ತಾನೇ ಪ್ರಾತಿಕಾಮಿಕ
ನರಸ ಕಳುಹಲು ಬಂದೆನಗ್ಗದ ರಾಜಕಾರಿಯಕೆ ।
ಧರಣಿಪಾಲಂಗಱುಹಿ ಯೆನೆ ನೃಪ
ವರಗೆ ಬಿನ್ನಹಮಾಡೆ ಕರೆಸಿದೊ
ಡಿರದೆ ಹೊಕ್ಕನು ದೂತನಂದಾರಾಯನೋಲಗವ ॥ ೨೯

ದೂತ ಖಂಡ ಸಂಗತಿಯನ್ನು ಹೇಳಿದುದು.

ದರುಶನವನಿತ್ತವನಿಪಾಲನ
ಚರಣದಲಿ ಮೈಯಿಕ್ಕಿ ನಿಂದನು

---

1 ಬಿತ್ತುವುದು, ಚ.

ನರವೃಕೋದರನಕುಲಸಹದೇವರಿಗೆ ಕೈಮುಗಿದು ।
ಧರಣಿಪನ ಮೊಗಸನ್ನೆಯಲಿ ಕು
ಳ್ಳಿರಲಿದೇನೈ ಪ್ರಾತಿಕಾಮಿಕ
ಬರವು ಬೇಗದೊಳಾಯ್ತೆನುತ ಬೆಸಗೊಂಡನಾಭೀಮ ॥ ೨೦

ಬರವು ಬೇಱೇನೊಡೆಯರಟ್ಟಿದ
ರರಸನಲ್ಲಿಗೆ ಮುನ್ನ ಜೂಜಿನೊ
ಳೊರಸೊರಸು ಮಿಗೆ ಮಸೆದುದಿತ್ತಂಡಕ್ಕೆ ಮನಮುಸಿಸು ।
ಹರದು ಹೋಯ್ತದು ಹೃದಯಶುದ್ಧಿಯೊ
ಳರಡರಸುಗಳು ಜೂಜನಾಡಲಿ
ಮರಳಿ ಬಿಜಯಂಗೈವುದೆಂದಟ್ಟಿದನು ಧೃತರಾಷ್ಟ್ರ ॥ ೨೧

ಭೀಮನ ಆಕ್ಷೇಪವಾಕ್ಯ.

ಮರಳಿ ಕರೆಸುವುದೆಂದು ಕಂಬನಿ
ಮರಸಿ ಕುರುಪತಿಪಿತನ ಚಿತ್ತವ
ಕರಗಿಸಿದನೋ ಮೇಣು ತಾ ಕರೆಸಿದಳೊ ಗಾಂಧಾರಿ ।
ಕರೆಸುವವದಿರು ಭಂಡರೋ ಮೇಣ್
ಮರಳಿ ಹೋಹರು ಭಂಡರೋ ನೀ
ನಱಿವುದೇನೈ ಪ್ರಾತಿಕಾಮಿಕಯೆಂದನಾಭೀಮ ॥ ೨೨

ಸಮಾಧಾನದ ನುಡಿಗಳು.

ಬೊಪ್ಪನವರಟ್ಟಿದರೆ ಹರ ಹರ
ತಪ್ಪ ನೆನೆವರೆ ಭೀಮ ಸೈರಿಸು
ತಪ್ಪನಾಡಿದೆ ನಮಗೆ ಮುನಿವಳೆ ತಾಯಿಗಾಂಧಾರಿ ।
ತಪ್ಪದೊಮ್ಮೆಗೆ ಪಾಂಡುಕುಂತಿಗೆ
ಮುಪ್ಪಿನಲಿ ಮರುಳಾಟವಾಗಲಿ
ತಪ್ಪುವನೆ ಧೃತರಾಷ್ಟ್ರನಂದನು ನಗುತ ಯಮಸೂನು ॥ ೨೩

ಖಳರು ಮೊದಲಲಿ ಕೌರವರು ಕಲಿ
ಮೊಳೆಯನಂಕುರಿಸುವ ಕುವಿದ್ಯಾ
ಕಲಿತಮಾಯುರು ಕರ್ಣಶಕುನಿಗಳವರ ಸಂಗದಲಿ |
* ಹೊಳವನಡೆಯುವನೆಡಹುವನು ನಿ
ರ್ಮಳನಹನ ನಿಜಪಿತನ ದೋಷವ
ಕಳೆದು ನಿಜಭಾವದಲಿ ಭಜಿಸುವುದೆ ಮತವೆಂದ || ೩೪

ಆಗ ಜನಗಳ ಅಭಿಪ್ರಾಯ.

ನೆನಹಿನಭಿಮತವಲ್ಲ ಸುಯೋ
ಧನನ ದುಷ್ಟರ ಕರ್ಮಗತಿಯಿದು [1]
ಜನಪತಿಯ ವಶವಲ್ಲ ಗಾಂಧಾರಿಗೆಯುಲಂಘ್ಯವಿದು |
ಅನುನಯದ ಹೊತ್ತಲ್ಲ ನೀವ್ ಹ
ಸ್ತಿನಪುರವ ಹೊಕ್ಕಾಗಳೇ ಕಾ
ನನಕೆ ಗಮಿಸುವಿದೆಂದರಾಧೌಮ್ಯಾದಿಮಂತ್ರಿಗಳು || ೩೫

ಕರೆಯೆ ಕಾದುವುದಾಡುವುದು ಸಂ
ಗರಕೆ ಜೂಜಿಂಗಿದು ಮಹೀಶರ
ಪರಮಧರ್ಮವಲೇ ನಿಧಾನಿಸೆ ವೈದಿಕಾಂಗದಲಿ |
ಗುರುವಲಾ ಧೃತರಾಷ್ಟ್ರನಾತನು
ಕರೆಸಿದಲ್ಲಿ ವಿಘಾತಿ ಬಹುದೇ
ಬರಲಿ ಸೈರಿಸಬಲ್ಲೆನೆಂದನು ಧರ್ಮಸುತ ನಗುತ || ೩೬

ಜನಕನಾಜ್ಞೆಯ ಮೀಱಿ ಬೞಿಸುವು
ದನುಚಿತವು ನಮಗಿನ್ನು ಭೀಮಾ

* ತಿಳಿದು ನಡೆವವನಲ್ಲಿದು ನಿ
ರ್ಮಲದ ನೀತಿಗೆ ಸಲ್ಲ ನಿಜಪಿತ
ನೊಳಗು ನಿರ್ಮಲವಿಲ್ಲವೆಂದನು ನಗುತ ಕಲಿಭೀಮ, ಡ. |

1 ಸುಬಲಕರ್ಣರಭಿಮತ,

ರ್ಜುನನಕುಲಸಹದೇವರಭಿಮತವೆಮ್ಮ ಮತವೆನಲು ।
ಮನವೊದಲು ಕರಣಂಗಳಾತ್ಮಂ
ಗನುಚರರೊ ಬಾಧಕರೊ ನಿಮ್ಮಯ
ಮನಕೆ ಸಲ್ವಂತಾಗಲೆಂದರು ಪವನಜಾದಿಗಳು ॥ ೩೭

ಮರಳಿ ಪಾಳಯ ಬಿಡಲಿ ಚರರನು [1]
ಕರೆದು ಹೇಳೆಂದವನಿಪತಿ ಗಜ
ಪುರಿಗೆ ತಿರುಗಿದನಱಿಯನೇ ಕೌರವರ ಕೃತ್ರಿಮವ ।
ಕೊರಳಲಿಕ್ಕಿದ ವಿಧಿಯ ಕಣ್ಣಿಯ
ಹುರಿ ಬಲುಹಲೇ ಧರ್ಮಸುತನೊಡೆ
ಮುಱಿಚಲಾಪನೇ ಕೇಳು ಜನಮೇಜಯ ಮಹೀಪಾಲ ॥ ೩೮

ಸುತರು ಸಚಿವರು ಮಂತ್ರಿಗಳು ನಿಜ
ಸತಿಯರಾಪ್ತರು ಬಂಧುಗಳು ಭೂ
ಪತಿಗಳನುಜರು ಬುಧರು ಚಾತುರ್ಬಲದ ನಾಯಕರು ।
ಮತವು ಮರಳುವುದಲ್ಲ ಧರಣೀ
ಪತಿಗೆ ದುಸ್ತರ ಕರ್ಮಗತಿ ಸಂ
ಮತವಲೇ ನಮಗಿನ್ನೇನೆನುತ ನಡೆದುವು ಜನಸ್ತೋಮ ॥ ೩೯

ಪಾಂಡವರು ಹಸ್ತಿನಾಪುರಕ್ಕೆ ಬಂದುದು

ಭರದ ಪಯಣದಲಿವರು ಹಸ್ತಿನ
ಪುರದ ಹೊಱಬಾಹೆಯಲಿ ಬಿಟ್ಟರು
ಪರಿರಚಿತಗಜತುರಗಶಾಲೆಯ ವಿಪುಳವೀಧಿಯಲಿ ।
ಬಿಱಿಯೆ ನೆಲನಳ್ಳಿಱಿವ ವಾದ್ಯದ
ಮೊಱೆವ ಭೇರಿಯ ಜಡಿವ ಕಹಳ
ಸ್ವರದ ಕಳಕಳ ಜಱಿದುದಬುಜಭವಾಂಡಖರ್ಪರವ ॥ ೪೦

[1] ಶಿಷ್ಟರ, ಚ.

ಪುರಪ್ರವೇಶ.

ಏನಿದದ್ಭುತರಭಸ ವಿದಳೇ
ಮಾನನಿಧಿಗಳು ಮರಳಿ ಕುಂತೀ
ಸೂನುಗಳ ಬಲ ಬಂದು ಬಿಟ್ಟದು ಪುರದ ಬಾಹೆಯಲಿ ।
ಏನು ಕೌರವರೊಡನೆ ಶರಸಂ
ಧಾನವೋ ವಿನಯಾನುಗುಣಸಂ
ಧಾನವೋ ತಾನೆನುತ ಗಜಬಜಿಸಿದುದು ಗಜನಗರ ॥ ೪೧

ಪುರವ ಹೊಕ್ಕನು ನೃಪತಿ ಪರಿವೃತ
ಪರಿಜನದಲಾರಾಜಬೀದಿಯು
ನೆರವಿ ನೆರವಿಯು ಜನದ ಪುನರಾಗಮನವಿಸ್ಮಯವ ।
ಪರಿಣತಸ್ತ್ರೀಬಾಲವೃದ್ಧರ
ವಿರಸವಚನವನಾಲಿಸುತ ನೃಪ
ನರಮನೆಗೆ ಬಂದೆಱಗಿದನು ಧೃತರಾಷ್ಟ್ರನಂಘ್ರಿಯಲಿ ॥ ೪೨

ಧೃತರಾಷ್ಟ್ರನ ಕ್ಷೇಮಾಲಿಂಗನಾದಿಗಳು

ಅರಸ ತೆಗೆದಪ್ಪಿದನು ಭೂಪತಿ
ಹರುಷದಲಿ ಧರ್ಮಜನ ಭೀಮನ
ನುರುತರಪ್ರೇಮದಲಿ ಮನ್ನಿಸಿ ಫಲುಗುಣಾದಿಗಳ ।
ಅರಸಿಯರ ಸುಕುಮಾರಕರನಾ
ದರಿಸಿ ಮಧುರರಸೋಕ್ತಿಯಲಿ ವಿ
ತ್ತರದ ನುಡಿಗಳ ನುಡಿದು ಮಗುಳಿಂತೆಂದ ನಸುನಗುತ ॥ ೪೩

ಸೋಲದಲಿ ಮನ ನೊಂದು ಹೋದುದು
ಹೋಲದೆಮ್ಮಭಿಮತಕೆ ನಿಮ್ಮೊಳು
ಮೇಳದಿಂದೊಂದಾಗಿ ಮಜ್ಜನಭೋಜನಾದಿಗಳ ।
ಲೀಲೆಯಲಿ ಮಾಡುವುದು ಸದ್ಯೋ
ತಾಳಿಯಲಿ ರಮಿಸುವುದು ಮನದ ವಿ
ಘಾಳವಿಲ್ಲದೆ ಬದುಕಿ ನಿಮ್ಮೊಳಗೆಂದನಂಧನೃಪ ॥ ೪೪

ಮೃದುವಾಕ್ಯಗಳಿಂದ ಧರ್ಮರಾಯನಿಗೆ ದ್ಯೂತದಲ್ಲಿ
ಬುದ್ಧಿಯನ್ನು ಹುಟ್ಟಿಸುವಿಕೆ.

ಕೃತಕವಿಲ್ಲದೆ ಬಂದೆ ನೀನೀ
ವ್ಯತಿಕರಕೆ ಮನ ಬಹೊಡೆ ಸುಖಸಂ
ಗತಸುಹೃದ್ದ್ಯೂತದಲಿ ರಮಿಸೈ ಮಗನೆ ನೀನೆನುತ ।
ಸುತತನದ ಸೌಹಾರ್ದಸಂಭಾ
ವಿತದ ಹೊಱಬಾಹೆಯಲಿ ಧರಣೀ
ಪತಿಯನುಪಚರಿಸಿದನು ಚದುರಿಗತನದಿ ಧೃತರಾಷ್ಟ್ರ ॥ ೪೫

ಸರ್ವಲೋಕವಿನಾಶಕರವೀ
ಗುರ್ವಣೆಯ ದೈವಾಭಿಪಾಕಕೆ
ದರ್ವಿಯಾದುದು ಧರ್ಮಪುತ್ರನ ಬುದ್ಧಿವಿಸ್ತಾರ ।
ಸರ್ವಜನವೊಂದೆಸೆ ಯುಧಿಷ್ಠಿರ
ನೊರ್ವನೊಂದೆಸೆ ಶಕುನಿಕೌರವ
ರಿರ್ವರೊಂದೆಸೆ ಮಿಕ್ಕರಿಗೆ ಮತವಿಲ್ಲ ಜೂಜಿನಲಿ [1] ॥ ೪೬

ಧರ್ಮರಾಯನು ದ್ಯೂತವನ್ನೊಪ್ಪಿದುದು.

ಅಕಟಕಟ ಧರ್ಮಜನ ಬುದ್ಧಿ
ಪ್ರಕರವೀತೆರನಾಯ್ತು ತನ್ನೊಂ
ದಕುಟಿಲತ್ವವ ಬಲ್ಲನವರಭಿಮತವ ತಾನಱಿಯ ।
ಯುಕುತಿ ತೋಱದೆ ಮತ್ತೆ ಜೂಜಿನ
ವಿಕಳತನಕೆಡೆಗೊಂಡು ಕೌರವ
ಶಕುನಿಗಳ ದುರ್ನೀತಿಗೊಳಗಾದನು ಮಹೀಪಾಲ ॥ ೪೭

ಬಂದು ಕುಳ್ಳಿರ್ದನು ಸಭಾಸದ
ವೃಂದ ನೆಱೆದುದು ಮತ್ತೆ ಜೂಜಿನ
ದಂದುಗದ ದುರ್ವ್ಯಸನ ಮುಸುಕಿತು ಧರ್ಮಜನ ಮತಿಯ ।

---

1 ಜೂಜಿನಭಿಮತವರಸ ಕೇಳೆಂದ, ಚ.

ತಂದು ಮಣಿಮಯ ಸಾರಿಹಲಗೆಯ
ನಂದು ಮೋಹರಿಸಿದರು ಜೂಜಂ
ಗಿಂದುಕುಲದವನೀಶನನುವಾದನು ಸರಾಗದಲಿ ॥ ೪೮

ಎಳ್ಳನಿತು ಖಯಖೋಡಿ ಚಿತ್ತದೊ
ಳಿಲ್ಲ ನಿಜಪಾಂಡಿತ್ಯಪರಿಣತಿ
ಬಿಲ್ಲ ಬಿಸುಟುದು ಕೆದಱಿ ಹೋಯ್ತು ವಿವೇಕವಿಜ್ಞಾನ ।
ಖುಲ್ಲರೊಡನೆಯೆ ಕೇಳಮೇಳದ
ಭುಲ್ಲವಣೆ ವೆಂಟಣಿಸೆ ಪುರಜನ
ವೆಲ್ಲ ಮಱುಗಿತು ಧರ್ಮಜನ ಮಱುಜೂಜಿನುಬ್ಬಟಕೆ ॥ ೪೯

ತೆಗೆದು ಸಾರಿಯ ಹೂಡಿ ಹಾಸಂ
ಗಿಗಳ ಹೊಸೆದನು ಶಕುನಿ ಧರ್ಮಜ
ಹೊಗಱು ಹೊಣೆಯನು ನುಡಿವುದೊಡ್ಡವನಿದು ವಿನೋದವಲೆ ।
ಬಗೆವುದೊಂದೇ ಹಲಗೆ ಮೇಲಣ
ದುಗುಣ ಸಲ್ಲದು ಜೂಜುಗಾಱಱ
ವಿಗಡತನವಲ್ಲೆನುತ ನೃಪತಿಗೆ ಸೂಸಿದನು ನಗೆಯ ॥ ೫೦

ಲಲಿತರಾಗದಲಗಿದ ಗೋರಿಯ
ಬಲುಗುಡಿಯ ಮೃಗದಂತೆ ವಿಷಯದ
ಕುಳಿಯೊಳಗೆ ಕಾಲ್ದೊಡಕಿ ಬಿದ್ದ ಸುಯೋಗಿಯಂದದಲಿ ।
ಕಲಿತವಿಕಳಾವೇಶದಲಿ ವಿ
ಹ್ವಲಿತವಿವಿಧಶ್ರೋತ್ರನಯಸಂ
ವಲಿತನೆಂದನು ಶಕುನಿ ನೀ ನುಡಿಯೊಡ್ಡವೇನೆನುತ ॥ ೫೧

ಪಣನಿರ್ಣಯ.

ಧರಣಿಪತಿ ಕೇಳ್ ನಿನ್ನ ಧಾರಿಣಿ
ಕುರುಪತಿಯ ನೆಲನೊಡ್ಡವಿಂತೀ
ಯೆರಡು ತಂಡದೊಳಾರು ಸೋತರು ಸೋತ ಭೂಪತಿಗೆ ।

ವರುಷಹನ್ನೆರಡಡವಿ ಬನದೊಳ
ಗಿರವು ಮೇಲಜ್ಞಾತವೊಂದೇ
ವರುಷ ಹದಿಮೂಱಾಗೆ [1] ಹೊಗುವುದು ತಮ್ಮ ಪಟ್ಟಣವ ॥ ೫೦

ಮಱಿಯೊಳಿಹುದಜ್ಞಾತವಾಸದೊ
ಳಱಿದರಾದೊಡೆ ಮತ್ತೆ ಬನದಲಿ
ಚರಿಸುವುದು ಹನ್ನೆರಡುವರುಷವು ಸತ್ಯ ಭಾಷೆ ಯಿದು ।
ಮುಱಿದು ತಪ್ಪಿದನೃಪನನೀಶ್ವರ
ನಱಿವನೈ ಸಲೆ ರಾಜಧರ್ಮವ
ಮೆಱಿವರಾಡುವುದೊಡ್ಡವೀ ಪರಿಯೆಂದನಾಶಕುನಿ ॥ ೫೩

ಅಂಜುವೊಡೆ ನಿಲು ಜೂಜುಗಾಱು
ಭಂಜವಣೆಗೊಳಗಹರೆ ಬಾ ನೃಪ
ರೆಂಜಲಿಸಿ ಬಿಡಬಹುದೆ ಪರಮದ್ಯೂತರಸಸುಧೆಯು ।
ರಂಜಕರು ನಾವಲ್ಲ ಜೂಜಿಗೆ
ಕಂಜಭವ ತಾನೆನ್ನೊಡನೆ ಕೆಲ
ರಂಜದಿಹರಾರೆಂದು ಗರ್ವವ ಸೂಸಿದನು ಶಕುನಿ ॥ ೫೪

ಉಗ್ರಭಾಷೆಯಿದೇಕೆ ಶಿವ ಶಿವ
ವಿಗ್ರಹಪ್ರತಿಮುಖದ ವಿಷಮಾ
ವಗ್ರಹದಲಿದು ಬೆಂದು ಹೋಗದೆ ಭರತಸಂತಾನ ।
ನಿಗ್ರಹಿಸಲೇಕಕಟ ಕುರುಕುಲ
ದಗ್ರಿಯನನೆಂಬಖಿಳಸಚಿವರು [2]
ದಗ್ರಚರಿತರು ಮುಱಿದು ನುಡಿದರು ನೀತಿವಚನದಲಿ ॥ ೫೫

ವಿದುರ ಗುರು ಗುರುಸೂನು ಬಾಹ್ಲಿಕ
ನದಿಯ ಮಗ ಗಾಂಧಾರಿ ಕುಂತೀ

---

[1] ಹದಿನಾಲ್ಕಱಲಿ, ಚ. [2] ಸೇವ್ಯ, ಕ. ಖ.

ಸುದತಿ ಭೂರಿಶ್ರವ ಯುಯುತ್ಸು ವಿಕರ್ಣಸಂಜಯರು |
ಇದು ವಿಷಮವೆಂದರು ಕೃಪ ದ್ರೌ
ಪದಿವೃಕೋದರಪಾರ್ಥಯಮಳರು
ಕುದಿದರೊಳಗೊಳಗಾಡಲಂಮದೆ ರಾಯನಿದಿರಿನಲಿ || ೫೬

ಕ್ಷಿತಿಪ ಕೇಳ್ ದುರ್ವ್ಯಸನವಿಷಮ
ವ್ಯತಿಕರದ ಭಾಷೆಯನು ನೃಪ ಮಿಗೆ
ಪತಿಕರಿಸಿದನು ಶಕುನಿ ಹಾಸಂಗಿಗಳ ಹಾಯ್ಕಿದನು |
ಸತಿಯ ದಕ್ಷಿಣನಯನವಾಭೂ
ಪತಿಯ ವಾಮಭುಜಾಕ್ಷಿಗಳು ದು
ರ್ಗತಿಯ ಸೂಚಿಸಿ ತೋಱುತಿರ್ದುವು ನಿಮಿಷನಿಮಿಷದಲಿ || ೫೭

ಜೂಜಿನಲ್ಲಿ ಧರ್ಮರಾಯನು ಸೋತದ್ದು.

ದಾಯವೇ ಮಝು ಪೂತು ದುಗತಿಗ
ನಾಯಸವಲೇ ಚೌಕವೊಂದೇ
ಕಾಯಲಾಗದೆ ಹಾಯ್ಕು ಹಾಯ್ಕೆಂದೊದಱಿ ಗರ್ಜಿಸಿದ |
ರಾಯ ಸೋತನು ಧರ್ಮಸುತ ಕುರು
ರಾಯ ಗೆಲಿದನು ಕಟ್ಟು ಗುಡಿಯನು
ರಾಯನೂರೊಳಗೆಂದು ಮಿಗೆ ಬೊಬ್ಬಿಱಿದನಾಶಕುನಿ || ೫೮

ಹಣುಗಿತರಸನ ವದನ ತಾಳಿಗೆ
ಯೊಣಗಿತವನಿಗೆ ನಟ್ಟ ದೃಷ್ಟಿಯು
ಜುಣುಗಿದುಬ್ಬಿನ ಕಾದ ದೇಹದ ಕಳತಚೇತನದ [1] |
ಕುಣಿವ ಜಱಗಿನ ಸತ್ವದಲಿ [2] ಕೇ
ವಣಿಸಿದಱಿವಿನ ವಿಕೃತಕರ್ಮದ
ಕುಣಿಕೆಗೊಲದೊಲದರಸನಿದ್ದನು ಹೊತ್ತು ದುಗುಡದಲಿ || ೫೯

1 ಮಣಿದ ನೆನಹಿದ ಮುಱಿದ ಮಹಿಮೆಯ ತಾಗಿದಪದೆಸೆಯ, ಚ.

2 ಜುಣುಗಿದುಬ್ಬಿನ, ಚ.

ಉಬ್ಬು ಮುಱಿದುದು ತಮ್ಮೊಳೊಬ್ಬರ
ನೊಬ್ಬರೀಕ್ಷಿಸಿ ಕೈಯ್ಯ ಗಲ್ಲದ
ನಿಬ್ಬರದ ನಿಡುಸುಯ್ಲ ಖೋಡಿಯ ಮನದ ಕೊಳ್ಗುದಿಯ ।
ಜಬ್ಬುಲಿಯ ಜಾಳಿಗೆಯ ಚಿಂತೆಯ
ಹಬ್ಬುಗೆಯ ಹರವರಿಯ ಖೇದದ
ಮಬ್ಬಿನಲಿ ಮುಳುಗಿದರು ಫಲುಗುಣಪವನಜಾದಿಗಳು ॥ ೬೦

ದ್ರೌಪದಿಯು ಧರ್ಮರಾಜ ಮೊದಲಾದವರು ಮಾತನಾಡುವಿಕೆ.

ಕಂಡಿರೇ ಧೃತರಾಷ್ಟ್ರನನು ಕೈ
ಕೊಂಡಿರೇ ವನದೀಕ್ಷೆಯನು ಪಿತ
ನಂಪಲೆದು ಕೃಷ್ಣಾಜಿನವನುಡಿಗೊಱೆಯ ನಿತ್ತನಲೆ ।
ಚಂಡಿಕೊಂಡರೆ ನೀವು ನಿಮ್ಮಯ
ಭಂಡತನ ಸಾಕಿನ್ನು ವನವಾ
ಖಂಡಲಪ್ರಸ್ಥವಲೆ ನಮಗಿನ್ನೆಂದಳಿಂದುಮುಖಿ ॥ ೬೧

ವಾರಕದ ರತ್ನಾಭರಣಶೃಂ
ಗಾರವೇಕಿನ್ನವನು ತೆಗೆಯಲಿ
ಧಾರಿಣಿಯ ಲಂಪಟವನುಚಿಯಲಿ ವನವನಚ್ಚರಲಿ ।
ಭೂರಿಸಭೆಯಲಿ ನಮ್ಮ ಭಂಗಿಸಿ
ನಾರಿಯರು ಗಹಗಹಿಸಿ ನಗುತಿಹ
ಕಾರಣವ ಕೈಕೊಳಲಿ ತೆಗೆ ಶೃಂಗಾರಗಳನೆಂದ ॥ ೬೨

ಕಳೆದು ಬಿಸುಟರು ಮುತ್ತು ರತ್ನಾ
ವಳಿಯ ವಿವಿಧಾಭರಣವನು ಪರಿ
ಲಲಿತಕೃಷ್ಣಾಜಿನವ ಹೊದೆದರು ಹಾಯ್ಕಿ ಹಚ್ಚಡವ ।
ನಳಿನಮುಖಿ ಬಹುವಿಧದ ಮುಕ್ತಾ
ವಳಿಯಲಂಕಾರವನುಗಿದು ಸಭೆ
ಯೊಳಗೆ ಬಿಸುಟಳು ನಿಂದಳಬಲೆ ನಿಜಾನುರೂಪದಲಿ ॥ ೬೩

ಸಾಲದೇ ನಮಗಿನ್ನು ಕೌರವ
ನೋಲಗದ ಫಲವಾಯ್ತಲೇ ವನ
ಮಾಲೆ ಕೊರಳಿಂಗಲ್ಲ ಚರಣಾಭರಣವಾದುದಲೆ ।
ಬೀಱುಕೊಳ್ಳರೆ ಬೊಪ್ಪನವರನು
ಮೇಲೆ ಮೋಹದ ತಾಯುಲಾ ನಡೆ
ಹೇಱಿ ಕಳುಹಿಸಿ ಕೊಂಬೆವೆಂದನು ಭೂಪತಿಗ ಭೀಮ ॥ ೬೪

ಬಂದರಿವರರಮನೆಗೆ ನೇಮವೆ
ಯೆಂದು ಪದಕೆಱಗಿದರು ಕಂಬನಿ
ಯಿಂದ ನೆನೆದನು ತಂದೆ ಮಕ್ಕಳ ಬಿಸುಟು ಬದುಕುವನೆ ।
ಇಂದುಮುಖಿ ಮಱುಗಿದಳು ನಾವಿ
ನ್ನೆಂದು ಕಾಂಬೆವು ನಿಮ್ಮನಕಟಕ
ಟೆಂದಳತಿಮೋಹಿತಳಲೇ ಕುಂತಿಯು ಕುಮಾರರಿಗೆ ॥ ೬೫

ವನದೊಳತ್ಯಾಯಾಸ ನೀವೆಂ
ತನುಭವಿಸುವಿರಿ ಪಾಪಿ ದುರ್ಯೋ
ಧನನ ದುರ್ಜನಸಂಗ ನಿಮಗದು ಸಿಂಗಿಯಾದುದಲೆ ।
ವನಿತೆ ನಿಮ್ಮೊಡನೆಂತು ತೊಳಲುವ
ಳನವರತ ಗಿರಿಗುಹೆಯ ಗಟ್ಟಿ
ವನೆನುತ ನುಡಿದಳು ಕುಟಿಲಗರ್ಭದ ಗುಣದ ಬಳವಿಗೆಯ ॥ ೬೬

ಬೀಳುಗೊಡಿರೇ ಸಾಕು ವಿಪುಳಕ್ಕೃ
ಪಾಳುಗಳಲಾ ವಿಧಿಯು ಚಿತ್ರವಿ
ಟಾಳಗತಿಗೇನಾಯ್ತು ಹದಿಮೂಱಬುದವವಧಿಯಲೆ ।
ಮೇಲೆ ನಿಮ್ಮಾತ್ಮಜರಿಗವನಿಯ
ಪಾಲನೆಯ ಪರುಠವದ ಪಟ್ಟನ
ಪಾಲಿಸುವೆರದಕೇನು ಜಂಜಡ ವೆಂದನಾಧೌಮ್ಯ ॥ ೬೭

ಫಲಕುಜದ ಪಲ್ಲವದ ಪದಕರ
ತಳದ ವಿಪುಳತಮಾಲಪತ್ರದ
ಲಲಿತಕೇತಕಿನಖದ ದಾಡಿಮದಂತಪಙ್ಕ್ತಿಗಳ |
ನಳಿನನಯನದ ಮಧುಪಕುಲಕುಂ
ತಳದ ಬನಸಿರಿ ಸವತಿಯಾದಳು
ಜಲಜಮುಖಿಪಾಂಚಾಲಿಗೆಂದನು ಧೌಮ್ಯ ನಸುನಗುತ || ೬೮

ವನವಾಸಕ್ಕೋಸ್ಕರ ಪಾಂಡವರ ಪ್ರಯಾಣ.

ಇವರು ಕಳುಹಿಸಿಕೊಂಡರಾನೃಪ
ಭವನವನು ಹೊಱವಂಟರೊಡನು
ತ್ಸವವಿಹೀನರು ವಿದುರಭೀಷ್ಮದ್ರೋಣ ಗೌತಮರು |
ಅವನಿಪತಿದುರ್ಯೋಧನಾದಿಗ
ಳವನ ಸಹಭವರುಳಿಯೆ ಬಂದರು
ವಿವಿಧಜನರೊತ್ತೊತ್ತಿ ಮುಸಗಿತು ರಾಜಬೀದಿಯಲಿ|| ೬೯

ಸಂದಣಿಸಿದುದು ಕೇರಿಕೇರಿಯ
ಮಂದಿಮನೆಗಳ ಮೇಲೆ ಘನತರ
ವೃಂದದಲಿ ಘನಸೌಧಶಿಖರದೊಳಂದು ಶೋಕದಲಿ |
ನಿಂದುದಲ್ಲಿಯದಲ್ಲಿ ನೋಟಕ
ರಿಂದ ಕೆತ್ತುದು ಬೀದಿ ಜಾಜಿನ
ಬಂದಿಯಲಿ ಸಿಲುಕಿದ ನೃಪಾಲರು ನಡೆದರೊಗ್ಗಿನಲಿ || ೭೦

ಕುತ್ತುದಲೆಗಳ ಮೃಗದ ತೊಗಲಿನ
ಸುತ್ತು ಹೊದಕೆಗಳಡದ ಕೈಗಳ
ಲೆತ್ತಿದಾಯುಧತತಿಯ ಭಂಗದ ಭೂರಿತಾಪದಲಿ |
ಹೊತ್ತುವೆದೆಗಳ ಹೊಗುವ ಮೋಱೆಯ
ಕಿತ್ತಡದ ಕಡುಗೋಪಸಮತೆಗ
ಳತ್ತಡಿಗೆ ತಡವಾಯ್ತು ನೃಪರೈತಂದರೊಗ್ಗಿನಲಿ || ೭೧

ಮುಂದೆಯಾದನು ಪಾರ್ಥನಾತನ
ಹಿಂದೆ ಭೂಪತಿ ಧರ್ಮಪುತ್ರನ
ಹಿಂದೆ ಮಾದ್ರೀತನಯರನಿಬರ ಹಿಂದೆ ಪಾಂಚಾಲಿ ।
ಹಿಂದೆ ಕುಂತೀದೇವಿ ಯಾಕೆಯ
ಹಿಂದಣಾತನು ಭೀಮನೆಂದಾ
ಮಂದಿ ತೋಱಿದುದೊಬ್ಬರೊಬ್ಬರಿಗವರನೀಕ್ಷಿಸುತ ॥ ೨೨

ಪಾಂಡವರ ವಿಷಯದಲ್ಲಿ ಜನಗಳಿರುವ ಅಭಿಪ್ರಾಯ.

ಹರನ ಜೋಡು ಮುರಾಂತಕನ ಸರಿ
ದೊರೆ ವಿರಿಂಚನ ಪಾಡು ಶಕ್ರನ
ಸರಿಸದವರಿಗೆ ಭಂಗ ವೀವಿಧಿ ಯಾವಿಪತ್ತುಗಳ ।
ಸುರರು ಕೊಂಡಾಡುವರು ಮಿಕ್ಕನ
ನೊರಜುಗಳ ಪಾಡೇನು ಶಿವ ಶಿವ
ಕರುಣಿಯಲ್ಲ ವಿಧಾತ್ರನೆಂದುದು ಕೂಡೆ ಜನನಿಕರ ॥ ೨೩

ಇವರ ಹವಣೇ ಮುನ್ನ ರಘುಸಂ
ಭವನು ರಾಜ್ಯವ ಬಿಸುಟು ಹೋಗನೆ
ಯವರಿಗೆಲ್ಲಂ ಮುನ್ನ ನಳ ಪುಷ್ಕರನ ಬಾಧೆಯಲಿ ।
ಅಡವಿಯನೆ ಬಿಸುಟಡವಿಗೈದನೆ
ಭುವನಪತಿಗಳು ಮುಂದೆ ರಿಪುಗಳ
ನವಗಡಿಸಿ ಸಾಮ್ರಾಜ್ಯವಾಳರೆ ಯೆಂದುದಖಿಳಜನ ॥ ೨೪

ಈ ವಿಕಾರವನ್ನೈದೆ ಮಾಡ್ಪನು
ದೇವಕಿಯ ಸುತನಿಲ್ಲಿ ಭುವನವ
ತೀವಿದಾಭಾರವನು ಕಳೆಯಲು ಕಷ್ಟಜೀವಿಗಳ ।
ಓವಿ ಕೊಲಿಸುವ ಭರದಿ ಪಾಂಡವ
ರ್ಗೀವಿಧಿಯ ಮಾಡಿವರ ಕೈಯಿಂ
ದೇವಕೀಸುತ ಕೌರವರ ಕೊಲಿಸುವನೆಂದುದಖಿಳಜನ ॥ ೨೫

ಅಭಿಮನ್ಯು ಮೊದಲಾದವರಿಗೆ ಪಾಂಡವರ ದರ್ಶನ.

ಕೇಳಿದಭಿಮನ್ಯುಪ್ರಮುಖಭೂ
ಪಾಲತನುಜರು ಸಚಿವರಾಪ್ತರು
ಪಾಳೆಯದ ತಲ್ಲಣದ ಜೋಡಿಯ ಜನಮನೋವ್ಯಥೆಯ ।
ಹೇಳಲಱಿಯೆನು ಬಂದು ಕಂಡರು
ಘೋಳಿಡುತ ಪದಕೆಱಗಿದರು ನೃಪ
ನಾಲಿ ನೀರೇಱುದುವು ನನೆದನು ನಯನವಾರಿಯಲಿ ॥ ೨೬

ಸಮಸ್ತೈಶ್ವರ್ಯವನ್ನು ಕೌರವರಿಗೆ ಒಪ್ಪಿಸಿದುದು.

ಕರೆಸಿದನು ಪರಿವಾರವನು ನಿಮ
ಗರಸು ಕೌರವ ನಮ್ಮ ಗಜರಥ
ತುರಗಕೊಟ್ಟಿಗೆ ಭಂಡಿಗುಡಿಕೋಟಾರಕೊಪ್ಪರಿಗೆ ।
ಸರಕು ಸರ್ವಸ್ವಗಳು ಕೌರವ
ನರಮನೆಗೆ ನಡೆಯಲಿ ವನಾಂತರ
ಲಿರವು ನಮಗಿನ್ನೆಂದು ನುಡಿದನು ಸಚಿವರಿಗೆ ಸಹದೇವ ॥ ೨೭

ಕರಿಗಳನು ಕೌರವನ ಮಾವಂ
ತರಿಗೆ ಕೈಗೊಳಿಸಿದರು ರಥಚಯ
ತುರಗತತಿ ಕೈವರ್ತಿಸಿತು ಸೂತರಿಗೆ ಗೋಪರಿಗೆ ।
ಸರಕನವನಿಪನನುಚರರಿಗು
ತ್ತರಿಸಿದರು ರಥಿಕಾಳಮಾವಂ
ತರು ಸುಭಟರಳವಡಿಸಿ ಕೊಂಡರು ಕಾನನೋಚಿತವ ॥ ೨೮

ಹರಿದರಿಂದ್ರಪಸ್ಥಕರಸನ
ಚರರು ಸಚಿವರು ಪೊಕ್ಕು ಪಾಂಡ
ವರರಮನೆಯ ಮುದ್ರಿಸಿದರಲ್ಲಿಯ ನಾಡುಬೀಡುಗಳ ।
ಕರೆಸಿ ಕಾಣಿಕೆ ಕೊಂಡು ಠಾಣಾಂ
ತರದ ನಾಯಕವಾಡಿಗಳ ಸಂ
ವರಣೆಗಳ ಸಂತೈಸಿದರು ಕುರುರಾಜಮುದ್ರೆಯಲಿ ॥ ೨೯

ಅರಸ ಕೇಳಾಶ್ಚರ್ಯವೆನು ಗಜ
ಪುರದ ಬೀದಿಯೊಳವರು ಬರುತಿರೆ
ದುರುಳನಾದುಶ್ಶಾಸನನು ಹರಿತಂದನೇಡಿಸುತ ।
ಬೆರಳನಾಡಿಸಿ ಹೋದರೀಹೋ
ದರಸು ಕಾನನದೆತ್ತು ಪುನರಪಿ
ಸರಿದುವೆತ್ತಗಳನುತ ಬಂದನು ಹಿಂದೆ ಪವನಜನ ॥ ೮೦

ತಿರುಗಿ ಕಂಡನು ಭೀಮನುಬ್ಬಿದ
ಹರುಷಹೃದಯನನಧಿಕರೋಷದ
ಉರುವಣಿಸಿ ನೋಡಿದನು ಭೂಪತಿ ಮೊಗದ ಸನ್ನೆಯಲಿ ।
ತಿರುಹಿದನು ತಮ್ಮನನು ಮಾರುತಿ
ತಿರುಹಿ ಹಾಯ್ಕೀ ಹಿಡಿದ ಗದೆಯನು
ಯುರಸಸಂಜ್ಞೆಯೊಳಂಜಿ ನಡೆದನು ಭೂಪ ಕೇಳೆಂದ ॥ ೮೧

ಪುರವ ಹೊಱವಂಟವರು ಗಂಗಾ
ವರನದಿಯ ತೀರದಲಿ ನಿಂದರು
ಪರಿಜನವ ಕಳುಹಿದರು ಧೃತರಾಷ್ಟ್ರನ ಪಸಾಯತರ ।
ಗುರುಜನಕೆ ಪೊಡವಟ್ಟು ಬೀಳ್ಕೊಂ
ಡರು ನದೀಜದ್ರೋಣಕೃಪರನು
ಕರೆದು ಕುಂತಿಯ ನಿಲಿಸಿದರು ವಿದುರನ ನಿವಾಸದಲಿ ॥ ೮೨

ಇರವು ಹನ್ನೆರಡಬುದ ವನದೊಳು
ಶರಭಭೇರುಂಡಾದಿದನುಜೋ
ತ್ಕರರ ಬಾಧೆಯನಂತಕರಿಸುವ ನಮ್ಮ ಬುದ್ಧಿಗಳ ।
ಪರುಠವಣೆ ತಾನಿಲ್ಲಿಗಹುದೈ
ಹರಿಯ ಕರುಣವದುಂಟು ನಿನಗೆಂ
ದರಸನನು ಹರಸಿದರು ಗುರುಭೀಷ್ಮಾದಿಸಜ್ಜನರು ॥ ೮೩

ಧೃತರಾಷ್ಟ್ರನು ಪಾಂಡವರ ಸ್ಥಿತಿಯನ್ನು ವಿದುರನನ್ನು ಕೇಳಿದುದು.

ಕಳುಹಿ ಮರಳಿಯೆ ವಿದುರನೃಪತಿಯು
ನಿಳಯಕೈತಂದನು ಕುಮಾರರ
ಕಳುಹಿ ಬಂದೈ ತಮ್ಮ ಮತವೇನೈ ಯುಧಿಷ್ಠಿರನ ।
ಉಳಿದವರ ಹದನೇನು ದ್ರೌಪದಿ
ಲಲನೆಯೇನೆಂದಳು ನಿಧಾನವ
ತಿಳಿದು ಬಂದೈ ಹೇಳೆನುತ ಧೃತರಾಷ್ಟ್ರ ಬೆಸಗೊಂಡ ॥ ೮೪

ಮುನಿಪ ಜಪಿಸುತ ನಡೆದನಗ್ನಿಯು
ವಿನುತಸೂಕ್ತವನೆತ್ತುಗೈದು ವಿ
ನನಿಲಜನು ದುಗುಡದಲಿ ಫಲುಗುಣಯಮಳರೊಂದಾಗಿ ।
ವನಿತೆಯನು ನಡುವಿಟ್ಟು ಹೊಱವಂಟರು
ಯುಧಿಷ್ಠಿರನೃಪತಿ ನಿಯುತದಿ
ನೆನೆಯುತಿದ್ದನು ವೀರನಾರಾಯಣನ ಪದಯುಗವ ॥ ೮೫

ಹದಿನೇಳನೆಯ ಸಂಧಿ ಮುಗಿದುದು.

ಇತಿ ಶ್ರೀಮದಚಿನ್ತ್ಯ ಮಹಿಮ ಗದುಗು ವೀರನಾರಾಯಣ ಚರಣಾರ
ವಿಂದ ಮಕರಂದ ಮಧುಪಾನ ಪುಷ್ಟವಚಷ್ಷಟ್ಪದೀನಿಕಾಯ
ಶ್ರೀಮತ್ಕುಮಾರವ್ಯಾಸಯೋಗೀಂದ್ರ ವಿರಚಿತಮಪ್ಪ
ಕರ್ಣಾಟ ಭಾರತಕಥಾಮಂಜರಿಯೊಳ್
ಸಭಾಪರ್ವಂ ಮುಗಿದುದು.

ಶೋಧನ ಪತ್ರಿಕೆ.

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
8	7	ನಿಶ್ಚ	ನೀಶ್ವ
11	6	ಖೂಳ	ಖೂಳಂ
13	20	ನ್ನರ	ನ್ನಿರ
29	19	ಕಿನ	ಕ್ಕಿನ
30	7	ದುಂದ	ದುಂದು
35	23	ಸ	ಸೆ
43	11	ವ್ರೊ	ವ್ರೋ
76	21	ಷಿ	ಷ್ಟಿ
79	29	ಸಿನೀ	ಸಿನಿ
88	4	ರವ	ರವು
106	25	ಡಿನು	ೀದನು
110	25	ಲಾಯು	ಲಾಯ್ತು
112	12	ನಬಿ	ನಬ್ಧಿ
128	1	ಗನ್ನು	ನನ್ನು
130	16	ಎನಲು	ಎನೆ
,,	17	ಮುಖ್ಯ	ಮುಖ್ಯವು
139	19	ವಗು	ವಾಗು
147	17	ಭೀಷ	ಭೀಷ್ಮ
152	1	ಕೃಷ	ಕೃಷ್ಣ
,,	,,	ಕೆ	ಕೆ
190	21	ಕೃಷ	ಕೃಷ್ಣ
197	13	ನಡ	ಮುಡ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
223	23	ಯ್ದನು	ಯಿಂದೆನು
239	22	ವಂತರಿ	ತರಿ
245	1	ದುರ್ಯೋ	ದುರ್ಯೋಧ
247	11	ಸ್ಯೃಂಧಿ	ಸ್ಯೃಂಧ
258	12	ಬಣ್ಣಾ	ಬಣ್ಣ
268	10	ಳವ್ಮೊ	ಳವ್ಮೂ
274	10	ವರ	ವರ್ಗ
285	7	ರಾಜ	ಪರಾಜ
293	15	ಹೋದ	ಹೋದಧಿ
295	23	ಕೃಷ	ಕೃಷ್ಣ